1–30 P.M.

BUDGET ESTIMATES FOR 1968-69 — DEMANDS FOR GRANTS

DEMAND NOS. 21, 23 AND 25

(Debate Continued)

ಶ್ರೀ ವಿ. ಎಲ್. ಶಿವಪ್ಪ (ತಿಪಟೂರು).—ಸ್ವಾಮಿ, ಈ ಸಭೆಯ ಮುಂದೆ ಇಟ್ಟಿರತಕ್ಕ ಸಹಕಾರ ಇಲಾಖೆಯ ಬೇಡಿಕೆಗೆ 2 ಕೋಟಿ 10 ಲಕ್ಷ 83 ಸಾವಿರ ರೂಪಾಯಿಗಳನ್ನು ನಾನು ಎಷ್ಟು ಸಂತೋಷದಿಂದ ಅನುಮೋದಿಸಬೇಕಾಗಿತ್ತೋ ಅಷ್ಟೇ ಅತಿ ವಿಷಾದದಿಂದ ಈಗ ಸಹಕಾರ ಸಂಸ್ಥೆಗಳಲ್ಲಿನ ಸ್ಥಿತಿಗತಿ ಮತ್ತು ಸಹಕಾರ ಇಲಾಖೆಯಲ್ಲಿನ ಕಾರ್ಯಕ್ರಮ ಮತ್ತು ಸಹಕಾರ ಸಂಘಗಳ ಚುನಾವಣೆಗಳನ್ನು ನೋಡಿ ನಾನು ವಿರೋಧಿಸಬೇಕಾಗಿದೆ. ಈಗಿರತಕ್ಕ ಸಹಕಾರ ಸಂಸ್ಥೆಗಳಲ್ಲಿ ಸಹಕಾರ ಇಲಾಖೆ ಮುಖಾಂತರ ಆಗತಕ್ಕ ಕೆಲಸಕಾರ್ಯಗಳನ್ನು ನೋಡಿದರೆ, ಈ ದೇಶದಲ್ಲಿ ಯಾವ ಸಮಾಜವಾದ ರಚನೆಯಾಗಬೇಕಾಗಿತ್ತೋ ಅಂಥಾದಕ್ಕೆ ವ್ಯತಿರಿಕ್ತವಾಗಿ ಹೋಗುತ್ತಿದೆ, ಈ ಸಂಸ್ಥೆಗಳು ಯಾವ ಸ್ಥಿತಿಯಲ್ಲಿವೆಯೆಂದರೆ, ಒಂದು ದೊಡ್ಡ ಪ್ರಾಣಿ ಸತ್ತಮೇಲೆ ಅದಕ್ಕೆ ಇರುವೆ ಮುತ್ತಿಕೊಂಡು, ಆಮೇಲೆ ನಾಯಿ, ರಣಹದ್ದು ತಿನ್ನುವ ಹಾಗೆ ಈ ಇಲಾಖೆ ಸ್ಥಿತಿಯಾಗಿದೆ. ಈ ಸಂಸ್ಥೆಗಳಲ್ಲಿ ಸ್ವಾಭಾವಿಕವಾಗಿ ಅಧಿಕಾರ ವರ್ಗದವರಲ್ಲಿ ಅನೇಕ ರೀತಿಯಲ್ಲಿ ಅತೃಪ್ತಿ ನಿರುತ್ಸಾಹ ತಲೆದೋರುತ್ತಿದೆ. ಈ ಸಹಕಾರ ಇಲಾಖೆಯಲ್ಲಿ ಪ್ರೊಮೋಷನ್ಸ್ ಕೊಡುವಾಗ ದೊಡ್ಡ ಹೊಡ್ಡ ಅಧಿಕಾರಿಗಳು ನ್ಯಾಯವಾದಿ ಸ್ಥಾನಮಾನಗಳನ್ನು ಪಡೆಯುವುದರಲ್ಲಿ ಕೆಲವು ಭಿನ್ನಾಭಿಪ್ರಾಯಗಳಿಂದ ಅವು ಕುಂಠಿತವಾಗಿದೆ. ಈಗಾಗಲೇ 6 ತಿಂಗಳುಗಳ ಹಿಂದೆ ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ-ಆಪರೇಟಿವ್ ಸೊಸೈಟಿ ಆಫೀಸಿನಲ್ಲಿ ಸೀನಿಯಾರಿಟಿ ಲಿಸ್ಟ್ ತಯಾರು ಆಗಿತ್ತು. ಅದನ್ನು ಇದುವರೆಗೂ ಜಾರಿಗೆ ಕೊಟ್ಟಿಲ್ಲವೆಂದು ಹೇಳಿದರೆ ಹೇಗೆ? ಇಂತಹುದನ್ನೇ ನಿರ್ವಹಿಸದ ಅಧಿಕಾರಿಗಳು, ಸಂಪೂರ್ಣವಾಗಿ ಕೆಲಸಮಾಡದೇ ಇರುವಂಥ ಅಧಿಕಾರಿಗಳು ಅಲ್ಲಿದ್ದರೆ, ಆ ಇಲಾಖೆಯಲ್ಲಿ ಸಿಬ್ಬಂದಿ ಯಾವ ರೀತಿಯಿಂದ ಕೆಲಸಮಾಡಬೇಕು ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಬಹು ಬೇಗ ಇಂತಹ ನ್ಯೂನತೆಯನ್ನು ಸರಿಪಡಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ. ದೇಶಾದ್ಯಂತ ಇರುವ 20 ಸಾವಿರ ಸಹಕಾರಸಂಘಗಳನ್ನು ವ್ಯವಸ್ಥಿತ ರೀತಿಯಲ್ಲಿ ಚುನಾಯಿಸುವ ಯೋಗ್ಯತೆ, ಅರ್ಹತೆ ಈ ಇಲಾಖೆಯಲ್ಲಿಲ್ಲ.

ಕೇವಲ ಎರಡು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಬೆಂಗಳೂರು ನಗರದಲ್ಲಿರತಕ್ಕ ಸಹಕಾರ ಸಂಘಗಳ ವಿಷಯ. ಒಂದು ಸಿಟಿ ಕೋ-ಆಪರೇಟಿವ್ ಸೊಸೈಟಿ, ಇನ್ನೊಂದು ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ. ಈ ಸೊಸೈಟಿಗಳಲ್ಲಿ ಕೆಲಸಕಾರ್ಯಗಳು ಹೇಗೆ ನಡೆಯುತ್ತಿವೆಯೆಂದರೆ, ಇವು ಕ್ರೆಡಿಟ್ ಸೊಸೈಟಿಗಳಾಗಿ ಅಲ್ಲಿ ಸಾವಿರಾರು ರೂಪಾಯಿಗಳಷ್ಟು ದುರುಪಯೋಗವಾಗಿ ಅಲ್ಲಿ ಸಂಬಂಧಪಟ್ಟ ಲೆಕ್ಕಪುಸ್ತಕಗಳೇ ಇಲ್ಲದೆ, ಪುನಃ ಈಗ ಲೆಕ್ಕಗಳನ್ನು ತಯಾರು ಮಾಡುವಂತೆ ಕೆಲಸಕಾರ್ಯಗಳು ನಡೆಯುತ್ತಾ ಇವೆ. ಆದರೆ ದುರುಪಯೋಗವಾದಂಥ ಹಣ ಇನ್ನೂ ವಸೂಲಾಗಿಲ್ಲ. ಇನ್ನು ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ ವಿಭಾಗ ತೆಗೆದುಕೊಂಡರೆ ಕೆಲವಾರು ರೂಪಾಯಿಗಳು ಷಾರ್ಟೇಜು ಬಂದು ಆ ಸಂಸ್ಥೆಯೇ ಮುಚ್ಚಿದೆ, ಸಹಕಾರ ಇಲಾಖೆಯ ಅಧಿಕಾರಿಗಳೇ ಸದಸ್ಯರಾಗಿರುವಂಥ, ಸಹಕಾರ ಸಂಸ್ಥೆಗಳ ಗತಿಯೇ ಹೀಗಿರುವಾಗ ಇನ್ನು ದೇಶಾದ್ಯಂತ ಇರುವ 20 ಸಾವಿರ ಸಂಸ್ಥೆಗಳನ್ನು ನಿಜವಾಗಿ ಪಾಲನೆಮಾಡುವ ಶಕ್ತಿ ಈ ಇಲಾಖೆಗೆ ಇದೆಯೋ ಎಂದು ನಾನು ಹೇಳುತ್ತೇನೆ. ಅನೇಕ ಇಂತಹ ಸಂಸ್ಥೆಗಳಲ್ಲಿ ಹಣ ದುರುಪಯೋಗವಾಗಿರುವುದು ಕೇವಲ 35 ಲಕ್ಷ ರೂಪಾಯಿಗಳು ಇತ್ತು. ಅದು ಈಗ ಆ ಸಂಖ್ಯೆ 50 ಲಕ್ಷ ರೂಪಾಯಿಗಳಿಗೆ ಹೋಗಿದೆ. ನಾವು ಇದನ್ನು ಕೂಲಂಕಷವಾಗಿ ವಿಚಾರ ಮಾಡಿದರೆ ಆಡಿಟ್ ಇಲಾಖೆಗೆ ಗೊತ್ತಿಲ್ಲದೇ ಇರುವುದು ಇನ್ನೂ 50 ಲಕ್ಷ ರೂಪಾಯಿಗಳಾಗುತ್ತದೆ. ಅಂದಮೇಲೆ ಅದು ಒಟ್ಟು ಒಂದು ಕೋಟಿ ರೂಪಾಯಿಗಳಿಗೆ ಏರಬಹುದು. ಇಷ್ಟು ಮೊಬಲಗು ಆ ಸಂಸ್ಥೆಗಳಲ್ಲಿ ದುರುಪಯೋಗವಾಗಿದೆ ಎಂಬುದಾಗಿ ಕಾಣುತ್ತದೆ. ಅದರಲ್ಲಿ ಕೇವಲ ಒಂದು ಸಂಸ್ಥೆ ವಿಷಯ ಮಾತ್ರ ಹೇಳುತ್ತೇನೆ. ಆ ಸಂಸ್ಥೆಗಳಲ್ಲಿ ಹೆಚ್ಚಿಗೆ ಬಡವರು ಇದ್ದಾರೆ. ನೇಕಡ 80 ಭಾಗದಷ್ಟು ರೈತಾಪಿ ಜನರೇ ಆರ್ಥಿಕ ನೀತಿಯಲ್ಲಿ ಹಿಂದುಳಿದಿದ್ದಾರೆಂದು ಮಹಾತ್ಮ ಗಾಂಧಿಯವರೇ ಹೇಳಿದ್ದಾರೆ. ಸಹಕಾರ ಸಂಘಗಳ ಮುಖಾಂತರ ಈ ಬಡತನ ಹೋಗಲಾಡಿಸಬೇಕೆಂದು ಭಾವಿಸುವುದಾದರೆ, ಅದನ್ನು ಈ ಸಂಸ್ಥೆಯಿಂದ ಯಾವ ರೀತಿಯಲ್ಲಿಯೂ ಮಾಡುವುದಕ್ಕೆ ಸಾಧ್ಯವಿಲ್ಲ. ಒಂದು

(ಶ್ರೀ ವಿ. ಎಲ್. ಶಿವಪ್ಪ)

ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯವರು 1966-67 ನೇ ವರ್ಷಾಂತ್ಯದ ಲೆಕ್ಕಗಳನ್ನು ಆಡಿಟ್ ಮಾಡಿಸಿ ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಮತ್ತು ಬ್ಯಾಲೆನ್ಸ್ ಷೀಟ್‌ನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದರಲ್ಲಿ ಸುಮಾರು 1 ಕೋಟಿ 31 ಲಕ್ಷ 63 ಸಾವಿರದ 21—16 ರೂಪಾಯಿಗಳು ಸರ್ಕಾರದಿಂದ ಸಬ್ಸಿಡಿ ಎಂದು ಹಾಕಿಕೊಂಡಿದ್ದಾರೆ ಕೇವಲ ಒಂದು ವರ್ಷಕ್ಕೆ 3 ಲಕ್ಷ 51 ಸಾವಿರ ರೂಪಾಯಿಗಳಂತೆ 30 ಲಕ್ಷ ರೂಪಾಯಿಗಳು ಚಿಲ್ಲರೆ ಸರ್ಕಾರದಿಂದ ಬರಬೇಕೆಂದು ಹೇಳಿದ್ದಾರೆ. ಇದರಿಂದ ಈ ಸೊಸೈಟಿಯಿಂದ 1 ಕೋಟಿ 28 ಲಕ್ಷ ರೂಪಾಯಿಗಳು ಲುಕ್ಸಾನು ಆಗಿದೆ. ಇದಕ್ಕೆ ಯಾರು ಜವಾಬ್ದಾರರು ? ಇಷ್ಟೊಂದು ಮೊಬಲಗನ್ನು ಸರ್ಕಾರಕ್ಕೆ ಕೊಡದೇ ಹೋದರೆ, ಈ ಸಂಸ್ಥೆ ಗತಿಯೇನು ? ಈ ಹಣವನ್ನು ಏತಕ್ಕೆ ಪಾವತಿ ಮಾಡಲಿಲ್ಲ ? ಇದು ಸರ್ಕಾರಕ್ಕೆ ಕೊಡಬೇಕಾದ ಮೊಬಲಗು ಎಂದು ಏಕೆ ತೋರಿಸಲಿಲ್ಲ ? ಈ ಒಂದು ಸೊಸೈಟಿ ವ್ಯವಸ್ಥಿತ ರೀತಿಯಾಗಿ ನಡೆಯದೇ ಇರುವಾಗ ಇನ್ನು ದೇಶಾದ್ಯಂತ ಇರುವ ಇಂತಹ ಸಂಸ್ಥೆಗಳ ಗತಿಯೇನು ? ಇಲ್ಲಿ ಏನು, ಎಷ್ಟು ದುರುಪಯೋಗವಾಗಿದೆಯೋ ಅದನ್ನು ವಸೂಲುಮಾಡುವುದಕ್ಕೆ ತಕ್ಕ ಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಅದಕ್ಕಾಗಿ ಆಡಿಟ್ ಇಲಾಖೆ ಪ್ರತ್ಯೇಕವಾಗಿ ಇರಬೇಕು. ಅವರು ಹೆಚ್ಚುವರಿ ದಾಖಲಾತಿಗಳಲ್ಲಿ ಹಾಕಿದ್ದರೆ, ಆಡಿಟರ್ ಅವರು ವ್ಯವಸ್ಥಿತವಾಗಿ ಲೆಕ್ಕಗಳನ್ನು ತಯಾರು ಮಾಡಬೇಕು. ಆದರೆ ದುರುಪಯೋಗವಾಗಿದೆ ಎಂಬುದಾಗಿ ತೋರಿಸಿ ರಿಪೋರ್ಟ್ ಮಾಡಬಹುದು. ಇಲ್ಲದಿದ್ದರೆ ಕ್ರಮ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಅದನ್ನು ಇಲಾಖೆಯ ಅಧಿಕಾರಿಗಳಿಗೆ ವಹಿಸಿ ಕೊಡಬೇಕು. ಪ್ರೈಮರಿ ಸೊಸೈಟಿಗಳ ಅಥವಾ ಸಣ್ಣ ಸೊಸೈಟಿಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್ಸ್ ಕ್ರಮ ತೆಗೆದುಕೊಳ್ಳಬೇಕು. ತಾಲ್ಲೂಕು ಸೊಸೈಟಿಗಳ ಮೇಲೆ ಡೆಪ್ಯುಟಿ ರಿಜಿಸ್ಟ್ರಾರ್ ಅವರು ಕ್ರಮ ತೆಗೆದುಕೊಳ್ಳಬೇಕು. ಅದರ ಮೇಲೆ ಸರ್ಕಾರ ಸಹಾಯ ಮಾಡಬೇಕು. ಹೋದವರ್ಷ 66-67 ನೇ ಜೂನ್ ಅಂತ್ಯಕ್ಕೆ 100 ಕೇಸುಗಳು ಸಂಸ್ಥಾನಾವಳಿ ದಾಖಲಾತಿ ಮಾಡಿತ್ತು. ಕ್ರಿಮಿನಲ್ ಕೋರ್ಟಿಗೆ ಹೋಗಿದ್ದ ಆ 100 ಕೇಸುಗಳನ್ನು ಸರ್ಕಾರ ವಿತ್‌ಡ್ರಾ ಮಾಡಿದೆ ಎಂಬುದಾಗಿ ನಾನು ಕೇಳಿದ್ದೇನೆ. ಸಹಕಾರ ಸಂಸ್ಥೆಗಳಲ್ಲಿ ಮಾಡಿದ ದುರುಪಯೋಗದ ಬಗ್ಗೆ ಸರ್ಕಾರ ಆಲೋಚನೆ ಮಾಡಿ, ಕ್ಯಾಬಿನೆಟ್‌ನಲ್ಲಿ ವಿಚಾರಮಾಡಿ ಈಗ ಸುಮಾರು 100 ಕೇಸುಗಳನ್ನು ಸರ್ಕಾರದವರು ವಿತ್‌ಡ್ರಾ ಮಾಡಿದ್ದಾರೆಂದು ಹೇಳಿದರೆ ಸರ್ಕಾರದ ಉದ್ದೇಶವಾದರೂ ಏನು ? ಈ ಆಡಳಿತ ಪಕ್ಷದಲ್ಲಿರತಕ್ಕ ಜನರೇ ಆ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆಂದು ಕಾಣುತ್ತದೆ. ಸರ್ಕಾರ ಏನೋ ಒಂದು ಕಾರಣವನ್ನು ಹೇಳಿ ಅಂಥ ಕೇಸುಗಳನ್ನು ವಿತ್‌ಡ್ರಾ ಮಾಡಿ ನಿಮಗೆ ಪ್ರಾಣದಾನ ಮಾಡಬೇಕೆಂದು ಹೊರಟಿದ್ದಾರೆ. ಈ ರೀತಿ ಕ್ಯಾಬಿನೆಟ್‌ನೊಳಗೆ ಇಂತಹ ವಿಷಯವನ್ನು ಪರಿಶೀಲನೆ ಮಾಡುವ ಮಹತ್ವವೇನು ? ಯಾವ್ಯಾವ ದರ್ಜೆಯೊಳಗೆ ಅಧಿಕಾರಿಗಳಿಗೆ ಯಾವ್ಯಾವ ಸನ್ನಿವೇಶದಲ್ಲಿ ಅಧಿಕಾರ ಕೊಡಬೇಕೋ ಅದನ್ನು ಬಿಟ್ಟು ಅದನ್ನು ನೇರವಾಗಿ ಕ್ಯಾಬಿನೆಟಿನಲ್ಲಿ ತೀರ್ಮಾನ ಮಾಡುವುದು ಸರಿಯಲ್ಲ. ಕೇವಲ ಅಲ್ಪಸ್ವಲ್ಪ ವ್ಯತ್ಯಾಸವಾಗಿದ್ದರೆ ಅದು ಕ್ಯಾಬಿನೆಟ್‌ಗೆ ಬರುವ ಅವಶ್ಯಕತೆ ಇಲ್ಲ. ಇದಕ್ಕಾಗಿ ನಿಮ್ಮನ್ನು ಇನ್‌ಫ್ಲೂಎನ್ಸ್ ಮಾಡುವುದಕ್ಕಾಗಲೀ ನಿಮ್ಮಿಂದ ರೆಕಮೆಂಡೇಷನ್ ತರಿಸಿಕೊಳ್ಳುವುದಕ್ಕಾಗಲೀ ಅವಕಾಶ ಇರಕೂಡದು. ಮುಖ್ಯವಾಗಿ ಇತರರೂ ವಿತ್‌ಡ್ರಾ ಮಾಡುವ ಅವಕಾಶವನ್ನು ಸರ್ಕಾರ ಕಲ್ಪಿಸಿಕೊಡಬೇಕೆಂದು ನಾನು ಮನವಿ ಮಾಡುತ್ತೇನೆ.

[CHAIRMAN (SMT. NAGARATHNAMMA) in the Chair]

ಇನ್ನೊಂದು ವಿಷಯ. ಈ ಆಡಿಟ್ ಇಲಾಖೆಯಲ್ಲಿ ನೇಮಿಸಿರತಕ್ಕ ಸಿಬ್ಬಂದಿಯ ದರ್ಜೆ ಏನಿದೆ ಅದು ಯೋಗ್ಯ ರೀತಿಯಲ್ಲಿಲ್ಲ. ಅವರಲ್ಲಿ ದಕ್ಷತೆ ಇಲ್ಲ. ಆಡಿಟ್ ಇಲಾಖೆಯಲ್ಲಿ ಜೂನಿಯರ್ ಆಡಿಟರ್ಸ್, ಸೀನಿಯರ್ ಆಡಿಟರ್ಸ್, ಮತ್ತು ಸ್ಪೆಷಲ್ ಆಡಿಟರ್ಸ್ ಎಂಬುದಾಗಿ ಏರ್ಪಾಡು ಮಾಡಿದ್ದಾರೆ. ಜೂನಿಯರ್ ಆಡಿಟರ್ ಅವರಿಗೆ ಎಸ್. ಎಸ್. ಎಲ್. ಸಿ. ಅರ್ಹತೆ ಸಾಕು ಎಂದು ಹೇಳುತ್ತಾರೆ. ಈಗಿನ ಎಸ್. ಎಸ್. ಎಲ್. ಸಿ. ವಿದ್ಯಾಭ್ಯಾಸ ಮಾಡಿಕೊಂಡವರಿಗೆ ಅರ್ಹತೆ ಇರುವುದಿಲ್ಲ. ಸ್ವಾಭಾವಿಕವಾಗಿ ನಮ್ಮ ಮನೇ ಮಕ್ಕಳಿಗೇ ಚೆನ್ನಾಗಿ ಓದಿ ಬರೆಯಲು ಬರುವುದಿಲ್ಲ. ಬೇರೆಯವರ ವಿಷಯ ನಾನು ಹೇಳುವುದಿಲ್ಲ. ಕೇವಲ ಎಸ್.ಎಸ್.ಎಲ್.ಸಿ. ಆಗಿರುವವರಿಗೆ ಲೆಕ್ಕ ಪರಿಶೋಧನೆ ಮಾಡುವುದಕ್ಕೆ ಅವಕಾಶ ಕೊಟ್ಟರೆ ಅವರು ಆಡಿಟ್ಟನ್ನು ಇನ್ನು ಎಷ್ಟರಮಟ್ಟಿಗೆ ಮಾಡುತ್ತಾರೆ ? ಎಸ್. ಎಸ್. ಎಲ್. ಸಿ. ಪಾಸಾದಮೇಲೆ ಅವರಿಗೆ 6 ತಿಂಗಳುಗಳು ಆಡಿಟ್‌ನಲ್ಲಿ ಟ್ರೈನಿಂಗ್ ಕೊಡುತ್ತಾರೆ. ಆ ಅವಧಿಯಲ್ಲಿ ಬ್ಯಾಂಕಿಂಗ್ ಲಾ, ಕೊ-ಅಪರೇಟಿವ್ ಲಾ, ಬುಕ್ ಕೀಪಿಂಗ್ ಇವೆಲ್ಲವನ್ನೂ ಓದಿ ತಿಳಿದುಕೊಳ್ಳಲು ಸಾಧ್ಯವಿಲ್ಲ.

ದೇಶಾದ್ಯಂತ 20 ಸಾವಿರ ಸಂಸ್ಥೆಗಳು ಇವೆ. ಇವಕ್ಕೆ ಸರಿಯಾದಂಥ ವ್ಯವಸ್ಥೆ ಇರಬೇಕು. ಇವು ಬಹಳ ಪ್ರಾಮುಖ್ಯವಾದುವು ಮತ್ತು ಪ್ರಾಶಸ್ತ್ಯವಾದುದು. ಇದನ್ನು ತನಿಖೆ ಮಾಡಲು ಆಡಿಟ್ ಇಲಾಖೆ ಎಂದು ಮಾಡಿದ್ದಾರೆ. ಇದು ಇಲ್ಲದೇ ಇದ್ದ ಪಕ್ಷದಲ್ಲಿ ಲೆಕ್ಕಪತ್ರಗಳು ಸರಿಯಾಗಿ ಇರುವುದಿಲ್ಲ. ಪ್ರಭಾವಶಾಲಿಗಳು ಯಾವರು ಬಂದು ಹೇಳಿ ಬರೆಸಿ ಬಿಡುತ್ತಾರೆ. ಬಿ.ಕಾಂ. ಪದವೀಧರರಗಿಂತ ಕಡಿಮೆ ಆದವರಿಗೆ ಈ ಪದವಿ ಕೊಡಬಾರದು. ಬ್ಯಾಲೆನ್ಸ್‌ಷೀಟ್ ಮತ್ತು ರಿಪೋರ್ಟ್ ತಯಾರಿಸಿ ಆಡಿಟರ್ಸ್ ಲೆಕ್ಕ ಕೊಟ್ಟು ಹೋಗುತ್ತಾರೆ. ಇದರಿಂದ ಮೊದಾಟ ತೆರಿಗೆ ಆದಾಯ ತೆರಿಗೆ ಕೊಡುವವರಿಗೆ ಬಹಳ ತೊಂದರೆಯಾಗಿದೆ. ಆದಾಯ ತೆರಿಗೆ ಎಷ್ಟು ಬರುತ್ತದೆ, ಯಾವ ಬಾಬಿಗೆ ಎಷ್ಟು ಬರುತ್ತದೆ ಎಂದು ವಿಮರ್ಶೆ ಮಾಡುವ ಶಕ್ತಿ ಆಡಿಟ್ ಇಲಾಖೆಗೆ ಇಲ್ಲ. ತಿಪಟೂರ್ ಮಾರ್ಕೆಟಿಂಗ್ ಸೊಸೈಟಿಗೆ 1965-66ನೇ ಸಾಲಿನ ಅಕೌಂಟ್ಸ್‌ಗೆ 9,400 ರೂಪಾಯಿಯನ್ನು ಆದಾಯ ತೆರಿಗೆಯುವರು ನಿಗದಿ ಮಾಡಿದರು. ಇದನ್ನು ಏನು ಮಾಡಬೇಕು ಎನ್ನುವುದು ಗೊತ್ತಾಗಲಿಲ್ಲ. ಕೊನೆಗೆ ಮ್ಯಾನೇಜಿಂಗ್ ಕಮಿಟಿಯವರು ನಮಗೆ ಅನ್ಯಾಯವಾಗುತ್ತಿದೆ ಎಂದು ಆಡಿಟ್ ಇಲಾಖೆಯವರನ್ನು ಕೇಳಿದರು. ಅವರು ನಾವು ಏನೂ ಮಾಡುವುದಕ್ಕಾಗುವುದಿಲ್ಲ, ನಮಗೆ ಸಂಬಂಧವಿಲ್ಲ ಎಂದು ಹೇಳಿದರು. ಆಗ ಅವರು ಒಬ್ಬ ಖಾಸಗಿ ಆಡಿಟರ್‌ನ್ನು ವಿಚಾರಣೆ ಮಾಡಿ ಅಪೀಲು ಮಾಡಿದಾಗ್ಗೆ ನಾಲ್ಕು ಸಾವಿರ ಚಿಲ್ಲರೆ ರೂಪಾಯಿ ರೀಫಂಡ್ ಆಯಿತು. ಇಲಾಖೆ ಆಡಿಟರಿಗೆ ಕೊಟ್ಟ ಹಣವಲ್ಲದೆ ಖಾಸಗಿ ಆಡಿಟರಿಗೂ ಫೀ ಕೊಡಬೇಕಾಯಿತು. ಹೀಗೆ ಸಂಸ್ಥೆಗೆ ಅನ್ಯಾಯವಾಗುತ್ತಿದೆ. ಆಡಿಟ್ ಇಲಾಖೆಗೂ ದುಡ್ಡು ಕೊಡಬೇಕಾಗುತ್ತದೆ ಮತ್ತು ಖಾಸಗಿ ಆಡಿಟರ್‌ನ್ನು ನೇಮಿಸಿಕೊಂಡು ಇದರ ವ್ಯವಹಾರ ಮಾಡಬೇಕಾದರೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ಸರ್ಕಾರದವರು ಸೂಕ್ತ ವ್ಯವಸ್ಥೆ ಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಸ್ವಾಮಿ, ಇನ್ನು ಸಹಕಾರಿ ಇಲಾಖೆಯ ಮುಖಾಂತರ ರೈತರಿಗೆ ಸಾಲ ಸೌಲಭ್ಯವನ್ನು ಕೊಡುತ್ತಿದ್ದಾರೆ. ಪ್ರೈಮರಿ ಸೊಸೈಟಿ ಮುಖಾಂತರ ಜಿಲ್ಲಾ ಸಹಕಾರೀ ಬ್ಯಾಂಕ್ ಏನು ಸಾಲ ಕೊಡುತ್ತಿದ್ದಾರೆ ಅದರ ರೀತಿ ನೀತಿ ಸರಿಯಾಗಿಲ್ಲ. ಪ್ರತಿ ಸಾರಿಯೂ ತೆಗೆದುಕೊಳ್ಳಬೇಕಾದರೆ ಬಹಳ ಕಷ್ಟವಾಗುತ್ತದೆ. ತಾಸೀಲ್ದಾರ್ ಆಫೀಸ್, ಸಬ್ ರಿಜಿಸ್ಟ್ರಾರ್ ಆಫೀಸ್ ಮತ್ತು ವಿಲೇಜ್ ಲೆವಲ್ ವರ್ಕರ್ಸ್, ಬ್ಯಾಂಕ್ ಸೂಪರ್‌ವೈಸರ್ ಇವರೆಲ್ಲರೂ ರಿಕಾರ್ಡ್ಸನ್ನು ನೋಡಬೇಕಾಗುತ್ತದೆ. ಒಂದುವೇಳೆ ಸೂಪರ್‌ವೈಸರ್ ಒಂದು ತಿಂಗಳು ರಜಾ ಹಾಕಿದರೆ ಆ ಒಂದು ತಿಂಗಳು ಅವನಿಗೆ ಸಾಲ ಸಿಕ್ಕುವುದಿಲ್ಲ ಮತ್ತು ರೈತನಿಗೆ ಬೇಕಾದಾಗ ಸಾಲ ಸಿಕ್ಕುವುದಕ್ಕೆ ಅವಕಾಶ ಇಲ್ಲ. ಜಿಲ್ಲಾ ಬ್ಯಾಂಕಿನ ಕೇಂದ್ರ ಪ್ರತಿಯೊಂದು ತಾಲ್ಲೂಕಿನಲ್ಲೂ ಇದೆ. ಅವನ ಆಸ್ತಿಮೇಲೆ ವರ್ಷಕ್ಕೆ ಎಷ್ಟು ಮೊಬಲಗು ಕೊಡಬಹುದು ಎಂದು ತೀರ್ಮಾನ ಮಾಡಿ ಜಿಲ್ಲಾ ಬ್ಯಾಂಕಿಗೆ ಚೆಕ್ ಬರೆದರೆ ಸಾಲ ಸಿಗುವಂತೆ ಇರಬೇಕು. ಇಷ್ಟು ಸೌಲಭ್ಯವನ್ನು ಮಾಡಿಕೊಡದೇ ಹೋದರೆ ಈಗ ಇರತಕ್ಕಂಥ ರೀತಿ ನೀತಿಯಿಂದ ಏನೂ ಪ್ರಯೋಜನವಾಗುವುದಿಲ್ಲ. ಸಾಲ ಯಾವಾಗ ದೊರೆಯಬೇಕು ಆವಾಗ ಸಿಕ್ಕುವುದಿಲ್ಲ. ಆದುದರಿಂದ ಇದಷ್ಟು ವಿವೇಚನೆ ಮಾಡಿ ಸುಲಭವಾಗಿ ಸಾಲ ಸಿಕ್ಕುವ ಅವಕಾಶವನ್ನು ಈ ಸಹಕಾರಿ ಇಲಾಖೆ ಮುಖಾಂತರ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇದನ್ನು ಹೇಳುವಾಗ ಒಂದು ವಿಷಯ ಜ್ಞಾಪಕಕ್ಕೆ ಬರುತ್ತದೆ. ಸಹಕಾರಿ ಇಲಾಖೆ ಮುಖಾಂತರ ಸಿಕ್ಕುವ ಸಾಲವನ್ನು ಸರಿಯಾಗಿ ಸಕಾಲದಲ್ಲಿ ದೊರೆಯುವಂತೆ ಮಾಡಿಕೊಡಬೇಕೆಂದು ಹೇಳುತ್ತೇನೆ. ಈಗ ಸರಿಯಾಗಿ ಸಿಕ್ಕುತ್ತಾ ಇಲ್ಲ ಏತಕ್ಕೆಂದರೆ ಈಗ ಬ್ಯಾಂಕಿನಲ್ಲಿ ಸಾಲ ಏನು ಕೊಡುತ್ತಾ ಇದ್ದಾರೋ ಅದನ್ನು ಬಹಳಮಟ್ಟಿಗೆ ನಿಲ್ಲಿಸಿಬಿಟ್ಟಿದ್ದಾರೆ. ಕೆಲವರು ಖಾಸಗಿ ಜನಗಳು ಆಧಾರ ಭೋಗ್ಯ ಮಾಡಿ ಸಿಕ್ಕಿಕೊಂಡು ಬಿಟ್ಟಿದ್ದಾರೆ. ಆದುದರಿಂದ ಯಾವ ಬ್ಯಾಂಕೇ ಆಗಲಿ, ಸೊಸೈಟಿ ಆಗಲಿ ಸಾಲ ಕೊಡುವುದಿಲ್ಲ. ಹೊಸ ಸ್ಕೀಂ ತಯಾರು ಮಾಡಿ ಬೇಕಾದಂಥ ಸೌಲಭ್ಯವನ್ನು ರೈತಾಪಿಜನತೆಗೆ ಮಾಡಿಕೊಟ್ಟಿದ್ದಾರೆ. ಆದರೆ ಅವರು ಇನ್ನೊಬ್ಬರಿಗೆ ಆಧಾರ ಮಾಡಿರುತ್ತಾರೆ. ಋಣ ಪರಿಹಾರ ಮಾಡಿದಿದ್ದರೆ ಸಾಲದ ಸ್ಕೀಂ ಮತ್ತು ಕೋಆಪರೇಷನ್ ಸ್ಕೀಂ ಇತರ ಸೌಲಭ್ಯ ಸಿಕ್ಕದೆ ನಿಂತು ಹೋದರೆ ಅವರು ಬೆಳವಣಿಗೆಯಾಗಲು ಅವಕಾಶ ಆಗುವುದಿಲ್ಲ. ಭೂ ಅಭಿವೃದ್ಧಿ ಬ್ಯಾಂಕ್‌ನಲ್ಲಿ ಋಣ ಪರಿಹಾರಕ್ಕೆ ಅವಕಾಶ ಕೊಟ್ಟಿಲ್ಲ. ಇದನ್ನು ಪರಿಹಾರ ಮಾಡುವುದಕ್ಕೆ ಅವಕಾಶ ಮಾಡಿ ಕೊಡಬೇಕು ಇಲ್ಲದಿದ್ದರೆ 1966ನೇ ಇಸವಿಯಲ್ಲಿ ಮೈಸೂರು ಅಗ್ರಿಕಲ್ಚರ್‌ದ ಡೆಟರ್ಸ್ ರಿಲೀಫ್ ಆಕ್ಟ್ ಏನು ಒಂದು ಆಕ್ಟ್ ತಯಾರು ಆಗಿತ್ತೋ ಅದನ್ನು ಇನ್ನೂ ಜಾರಿಗೆ ಕೊಡದೇ ಇರುವುದರಿಂದ ದೇಶಕ್ಕೆ ಅನ್ಯಾಯವಾಗುತ್ತಿದೆ. ಸಮಾಜವಾದದ ಗುರಿ ಇಟ್ಟುಕೊಂಡು ಏನು ಏನು ವ್ಯವಸ್ಥೆ ಮಾಡಿದ್ದಾರೆ ಅದನ್ನು ಜಾರಿಗೆ ಕೊಡುವುದಕ್ಕೆ ಹಿಂಜರಿಯುತ್ತಾರೆ. ಕಾರಣ ಇಷ್ಟೆ. ದೇಶಾದ್ಯಂತ ಒಂದು ಬಂಡವಾಳಶಾಹಿಯನ್ನು ಆಡಳಿತ ಪಕ್ಷದಿಂದ ರೂಪಿಸುವುದಕ್ಕೆ ನೀವ್ ಕೈಯ್ಯಲ್ಲಿ ಇಟ್ಟುಕೊಂಡಿದ್ದೀರಿ ಎನ್ನುವುದು ಅರ್ಥವಾಗುತ್ತದೆ. ಬಹಳ ಜನ ಕಷ್ಟಪಟ್ಟಿದ್ದಾರೆ. ಕಾನೂನು ಇದೆ. ಆದರೆ ಆ ಕಾನೂನನ್ನು ಜಾರಿಗೆ ಕೊಡದೇ ಇರುವುದನ್ನು ನೋಡಿದರೆ.

(ಶ್ರೀ ವಿ. ಎಸ್. ಶಿವಪ್ಪ)

ಮೈಸೂರು ಸರ್ಕಾರದವರ ರಾಜ್ಯಭಾರ ತಕ್ಕಡಿ ಹಿಡಿಯುವವರ ಕೈಯ್ಯಲ್ಲಿ ಇದೆ ಎನ್ನುವುದು ಅರ್ಥವಾಗುತ್ತದೆ. ಕಾನೂನನ್ನು ಜಾರಿಗೆ ಕೊಡದೇ ಇರುವುದರಿಂದ ಬಹಳ ಅನ್ಯಾಯವಾಗಿದೆ. ಆದುದರಿಂದ ಈ ಬಗ್ಗೆ ಜಾರಿಗೆ ಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೋಆಪರೇಟೀವ್ ಸಂಸ್ಥೆ, ರೆಗ್ಯುಲೇಟೆಡ್ ಮಾರ್ಕೆಟ್ ಏನು ಮಾಡಿದ್ದೀರಿ ಅದರ ಬಗ್ಗೆ ಬಹಳ ದುಃಖದಿಂದ ವಿನಂತಿ ಮಾಡಿಕೊಳ್ಳತಕ್ಕ ಸನ್ನಿವೇಶ ಇದೆ. ದೇಶಾದ್ಯಂತ ಇರತಕ್ಕ ತಾಲ್ಲೂಕು ಮಾರ್ಕೆಟ್ ಸಮಿತಿಗಳು ಏನು ಇವೆ ಅದರ ಬಗ್ಗೆ ಹೇಳತಕ್ಕ ವಿವರಣೆಗಳು ಬಹಳ ಶೋಚನೀಯ ರೀತಿಯಲ್ಲಿ ಇದೆ. ಎಷ್ಟು ಸಾಧನೆ ಮಾಡಿದ್ದಾರೆ ಎನ್ನುವುದನ್ನು ಸಂತೋಷದಿಂದ ಹೇಳತಕ್ಕ ಮಾತು. ಆ ಕಾಲದಲ್ಲಿ ಮಾರ್ಕೆಟ್ ಸಮಿತಿ ಚುನಾವಣೆ ಮಾಡುವ ಅವಕಾಶ ತಪ್ಪಿ ಹೋಗಿತ್ತು. ತಿಪಟೂರು ತಾಲ್ಲೂಕು ರೆಗ್ಯುಲೇಟೆಡ್ ಮಾರ್ಕೆಟ್ ಏನು ಇದೆ ಅದನ್ನು ಉದಾಹರಣೆಯಾಗಿ ಹೇಳುತ್ತೇನೆ. ಸ್ವಾಮಿ, ಅಲ್ಲಿಯ ಒಂದು ಮಾರ್ಕೆಟ್‌ನಲ್ಲಿ ಮಾರ್ಕೆಟ್ ರೂಲ್ಸ್ ಏನು ಪ್ರಾರಂಭ ಆಯಿತು ಆ ರಾಗಾಯ್ತು ಒಬ್ಬ ಸದಸ್ಯರು ಮಾರ್ಕೆಟ್ ಸಮಿತಿಯಲ್ಲಿ ಇದ್ದರು. ಅವರು ಚುನಾವಣೆ ಮುಖಾಂತರ ಖಾಸಗೀ ಅಧ್ಯಕ್ಷರು ಬರಬೇಕು ಎಂದು ಇದ್ದ ಅವಕಾಶದಂತೆ ಅಧ್ಯಕ್ಷರಾಗಿ ಚುನಾಯಿತರಾದರು. ಮಾರ್ಕೆಟ್ ವ್ಯವಸ್ಥಿತವಾಗಿ ನಡೆಯಲು ಸರ್ಕಾರದಿಂದ ಕೋಪ್ರ ಆಕ್ಷನ್ ಷೆಡ್‌ಗೋಸ್ಕರ 1½ ಲಕ್ಷ ರೂಪಾಯಿ ಸಾಲ ತೆಗೆದುಕೊಂಡು ಕಟ್ಟಡ ಕಟ್ಟಿಸಿದರು. ಹಿಂದೆ ಇದ್ದಂತೆ ವರ್ತಕರ ಅಂಗಡಿಗೆ ಮಾಲು ಹೋಗಿ, ಅವರು ತೂಕ ಹಾಕಿ ಹರಾಜಿನಲ್ಲಿ ಯಾರು ಬಿಡ್ಡು ಮಾಡುತ್ತಾರೋ ಅವರಿಗೆ ಪುನಃ ತೂಕ ಮಾಡಿ ಕೊಡುವುದರಿಂದ ರೈತರಿಗೆ ತೊಂದರೆಯಾಗುತ್ತದೆ. ಜನರು ಯಾರು ಋಣ ಮಾಡಿದ್ದಾರೆ ಅವರಿಗೆ ಹಿಂಸೆಯಾಗುತ್ತದೆ. ಕಾನೂನಿನಲ್ಲಿ ಸರಿಪಡಿಸುವುದಕ್ಕಾಗುವುದಿಲ್ಲ ಎಂದು ತಿಳಿದು ಸರ್ಕಾರದ ವತಿಯಿಂದ ಒಂದು ಕೋಪ್ರ ಆಕ್ಷನ್ ಷೆಡ್ ಫಾರಂ ಮಾಡಿ ಅಲ್ಲಿ ಮಾಲನ್ನು ಆಕ್ಷನ್ ಮಾಡಿ ತೂಕ ಮಾಡಿ ಕೊಟ್ಟರೆ ಅನುಕೂಲವಾಗುತ್ತದೆ. ಈ ರೀತಿ ಮಾಡಿದರೆ ರೈತರಿಗೆ ತೊಂದರೆಯಾಗುವುದಿಲ್ಲ ಎಂದು ಕಟ್ಟಡ ಕಟ್ಟಿಸಬೇಕು ಎಂದು ಷುರು ಮಾಡಿದರು. ಸರ್ಕಾರದವರು ಸಂತೋಷದಿಂದ ಸಾಲ ಕೊಟ್ಟರು. ಕಟ್ಟಡ ಕಟ್ಟುವಾಗ ವರ್ತಕರು ಐದು ಆರು ಜನ ವರ್ತಕ ಸದಸ್ಯರು ಸೇರಿ ಅಧ್ಯಕ್ಷರು ಕ್ರಮವಾಗಿ ನಡೆಸುತ್ತಾ ಇಲ್ಲ, ಮೀಟಿಂಗ್ ನಡೆಸುತ್ತಾ ಇಲ್ಲ. ಚೀಫ್ ಮಾರ್ಕೆಟಿಂಗ್ ಆಫೀಸರಲ್ಲಿ ವಿಶ್ವಾಸವಿಲ್ಲ ಎಂದು ಅರ್ಜಿ ಕಳುಹಿಸಿದರು. ಅಧ್ಯಕ್ಷರನ್ನು ತೆಗೆಯತಕ್ಕ ಅವಕಾಶ ಕಾನೂನಿನಲ್ಲಿ ಆಗಲಿ, ಯಾವ ರೂಲ್ಸ್‌ನಲ್ಲೂ ಇಲ್ಲ. ಅದಕ್ಕೆ ಯಾವುದೋ ರೂಲ್ಸ್‌ನಿಂದ ⅔ ಭಾಗ ಮೆಜಾರಿಟಿ ಸದಸ್ಯರು ಅವಿಶ್ವಾಸ ಇದೆ ಎಂದು ಹೇಳಿದರೆ ಸದಸ್ಯತ್ವದಿಂದ ವಜಾ ಮಾಡಬಹುದು ಎಂದು ಯಾವುದೋ ಕಾನೂನನ್ನು ತೋರಿಸಿ ಒಂದು ಅರ್ಜಿ ಬರೆದರು. ಅದಕ್ಕೆ 10 ಜನ ರುಜು ಮಾಡಿ ಕಳುಹಿಸಿದರು. ಷೋಕಾಸ್ ಇಷ್ಯೂ ಮಾಡಿ ಕಳುಹಿಸಿದರು. ಅವರನ್ನು ಮಾರ್ಕೆಟ್ ಸಮಿತಿ ಮೆಂಬರ್‌ಷಿಪ್‌ನಿಂದ ವಜಾ ಮಾಡಿದರು. ಇಂಥ ಸನ್ನಿವೇಶ ಪ್ರಜಾಪ್ರಭುತ್ವದಲ್ಲಿ ಇದೆ. ನೀವು ಅಪರಾಧಿ ಎಂದು 100 ನಿರಪರಾಧಿಗಳನ್ನು ಕೈಬಿಡಬಹುದು, ಆದರೆ ನಿರಪರಾಧಿಯಾದ ಒಬ್ಬನನ್ನು ಶಿಕ್ಷಿಸಿದರೆ ಅದು ತಪ್ಪು. ಆತನು 30 ವರ್ಷದಿಂದ ಇರತಕ್ಕಂಥ ಸದಸ್ಯ ನಿರಪರಾಧಿ. ಅವನಹತ್ತಿರ ದುಡ್ಡು ಇಲ್ಲ. ಕೋರ್ಟಿಗೆ ಹೋಗಿ ಛಾಲೇಂಜ್ ಮಾಡುವ ಶಕ್ತಿ ಇಲ್ಲ. ಅಂತಹವರಿಗೆ ಶಿಕ್ಷೆ ಆದರೆ ದೇಶದ ಆಡಳಿತ ನಡೆಸತಕ್ಕ ವ್ಯವಸ್ಥೆ ಯಾವ ರೀತಿ ಇದೆ ಎಂದು ಊಹಿಸಬಹುದು. ಆದುದರಿಂದ ತಾಲ್ಲೂಕು ಮಾರ್ಕೆಟಿಂಗ್ ಸಮಿತಿಯಲ್ಲಿ ನಡೆದಿರುವುದನ್ನು ಪರಿಶೀಲಿಸಲು ಸರ್ಕಾರದವರು ಒಂದು ಸಮಿತಿ ನೇಮಕ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ರೆಗ್ಯುಲೇಟೆಡ್ ಮಾರ್ಕೆಟ್ಟಿನ ವ್ಯವಸ್ಥೆ ಸರಿಯಾಗಿ ನಡೆಯುತ್ತಾ ಇಲ್ಲ. ಕಾರಣ ಇಷ್ಟೆ. ಮುಖ್ಯ ಮಂತ್ರಿಗಳ ಅನುಯಾಯಿಗಳು 10–15 ಜನ ಲಿಂಗಾಯಿತರು ಇದ್ದಾರೆ. ಬೇರೆಯವರು ಅವರ ಕಣ್ಣಿಗೆ ಬೀಳುತ್ತಾ ಇಲ್ಲ. ಇನ್ನು ಅಲ್ಲಿ ಒಬ್ಬ ಸೆಕ್ರೆಟರಿಗಳು ಇದ್ದರು. ಅವರನ್ನು ಅಲ್ಲಿಂದ ವರ್ಗ ಮಾಡಿದರು. ಅಲ್ಲಿ ಮೊದಲು ಒಬ್ಬರು ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿದ್ದರು. ಅವರನ್ನೇ ಅಲ್ಲಿ ಸೂಪರಿಂಟೆಂಡೆಂಟರಾಗಿ ಪ್ರಮೋಟ್ ಮಾಡಿದರು. ಅವರನ್ನೀಗ ಮತ್ತೆ ಸಸ್‌ಪೆಂಡ್ ಮಾಡಿ ಅಲ್ಲಿಗೆ ಬೇರೊಬ್ಬರನ್ನು ನೇಮಕ ಮಾಡಿಕೊಳ್ಳಲು ಪ್ರಯತ್ನಗಳು ನಡೆಯುತ್ತಿವೆ. ಇದನ್ನೆಲ್ಲಾ ನೋಡಿದರೆ ಅಲ್ಲಿ ಏತಕ್ಕೆ ರೈತರು 70 ಸಾವಿರ ರೂಪಾಯಿಗಳ ಟ್ಯಾಕ್ಸನ್ನು ಕೊಡಬೇಕು, ಅಲ್ಲಿ ಅವರಿಗೆ ಇದರಿಂದ ಆಗತಕ್ಕ ಅನುಕೂಲವೇನು ಅನ್ನುವುದೇ ಗೊತ್ತಾಗುವುದಿಲ್ಲ. ಅಲ್ಲಿ ಇಲ್ಲಿಯತನಕ ಯಾರೊಬ್ಬರೂ ಇನ್‌ಸ್ಪೆಕ್ಷನ್ ನಡೆಸಿಲ್ಲ. ಇಂಥ ಅವ್ಯವಸ್ಥೆಯಲ್ಲಿರತಕ್ಕ ಆಡಳಿತಕ್ಕಾಗಿ ರೈತರೇಕೆ ವೃಥಾ 70 ಸಾವಿರ ರೂಪಾಯಿಗಳ ಟ್ಯಾಕ್ಸನ್ನು ಕೊಡಬೇಕು ? ಅಲ್ಲ ಒಬ್ಬ ದೊಡ್ಡ ವರ್ತಕರ ಮಂಡಿಗೆ ಮಾಲಿನ ಹರಾಜಿಗೆ ಹೋದಾಗ ಅಲ್ಲಿ ಮಾಲೇ ಇರಲಿಲ್ಲ. ಮಾಲಿಲ್ಲದೆ ಹರಾಜ್ ಮಾಡುವುದು ಕಾನೂನಿಗೆ ವಿರೋಧವಾದದ್ದು. ಹಾಗಿದ್ದರೂ ಆ ವರ್ತಕರು ತಮ್ಮ ದೊಡ್ಡಸ್ತಿಕೆಯ ಮೇಲೆ

ಅದಕ್ಕೇನು ಪರವಾ ಇಲ್ಲ ಹರಾಜ್ ಮಾಡಿ ಎಂದು ಹೇಳಿದರಂತೆ. ಹೀಗೆ ಅಲ್ಲಿ ಅಧಿಕಾರಿಗಳ ಮೇಲೆ ದರ್ಪ ನಡೆಸಿದಾಗ್ಯೂ ಅದನ್ನು ಕೇಳತಕ್ಕವರೇ ಗತಿಯಿಲ್ಲ. ಅದನ್ನು ವಿಚಾರಣೆ ಮಾಡಿ ಪರಿಶೀಲನೆ ಮಾಡಬೇಕೆಂದು ಎಷ್ಟು ಹೇಳಿಕೊಂಡರೂ ಅದನ್ನು ಕೇಳತಕ್ಕವರೇ ಇಲ್ಲ. ಆದುದರಿಂದ ಈ ಇಲಾಖೆಗೆ ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಆ ಸ್ಥಳಕ್ಕೆ ಭೇಟಿ ಕೊಟ್ಟು ಆ ವಿದ್ಯಮಾನಗಳನ್ನೆಲ್ಲಾ ಪರಿಶೀಲನೆ ಮಾಡಿ ನಾನು ಇಲ್ಲಿಯವರೆಗೂ ಈ ಸಭೆಯಲ್ಲಿ ಏನು ಹೇಳಿದ್ದೇನೆ ಇದು ಸತ್ಯವೋ ಇಲ್ಲವೊ ಎಂಬುದನ್ನು ವಿಮರ್ಶೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಹಾಗೊಂದು ವೇಳೆ ನಾನು ಈ ಸಭೆಯಲ್ಲಿ ಇಲ್ಲಯವರೆಗೂ ಹೇಳಿರತಕ್ಕ ವಿಷಯಗಳು ಸತ್ಯವಾದವುಗಳಲ್ಲ ಎಂದರೆ ನಾನು ಖಂಡಿತವಾಗಿಯೂ ಇಂಥ ಸಭೆಯಲ್ಲಿ ಇರುವುದಕ್ಕೆ ಅರ್ಹವಲ್ಲ. ಆದ್ದರಿಂದ ಈ ವಿಚಾರವನ್ನು ಮಾನ್ಯ ಮಂತ್ರಿಗಳು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ಕೇಳಿಕೊಂಡು ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷಣಿಯರಿಗೆ ನನ್ನ ವಂದನೆಗಳನ್ನರ್ಪಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಚಿಕ್ಕೇಗೌಡ (ಹೊಸಕೋಟೆ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ನಮ್ಮ ಮುಂದೆ ಇರತಕ್ಕ ಗ್ರಾಮಾಂತರಾಭಿವೃದ್ಧಿ, ಸಹಕಾರ, ಸಾಮುದಾಯಿಕ ಅಭಿವೃದ್ಧಿ ರಾಷ್ಟ್ರೀಯ ಅಭಿವೃದ್ಧಿ ಇತ್ಯಾದಿ ವಿವಿಧ ಬಾಬುಗಳ ಬಗ್ಗೆ ಮಂಡಿಸಿರತಕ್ಕ 6 ಕೋಟಿ ಚಿಲ್ಲರೆ ರೂಪಾಯಿಗಳ ಬೇಡಿಕೆಗಳನ್ನು ಸ್ವಾಗತಿಸುತ್ತ ಅನೇಕ ಮಾನ್ಯ ಸದಸ್ಯರುಗಳು ಈಗಾಗಲೆ ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ನಮ್ಮ ದೇಶದಲ್ಲಿರತಕ್ಕ ಸುಮಾರು 9 ಸಾವಿರದ 500 ಸಹಕಾರ ಸಂಸ್ಥೆಗಳಲ್ಲಿ 37 ಲಕ್ಷ ಜನರು ಸಹಕಾರಿಗಳಾಗಿ ಸೇರಿ ಕೆಲಸಮಾಡಿಕೊಂಡು ಬರುತ್ತಿದ್ದಾರೆಂಬುದು ನಿಜವಾಗಿಯೂ ಒಂದು ಹೆಮ್ಮೆಯ ವಿಷಯ.

ಆದರೆ ಅನೇಕ ಮಾನ್ಯ ಸದಸ್ಯರು ಸಹಕಾರ ಸಂಸ್ಥೆಗಳ ವಿಷಯವನ್ನು ಪ್ರಸ್ತಾಪ ಮಾಡತಾ ಸರ್ಕಾರಕ್ಕೆ ಅಧ್ಯಕ್ಷಮುಖೇನ ಅನೇಕ ಸಲಹೆಗಳನ್ನು ನೀಡಿದ್ದಾರೆ. ಆದರೆ ಇದರಲ್ಲಿ ವಿರೋಧಪಕ್ಷಕ್ಕೆ ಸೇರಿದ ಅನೇಕ ಸದಸ್ಯರು ಈ ಸಹಕಾರ ಸಂಸ್ಥೆಗಳಲ್ಲಿ ಅನೇಕ ಸದಸ್ಯರು ಈ ಸಹಕಾರ ಸಂಸ್ಥೆಗಳಲ್ಲಿ ಅನೇಕ ನ್ಯೂನತೆಗಳಿಗೆಲ್ಲಾ ಕಾಂಗ್ರೆಸ್ಸಿನವರು ಈ ಸಂಸ್ಥೆಗಳಲ್ಲಿ ಸದಸ್ಯರಾಗಿರತಕ್ಕದ್ದೇ ಕಾರಣವೆಂದು ಹೇಳುತ್ತ ಅಲ್ಲಿನ ಅನೇಕ ನ್ಯೂನತೆಗಳಿಗೂ ಮತ್ತು ದುರಾಡಳಿತಕ್ಕೂ ಇವರೇ ಕಾರಣರೆಂದು ಹೇಳಿದ್ದಾರೆ ಆದರೆ ಈ ವಿಚಾರದಲ್ಲಿ ನಾನಾದರೂ ಹೇಳುವುದಿಷ್ಟೆ. ಈ ಸಹಕಾರ ಸಂಸ್ಥೆಗಳಲ್ಲಿ ವಿರೋಧಪಕ್ಷಗಳ ಸದಸ್ಯರನೇಕರು ಸೇರಿಕೊಂಡಿದ್ದರಿಂದಲೇ ಅಲ್ಲಿ ಸ್ವಲ್ಪವಾಗಿದ್ದುದನ್ನು ದೊಡ್ಡದನ್ನಾಗಿ ಮಾಡಿ ಹೇಳುತ್ತಿದ್ದಾರೆ ಎಂದು ತಿಳಿಸುವದಕ್ಕೆ ಇಷ್ಟಪಡುತ್ತೇನೆ. ಅಲ್ಲಿ ಸದಸ್ಯರಾಗಿರತಕ್ಕವರೆಲ್ಲರೂ ಅವರು ಯಾವ ಪಕ್ಷದವರೇ ಆಗಲಿ ನಾನು ಇಂಥ ಪಕ್ಷದವರು ಅಂಥ ಪಕ್ಷದವರು ಎಂದು ಹೇಳುವುದಿಲ್ಲ, ಅಲ್ಲಿ ಹಣ ಸುಲಭವಾಗಿ ಸಿಕ್ಕುತ್ತದೆ ಎಂದು ಹೇಳಿ ಅದನ್ನು ತೆಗೆದುಕೊಂಡು ದುರುಪಯೋಗ ಮಾಡುವುದಕ್ಕೆ ಅವಕಾಶವಾಗಿದೆಯೆಂದು ಕಾಣುತ್ತದೆ. ಆದರೆ ಈ ಹಣದ ವಹಿವಾಟು ಮತ್ತು ಸಾಲಗಳನ್ನು ಮತು ಸಾಲಗಳ ದುರುಪಯೋಗ ಇವೆಲ್ಲಾ ಬಹಳ ಮಟ್ಟಿಗೆ ನನಗೆ ತಿಳಿದಿರುವಂತೆ, ಈ ದಿವಸ ಏನೊಂದು ಈ ಆಹಾರದ ಹಂಚಿಕೆಯನ್ನು ಈ ಸಹಕಾರ ಸಂಸ್ಥೆಗಳ ಮೂಲಕ ನಡೆಸುತ್ತಿದ್ದಾರೋ ಅದರಿಂದ ಆಗಿರುತ್ತದೆ. ಅದನ್ನು ಮಾನ್ಯ ಆಹಾರ ಮಂತ್ರಿಗಳು ನಿಲ್ಲಿಸಿದರೆ, ಆಗ ಈ ಸಂಸ್ಥೆಗಳ ಬಗ್ಗೆ ಬರತಕ್ಕ ಟೀಕೆಗಳು ಬಹಳಮಟ್ಟಿಗೆ ಕಡಮೆಯಾಗುತ್ತವೆಂದು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸಹಕಾರ ತತ್ವಗಳನ್ನು ಕಟ್ಟುನಿಟ್ಟಾಗಿ ಆಚರಣೆಗೆ ತರುವುದಕ್ಕೆ ಎಷ್ಟೇ ಮನಸ್ಸಿದರೂ ಜೇನು ಕೀಳತಕ್ಕವನು ಯಾರೂ ಕೈಯನ್ನು ನೆಕ್ಕದೆ ಅದನ್ನು ತೊಳೆಯುವುದಿಲ್ಲ. ಹೀಗಾಗಿ ಅಲ್ಲಿ ಅದರ ಸವಿ ಹಿಡಿದಿರತಕ್ಕ ಜನರು ಅಲ್ಲಿ ಸೇರಿಕೊಂಡು ದೊಡ್ಡ ಹೆಗ್ಗಣಗಳಾಗಿದ್ದಾರೆ. ಹೀಗಾಗಿ ಅಲ್ಲಿ ದುರ್ವ್ಯವಹಾರಗಳು ನಡೆಯುವುದಕ್ಕೆ ಅವಕಾಶವಾಗಿದೆ. ಹೀಗಿದ್ದುದ್ದು ವ್ಯಸನಕರ. ಈ ಸಹಕಾರ ಸಂಘಗಳನ್ನು ಹಾಳು ಮಾಡಬೇಕೆಂಬ ದುರುದ್ದೇಶದಿಂದಲೇ ಅನೇಕರು ಅದರಲ್ಲಿ ಸೇರಿಕೊಂಡಿದ್ದಾರೆ. ಆದರೆ ಕಾನೂನಿನಲ್ಲಿ ಅಂಥ ತಪ್ಪಿತಸ್ಥರಿಗೆ ಉಗ್ರವಾದ ಶಿಕ್ಷೆಮಾಡುವುದಕ್ಕೆ ಸರಿಯಾಗಿ ಪ್ರಾವಿಜನ್ ಇಲ್ಲ. ಆದರಿಂದ ನಾವು ನಮ್ಮ ಆ ಕಾನೂನಿನಲ್ಲಿ ತಪ್ಪಿತಸ್ಥರಿಗೆ ಉಗ್ರವಾದ ಕ್ರೂರವಾದ ಶಿಕ್ಷೆಗಳನ್ನು ಮಾಡುವುದಕ್ಕೆ ಅವಕಾಶವನ್ನು ಕಲ್ಪಿಸಬೇಕಾದ್ದು ಅತ್ಯಗತ್ಯ. ನಮಗೆ ಈ ಸಹಕಾರ ತತ್ವಗಳಲ್ಲಿ ಅಂಥ ಒಂದು ಅಚಲವಾದ ನಂಬಿಕೆಯಿದ್ದರೆ ನಾವು ಇದನ್ನು ಮೊದಲು ಮಾಡಬೇಕು. ಈ ದಿವಸ ಸಾಮಾನ್ಯವಾಗಿ ಬೀದಿಯಲ್ಲಿ ಹೋಗತಕ್ಕವರ ಜೇಬಿನಲ್ಲಿದ್ದ ಒಂದು ಫೌಂಟನ್ ಪೆನ್ನನ್ನು ಯಾರಾದರೂ ಕದ್ದರೆ, ಅಂದರೆ ಪಿಕ್‌ಪಾಕೆಟ್ ಮಾಡಿದರೆ ಆ ತಪ್ಪಿಗೆ ಮೂರು ತಿಂಗಳ ಸಜಾ ಶಿಕ್ಷೆಯಾಗುತ್ತೆ ಆದರೆ ಈ ದಿವಸ ಒಂದು ಸಹಕಾರ ಸಂಸ್ಥೆಯಲ್ಲಿ ಯಾರಾದರೊಬ್ಬ 20 ಸಾವಿರ ಹಣವನ್ನು ದುರುಪಯೋಗ ಮಾಡಿದರೆ ಅವನಿಗೆ ಇಂಥ ಒಂದು ಶಿಕ್ಷೆವಿಧಿಸುವುದಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ಹೀಗಾಗಿ ಈ ದಿವಸ ನಮ್ಮ ಬೆಂಗಳೂರು

(ಶ್ರೀ ಎಚ್. ಚಿಕ್ಕೇಗೌಡ)

ಜಿಲ್ಲೆಯ ರಾಮನಗರಂ ತಾಲ್ಲೂಕಿನಲ್ಲ ಯಾರೊ ಒಬ್ಬ ಈ ಸಹಕಾರ ಸಂಸ್ಥೆ ಒಂದರಿಂದ 20 ಸಾವಿರ ಹಣವನ್ನು ದುರುಪಯೋಗ ಮಾಡಿಕೊಂಡು ಆತನು ಮದ್ರಾಸಿಗೆ ಹೋಗಿ ಅಲ್ಲಿ ಫಿಲಂ ವ್ಯವಹಾರ ನಡೆಸುತ್ತಿದ್ದಾನೆದೂ ಆತನ ಹಣದ ದುರುಪಯೋಗನ ಬಗ್ಗೆ ಒಂದು ಕ್ರಿಮಿನಲ್ ಕೇಸನ್ನು ದಾಖಲ್ಮಾಡಿದ್ದು ಅದು ಕೋರ್ಟಿನಲ್ಲಿ ಡಿಸ್‌ಮಿಸ್ ಆಯಿತು ಅಂತ ನಾನು ವರ್ತಮಾನ ಕೇಳುತ್ತಿದ್ದೇನೆ. ಒಬ್ಬ ಪಿಕ್‌ಪಾಕೆಟ್ ಮಾಡಿದವನನ್ನು 3 ತಿಂಗಳು ಸಜಾ ಶಿಕ್ಷೆಯನ್ನು ಅನುಭವಿಸುವುದಕ್ಕೆ ಕಳುಹಿಸುತ್ತಿರುವಾಗ ಇಲ್ಲಿ 20 ಸಾವಿರ ಹಣವನ್ನು ದುರುಪಯೋಗ ಮಾಡಿದ್ದರೂ ಅವನಿಗೆ ಶಿಕ್ಷೆಮಾಡಲಿಲ್ಲ ಅಂದರೆ ಇದು ಒಂದು ಹಗಲು ದರೋಡೆ ಆಯಿತು. ಇದನ್ನು ಕೇಳದೆ ಹಾಗೇ ಕೈಬಿಟ್ಟರೆ ಇನ್ನು ಈ ಸಂಸ್ಥೆಗಳು ಬಾಳುವುದೆಲ್ಲಿ ಬಂತು ? ಕಾನೂನಿನಲ್ಲಿ ಅದು ಸಾಕಷ್ಟು ಬಿಗಿಯಾಗಿ ಇಲ್ಲದಿದ್ದರೆ ಯಾರೇನು ಮಾಡುವುದಕ್ಕಾಗುತ್ತದೆ? ಮಾನ್ಯ ಮಂತ್ರಿಗಳು ಇದೇ ಸಂಬಂಧದಲ್ಲಿ ಒಂದಾವರ್ತಿ ಉತ್ತರ ಕೊಡುತ್ತ ಆಡಳಿತದಲ್ಲಿ ಏನಾದರೂ ಅಂಥ ದುರಾಡಳಿತವಿದ್ದಲ್ಲಿ ಅದಕ್ಕಾಗಿ ಉಗ್ರ ಶಿಕ್ಷೆಯನ್ನು ವಿಧಿಸುವುದಕ್ಕೆ ಹೊರಟರೆ ನಾವು ಈ ಪ್ರಜಾಪ್ರಭುತ್ವವನ್ನೇ ಮೊಟಕು ಮಾಡಿದಂತಾಗುತ್ತದೆಂದು ಹೇಳಿದ್ದಾರೆ. ಆದರೆ ನಾವು ಅಷ್ಟು ತಾತ್ಸಾರ ಭಾವನೆಯಿಂದ ಕೆಲಸ ಮಾಡುವುದಕ್ಕಾಗುವುದಿಲ್ಲ. ಹೀಗೆ ಕೆಲವರು ನೆಪಮಾತ್ರಕ್ಕೆ ಸಹಕಾರ ಸಂಘಗಳ ಒಂದು ಬ್ಯಾಡ್ಜನ್ನು ಹಾಕಿಕೊಂಡು ಅದರ ನೆಪದಲ್ಲಿ ಆ ಸಹಕಾರ ಸಂಸ್ಥೆಗಳನ್ನು ತಮ್ಮ ಸ್ವಂತ ಸಂಸ್ಥೆಗಳನ್ನಾಗಿ ಮಾಡಿಕೊಂಡಿದ್ದಾರೆ. ಇಂಥಾ ಸ್ವಾರ್ಥಪರ ಜನರು ಬಹಳವಾಗಿ ಜಿಲ್ಲಾ ಬ್ಯಾಂಕುಗಳಲ್ಲಿ ಸೇರಿಕೊಡಿದ್ದಾರೆ. ಅಲ್ಲಿ ಅವರು ಆ ಬ್ಯಾಂಕಿನ ಹಣವನ್ನು ತಮ್ಮ ಮನೆಯ ಸ್ವಂತ ಹಣದಂತೆ ಖರ್ಚುಮಾಡುತ್ತಿದ್ದಾರೆ. ಆ ಸಂಸ್ಥೆಗಳಲ್ಲಿರತಕ್ಕ ಹಣವನ್ನು ಅವರ ತಾತ ಮುತ್ತಾತನ ಆಸ್ತಿಯಂತೆ ಮಾಡಿಕೊಂಡಿದಾರೆ. ಅಲ್ಲದೆ ಈ ಜಿಲ್ಲಾ ಬಂಕುಗಳಲ್ಲಿ ಕೆಲಸ ಮಾಡತಕ್ಕ ಅಧ್ಯಕ್ಷರು ಮತ್ತು ನೌಕರರುಗಳು ಪಂಚಾಯಿತಿ ಚುನಾವಣೆಗಳಲ್ಲಿ ಬೇರೆ ಕೈಹಾಕುತ್ತಿದ್ದಾರೆ. ಇದನ್ನು ನೋಡಿ ನನಗೆ ಬಹಳ ವ್ಯಥೆಯಾಯಿತು. ಆದುದರಿಂದ ಸರ್ಕಾರದವರು ಇದನ್ನು ತಡೆಗಟ್ಟಬೇಕಾಗಿದ್ದರೆ ಆ ಜಿಲ್ಲಾ ಬ್ಯಾಂಕಗಳಲ್ಲಿ ಕೆಲಸ ಮಾಡತಕ್ಕ ನೌಕರರೇನಿದ್ದಾರೆ ಅವರಿಗೆ ಇತರೇ ಸರಕಾರಿ ನೌಕರರಿಗೆ ಹಾಕಿರತಕ್ಕಂಥ ಸರ್ವಿಸ್ ಕಂಡಿಷನ್‌ಗಳನ್ನು ಹಾಗೂ ಆ ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್‌ಗಳನ್ನು ಅಳವಡಿಸಬೇಕೆಂದು ಸಲಹೆ ಮಾಡುತ್ತೇನೆ. ಹೀಗೆ ಏನಾದರೂ ಒಂದು ನಿರ್ಬಂಧವನ್ನು ಹಾಕದಿದ್ದರೆ ಇವರನ್ನು ಕಂಟ್ರೋಲ್ ಮಾಡುವುದಕ್ಕಾಗುವುದಿಲ್ಲ ಇನ್ನು ನಮ್ಮ ಬೆಂಗಳೂರು ಜಿಲ್ಲೆಯಲ್ಲಿರತಕ್ಕ ಜಿಲ್ಲಾ ಮಟ್ಟದ ಬ್ಯಾಂಕುಗಳು ತಾಲ್ಲೂಕ ಮಟ್ಟದಲ್ಲಿರತಕ್ಕ ಸೊಸೈಟಿಗಳಿಗೆ ಎಸ್. ಟಿ. ಮತ್ತು ಎಂ. ಟಿ. ಲೋನುಗಳನ್ನು ಕೊಟ್ಟಿದ್ದಾರೆ. ಹಾಗೆ ಕೊಟ್ಟ ಸಾಲದ ಹಣವನ್ನು ಅವರು ಸರಿಯಾಗಿ ವಸೂಲ್ಮಾಡಿಲ್ಲ. ಆಡಳಿತದಲ್ಲಿರತಕ್ಕವರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅವರು ಬರಿ ಟಿ.ಎ.ಡಿ. ಎಗಳನ್ನು ಮಾಡುವುದರಲ್ಲಿದ್ದಾರೆಯೇ ವಿನಾ ಅವುಗಳ ಅಭಿವೃದ್ಧಿಗೆ ಅವರು ಗಮನಕೊಡುತ್ತಿಲ್ಲ. ಹಾಗೆ ನಮ್ಮ ತಾಲ್ಲೂಕಿನಲ್ಲಿ ಒಂದು ಪ್ರೈಮರಿ ಲ್ಯಾಂಡ್ ಡೆವಲಪ್ ಮೆಂಟ್ ಬ್ಯಾಂಕ್ ಅಂತ ಇದೆ. ಅದಕ್ಕೆ ಸರ್ಕಾರದವರು ಇಲ್ಲಿಗೆ 7 ವರ್ಷಗಳ ಕೆಳಗೆ ಒಬ್ಬರನ್ನು ಆ ಸಂಸ್ಥೆಗೆ ನಾಮಕರಣ ಮಾಡಿ ಅಧ್ಯಕ್ಷರನ್ನಾಗಿ ಕೂಡಿಸಿದರು. ಹಾಗೆ ನಾಮಕರಣದ ಮೇಲೆ ಅಲ್ಲಿ ಅಧ್ಯಕ್ಷರಾಗಿ ಕುಳಿತವರು ಅಲ್ಲೇ ಖಾಯಂ ಆಗಿ 7 ವರ್ಷಗಳಿಂದಲೂ ಬೇರು ಬಿಟ್ಟು ಕುಳಿತಿದ್ದಾರೆ. ಅಲ್ಲಿ ಚುನಾವಣೆಗಳನ್ನು ಏಕೆ ನಡೆಸುತ್ತಿಲ್ಲ ಎಂದು ಕೇಳಿದರೆ ಬೈಲಾಗಳನ್ನು ಅಪ್ರೂವಲ್ಲಿಗೆ ಕಳುಹಿಸಿದ್ದೇವೆ. ಅವು ಇನ್ನೂ ಬಂದಿಲ್ಲ ಅಮೆಂಡ್‌ಮೆಂಟುಗಳನ್ನು ಕಳುಹಿಸಿದ್ದೇವೆ, ಅವಿನ್ನೂ ಬಂದಿಲ್ಲ ಎಂದು ಸಬೂಬ್ ಹೇಳಿಕೊಂಡು ಅವರು ತಮ್ಮ ಪಟ್ಟವನ್ನು ಭದ್ರಮಾಡಿಕೊಂಡು ಕಳೆದ 7 ವರ್ಷಗಳಿಂದಲೂ ಅಲ್ಲಿ ಕುಳಿತು ಬಿಟ್ಟಿದ್ದಾರೆ. ಆ ಬ್ಯಾಂಕಿನವರು ಅಲ್ಲಿ ಕ್ಯಾಲೆಂಡರ್ ಆಫ್ ಇವೆಂಟ್ಸಿಗೆ ಸರಿಯಾಗಿ ಕೆಲಸಮಾಡುತ್ತಿಲ್ಲ. ಹೀಗೆ ಈ ಸಂಸ್ಥೆಗಳಲ್ಲಿ ನಡೆಯತಕ್ಕ ಸ್ವಯಂ ಆಡಳಿತ ಪದ್ಧತಿ ಹೋಗಬೇಕು. ಈ ದಿವಸ ಅನೇಕ ಸಂಘ ಸಂಸ್ಥೆಗಳು ಕಾನೂನು ಪ್ರಕಾರ ಕೆಲಸ ಮಾಡುತ್ತಿಲ್ಲ. ಜನರಲ್ ಬಾಡಿಯನ್ನು ವರ್ಷಕ್ಕೆ ಸರಿಯಾಗಿ ಯಾರೂ ಕರೆಯುತ್ತಿಲ್ಲ. ಕೆಲವು ಸಂಸ್ಥೆಗಳಲ್ಲಿ ಪೇಡ್ ಸೆಕ್ರೆಟೆರಿಗಳಿದ್ದಾರೆ. ಅಲ್ಲಿಯೂ ಇದೇ ಗತಿಯಾಗಿದೆ. ಮಾನ್ಯ ಆಹಾರ ಸಚಿವರು ನಾನಾಗಲೇ ಹೇಳಿದಂತೆ ಈ ಆಹಾರ ಹಂಚಿಕೆ ಬಾಬನ್ನು ಸಹಕಾರ ಸಂಸ್ಥೆಗಳ ಮೂಲಕ ನಡೆಸುತ್ತಿರುವುದನ್ನು ಕೈಬಿಡಿಸಿದರೆ ಇವುಗಳ ಮೇಲೆ ಬರತಕ್ಕ ಅನೇಕ ಅಪಾದನೆಗಳು ತಪ್ಪುತ್ತವೆ, ಆದ್ದರಿಂದ ಇದನ್ನು ಕೂಡಲೆ ತಪ್ಪಿಸುವುದು ಒಳ್ಳೆಯದೆಂದು ನನಗೆ ಅನಿಸುತ್ತಿದೆ. ಏತಕ್ಕೆಂದರೆ ಈ ದಿವಸ ಸರ್ಕಾರದವರು ಕೊಡತಕ್ಕ ಆಹಾರ ಏನಿದೆ ಅದು 100ಕ್ಕೆ 90 ಸಂಘಗಳಲ್ಲಿ ಸರಿಯಾಗಿ ವಿತರಣೆಯಾಗುವುದಿಲ್ಲ. ಸಹಕಾರಸಂಘಗಳು ಬ್ಲಾಕ್ ಮಾರ್ಕೆಟ್ ಮಾಡಿ ಸಂಘ ಸಂಸ್ಥೆಗಳಿಗೆ ಒಂದು ಕೆಟ್ಟ ಹೆಸರು ಬಂದಿದೆ. ಆದ್ದರಿಂದ ಅನೇಕ ಸಂಘಗಳ ಲೈಸೆನ್ಸನ್ನು ವಜಾ ಮಾಡಿ ಆ ಸಂಘಗಳಿಗೆ ಆಹಾರವನ್ನು ವಿತರಣೆ ಮಾಡುವುದಕ್ಕೆ ಕೊಡುವುದನ್ನು ನಿಲ್ಲಿಸಬೇಕು ಎಂದು ನಾನು ಹೇಳುತ್ತೇನೆ.

2-00 P.M.

ಈ ಸಹಕಾರ ಸಂಘಗಳ ಮುಖಾಂತರ ಸಾಲಕೊಡುವುದು ಅಷ್ಟೆ. ಈ ಸಹಕಾರ ಸಂಘಗಳ ಮುಖಾಂತರ ಸಾಲಕೊಡುವುದು ಸರಿಯಾಗಿ ವಿತರಣೆಯಾಗುವುದಿಲ್ಲ. ಅದರಲ್ಲಿಯೂ ಅನ್ಯಾಯಗಳು ನಡೆಯುತ್ತಿವೆ. ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳ ಮುಖಾಂತರ ಬಾವಿಗಳಿಗೆ ಸಾಲ ಕೊಡುವುದು ಬಂದಮೇಲೆ ಅಲ್ಲಿ ನಡೆಯುತಕ್ಕ ವ್ಯವಹಾರಗಳನ್ನು ನೋಡಿದರೆ ಮನಸ್ಸಿಗೆ ತುಂಬಾ ನೋವಾಗುತ್ತದೆ. ಒಂದು ಬಾವಿಗೆ ಸಾಲವನ್ನು ತೆಗೆದುಕೊಳ್ಳಬೇಕಾದರೆ ಲ್ಯಾಂಡ್‌ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರಿಗೆ 200 ರೂಪಾಯಿಗಳನ್ನು ಕೊಡಬೇಕು. ಇಲ್ಲದೇ ಹೋದರೆ ಅವರು ಸಾಲವನ್ನು ಕೊಡುವುದಕ್ಕೆ ಶಿಫಾರಸ್ಸು ಮಾಡುವುದಿಲ್ಲ. ಈಗ ಸುಮಾರು 7 ವರ್ಷಗಳಿಂದ ಅಲ್ಲಿ ನಾಮಿನೇಟೆಡ್ ಪ್ರೆಸಿಡೆಂಟ್ ಇದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೂ ಕೂಡ ನಾನು ಬರೆದಿದ್ದೇನೆ. ಅದು ಸರ್ಕಾರದ ಆಕ್ಟೀವ್ ಕನ್‌ಸಿಡರೇಷನ್‌ನಲ್ಲಿ ಇದೆಯೆಂದು ಹೇಳುತ್ತಿದ್ದಾರೆ. ಅದೇನು ಅಕ್ಟೀವ್ ಕನ್‌ಸಿಡರೇಷನಲ್ಲಿಯೇ ಉಳಿಯುತ್ತದೆಯೋ ಏನೋ ಗೊತ್ತಿಲ್ಲ. ಅದಕ್ಕೆ ಚುನಾಯಿತರಾದ ಪ್ರೆಸಿಡೆಂಟರನ್ನು ಹಾಕಬೇಕು.

ಇನ್ನೊಂದು ಮುಖ್ಯವಾದ ವಿಚಾರವನ್ನು ಹೇಳುವುದಾದರೆ ಬೆಂಗಳೂರು ಜಿಲ್ಲಾ ಬ್ಯಾಂಕ್ ಒಂದು ಸ್ವಂತ ಬ್ಯಾಂಕಿನೋಪಾದಿಯಲ್ಲಾಗಿದೆ. ಅಲ್ಲಿಗೆ ಬೇರೆಯವರು ಹೋಗುವುದಕ್ಕೆ ಅವಕಾಶ ವಿಲ್ಲದಂತಾಗಿದೆ. ಆ ಬ್ಯಾಂಕಿಗೆ ಅಪೀಲು ಹಾಕಿಕೊಂಡ ಅರ್ಜಿಗಳನ್ನು ಅಡ್ಮಿಟ್ ಮಾಡಬೇಕಾಗಿದ್ದರೆ ಇವೊತ್ತಿನವರೆಗೂ ನನಗೆ ಹಿಯರಿಂಗ್ ಬಂದಿಲ್ಲ. ಆ ಬ್ಯಾಂಕಿನಲ್ಲಿ ಅನೇಕ ನ್ಯೂನತೆಗಳು ಇವೆ. ಒಟ್ಟಿನಲ್ಲಿ ಹೇಳುವುದಾದರೆ ಬೆಂಗಳೂರು ಜಿಲ್ಲಾ ಬ್ಯಾಂಕು ಬಹಳ ಕೆಟ್ಟಿದೆ. ಕೋ ಅಪರೇಟಿವ್ ಸೊಸೈಟಿ ಆಕ್ಟಿನ ಸೆಕ್ಷನ್ 54,120ರ ಪ್ರಕಾರ ಬೆಂಗಳೂರು ಜಿಲ್ಲಾ ಬ್ಯಾಂಕಿನ ಮೇಲೆ ಕ್ರಮವನ್ನು ತೆಗೆದುಕೊಳ್ಳಬೇಕು.

ಶ್ರೀ ಟಿ. ರಾಮೇಗೌಡ.—ಎಲೆಕ್ಷನ್ ಬರುವುದಕ್ಕೆ ಮುಂಚೆ ಅದನ್ನು ಮಾಡಿಸಿ.

ಶ್ರೀ ಎನ್. ಚಿಕ್ಕೇಗೌಡ.—ರಿಜರ್ವ್‌ಬ್ಯಾಂಕಿನವರು ಅನೇಕಸಾರಿ ಈ ಬ್ಯಾಂಕನ್ನು ಪರಿಶೀಲಿಸಿದ ಕಾಲದಲ್ಲಿ ಆ ಬ್ಯಾಂಕಿನಲ್ಲಿ ತುಂಬಾ ಅವ್ಯವಸ್ಥೆಯಾಗಿದೆ ಎಂದು ನಾನು ಕೇಳಿದ್ದೇನೆ. ಕುಂಬಳಕಾಯಿ ಕಳ್ಳ ಎಂದರೆ ಹೆಗಲುಮುಟ್ಟಿ ನೋಡಿಕೊಂಡ ಎನ್ನುವ ಹಾಗೆ ನಾನು ಮಾತನಾಡುವ ಸಂದರ್ಭದಲ್ಲಿ ಮಾನ್ಯ ಸದಸ್ಯರಾದ ಶ್ರೀರಾಮೇಗೌಡರು ಮಧ್ಯೆ ಮಧ್ಯೆ ಮಾತನಾಡುವುದಕ್ಕೆ ಬರುತ್ತಿದ್ದಾರೆ. ಈಗಾಗಲೇ ರಿಜರ್ವ್ ಬ್ಯಾಂಕಿನವರು ಸಹಿತ ಬೆಂಗಳೂರು ಜಿಲ್ಲಾ ಬ್ಯಾಂಕಿನ ವಿಷಯದಲ್ಲಿ ಟೀಕೆ ಮಾಡಿದ್ದಾರೆ. ಅಲ್ಲಿ ತುಂಬಾ ಅವ್ಯವಸ್ಥೆಯುಂಟಾಗಿದೆ ಎಂದು ಹೇಳಿದ್ದಾರೆ. ಆ ಸಹಕಾರಿ ಬ್ಯಾಂಕಿನಲ್ಲಿ ಅಧ್ಯಕ್ಷರೊಬ್ಬರು ಅನೇಕ ವರ್ಷಗಳಿಂದ ಪಟ್ಟಭದ್ರಹಿತವಾಗಿದ್ದಾರೆ. ಈಗ ಚುನಾವಣೆಗೆ ಅವಕಾಶ ಕೊಡುತ್ತಿಲ್ಲ. ಈ ವಿಷಯವನ್ನು ಸರ್ಕಾರದ ಗಮನಕ್ಕೂ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕ ತಂದಿದೆ. ಕೋ ಆಪರೇಟೀವ್ ಸೊಸೈಟಿಯ ಆಕ್ಟಿನ 51 ನೇ ಸೆಕ್ಷನ್ ಪ್ರಕಾರ ಸರ್ಕಾರದವರು ಆ ಸೊಸೈಟಿಯನ್ನು ಸೂಪರ್‌ಸೀಡ್ ಮಾಡಿ ಅದನ್ನು ಸರ್ಕಾರದ ಆಡಳಿತಕ್ಕೆ ತೆಗೆದುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಅಲ್ಲಿ ಕೊಟ್ಟಿರತಕ್ಕ ಸಾಲಗಳನ್ನು ಅನೇಕರು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ನಾನು ಬಹಳ ವಿಷಾದದಿಂದ ಹೇಳ ಬೇಕಾಗಿದೆ. ಸಹಕಾರಿ ಬ್ಯಾಂಕುಗಳು ಇರತಕ್ಕದ್ದು ಹಳ್ಳಿಗಾಡಿನ ಜನರ ಅನುಕೂಲಕ್ಕಾಗಿ. ಅಲ್ಲಿ ಕೆಲವು ಪ್ರಭಾವ ಶಾಲಿಗಳು ಸಿಕ್ಕಾಪಟ್ಟೆ ಸಾಲವನ್ನು ತೆಗೆದುಕೊಂಡು ಲಕ್ಷಾಂತರ ರೂಪಾಯಿಗಳ ಬಾಕಿ ಹಾಗೆ ಉಳಿದಿದೆ. ಯಾರದೋ ಹೆಸರಿನಲ್ಲಿ ಅಫಿಡವಿಟ್ ತೆಗೆದುಕೊಂಡು, ಯಾರೋ ಸಾಲವನ್ನು ತೆಗೆದುಕೊಂಡಿದ್ದಾರೆ. ಇದನ್ನೆಲ್ಲಾ ನೋಡಿದರೆಬೆಂಗಳೂರು ಡಿಸ್ಟ್ರಿಕ್ಟ್ ಕೋ ಅಪರೇಟಿವ್ ಬ್ಯಾಂಕನ್ನು ಸೂಪರ್‌ಸೀಡ್ ಮಾಡಲೇಬೇಕು. ಬೆಂಡಿಗಾನಹಳ್ಳಿಯ ಸೊಸೈಟಿಗೆ ಬರಬೇಕಾಗಿ ರತಕ್ಕ ಬಾಕಿಯನ್ನು ವಸೂಲು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಈ ಬೆಂಗಳೂರು ಜಿಲ್ಲಾ ಕೋ ಅಪರೇಟಿವ್ ಬ್ಯಾಂಕಿಗೆ ಸಂಬಂಧಪಟ್ಟ ಹಾಗೆ ಬೇಕಾದಷ್ಟು ಬಾಕಿ ನಿಂತಿದೆ. ಬ್ಯಾಂಕಿನವರು ಯಾವ ಕ್ರಮವನ್ನೂ ತೆಗೆದುಕೊಂಡಂತೆ ಕಾಣುವುದಿಲ್ಲ. ನಾನು ಒಂದು ಸೊಸೈಟಿಯ ಅಧ್ಯಕ್ಷನಾಗಿದ್ದಾಗ್ಯೆ ಜಫ್ತಿ ಕ್ರಮ ತೆಗೆದುಕೊಂಡು ಬಾಕಿಯನ್ನು ವಸೂಲು ಮಾಡಿದ್ದೇನೆ. ಈ ವಿಷಯದಲ್ಲಿ ಜನಗಳು ತಮ್ಮ ಮೆಚ್ಚಿಗೆಯನ್ನು ವ್ಯಕ್ತಪಡಿಸಿದ್ದಾರೆ. ಈ ವಿಷಯದಲ್ಲಿ ತಮಗೆ ಬೇಕಾದರೆ ಅಂಕಿ ಅಂಶಗಳನ್ನು ರುಜುವಾತು ಮಾಡುತ್ತೇನೆ. ಈ ರೀತಿಯಲ್ಲಿ ಅಲ್ಲಿ ವ್ಯವಹಾರವನ್ನು ನಡೆಯತಕ್ಕದ್ದನ್ನು ನೋಡಿದರೆ ಮನಸ್ಸಿಗೆ ಬೇಜಾರು ಆಗುತ್ತದೆ. ಅದು ಯಾರೊಬ್ಬರ ಸ್ವತ್ತೂ ಅಲ್ಲ. ಈ ಬೆಂಗಳೂರು ಜಿಲ್ಲಾ ಕೋ ಅಪರೇಟೀವ್ ಬ್ಯಾಂಕಿನಲ್ಲಿರತಕ್ಕ ವಾಹನಗಳನ್ನು ಡೈರೆಕ್ಟರುಗಳು ಯಾರು ಯಾರೋ ಉಪಯೋಗಿಸುತ್ತಾರೆ. ನಾನು ಬಹಳ ನೊಂದ ಮನಸ್ಸಿನಿಂದ

(ಶ್ರೀ ಎಚ್. ಚಿಕ್ಕೇಗೌಡ)

ಹೇಳುತ್ತೇನೆ. ಇಂಥಾದ್ದಕ್ಕೆಲ್ಲಾ ಅವಕಾಶವನ್ನು ಕೊಡಬಾರದು ಎಂದು ನಾನು ಪ್ರಾರ್ಥಿಸಿ ಕೊಳ್ಳುತ್ತೇನೆ.

ಇನ್ನು ರೆಗ್ಯುಲೇಟೆಡ್ ಮಾರ್ಕೆಟ್ ವಿಷಯದಲ್ಲಿ ಹೇಳುವುದಾದರೆ ಈಗ ಹೊಸದಾಗಿ ಬಂದಿರತಕ್ಕ ಆಕ್ಟ್ ಏನಿದೆ ಆ ಅಕ್ಟಿನ ರೂಲ್ಸ್ ಅನ್ನು ಜಾರಿಗೆ ತರಬೇಕು ಎಂದು ಮಾನ್ಯ ಮಂತ್ರಿಗಳು ತೀರ್ಮಾನ ಮಾಡಿದ್ದಾರೆಂದು ಗೊತ್ತಾಗಿದೆ. ಅದನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕು. ಕೋ ಅಪರೇಟಿವ್ ಮಾರ್ಕೆಟಿಂಗ್ ಸೊಸೈಟಿಯಲ್ಲಿ ಗ್ರೇಡಿಂಗ್ ಸೆಂಟರ್ ಮಾಡುವುದನ್ನು ಸರಿಯಾಗಿ ಇಂಪ್ಲಿಮೆಂಟ್ ಮಾಡುತ್ತಿಲ್ಲ. ಇದನ್ನು ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ ಮತ್ತು ಸ್ವಲ್ಪ ಹಣ ಜಾಸ್ತಿ ಖರ್ಚಾಗುತ್ತದೆ. ಆದರೂ ಸಹ ಇದು ಬಹಳ ಒಳ್ಳೆಯದು. ಆದ್ದರಿಂದ ಸರ್ಕಾರದವರು ಇದನ್ನು ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಕಡ್ಡಾಯವಾಗಿ ಇಂಪ್ಲಿಮೆಂಟ್ ಮಾಡುವ ಹಾಗೆ ಮಾಡಬೇಕೆಂದು ನಾನು ಹೇಳುತ್ತೇನೆ.

ಇನ್ನು ಪಂಚಾಯಿತಿ ಮತ್ತು ತಾಲ್ಲೂಕು ಬೋರ್ಡುಗಳ ವಿಷಯದಲ್ಲಿ ಒಂದೆರಡು ಮಾತುಗಳನ್ನು ನಾನು ಹೇಳಬಯಸುತ್ತೇನೆ. ಪಂಚಾಯಿತಿಗೆ ಹೊಸದಾಗಿ ಚುನಾವಣೆ ಆಗಿದೆ, ಪಂಚಾಯಿತಿಗಳಲ್ಲಿರತಕ್ಕ ನ್ಯೂನತೆಗಳನ್ನು ಸರಿಪಡಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ಪಂಚಾಯಿತಿಗೆ ಕೊಡತಕ್ಕಂಥ ಹಣ ಏನಿದೆ ಅದರಿಂದ ಜನಗಳಿಗೆ ಹೆಚ್ಚಿನ ಅನುಕೂಲಗಳನ್ನು ಒದಗಿಸಿಕೊಡಬೇಕಾದಂತಹ ಒಂದು ಅವಕಾಶ ಬರುತ್ತದೆ. ಅದ್ದರಿಂದ 5 ವರ್ಷಗಳ ಅವಧಿಯಲ್ಲಿ ಈ ಪಂಚಾಯಿತಿಗೆ ಸಂಬಂಧಪಟ್ಟಹಾಗೆ ಕೆಲಸಕಾರ್ಯಗಳನ್ನು ಮಾಡಲು ಹಣವನ್ನು ಖರ್ಚುಮಾಡುವಾಗ ಪಂಚಾಯಿತಿ ಸೆಕ್ರೆಟರಿಗಳಾದವರು ಬಹಳ ಎಚ್ಚರಿಕೆಯಿಂದ ನೋಡಿಕೊಳ್ಳಬೇಕು. ನಾನು ಅನುಭವದಿಂದ ಈ ವಿಷಯವನ್ನು ಹೇಳುತ್ತಿದ್ದೇನೆ. ಪಂಚಾಯಿತಿ ರಾಜ್ಯದ ಬಿಲ್ ಏನಿದೆ ಅದನ್ನು ಈ ನಮ್ಮ ವಿಧಾನ ಸಭೆಯ ಮುಂದೆ ಆದಷ್ಟು ಜಾಗ್ರತೆ ಮಂಡಿಸಿ ಪಾಸು ಮಾಡಿ ಅದನ್ನು ಆದಷ್ಟು ಜಾಗ್ರತೆ ಜಾರಿಗೆ ತರಬೇಕು ಎಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ. ತಾಲ್ಲೂಕು ಬೋರ್ಡಿಗೆ ವಹಿಸಿಕೊಟ್ಟಿರತಕ್ಕ ಯೋಜನೆಗಳು ಏನಿವೆ ಅದರಲ್ಲಿ ಕೆರೆಗಳ ಜೀರ್ಣೋದ್ಧಾರ ಕುಡಿಯುವ ನೀರಿನ ಭಾವಿಗಳು, ರಸ್ತೆಗಳ ನಿರ್ಮಾಣ ಈ ಕೆಲಸಗಳನ್ನು ಅವರಿಗೆ ವಹಿಸಿ ಅವರಿಗೆ ಹಣವನ್ನು ಒದಗಿಸಿದ್ದಾರೆ. ಈ ವಿಚಾರದಲ್ಲಿ ಸರ್ಕಾರದವರು ಅನುಸರಿಸತಕ್ಕ ನೀತಿ ಏನಿದೆ ಅದು ಸರಿಯಿಲ್ಲ. ನನ್ನ ಜಿಲ್ಲೆಗೆ ಸಂಬಂಧಪಟ್ಟ ವಿಷಯವನ್ನು ಹೇಳುವುದಾದರೆ ಈ ಕೆಲಸಕಾರ್ಯಗಳಿಗೆ ಸಂಬಂಧಪಟ್ಟಹಾಗೆ 75 ಸಾವಿರ ರೂಪಾಯಿಗಳ ಬಿಲ್‌ಗಳು ಪೆಂಡಿಂಗ್ ಇವೆ. ಈ ಕೆಲಸಕಾರ್ಯಗಳಿಗೆ ಹಣವನ್ನು ಕೊಡುವಾಗ ಕೊನೆಗಳಿಗೆಯಲ್ಲಿ ಕೊಡುತ್ತಾರೆ. ಆಗ ಅದು ಏನಾಗುತ್ತದೆ ಎಂದರೆ ದುರ್ವ್ಯಯವಾಗುತ್ತದೆ. ಕುಡಿಯುವ ನೀರಿನ ಬಾವಿಗಳಿಗೆ, ರೂರಲ್ ವಾಟರ್ ಸಪ್ಲೈಯೋಜನೆಗೆ ಆಯಾ ಸಂಬಂಧಪಟ್ಟ ಗ್ರಾಮಗಳವರು 10 ಪರ್ಸೆಂಟ್, 5 ಪರ್ಸೆಂಟ್ ಕಾಂಟ್ರಿಬ್ಯೂಷನ್ ಕೊಡಬೇಕಾಗುತ್ತದೆ. ಆಗ ತಕ್ಷಣ ಅವರು ಆ ಹಣವನ್ನು ಕೊಡುವುದಕ್ಕೆ ಅವರ ಕೈಯಲ್ಲಿ ಹಣ ಇರುವುದಿಲ್ಲ. ಬೀದಿ ದೀಪ ಕಿತ್ತು ಹಾಕುತ್ತಾರೆ, ಬಾಕಿ ಕಟ್ಟಬೇಕಾಗಿರುವ ಹಣವನ್ನು ಕಟ್ಟುವುದಕ್ಕೆ ಇವರಿಗೆ 6 ತಿಂಗಳಾದರೂ ಸಹ ಹಣ ಸಿಗುವುದಿಲ್ಲ. ಆದ್ದರಿಂದ ಇನ್ನು ಮುಂದೆ ರೂರಲ್ ವಾಟರ್ ಸಪ್ಲೈ ಸ್ಕೀಮ್‌ಗೆ ತಾಲ್ಲೂಕ್ ಬೋರ್ಡಿನವರು 6 ಪರ್‌ಸೆಂಟ್ ಕೊಡಬೇಕೆಂದು ಸರ್ಕಾರದವರು ಕೇಳುವುದು ಸರಿಯಿಲ್ಲ. ಇದು ಹೋಗಬೇಕು.

ಇನ್ನು ಹರಿಜನ ಮತ್ತು ಗಿರಿಜನರ ಸೊಸೈಟಿಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. 11,360 ಮನೆಗಳನ್ನು ಕಟ್ಟಿಸುವುದಕ್ಕೆ 2 ಕೋಟಿ 13 ಲಕ್ಷ ರೂಪಾಯಿಗಳನ್ನು ಸರ್ಕಾರದವರು ಇಟ್ಟಿದ್ದಾರೆ. ಇದುವರೆಗೆ 527 ಮನೆಗಳು ಕಟ್ಟಿ ಮುಗಿದಿವೆ. ಹರಿಜನ ಮತ್ತು ಗಿರಿಜನರಿಗೆ ಮನೆ ಕಟ್ಟಿಸಿಕೊಳ್ಳಲು ಕೊಡತಕ್ಕಂಥ ಹಣದ ಪರ್‌ಸೆಂಟ್ 10ರಿಂದ 50ರವರೆಗೆ ಏನು ಒಂದು ಇದೆ ಅದನ್ನು ಬದಲಾವಣೆ ಮಾಡಬೇಕು. ಈ ರೀತಿ ಕೊಡುವುದರಿಂದ ಅವರು ಜಾಗ್ರತೆ ಮನೆ ಕಟ್ಟಿಸಿಕೊಳ್ಳಲು ತೊಂದರೆಯಾಗುತ್ತದೆ. ಮನೆ ಕಟ್ಟಿಸಿಕೊಳ್ಳಲು ಬಂದಿರತಕ್ಕ ಅರ್ಜಿಗಳು ಬಹಳ ಬಾಕಿ ಉಳಿದಿವೆ. ಆದ್ದರಿಂದ ಇನ್ನೂ ಹೆಚ್ಚಿನ ಜನರಿಗೆ ಸಾಲ ಕೊಡಬೇಕು. ಈಗ ಸರ್ಕಾರದವರು ಎಲ್. ಐ. ಸಿ. ಅವರಿಂದ ಸಾಲ ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ಇವರಿಗೆ ಹೆಚ್ಚು ಹೆಚ್ಚು ಸಾಲವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮುಖ್ಯವಾದ ಮತ್ತೊಂದು ವಿಷಯವೆಂದರೆ ಆಯಾ ತಾಲ್ಲೂಕ್‌ಗಳಲ್ಲಿರತಕ್ಕಂಥ ಎಂ. ಎಲ್. ಎ. ಮತ್ತು ಎಂ. ಎಲ್. ಸಿ. ಅವರನ್ನು ತಾಲ್ಲೂಕ್ ಬೋರ್ಡಿಗೆ ಎಕ್ಸ್ ಅಫಿಸಿಯೋ ಸದಸ್ಯರು ಎಂದು ಮಾಡಿರುವಂತೆ ಪ್ರೈಮರಿ ಲ್ಯಾಂಡ್ ಡೆವಲಪ್ ಬ್ಯಾಂಕಿಗೂ ಮಾಡಬೇಕು. ಇದರಿಂದ ಈ ಬ್ಯಾಂಕಿನಲ್ಲಿ ಲಂಚರುಷುವತ್ತು ನಡೆಯುವುದು ನಿಲ್ಲುತ್ತದೆ. ಮತ್ತು ಬ್ಯಾಂಕ್‌ಗಳಲ್ಲಿ

ನಡೆಯುತ್ತಿರುವ ಲಂಚರುಷುವತ್ತಿನ ಜೊತೆಗೆ ತಾರತಮ್ಯ ಮತ್ತು ಪಕ್ಷಪಾತಗಳು ಸಹ ನಿಲ್ಲುತ್ತವೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಅರ್ಜಿಯನ್ನು ಅನೇಕ ಸದಸ್ಯರ ಸಹಿ ಪಡೆದೂ ಸಹ ಕೊಟ್ಟಿದ್ದೇನೆ. ಈ ಬಗ್ಗೆ ಸರ್ಕಾರದವರು ಜಾಗ್ರತೆ ಕ್ರಮತೆಗೆದುಕೊಳ್ಳಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷಿಣಿಯವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಅಧ್ಯಕ್ಷರೇ ಈಗತಾನೇ ಮಾನ್ಯ ಸದಸ್ಯರಾದ ಶ್ರೀ ಚಿಕ್ಕೇಗೌಡರು ಜಿಲ್ಲಾ ಬ್ಯಾಂಕ್‌ನ ಬಗ್ಗೆ ಹೇಳಿದರು. ಇವರು ಊಂಡೆಡ್ ಸೋಲ್ಜರ್. ಅನೇಕ ಸಲ ಡೈರೆಕ್ಟರ್ ಆಗುವುದಕ್ಕೆ ನೋಡಿದರು, ಆದರೆ ಆಗಲಿಲ್ಲ. ಕಳೆದ ವರ್ಷ ಕೂಡ ಅವರು ಡೈರಕ್ಟರ್ ಆಗುವುದಕ್ಕೆ ಅರ್ಜಿ ಹಾಕಿದ್ದರು. ತಾವು ಗೆಲ್ಲುವುದು ಅನುಮಾನ ಎಂದು ತಿಳಿದುಕೊಂಡು ಎಲಕ್ಷನ್ ನಡೆದಂತೆ ಅರ್ಬಿಟ್ರೇಷನ್‌ಗೆ ಹಾಕಿದರು. ಈಗ ಕೋರ್ಟಿನಲ್ಲಿ ವ್ಯವಹಾರ ನಡೆಸುತ್ತಿದ್ದಾರೆ. ಅವರ ತಾಲ್ಲೂಕ್‌ನಲ್ಲಿ ಜಿಲ್ಲಾ ಬ್ಯಾಂಕಿನಲ್ಲಿ ಬೇರೆ ಯಾರು ಯಾವ ಪ್ರತಿನಿಧಿಗಳು ಸಹ ಇರಬಾರದೆಂದು ಅವರ ಪ್ರಯತ್ನವಾಗಿರುವಂತೆ ಕಾಣುತ್ತಿದೆ. ಹಿಂದೆ ಜಿಲ್ಲಾ ಬ್ಯಾಂಕ್‌ನ ಚುನಾವಣೆಯ ದಿವಸ ಇವರು ಕಾಂಗ್ರೆಸ್ ಸದಸ್ಯರಾದ ಕಾರಣ ಕಾಂಗ್ರೆಸ್ ಸರ್ಕಾರದ ಪ್ರಭಾವ ಪಡೆದುಕೊಂಡು, ಚುನಾವಣೆ ಇನ್ನು 6 ಗಂಟೆ ಸಮಯದಲ್ಲಿ ನಡೆಯಲಿದ್ದಾಗ ಪೋಲೀಸ್ ಸಿಬ್ಬಂದಿಯವರ ನೆರವನ್ನು ಪಡೆದುಕೊಂಡು ಇವರಿಗೆ ವಿರೋಧವಾದ ಸೊಸೈಟಿಯ ಸದಸ್ಯರನ್ನು ಓಟು ಮಾಡದಂತೆ ಪೋಲೀಸ್‌ಸ್ಟೇಷನ್‌ನಲ್ಲಿ ಇಡಿಸಿದ್ದರು. ಆದರೂ ಸಹ ಇವರ ಪ್ರಯತ್ನ ಏನೂ ನಡೆಯಲಿಲ್ಲ.

ಚೇರ್‌ಮನ್.—ಮಾನ್ಯ ಸದಸ್ಯರು ಚಿಕ್ಕೇಗೌಡರ ಬಗ್ಗೆ ಮಾತನಾಡಬಾರದು, ಡಿಮ್ಯಾಂಡ್ ಬಗ್ಗೆ ಮಾತ್ರ ಮಾತನಾಡಬೇಕು.

ಶ್ರೀ ಜಿ. ರಾಮೇಗೌಡ.—ಮಾನ್ಯ ಸದಸ್ಯರು ನನ್ನ ಮೇಲೆ ವೈಯುಕ್ತಿಕವಾಗಿ ಕೆಲವು ಮಾತುಗಳನ್ನು ಹೇಳಿದ್ದರಿಂದ ನಾನು ಅವರ ಮೇಲೆ ಕೆಲವು ಮಾತುಗಳನ್ನು ಹೇಳಬೇಕಾಗಿದೆ.

ಶ್ರೀ ಎನ್. ಚಿಕ್ಕೇಗೌಡ.—ಪಾಯಿಂಟ್ ಆಫ್ ಆರ್ಡರ್. ನನ್ನ ಕ್ರಿಯಾಲೋಪ ಏನೆಂದರೆ ಮಾನ್ಯ ಸದಸ್ಯರಾದ ರಾಮೇಗೌಡರ ಬಗ್ಗೆ ನಾನು ಹೆಸರಿಡಿದು ವೈಯುಕ್ತಿಕವಾಗಿ ಏನೂ ಹೇಳಲಿಲ್ಲ. ಆದರೆ ಈಗ ಅವರು ಶ್ರೀಮಾನ್ ಚಿಕ್ಕೇಗೌಡರು ಎಂದು ಹೇಳುತ್ತಿರುವುದರಿಂದ, ಅವರ ಭಾಷಣ ಮುಗಿದ ಮೇಲೆ ನನಗೆ ಮತ್ತೆ ಮಾತನಾಡಲು ಅವಕಾಶ ಕೊಡಬೇಕೆಂದು ತಮ್ಮನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಇದೇ ನನ್ನ ಕ್ರಿಯಾಲೋಪ.

ಶ್ರೀ ಜಿ. ರಾಮೇಗೌಡ.—ನಂತರ ಇದೇ ಸದಸ್ಯರು ಬೆಂಡಿಗಾನಹಳ್ಳಿಯಲ್ಲಿರತಕ್ಕಂಥ ಸೊಸೈಟಿ ಇನ್ನೂ ಸೂಪರ್‌ಸೀಡ್ ಆಗಿಲ್ಲವೆಂದು ಹೇಳಿದರು. ಈಗಾಗಲೇ ಸೂಪರ್‌ಸೀಡ್ ಆಗಿದೆ. ಅಡ್ಮಿನಿಸ್ಟ್ರೇಟರ್ ನೇಮಕವಾಗಿದ್ದಾರೆ. ಅವರು ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಅವರ ಮೇಲೆ ದೂರಬೇಕೆಂದು ಈ ವಿಚಾರ ಹೇಳುತ್ತಿಲ್ಲ. ಸಹಕಾರ ಸಂಘಗಳ ಬಗ್ಗೆ ಈ ರೀತಿ ಒಬ್ಬರಿಗೊಬ್ಬರು ದೂರುತ್ತಾ ಹೋದರೆ ನಮ್ಮ ದೇಶದಲ್ಲಿರುವ ಸಹಕಾರ ಸಂಘಗಳು ಬೆಳೆಯುವುದಿಲ್ಲ ಮತ್ತು ನಮ್ಮ ದೇಶವೂ ಸಹ ಮುಂದುವರೆಯುವುದಿಲ್ಲ. ಸಮಾಜವಾದ ಸ್ವರೂಪ ರಚನೆಯಾಗಬೇಕೆಂದು ಸಹಕಾರ ಸಂಘಗಳು ಇರುವುದು. ಇದರ ತತ್ವವೇನೆಂದರೆ ಒಂದು ಸಂಘದಿಂದ ನೂರಾರು ಜನರಿಗೆ ಅನುಕೂಲವಾಗಲೀ ಎಂಬ ಕಾರಣಕ್ಕಾಗಿ. ಈ ರೀತಿಯ ಅನುಕೂಲಗಳು ನಡೆಯುವಂತೆ ಸರಿಯಾಗಿ ನೋಡಿಕೊಳ್ಳಲು ಕೆಲವರ ಕೈಯಲ್ಲಿ ಆಗುವುದಿಲ್ಲ. ಆದ್ದರಿಂದ ಸೊಸೈಟಿಯನ್ನು ಕೆಡಿಸುವುದಕ್ಕೆ ಹೋಗುತ್ತಾರೆ, ಮತ್ತು ಚೆನ್ನಾಗಿ ನಡೆಸುವವರಿಗೆ ಉತ್ತೇಜನ ಕೊಡುವುದಿಲ್ಲ. ಈ ರೀತಿಯಾದರೆ ದೇಶ ಉದ್ಧಾರವಾಗುವುದಿಲ್ಲ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲಾ ಬ್ಯಾಂಕಿಗೆ ಬಂದು ನೋಡಿದರೆ ಯಾವ ರೀತಿ ನಡೆಯುತ್ತಿದೆಯೆಂಬುದು ಗೊತ್ತಾಗುತ್ತದೆ. ಬಹಳ ವರ್ಷಗಳಿಂದ ಒಂದು ಸೊಸೈಟಿಯಲ್ಲಿ ಒಬ್ಬರೇ ಅಧ್ಯಕ್ಷರು ಇದ್ದರೆ ಆ ಸೊಸೈಟಿ ಚೆನ್ನಾಗಿ ನಡೆಯುತ್ತಿದೆ ಎಂಬ ಅರ್ಥ. ಈ ರೀತಿ ಚೆನ್ನಾಗಿ ನಡೆಯದಿದ್ದರೆ ಇದುವರೆಗಾಗಲೇ ಈ ಸೊಸೈಟಿ ಹರಿದು ಹಂಚಿ ಚೂರಾಗಿ ಹೋಗುತ್ತಿತ್ತು. ಈ ವಿಚಾರ ಸರ್ಕಾರಕ್ಕೂ ಸಹ ಗೊತ್ತು. ನಾನು ವಿರೋಧ ಪಕ್ಷದಲ್ಲಿದ್ದು ಈ ಸೊಸೈಟಿಯ ಅಧ್ಯಕ್ಷನಾಗಿರುವುದು ಸರ್ಕಾರಕ್ಕೆ ಇಷ್ಟವಿಲ್ಲ. ನಾನು ಕಾಂಗ್ರೆಸ್ ಸದಸ್ಯನಲ್ಲವಾದ್ದರಿಂದ ಈ ರೀತಿ ಆರೋಪಗಳು ಬರುತ್ತಿರುವುದು. ಈ ಸೊಸೈಟಿಗಳ ವಿಚಾರದಲ್ಲಿ ರಾಜಕೀಯ ತರುವುದು ಸರಿಯಿಲ್ಲ. ಸಹಕಾರ ತತ್ವವನ್ನು ಜನತೆ ಮತ್ತು ನಾವುಗಳು ಒಪ್ಪಿದ್ದೇವೆ. ಇದನ್ನು ಅನುಷ್ಠಾನದಲ್ಲಿ ತರದೆ ಒಬ್ಬರಿಗೊಬ್ಬರು ರಾಜಕೀಯ ಮಾಡುತ್ತಿರುವುದರಿಂದ ಸಹಕಾರ ಸಂಘಗಳು ಮುಂದುವರೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಸಣ್ಣ ಸಣ್ಣ ಸಹಕಾರ ಸಂಘಗಳಿಗೆ ಸರ್ಕಾರದವರು ಇವತ್ತಿನ ದಿವಸ ಏನು ಉತ್ತೇಜನ ಕೊಡುತ್ತಿದ್ದಾರೆಂದರೆ ಏನೂ ಕೊಡುತ್ತಿಲ್ಲ.

(ಶ್ರೀ ಜಿ. ರಾಮೇಗೌಡ)

ಸಹಕಾರ ಸಂಘದಲ್ಲಿ ಕೆಲಸ ಮಾಡುತ್ತಿರುವವರು 100 ರೂಪಾಯಿ ಲಂಚ ತೆಗೆದುಕೊಂಡರು ಎಂದು ಹೇಳುತ್ತಾರೆಯೇ ಹೊರತು ಆ ವಿಚಾರವನ್ನು ಲಂಚ ನಿರೋಧ ಶಾಖೆಗೆ ತಿಳಿಸಿ ಕ್ರಮ ತೆಗೆದುಕೊಳ್ಳುವುದಕ್ಕೆ ಹೇಳುವುದಿಲ್ಲ. ಸೊಸೈಟಿಗಳನ್ನು ಮುಚ್ಚಿಸಬೇಕು, ಹಾಳು ಮಾಡಬೇಕೆಂಬ ಕಾರಣಕ್ಕಾಗಿ ಈ ರೀತಿ ಹೇಳುತ್ತಿರುತ್ತಾರೆ. ಮಾನ್ಯ ಮಂತ್ರಿಗಳಾದ ಜತ್ತಿಯವರು ಸಹ ವರ್ತಕರು ಮಾಡತಕ್ಕಂಥ ಮೋಸದ ಕೆಲಸವನ್ನು ಸಹಕಾರ ಸಂಘಗಳವರು ಮಾಡುವುದಕ್ಕಾಗುವುದಿಲ್ಲವೆಂದು ಹೇಳಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಸೊಸೈಟಿಯವರು ಲೆಕ್ಕಪತ್ರಗಳನ್ನು ಇಡಬೇಕಾಗುತ್ತದೆ. ಆದರೆ ವರ್ತಕರು ಇಡುವುದಿಲ್ಲವಾದ್ದರಿಂದ ಏನು ಬೇಕಾದರು ಮಾಡಬಹುದು. ಸಹಕಾರ ಸಂಘಗಳು ಲಂಚದ ಮೂಲಕ ಕೆಲಸ ಮಾಡುವುದಾದರೆ ಕೆಲವೇ ದಿನಗಳಲ್ಲಿ ನಾಶವಾಗುತ ವೆ. ನಾನು ಸಹ ಕೋಳಿ ಸಹಕಾರ ಸಂಘವ ಅಧ್ಯಕ್ಷನಾಗಿ ನಾಲ್ಕು ವರ್ಷದಿಂದ ಇದ್ದೇನೆ. ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ವ್ಯಾಪಾರ ನಡೆಯುತ್ತಿದ್ದರೂ ಸಹ ಸರ್ಕಾರದವರು ಯಾವ ಸಹಾಯವನ್ನೂ ಮಾಡಿಲ್ಲ. ಮೊಲಾಸಿಸ್‌ನ್ನು ನಮ್ಮ ಸೊಸೈಟಿಗೇ ಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಂಡಾಗ ಸರ್ಕಾರದವರು ಬೇರೆಯವರಿಗೆ ವ್ಯಾಪಾರ ಮಾಡಲು ಕೊಟ್ಟರು. ಇದಕ್ಕೆ ಕಾರಣ ನಾವು ಲಂಚ ಕೊಡುವುದಕ್ಕೆ ತಯಾರು ಇರಲಿಲ್ಲ. ಸಹಕಾರ ಸಂಘಗಳು ಲಂಚ ಕೊಟ್ಟಿದ್ದಕ್ಕೂ ಸಹ ರಶೀದಿ ಕೊಡುವ ಪದ್ಧತಿಯನ್ನು ಇಟ್ಟುಕೊಳ್ಳುವುವಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟರೆ ಒಳ್ಳೆಯದು. ಖಾಲಿ ಇದ್ದ ಒಂದು ಗೋಡೌನ್ ಸರ್ಕಾರಕ್ಕೆ ಸೇರಿದಂತೆ ಇತ್ತು. ಅದನ್ನು ನಾವು ಉಪಯೋಗಿಸುತ್ತಿದ್ದೇವೆ ಈ ಗೋಡೌನ್ ಬೆಲೆ 28 ಸಾವಿರ ರೂಪಾಯಿಗಳಾಗಬಹುದು. ಈ ಗೋಡೌನ್‌ಗೆ ತಿಂಗಳಿಗೆ 210 ರೂಪಾಯಿ ಬಾಡಿಗೆ ಕೊಡಬೇಕೆಂದು ಸರ್ಕಾರದಿಂದ ನೆನ್ನೆ ನೋಟೀಸ್ ಬಂದಿದೆ. ಈ ಸೊಸೈಟಿಯಲ್ಲಿ ಸರ್ಕಾರದ 5 ಷೇರ್‌ಗಳು ಸಹ ಇಲ್ಲ. ಖಾಲಿ ಬಿದ್ದಂಥ ಒಂದು ಗೋಡೌನ್‌ನನ್ನು ಉಪಯೋಗಿಸಿಕೊಳ್ಳುವುದಕ್ಕೂ ಸಹ ಸರ್ಕಾರದವರು ಅನುಮತಿ ಕೊಡುತ್ತಿಲ್ಲ. ಸರ್ಕಾರದವರು ಮಾಡುತ್ತಿರುವ ಸಹಾಯ ಈ ರೀತಿ ಇದೆ. ಜಿಲ್ಲಾ ಸಹಕಾರ ಬ್ಯಾಂಕಿನಲ್ಲಿ ಸುಮಾರು ಎರಡು ಕೋಟಿ ರೂಪಾಯಿಗಳಷ್ಟು ಹಣವನ್ನು ಸಾರ್ವಜನಿಕರು ಡಿಪಾಜಿಟ್ ಇಟ್ಟಿದ್ದಾರೆ. ಯಾರು ಸೊಸೈಟಿಯಲ್ಲಿ 400 ರೂಪಾಯಿಗಳವರೆಗೆ ಡಿಪಾಜಿಟ್ ಇಟ್ಟಿರುತ್ತಾರೋ ಅಂತಹವರ ಇನ್‌ಕಂ ಟ್ಯಾಕ್ಸನ್ನು ವಜಾ ಮಾಡಬೇಕೆಂದು ಆದೇಶವಿದೆ. ಇದನ್ನು ಸಂಸ್ಥೆಗಳು ಲೇವಣಿ ಮಾಡುತ್ತಿಲ್ಲ. ಅದೇ ಇಂಡಿವಿಜ್ಯುಯಲ್ಸ್‌ಗೆ ವಜಾ ಮಾಡುತ್ತಿದ್ದಾರೆ. ಸರ್ಕಾರದವರು ಈ ವಿಚಾರದಲ್ಲಿ ಸಹಕರಿಸದಿದ್ದರೆ ಸಹಕಾರ ಸಂಘಗಳು ಮುಂದುವರೆಯುವುದು ಕಷ್ಟವಾಗುತ್ತದೆ. ಈ ಸೊಸೈಟಿಗೆ ಸರ್ಕಾರದವರು ಸಾಲ ಕೊಡಬೇಕೆಂದು ಏನೂ ನಾನು ಕೇಳುತ್ತಿಲ್ಲ. ಸಣ್ಣ ಸಣ್ಣ ಸಹಕಾರ ಸಂಘಗಳು ಮುಂದೆ ಬರಬೇಕಾದರೆ ಸರ್ಕಾರದ ಅಧಿಕಾರಿಗಳು ''ವಾಚ್‌ಡಾಗ್ಸ್'' ಇದ್ದಂತೆ ಇರಬೇಕು. ಈ ರೀತಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳಿಗೆ ಜಿಲ್ಲಾಧಿಕಾರಿಯವರು ಸಹಾಯ ಮಾಡುವುದು ಬಿಟ್ಟು ತಮಗೆ ಬೇಕಾದವರಿಗೆ ಸಹಾಯ ಮಾಡುತ್ತಿದ್ದಾರೆ. ಕೆಲವೊಂದು ವಸ್ತುಗಳನ್ನು ಮಾರಲು ಇಂತಹ ಸೊಸೈಟಿಗಳಿಗೆ ಲೈಸನ್ಸ್ ಕೊಡದೆ ತಮಗೆ ಬೇಕಾದವರಿಗೆ, ಅವರಿಗೆ ಅನುಭವವಿಲ್ಲದಿದ್ದರೂ ಸಹ ಕೊಡುತ್ತಿದ್ದಾರೆ. ಈ ರೀತಿ ಸರ್ಕಾರದಲ್ಲಿ ವಂಚನೆ ಮತ್ತು ಮೋಸ ಮಾಡತಕ್ಕಂಥ ಅಧಿಕಾರಿಗಳು ಇರುವವರೆಗೂ ಸಹ ಸಹಕಾರ ಸಂಘಗಳು ಬೆಳೆಯುವುದಿಲ್ಲ. ಸಹಕಾರ ಸಂಘಗಳು ಮುಂದೆ ಬರಬೇಕಾದರೆ ರಾಜಕೀಯ ನಡೆಯಬಾರದು. ಒಂದು ಜಿಲ್ಲಾ ಮಟ್ಟದ ಸೊಸೈಟಿ ಮುಂದುವರೆಯಬೇಕಾದರೆ, ಅದು ಉದ್ಧಾರವಾಗಬೇಕಾದರೆ ಪಂಚಾಯಿತಿಯವರು ಆ ಸೊಸೈಟಿಯಲ್ಲಿ ಹಣವಿಡಬೇಕೆಂದು ಹೇಳುತ್ತೇವೆ, ಆದರೆ ಅವರು ಇಡುವುದಿಲ್ಲ, ತಾಲ್ಲೂಕ್ ಬೋರ್ಡಿನವರು ದುಡ್ಡು ಇಡಬೇಕೆಂದು ಹೇಳುತ್ತೇವೆ, ಅವರು ಇಡುವುದಿಲ್ಲ. ಇತರ ಸಣ್ಣ ಸಂಸ್ಥೆಗಳವರು ದುಡ್ಡು ಇಡಬೇಕೆಂದು ಹೇಳುತ್ತೇವೆ, ಅವರೂ ಕೂಡ ಇಡುವುದಿಲ್ಲ. ನಮ್ಮವರೇ ಆದ ನಿಮ್ಮ ಸರಕಾರದ ಒಂದು ಇಲಾಖೆಯಲ್ಲಿ ದುಡ್ಡು ಬೇರೆ ಷೆಡ್ಯೂಲ್ ಬ್ಯಾಂಕಿನಲ್ಲಿ ಡಿಪಾಸಿಟ್ಟು ಇಡಬೇಕು ಎಂದು ಹೇಳುತ್ತಾರೆ. ಹಾಗೆ ದುಡ್ಡು ಡಿಪಾಸಿಟ್ ಇಡದೇ ಹೋದರೆ ಅಪೆಕ್ಸ್ ಬ್ಯಾಂಕಿನವರು ತಾನೇ ಏನು ಮಾಡುವುದಕಾಗುತ್ತದೆ? ಅಪೆಕ್ಸ್ ಬ್ಯಾಂಕಿನವರು ಅರ್ನೆಸ್ಟ್ ಮನಿಯನ್ನು ಕೂಡ ಡಿಪಾಸಿಟ್ಟಾಗಿ ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಕಾರಣ ಸಹಕಾರ ಬ್ಯಾಂಕುಗಳಿಗೆ ಪ್ರಾಶಸ್ತ್ಯ ಇಲ್ಲಾ. ಇದರಲ್ಲಿ ಕೇಂದ್ರ ಸಕಾರದವರೇ ಆಗಲಿ, ನಮ್ಮ ಸರಕಾರವೇ ಆಗಲೀ ಯಾವ ತರಹದ ಕಂಟ್ರೋಲನ್ನೂ ಇಟ್ಟುಕೊಳ್ಳುವುದಕ್ಕೆ ಆಗುತ್ತಿಲ್ಲ. ಎಲ್ಲರಿಗೂ ತಿಳಿದಂತೆ ಅಪೆಕ್ಸ್ ಬ್ಯಾಂಕುಗಳಿಗೆ ಸಾಕಾವಷ್ಟು ಡಿಪಾಜಿಟ್ ಮನಿ ಎಂದು ಕೊಡದೇ ಹೋದರೆ ಅವರು ಸಾಲವನ್ನು ಕೊಡುವುದಾದರೂ ಹೇಗೆ? ಸಾಲ ಕೊಡದೇ ಹೋದರೆ ಸಹಕಾರ ಸಂಘಗಳು ಬದುಕುವುದಾದರೂ ಹೇಗೆ? ಒಂದು ಕಡೆ ಸಹಕಾರ ಸಂಘಗಳು ಬದುಕಬೇಕು, ಅವನ್ನು ಮುಂದಕ್ಕೆ ತರಬೇಕು ಅದಕ್ಕೆ ಹೆಚ್ಚು

ಉತ್ತೇಜನ ಕೊಡಬೇಕು ಎನ್ನುವುದರ ಕಡೆಗೆ ತಕ್ಕ ಕಾರ್ಯಕ್ರಮ ತೆಗೆದುಕೊಂಡು ಹೆಚ್ಚು ಗಮನ ಕೊಡದೇ ಇರುವುದು ಹಾಗೇ ಡಿಪಾಸಿಟ್ಟುಗಳನ್ನು ಕೊಟ್ಟು ಅದರಿಂದ ಏನೇನು ವ್ಯವಹಾರಗಳಾಗಬೇಕು ಅದರ ಕಡೆಗೆ ಪ್ರಾಶಸ್ತ್ಯ ಕೊಡದೇ ಇರುವುದು ನೋಡಿದರೆ ಸಹಕಾರ ಸಂಘಗಳು ಹೇಗೆ ತಾನೇ ಮುಂದಕ್ಕೆ ಬರಲು ಸಾಧ್ಯವಾಗುತ್ತವೆ? ಇದರ ಕಡೆಗೆ ಯಾರೂ ಗಮನ ಕೊಡುತ್ತಿಲ್ಲ. ಈಗೇನೋ ಎಲ್ಲಾ ಬ್ಯಾಂಕುಗಳಿಗೂ ಸಾಲಗಳನ್ನು ಕೊಡಬೇಕು ಎಂದು ಹೇಳಿ ಎಲ್ಲಾ ತಾಲ್ಲೂಕುಗಳಲ್ಲಿರುವ ಬ್ಯಾಂಕುಗಳಿಗೂ ಸಾಲವನ್ನು ಕೊಟ್ಟುಬಿಟ್ಟರು. ಆದರೆ ಇವರಲ್ಲಿ ಒಂದು ರಾಜಕೀಯ ಮಾಡಿದರು. ಇಲ್ಲಿ ಸಾಲವಾಗಿ ಕೊಡುವ ಹಣವನ್ನು ಕನ್‌ವರ್ಷನ್ ಮಾಡಿದರೆ ಸುಮಾರು 48 ಲಕ್ಷ ರೂಪಾಯಿಗಳಷ್ಟು ಎಲ್ಲ ಸಂಘಗಳಿಗೂ ಉಪಯೋಗವಾಗುತ್ತಿತ್ತು. ಆದರೆ ಇದಕ್ಕೆ ಅವಕಾಶ ಕೊಡದೆ ಬಡವರನ್ನು ಉದ್ಧಾರ ಮಾಡಬೇಕು ಎಂದು ಹೇಳಿ ಸಾಲವನ್ನು ಕೊಡಿಸಿ ಬಿಟ್ಟರು. ಆದರೆ ರೈತರಿಂದ ಸಾಲವನ್ನು ವಾಪಸು ಪಡೆಯಲು ಆಗಲಿಲ್ಲ. ರೈತರಿಗಾಗಿ ಕನ್‌ವರ್ಷನ್ ಮಾಡಿದ್ದರೆ ಅವರು ತಮ್ಮ ಸಾಲಗಳನ್ನು ಕೊಟ್ಟುಬಿಡುತ್ತಿದ್ದರು ಮತ್ತು ಪುನಃ ಸಾಲದ ಪ್ರಯೋಜನಗಳನ್ನು ಪಡೆಯಬಹುದಾಗಿತ್ತು. ಆದರೆ ಇಂದು ಸಾಲವೇ ತೀರದೇ ಇರುವುದರಿಂದ ಅವರಿಗೆ ಪುನಃ ಸಾಲ ಪಡೆಯಲು ಅವಕಾಶವೇ ಇಲ್ಲ. ರೈತರಿಗೆ ಕೊಟ್ಟ ಸಾಲವೇ ತೀರದೇ ಇದ್ದರೆ ಅವರಿಗೆ ಬೇರೆ ಯಾರು ತಾನೇ ಸಾಲ ಕೊಡುತ್ತಾರೆ? ಜಿಲ್ಲಾ ಬ್ಯಾಂಕುಗಳವರು ಸಾಲ ಕೊಡದೇ ಹೋದರೆ ಸಹಕಾರ ಸಂಘಗಳು ಹೇಗೆ ತಾನೇ ಮುಂದಕ್ಕೆ ಬರುತ್ತವೆ? ಆದುದರಿಂದ ಇಂದು ಸಹಕಾರ ತತ್ವವನ್ನು ನಾವು ಪರಿಪಾಲನೆ ಮಾಡಬೇಕಾಗಿದ್ದರೆ ನಮ್ಮ ನಮ್ಮಲ್ಲಿರುವ ಲೋಪಗಳನ್ನು ಮತ್ತು ವ್ಯತ್ಯಾಸಗಳನ್ನು ಸರಿಪಡಿಸಿಕೊಂಡು ಸಹಕಾರಸಂಘಗಳು ಚೆನ್ನಾಗಿ ಕೆಲಸ ಮಾಡಲು ಸಾಕಷ್ಟು ಪ್ರೋತ್ಸಾಹ ಕೊಡದೇ ಇದ್ದರೆ ಇಂತಹ ಸಂಘಗಳು ಖಂಡಿತ ಮುಂದಕ್ಕೆ ಬರಲು ಸಾಧ್ಯವಿಲ್ಲ. ಇವನ್ನೆಲ್ಲಾ ಸರಿಪಡಿಸಿ ಕೆಲಸಗಳು ಚೆನ್ನಾಗಿ ಆಗಲು ಅವಕಾಶ ಮಾಡಿಕೊಟ್ಟರೆ ಆಗ ಇವನ್ನು ಸರಿಯಾಗಿ ನಡೆಸಲು ಸಾಧ್ಯವಾಗುತ್ತದೆ.

ಇದೇ ಸಭೆಯಲ್ಲಿ ಹಿಂದೆ ಅಗ್ರಿಕಲ್‌ಚರಲ್ ಪ್ರೊಡ್ಯೂಸಿಂಗ್ ಅಂಡ್ ಮಾರ್ಕೆಟಿಂಗ್ ಫೆಡರೇಷನ್ ಆಕ್ಟ್ ಎಂದು ಒಂದು ಕಾನೂನನ್ನು 1966ನೇ ಇಸವಿಯಲ್ಲೇ ಪಾಸುಮಾಡಿದ್ದರೂ ಅದನ್ನು ಇನ್ನೂ ಸರಕಾರದವರು ಜಾರಿಗೆ ಕೊಟ್ಟು ಆಚರಣೆಗೆ ತರುವುದಕ್ಕೆ ಆಗಲಿಲ್ಲ. ಸರಕಾರದವರು ಒಂದು ಆಕ್ಟಿಗೆ ಮಂಜೂರಾತಿ ಕೊಟ್ಟ ಮೇಲೆ ಅದನ್ನು ಇಲ್ಲಿಯವರೆಗೆ ಜಾರಿಗೆ ಕೊಡದೇ ಇದ್ದರೆ ಇಂತಹ ಕಾನೂನುಗಳನ್ನು ಮಾಡುವುದು ಏತಕ್ಕೋಸ್ಕರವಾಗಿ ಎಂದು ಕೇಳಬೇಕಾಗಿದೆ. ಈ ಕಾನೂನು ಆಚರಣೆಗೆ ಬರುವುದಕ್ಕೇ ಅವಕಾಶ ಮಾಡಿಕೊಡುತ್ತಿಲ್ಲ. ಸುಮ್ಮನೆ ಬಾಯಿ ಮಾತಿನಲ್ಲಿ ನಮ್ಮ ಸಹಕಾರ ಸಂಘಗಳಲ್ಲಿ ಪ್ರೇಮ ಇದೆ ಎಂದು ಹೇಳುತ್ತಾರೆಯೇ ಹೊರತು ಕಾರ್ಯತಃ ಏನೂ ಸಹಾಯ ಮಾಡತಕ್ಕಂತಹ ವರ್ತನೆ ನಮ್ಮ ಸರಕಾರದಲ್ಲಿ ಕಾಣುತ್ತಿಲ್ಲ. ಈ ಇಲಾಖೆ ಬಗ್ಗೆ ಮಾನ್ಯ ಮಂತ್ರಿಗಳ ಗಮನವನ್ನು ಸೆಳೆಯುವುದಕ್ಕಾಗಿ ಹೇಳುತ್ತಲೇ ಬರುತ್ತಿದ್ದೇನೆ. ಈಗ್ಗೆ ಐದು ವರ್ಷಗಳ ಮುಂಚೆ ನಮ್ಮ ಮಾನ್ಯ ಫೈನಾನ್ಸ್ ಮಿನಿಸ್ಟರಾಗಿರುವವರು ಆಗ ಕೋಆಪರೇಷನ್ ಇಲಾಖೆಯ ಮಂತ್ರಿಗಳಾಗಿದ್ದರು. ಅವರು ಹೊರ ದೇಶಗಳಿಗೆ ಟೂರು ಹೊರಡುವುದಕ್ಕೆ ಮುಂಚೆ ಒಂದು ಮಾತು ಹೇಳಿದ್ದರು. ಈ ಇಲಾಖೆಯಲ್ಲಿ ಅವಶ್ಯಕವಿಲ್ಲದ ಕೆಲವು ಜಾಗಗಳನ್ನು ತೆಗೆದುಹಾಕಿಬಿಡುತ್ತೇವೆ ಮತ್ತು ಎಲ್ಲ ಅಧಿಕಾರವನ್ನೂ ಪ್ರಜೆಗಳಿಗೆ ಕೊಡುವಂತೆ ಮಾಡುತ್ತೇವೆ ಎಂದು ಹೇಳಿದ್ದರು. ಇಂದು ಈ ಇಲಾಖೆಯಲ್ಲಿ ಹೇಗಿದೆ ಎಂದರೆ ಈಗ ಸುಮಾರು 14 ಜನ ಜಾಯಿಂಟು ರಿಜಿಸ್ಟ್ರಾರ್‌ಗಳು ಎಂದು ಇದ್ದಾರೆ. ಪ್ರತಿ ಜಿಲ್ಲೆಗೂ ಒಬ್ಬೊಬ್ಬರು ಡೆಪ್ಯುಟಿ ರಿಜಿಸ್ಟ್ರಾರ್ ಎಂದಿದ್ದಾರೆ. ಇದಲ್ಲದೆ ಒಂದೊಂದು ಸಬ್ ಡಿವಿಜನ್ನಿಗೂ ಒಬ್ಬೊಬ್ಬರು ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಎಂದು ಇದ್ದಾರೆ. ಹೀಗೆ ಪ್ರತಿಯೊಂದು ಕಡೆಯಲ್ಲಿಯೂ ಅಧಿಕಾರಿಗಳನ್ನೇ ಹೆಚ್ಚು ಮಾಡುತ್ತಿದ್ದಾರೆ. ರೆವೆನ್ಯೂ ಇಲಾಖೆಯಲ್ಲಿ ಯಾವ ರೀತಿಯಾಗಿ ಅಧಿಕಾರಿಗಳನ್ನು ಹೆಚ್ಚು ಮಾಡಬೇಕು ಎಂದು ಮಾಡುತ್ತಿದ್ದಾರೋ ಅದೇ ರೀತಿಯಾಗಿ ಕೋಆಪರೇಷನ್ ಇಲಾಖೆಯಲ್ಲಿಯೂ ಹೆಚ್ಚು ಅಧಿಕಾರಿಗಳನ್ನು ಮಾಡಬೇಕೆಂದು ಆಸೆ ಸರಕಾರಕ್ಕೆ ಹೆಚ್ಚಾಗಿದೆ. ಮಾನ್ಯ ಮಂತ್ರಿಗಳು ಎಲ್ಲ ಅಧಿಕಾರಗಳನ್ನೂ ಪ್ರಜೆಗಳೇ ನಿರ್ವಹಣೆ ಮಾಡಬೇಕು ಎಂದು ಹೇಳುತ್ತಾ ಪ್ರತಿಯೊಂದು ಕಡೆಯಲ್ಲಿಯೂ ಒಬ್ಬೊಬ್ಬರು ಅಧಿಕಾರಿಗಳನ್ನು ಮಾಡುತ್ತಾ ಹೋಗುತ್ತಿದ್ದಾರೆ. ಇಂತಹ ಪರಿಸ್ಥಿತಿ ಎಷ್ಟೋ ಕಡೆಗಳಲ್ಲಿ ಇವೆ. ಇದಕ್ಕೆ ಕಾರಣವೇನು! ಇವೆಲ್ಲಾ ಫಿಲಾಂತ್ರಪಿಕ್ ಇನ್‌ಸ್ಟಿಟ್ಯೂಷನ್‌ಗಳು ಅಲ್ಲ. ಇವೆಲ್ಲಾ ಬಿಸಿನೆಸ್ ಇನ್‌ಸ್ಟಿಟ್ಯೂಷನ್‌ಗಳು. ಇದರಲ್ಲಿ ಯಾವ ರೀತಿಯಾದರೂ ನ್ಯಾಯ, ಧರ್ಮ ಇದೆಯೇ? ಬ್ಯಾಂಕಿನವರೂ ಹಣವನ್ನು ಪುಗಸಟ್ಟೆ ಕೊಡುತ್ತಿಲ್ಲ. ಅವರು ಬಡ್ಡಿ ತೆಗೆದುಕೊಂಡೇ ಸಾಲ ಕೊಡುವುದು. ಅವರಿಗೆ ಯಾವ ಕರುಣ ಬರುತ್ತದೆ? ರೈತರಿಗೆ ಸಾಲ ಕೊಡುವುದಕ್ಕಾಗಿ ರಿಸರ್ವ್ ಬ್ಯಾಂಕಿನವರು ಹಣ ಕೊಡುತ್ತಾರೆ. ಅಪೆಕ್ಸ್ ಬ್ಯಾಂಕಿನವರು ಒಬ್ಬ ಮಾರವಾಡಿಯಂತೆ ಕೊಟ್ಟ ಹಣವನ್ನು ಸರಿಯಾಗಿ ಇತರ ಸಂಘಗಳಿಗೆ ಹಂಚಿ ಕೆಲಸ ಮಾಡೋಣ ಎಂದು ಇಂತಹ ಬಿಸಿನೆಸ್ ಇನ್‌ಸ್ಟಿಟ್ಯೂಷನ್

(ಶ್ರೀ ಜಿ. ರಾಮೇಗೌಡ)

ಗಳಿಗೆ ಕೊಡುತ್ತಿದ್ದಾರೆ. ಇವರು ವರ್ತಕರಂತೆ ವ್ಯವಹಾರ ಮಾಡಬೇಕೇ ಹೊರತು ಫಿಲಾಂತ್ರಪಿಕ್ ಇನ್‌ಸ್ಟಿಟ್ಯೂಷನ್‌ಗಳಂತೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಇದನ್ನು ಸರಕಾರ ಗಮನದಲ್ಲಿ ಇಟ್ಟುಕೊಂಡು ರೈತರಿಗೆ ಏನು ಸಾಲ ಕೊಡಬೇಕು ಎಂದು ಕೊಡುತ್ತಿದ್ದಾರೆ ಅದನ್ನು ಅವರೇನು ಪುಗಸಟ್ಟೆಯಾಗಿ ಕೊಡುತ್ತಿಲ್ಲ. ಸಾಲದ ರೂಪವಾಗಿ ಕೊಟ್ಟು ಇಷ್ಟು ವರ್ಷಗಳಲ್ಲಿ ವಾಪಸು ಕೊಡಬೇಕೆಂದೂ ಇದೆ. ಇದರೊಳಗೇ ಲಾಭ ಬಂದರೂ ಪುನಃ ಷೇರು ಕ್ಯಾಪಿಟಲ್‌ಗೇ ವಾಪಸು ಬರಬೇಕು. ಇಲ್ಲಿ ಕೆಲಸ ಮಾಡತಕ್ಕಂತಹ ಸಂಸ್ಥೆಗಳಿಗೆ ಎಲ್ಲ ಸಾರ್ವಜನಿಕರೂ ಸೇವಾ ಮನೋಭಾವದಿಂದ ಕೆಲಸ ಮಾಡುವವರು ಇಲ್ಲಿರಬೇಕಾದುದು ಅವಶ್ಯಕ. ಆದರೆ ಇಂದು ಎಷ್ಟು ಕಡೆಗಳಲ್ಲಿ ಇಂತಹ ಜನರಿದ್ದಾರೆ ಎಷ್ಟು ಮಟ್ಟಿಗೆ ಶ್ರಮ ವಹಿಸಿ ಕೆಲಸಗಳನ್ನು ಮಾಡುತ್ತಿದ್ದಾರೆ, ಹೇಗೆ ನೋಡಿಕೊಳ್ಳುತ್ತಿದ್ದಾರೆ ಎನ್ನುವುದನ್ನು ಸರಿಯಾಗಿ ನೋಡದೇ ಹೋದರೆ ಸಹಕಾರ ಸಂಘಗಳು ಖಂಡಿತ ಮುಂದಕ್ಕೆ ಬರುವುದಿಲ್ಲ ಎಂದು ಇಲ್ಲಿ ಹೇಳಬಯಸುತ್ತೇನೆ. ಹೀಗೆ ಸರಕಾರ ಇಲ್ಲಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ಆಕ್ಟ್ ಎನ್ನುವುದನ್ನು ಪಾಸು ಮಾಡಿದ್ದರೂ ಇನ್ನೂ ಸರಕಾರ ಇದನ್ನು ಜಾರಿಗೆ ತರಲು ಆಗಲಿಲ್ಲ. ಇದಕ್ಕೆ ಕಾರಣವನ್ನು ಒಂದು ಉದಾಹರಣೆಯಾಗಿ ಹೇಳುತ್ತೇನೆ. ಎಲ್ಲಿ ವರ್ತಕರುಗಳಿಗೆ ತೊಂದರೆಯಾಗುತ್ತದೋ ಅಲ್ಲಿಯವರೆಗೂ ಸರಕಾರ ಯಾವ ಕಾನೂನು ಮಾಡಿದರೂ ಅದನ್ನು ಜಾರಿಗೆ ತರುವುದಕ್ಕೆ ಸಾಧ್ಯವಿಲ್ಲ. ನಮ್ಮ ಮಾನ್ಯ ಸದಸ್ಯರಾದ ಶ್ರೀ ಶಿವಪ್ಪನವರು ಹೇಳಿದಂತೆ ಎಲ್ಲಿಯವರೆಗೆ ವರ್ತಕರು ಸರಕಾರವನ್ನು ಕಂಟ್ರೋಲು ಮಾಡುತ್ತಾ ಇರುತ್ತಾರೋ ಅಲ್ಲಿಯವರೆಗೆ ಸರಕಾರ ಯಾವ ಆಕ್ಟನ್ನೇ ಮಾಡಲಿ ಯಾವ ರೆಗ್ಯುಲೇಷನ್‌ಗಳನ್ನೇ ಮಾಡಲಿ ಅವನ್ನು ಜಾರಿಗೆ ತರಲು ಆಗುವುದಿಲ್ಲ ಮತ್ತು ಅವು ಜಾರಿಗೂ ಬರಲು ಆಗುವುದಿಲ್ಲ. ಇವಕ್ಕೆ ದೃಷ್ಟಾಂತವಾಗಿ ನಮ್ಮ ಬೆಂಗಳೂರಿನಲ್ಲಿರುವ ರೆಗ್ಯುಲೇಟೆಡ್ ಮಾರ್ಕೆಟಿಂಗು ಕಮಿಟಿ ಬೆಂಗಳೂರಿನಲ್ಲಿ ಯಾವ ರೀತಿ ನಡೆಯುತ್ತಿದೆ ಎನ್ನುವುದನ್ನು ತಾವು ನೋಡಬಹುದು. ಇದನ್ನು ಬೇರೆ ಜಾಗಕ್ಕೆ ಬದಲಾಯಿಸಬೇಕು ಎಂದು ರೈತರು ಸರಕಾರವನ್ನು ಎಷ್ಟೋ ವರ್ಷಗಳಿಂದ ಒತ್ತಾಯಮಾಡುತ್ತಿದ್ದರೂ ಅದನ್ನು ಮಾಡುವುದಕ್ಕೆ ಆಗಲಿಲ್ಲ. ಇದರಿಂದ ವ್ಯವಹಾರ ಮಾಡುವುದಕ್ಕೆ ಕಷ್ಟಗಳಾಗುತ್ತವೆ ಮತ್ತು ತೊಂದರೆಗಳಾಗುತ್ತವೆ ಎಂದು ವರ್ತಕರುಗಳು ಒತ್ತಾಯ ತರುತ್ತಿದ್ದುದರಿಂದ ಇದನ್ನು ಮಾಡಲು ಇಲ್ಲಿಯವರೆಗೆ ಆಗಲಿಲ್ಲ. ಇದರ ಹಿನ್ನೆಲೆ ಏನು ಇತ್ತು ಎಂದರೆ ಸರಕಾರಕ್ಕೆ ಮಾರ್ಕೆಟ್ ಯಾರ್ಡ್‌ನ್ನು ಬೇರೆ ಜಾಗಕ್ಕೆ ಬದಲಾವಣೆ ಮಾಡಬೇಕಾದರೆ ಅದರಿಂದ ತೊಂದರೆಯಾಗುತ್ತದೆ ಎಂದು ಒಂದು ಗುಂಪು, ಇದರ ಜಾಗ ಬದಲಾವಣೆ ಮಾಡಬೇಕು ಎಂದು ಇನ್ನೊಂದು ಗುಂಪು ಹೀಗೆ ಒಬ್ಬರಿಗೊಬ್ಬರಿಗೆ ಇಲ್ಲದ ಜಿಜ್ಞಾಸೆಗಳು ಬಂದು ಇಲ್ಲಿನ ಮಾರ್ಕೆಟ್ ಕಮಿಟಿ ಯಾರ್ಡು ಬರುವುದು ಬಹಳ ಕಷ್ಟವಾಯಿತು. ಹೀಗಾದರೆ ಸಹಕಾರ ಸಂಸ್ಥೆಗಳು ಮುಂದಕ್ಕೆ ಬರುವುದಕ್ಕೆ ಆಗುವುದಿಲ್ಲ ಎಂದು ಇಲ್ಲಿ ಖಂಡಿತವಾಗಿ ಒತ್ತಿ ಒತ್ತಿ ಹೇಳುತ್ತೇನೆ. ಸುಮಾರು ಆರು ವರ್ಷಗಳಿಂದಲೂ ಇದೇ ಮಾತನ್ನು ಸರಕಾರಕ್ಕೆ ಹೇಳುತ್ತಾ ಬರುತ್ತಿದ್ದೇನೆ. ಇದನ್ನು ಯಾರೂ ಮನಸ್ಸಿಗೇ ತೆಗೆದುಕೊಳ್ಳುತ್ತಿಲ್ಲ. ಇದಕ್ಕೆ ಕಾರಣ ಆಗಾಗ್ಗೆ ಮಂತ್ರಿಗಳೂ ಕೂಡ ಬದಲಾವಣೆಯಾಗಿ ಬರುತ್ತಿರುವುದೂ ಒಂದು ಕಾರಣವಾಗಿದೆ. ಏನೋ ನಮ್ಮ ಈ ಸಹಕಾರ ಇಲಾಖೆಯಲ್ಲಿ ರಿಜಿಸ್ಟ್ರಾರ್ ಎನ್ನುವ ಅಧಿಕಾರಿಗಳು ಮಾತ್ರ ನಿಷ್ಠಾವಂತ ಕೆಲಸಗಾರರಾಗಿ ಇದ್ದಾರೆ. ಇವರ ಮನಸ್ಸಿಗೂ ಕೂಡ ಒಂದೊಂದು ಸಲ ಬಹಳ ಕಷ್ಟವಾಗುತ್ತದೆ. ಇವರು ಸರಕಾರಕ್ಕೆ ಸರಿಯಾದ ಶಿಫಾರಸುಗಳನ್ನು ಮಾಡುತ್ತಿದ್ದರೂ ಅವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಆಗುತ್ತಿಲ್ಲ.

ನಮ್ಮ ಸಹಕಾರ ಸಂಘಗಳಲ್ಲಿ ಆಡಿಟ್ ಎಂದು ಮಾಡಿಸುತ್ತಿದ್ದಾರೆ. ನನಗೆ ತಿಳಿದಿರುವಂತೆ ಆಡಿಟ್ ಎಂದು ಎಲ್ಲ ಸಹಕಾರ ಸಂಸ್ಥೆಗಳಲ್ಲಿಯೂ ಮಾಡುತ್ತಿರುವುದಕ್ಕಾಗಿ ಸಹಕಾರ ಇಲಾಖೆಯಲ್ಲಿ ಸುಮಾರು 12 ರಿಂದ 14 ಲಕ್ಷದಷ್ಟು ಹಣವನ್ನು ಆಡಿಟ್ ಫೀಸ್‌ಗಾಗಿ ಕೊಡುವಂತೆ ಮಾಡಿದೆ. ಇದನ್ನು ಏತಕ್ಕೋಸ್ಕರ ಮಾಡಲಾಗಿದೆ ಎಂದು ನಾನು ಇಲ್ಲಿ ಕೇಳಬೇಕಾಗಿದೆ. ಸಣ್ಣ ಸಣ್ಣ ಸಂಸ್ಥೆಗಳು ಅವರು ಮಾಡತಕ್ಕ ಖರ್ಚುಗಳ ಬಗ್ಗೆ ಅವರು ಆಡಿಟ್ ಫೀಸ್ ಕೊಡುವುದಕ್ಕೆ ಶಕ್ತಿ ಇರುವುದಿಲ್ಲ. ಮತ್ತು ಸರಕಾರದಿಂದ ಸಾಲವಾಗಿ ತೆಗೆದುಕೊಂಡು ಇರುವ ಹಣವನ್ನೇ ವಾಪಸ್ಸು ಕೊಡುವುದಕ್ಕೆ ಅವರಿಗೆ ಆಗುತ್ತಿಲ್ಲ. ಇಂತಹವರು ಆಡಿಟ್ ಫೀಸ್ ಎಂದು ಕೊಡಬೇಕು ಎಂದರೆ ಕಷ್ಟವಾಗುತ್ತದೆ. ಇಂತಹ ಸಣ್ಣ ಸಹಕಾರ ಸಂಸ್ಥೆಗಳು 50 ರೂಪಾಯಿನಷ್ಟು ಲಾಭ ಪಡೆದರೆ ಸುಮಾರು ಹತ್ತು ರೂಪಾಯಿಗಳಷ್ಟು ಆಡಿಟರ ಫೀಸ್‌ಗಾಗಿ ಕೊಡಬೇಕು ಎಂದರೆ ಬಹಳ ಕಷ್ಟವಾಗುತ್ತದೆ. ಆದುದರಿಂದ ಇಂತಹ ಆಡಿಟ್ ಫೀಸ್ ಎಂದು ವಸೂಲು ಮಾಡುವುದನ್ನು ತೆಗೆಯುವುದು ಒಳ್ಳೆಯದು. ಲಾರ್ಜ್ ಸ್ಕೇಲ್ ಸೊಸೈಟಿಗಳು ಲಕ್ಷಾಂತರ ರೂಪಾಯಿಗಳಷ್ಟು ವ್ಯಾಪಾರ ಮಾಡುವಾಗ ಹತ್ತು ಸಾವಿರ ರೂಪಾಯಿಗಳಷ್ಟು ಆಡಿಟ್ ಫೀಸು ಕೊಡಬೇಕೆಂದು ಮಾಡುವುದಕ್ಕಿಂತ ಅವರಿಗೆ ಬರುವ ಬಂಡವಾಳವನ್ನು ಅವರ ಷೇರು ಇತ್ಯಾದಿಗಳಿಗೆ ಉಪಯೋಗಿಸಿಕೊಳ್ಳಬಹುದು.

ಇನ್ನು ನಮ್ಮ ಅಪೆಕ್ಸ್ ಬ್ಯಾಂಕಿನವರು ಗೋಡೌನು ಕಟ್ಟಿಸಬೇಕೆದು ಪ್ಲಾನು ಮಾಡಿಸಿ ಸಹಕಾರ ಸಂಘಗಳಿಗೆ ಧನಸಹಾಯ ನೀಡಬೇಕು. ಆದರೆ ಸರಕಾರದವರೇ ಒಂದು ಕಡೆ ಒಂದು ಗೋಡೌನು ಕಟ್ಟಿದ್ದಾರು. ಅದು ಸುಮಾರು ಐದು ವರ್ಷಗಳಿಂದಲೂ ಖಾಲಿಯಾಗಿಯೇ ಇತ್ತು. ಇದನ್ನು ಸರಕಾರದ ಅಧಿಕಾರಿಗಳಲ್ಲಿ ಹೇಳಿ ನಾವೇ ಒಂದು ಸಹಕಾರ ಸಂಸ್ಥೆಗೆ ಉಪಯೋಗವಾಗಲಿ ಎಂದು ಅಲ್ಲಿ ಒಂದು ಸಹಕಾರ ಸಂಸ್ಥೆಯನ್ನು ಸ್ಥಾಪಿಸಿ ಕೆಲಸ ಮಾಡಲು ಪ್ರಯತ್ನ ಮಾಡಿದ್ದೇವೆ. ಇಂತಹ ಒಂದು ಗೋಡೌನ್ ಕಟ್ಟಿಸಬೇಕಾದರೆ ಸುಮಾರು ಹನ್ನೆರಡು, ಹನ್ನೆರಡೂವರೆ ಸಾವಿರದಷ್ಟು ಸಾಲನೀಡುತ್ತಾರೆ. ನಾವೇ ಒಂದು ಗೋಡೌನನ್ನು ಹದಿನೆಂಟೂವರೆ ಸಾವಿರದಲ್ಲಿ ಕಟ್ಟಬೇಕೆಂದು ಒಂದು ಎಸ್ಟಿಮೇಟನ್ನೂ ಮಾಡಿಸಲಾಗಿದೆ. ಕೊಟ್ಟ ಹಣ ಸಾಲದೆ, ಉಗ್ರಾಣಗಳು ಪೂರ್ತಿಯಾಗದೆ ನಿಂತಿವೆ. ಅಲ್ಲಿ ಬರೀ ಕಾಗೆಗಳು ಹಾಗೂ ಗೂಬೆಗಳು ಬಂದು ಕುಳಿತುಕೊಳ್ಳುತ್ತಿವೆ ಇದನ್ನು ಉಪಯೋಗಿಸಿಕೊಳ್ಳಲು ಸಹಾಯಮಾಡಿ ಅಂದರೆ ಇದಕ್ಕೆ ಸರಕಾರ ಅವಕಾಶ ಕೊಡುತ್ತಿಲ್ಲ ಹೀಗಾದರೆ ಸಹಕಾರ ತತ್ವ ಹೇಗೆತಾನೇ ಬೆಳೆಯಲು ಸಾಧ್ಯ ? ರೈತರಿಗೆ ಸಹಾಯಮಾಡುತ್ತೇವೆ ಎಂದು ರಿಸರ್ವ್ ಬ್ಯಾಂಕುಗಳ ಮೂಲಕ ಹಣ ತಂದು ಅದರ ಮೇಲೆ ಬಡ್ಡಿ ಹಾಕಿ ಸಹಕಾರ ಸಂಘಗಳ ಮೂಲಕ ಹೆಚ್ಚು ಬಡ್ಡಿ ಹಾಕಿ ಅದನ್ನು ವಾಪಸು ಪಡೆಯುವುದು ನ್ಯಾಯವೇ ? ಇದರಿಂದ ರೈತರ ಕಷ್ಟಗಳನ್ನು ನಿವಾರಣೆ ಮಾಡಿದಂತಾಗುತ್ತದೆಯೇ ? ರೈತರ ಮೇಲೆ ಹೆಚ್ಚು ಹೊರೆ ಹೊರಿಸಿ ಈ ರೀತಿ ಏರ್ಪಾಡು ಮಾಡುವುದು ಖಂಡಿತ ಸರಿಯಲ್ಲ. ಸಹಕಾರ ಸಂಘಗಳಿಗೆ ನಿಜವಾಗಿಯೂ ಸಹಾಯ ಮಾಡಬೇಕು ಎಂದು ಇದ್ದರೆ ಅವರಿಗೆ ಬೇಕಾಗುವ ಹಣವನ್ನು ಸಾಲವಾಗಿ ಒದಗಿಸಿಕೊಡಿ, ಗೋಡೌನು ಕಟ್ಟುವುದಕ್ಕೆ ಸಾಲವಾಗಿ ಹಣ ಕೊಡಿ. ಅವರೇನೂ ಸಬ್ ಸಿಡಿ ಕೊಡಬೇಕೆಂದು ಕೇಳುತ್ತಿಲ್ಲ. ಸರಕಾರ ಕೊಡುವ ಹಣವನ್ನು ಐದಾರು ವರ್ಷಗಳಲ್ಲಿ ವಾಪಸು ಕೊಡುತ್ತಾರೆ. ನಮಗೆ ಸಬ್‌ಸಿಡಿಯಾಗಿ ಹಣ ಕೊಡಬೇಕೆಂದು ಕೇಳುತ್ತಿಲ್ಲ. ನಮ್ಮ ಸಹಕಾರ ಸಂಘಗಳು ಬೆಳೆಯುವಷ್ಟು ಮಟ್ಟಿಗೆ ಕೆಲಸ ಮಾಡುವುದು ಅಗತ್ಯ. ಇದಕ್ಕಾಗಿ ಹಣವನ್ನು ಸಾಲವಾಗಿ ಪಡೆದು ಜನತೆಗೆ ಅನುಕೂಲಗಳನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೆ ಮಾತ್ರ ಇಲ್ಲಿ ಕೊಡಬೇಕೆಂದೂ ಸಾರಿ ಸಾರಿ ಹೇಳುತ್ತೇನೆ. ಹಾಗೆ ಮಾಡದೇ ಹೋದರೆ ಇನ್ನೂ ಐವತ್ತು ವರ್ಷಗಳಾದರೂ ನಮ್ಮ ರಾಜ್ಯದಲ್ಲಿರುವ ಸಹಕಾರ ಸಂಘಗಳ ಸ್ಥಿತಿ ಚೆನ್ನಾಗಿ ಮುಂದಕ್ಕೆ ಬರಲು ಆಗುವುದಿಲ್ಲ. ದಿನೇ ದಿನೇ ನಮ್ಮ ಸಹಕಾರ ಸಂಘಗಳ ಸ್ಥಿತಿ ಯಾವರೀತಿಯಾಗುತ್ತಿದೆ ಎಂದರೆ ಇಲಾಖೆಯಲ್ಲಿರುವ ಅಧಿಕಾರಿಗಳು ವರ್ತಕರಿಗೆ ಸಹಾಯ ಮಾಡುತ್ತಿದ್ದಾರೆ. ಸಹಕಾರ ಸಂಘಗಳಿಗೆ ಯಾವ ಸಹಾಯ ಬೇಕು ಎಂದು ಕೇಳಿದರೂ ಅದನ್ನು ಮೇಲೆ ಇರುವ ಅಧಿಕಾರಿಗಳು ಚಿಮುಟುತ್ತಾರೆ. ಇದಕ್ಕೆ ಉದಾಹರಣೆಯಾಗಿ ಹೇಳಬೇಕಾದರೆ ಒಂದು ಹೋಲ್‌ಸೇಲ್ ಡೀಲಿಂಗು ಸೊಸೈಟಿ ಎಂದು ಇದ್ದುದನ್ನು ಸರಕಾರ ತೆಗೆದು ಅದನ್ನು ಒಬ್ಬ ಹೋಲ್‌ಸೇಲ್ ಡೀಲರಿಗೆ ಎಂದರೆ ಒಬ್ಬ ವರ್ತಕರಿಗೆ ಹೋಲ್‌ಸೇಲ್ ವ್ಯಾಪಾರಮಾಡಲು ಅವಕಾಶಮಾಡಿಕೊಟ್ಟಿತು. ಇದರಿಂದ ಒಬ್ಬ ವರ್ತಕರು ಸುಮಾರು ನಾಲ್ಕು ಲಕ್ಷದಷ್ಟು ಲಾಭ ಸಂಪಾದನೆ ಮಾಡಿಕೊಳ್ಳಲು ಅವಕಾಶ ಮಾಡಿಕೊಟ್ಟಿತು. ಇದಕ್ಕೆ ಬದಲಾಗಿ ಇದೇ ವ್ಯವಹಾರವನ್ನು ತಾಲ್ಲೂಕಾ ಮಾರ್ಕೆಟಿಂಗು ಸೊಸೈಟಿಗಳಿಗೆ ಅಥವಾ ಬೇರೆ ಸಂಘಕ್ಕೆ ಮಾಡಿಕೊಳ್ಳಲು ಅವಕಾಶ ಕೊಟ್ಟಿದ್ದರೆ ಅನುಕೂಲವಾಗುತ್ತಿರಲಿಲ್ಲವೇ ? ಸರಕಾರದವರು ಸಮಾಜವಾದವನ್ನು ಸೃಷ್ಟಿಸುತ್ತೇವೆ ಎಂದು ಹೇಳುತ್ತಾ ಪ್ರತಿಯೊಂದರಲ್ಲೂ ಒಂದೊಂದು ಕೊಕ್ಕೆ ಇಡುತ್ತಾ ಹೋದರೆ ಇದರಿಂದ ಸಹಕಾರ ತತ್ವ ಅಭಿವೃದ್ಧಿ ಮಾಡಿದಂತಾಗುತ್ತದೆಯೇ ? ಇದರ ಬಗ್ಗೆ ಸರಕಾರ ಲಕ್ಷ ಕೊಡುವುದು ಅವರ ಮುಖ್ಯ ಕರ್ತವ್ಯ ಎಂದು ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. DEPUTY SPEAKER in the Chair]

ಶ್ರೀ ಎನ್. ಚಿಕ್ಕೇಗೌಡ.—ನನ್ನ ಮೇಲೆ ಆಪಾದನೆಗಳನ್ನು ಮಾಡಿರುವುದರಿಂದ ನಾನು ಇಲ್ಲಿ ಸ್ವಲ್ಪ ಅದರ ಬಗ್ಗೆ ಹೇಳಬೇಕಾಗಿದೆ. I never mentioned the name of Sri Rame Gowda but I spoke about the District Bank affairs and said that the affairs there are not satisfactory. But he has made personal insinuation against me stating that some of the Directors were arrested during elections. If the hon'ble member proves that I was responsible for any of the particulars alleged I will resign. I do not know to which member he referred to.

Sri G. RAME GOWDA.—You please consult your conscience and say whether you are responsible or not. I know which Minister you met on that day.

Sri N. CHICKE GOWDA.—He must prove it ಮಿಲ್ಕ ಕೋ ಆಪರೇಟೀವ್ ಸೊಸೈಟಿ ಹೊಸಕೋಟೆ ಬಗ್ಗೆ ಇಲ್ಲಿ ಹೇಳಲು ಸಾಧ್ಯವೇ? ಮತ್ತು ಇಲ್ಲಿ ಎಷ್ಟು ದುರುಪಯೋಗ ವಾಗಿದೆ? ಮತ್ತು ಇದೇ ರೀತಿ ಕೋಡಿ ಹಳ್ಳಿ ಸೊಸೈಟಿ ಬಗ್ಗೆ ಹೇಳಿಬಿಟ್ಟರೆ ಸರಿಯಾಗುತ್ತದೆ.

Mr. DEPUTY SPEAKER.—Order, order.

Sri G. RAME GOWDA.—Sir, it is a personal reference. I must also be permitted to explain.

Mr. DEPUTY SPEAKER.—Not now.

Sri G. RAME GOWDA.—Afterwards, there will be no occasion at all.

2-30 P.M.

ಶ್ರೀಮತಿ ಶಾರದಮ್ಮ ಎಂ. ಪಟ್ಟಣ (ರಾಮದುರ್ಗ).—ಮಾನ್ಯ ಸಭಾಪತಿಗಳೇ, ರಾಜ್ಯದಲ್ಲಿಯ ಸಹಕಾರಿ ಸಂಘಗಳು ಜನರ ಹಿತ ರಕ್ಷಣೆಯ ಸಲುವಾಗಿ ಕೆಲಸ ನಿರ್ವಹಿಸುವಂತೆ ಸರಕಾರವು ಆ ದೃಷ್ಟಿಯಿಂದ ಅತ್ತ ಹೆಚ್ಚು ಗಮನ ಕೊಡುವುದು ಒಳಿತು. ಈಗಿರುವ ಸೊಸೈಟಿಗಳ ಆಡಳಿತ ಗಾರರು ಹೆಚ್ಚಾಗಿ ತಮ್ಮ ಸ್ವಾರ್ಥಕ್ಕಾಗಿ, ಇನ್ನು ಕೆಲವರು ಕೇವಲ ರಾಜಕೀಯದಲ್ಲಿ ತಮ್ಮ ಗುಂಪಿನ ಕೈವಾಡದಲ್ಲೇ ಸಂಘ ಸಂಸ್ಥೆಗಳು ಉಳಿಯುವಂತೆ ವರ್ತಿಸುವುದನ್ನು ತಡೆ ಹಿಡಿಯಬೇಕು. ಸೊಸೈಟಿಗಳ ವಾರ್ಷಿಕ ಚುನಾವಣೆಗಳು ಸೊಸೈಟಿಗಳ ಅಧಿಕಾರಿಗಳಿಂದಲೇ ನಡೆಸುವ ರೂಢಿಯನ್ನು ನಿಲ್ಲಿಸಿ ಸ್ಥಳೀಯ ತಾಲೂಕಿನ ಸರಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ಜರಗುವಂತೆ ಮಾಡಿ ಈಗಿದ್ದ ಪದ್ಧತಿಯನ್ನು ತೀವ್ರ ರದ್ದುಗೊಳಿಸಿ ಹೊಸದಾಗಿ ಉಮೇದವಾರರಾಗಿ ಚುನಾವಣೆಯಲ್ಲಿ ಭಾಗವಹಿಸಿ ಅವರು ಸಲ್ಲಿಸಿದ ನಾಮಿನೇಷನ್ ಪೇಪರಗಳು ರಿಜೆಕ್ಟ ಆಗದಂತೆ ದಕ್ಷತೆ ವಹಿಸಿ, ಹೊಸ ಹೊಸ ಉಮೇದವಾರರು ಆರಿಸಿ ಬರಲು ನೆರವಾಗುವಂತೆ ಕಾಯಿದೆ ತಿದ್ದುಪಡಿ ಮಾಡಬೇಕು.

ನಮ್ಮ ತಾಲ್ಲೂಕಿನಲ್ಲಿ ಸೊಸೈಟಿಗಳ ಆಡಳಿತ ಸರಿಯಾಗಿ ನಡೆಯುವ ಉದ್ದೇಶದಿಂದ ಅಲ್ಲಿ ನೇಮಿಸುವ ಆಡಿಟರ್‌ಗಳನ್ನು ಮೇಲಿಂದ ಮೇಲೆ ಬದಲಾಯಿಸಬೇಕು. ಸೊಸೈಟಿಗಳ ಡೈರೆಕ್ಟರರನ್ನು ಆಡಿಟರುಗಳು ಒಳಮಾಡಿಕೊಂಡು ದುರ್ವ್ಯವಹಾರ ನಡೆಯಲು ಆಸ್ಪದ ಮಾಡಿ ಕೊಡುವುದನ್ನು ತಡೆಗಟ್ಟಬೇಕು. ನಮ್ಮ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ಮೂರು ನಾಲ್ಕು ವರ್ಷಗಳಿಂದ ಆಡಿಟರ್ ಆಗಿದ್ದವರೇ ಸೊಸೈಟಿಗಳನ್ನು ಅಡ್ಡ ದಾರಿಗೆ ಹಚ್ಚುವ ಶಿಕ್ಷಕರಂತಾಗಿದ್ದುದು ಸರಕಾರದ ಗಮನಕ್ಕೆ ಬಾರದೇ ಇದ್ದುದು ವಿಷಾದದ ಸಂಗತಿ.

ನಮ್ಮ ತಾಲ್ಲೂಕಿನ ಅಭಿವೃದ್ಧಿ ವಿಷಯವಾಗಿ ನಾಲ್ಕು ಮಾತುಗಳನ್ನು ಹೇಳಲು ಬಯಸುವೆ. ಪ್ರತಿ ತಿಂಗಳು ತಾಲ್ಲೂಕ ಬೋರ್ಡ ಮೀಟಿಂಗ್ ಮಾತ್ರ ಜರಗುತ್ತಿದೆ. ಅದರ ಮುಖಾಂತರ ಯಾವ ಯಾವ ಹಳ್ಳಿಯಲ್ಲಿ ಏನು ಸುಧಾರಣೆ ಕೆಲಸ ಮಾಡಬೇಕೆಂದು ಹಣ ಹಂಚಿಕೆಯಾಗಿ ಠರಾವು ಆಗಿರುತ್ತವೆ. ಅವು ಕಾರ್ಯಗತ ಆಗದೇ ಹೋದಲ್ಲಿ ಸರಕಾರವು ಅತ್ತ ಹೆಚ್ಚಾಗಿ ಗಮನ ಕೊಟ್ಟು ಸಂಬಂಧಿಸಿದ ಅಧಿಕಾರಿಗಳಿಂದ ಪರಿಶೀಲನೆ ಮಾಡಿ ಕಾರ್ಯಗತವಾಗುವಂತೆ ಸೂಚಿಸಬೇಕು. ನನ್ನ ತಿಳುವಳಿಕೆ ಮಟ್ಟಿಗೆ ಹೇಳುವುದಾದರೆ ನಮ್ಮ ತಾಲ್ಲೂಕಿನಲ್ಲಿ ತಾಲ್ಲೂಕ ಅಭಿವೃದ್ಧಿ ಆಗದೇ ಕೇವಲ ತಾಲ್ಲೂಕ ಬೋರ್ಡ ಸಿಬ್ಬಂದಿಯ ಅಭಿವೃದ್ಧಿ ಮಾತ್ರ ಆಗಿದೆ. ಸದರೀ ತಾಲ್ಲೂಕ ಬೋರ್ಡ ಸಿಬ್ಬಂದಿಯಿಂದ ಜನರ ಹಿತದ ಕಾರ್ಯಗಳು ಅಷ್ಟೊಂದು ಆಗದೇ ವಿನಾಕಾರಣ ಸಿಬ್ಬಂದಿಯ ಖರ್ಚು ಹೆಚ್ಚಾಗಿ ಆಗುವುದನ್ನು ತಡೆದು ಸದರೀ ಕಾರ್ಯವನ್ನು ಕೂಡ ತಾಲ್ಲೂಕ ತಹಶೀಲದಾರರ ಸಿಬ್ಬಂದಿಯ ಕಡೆ ಒಪ್ಪಿಸಿ ಹಣ ಉಳಿತಾಯ ಮಾಡಿ ಅದನ್ನು ಅಭಿವೃದ್ಧಿ ಯೋಜನೆಗೆ ಖರ್ಚು ಮಾಡುವುದು ಒಳಿತು ಎಂದು ನನ್ನ ಸಲಹೆ.

ನಮ್ಮ ತಾಲ್ಲೂಕಿನ ಆಗ್ರಿಕಲ್ಚರ ಪ್ರೊಡ್ಯೂಸ್ ಮಾರ್ಕೆಟ್ ಕಮಿಟಿಯ ಸೆಕ್ರೆಟರಿಯು ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದು, ಸೊಸೈಟಿಗಳ ಆಡಿಟರರು ಇವರು ಕೂಡಿಕೊಂಡು ಹಳ್ಳಿ ಸೊಸೈಟಿಯ ಪ್ರತಿನಿಧಿಗಳು ತಮ್ಮ ಕೈವಾಡಕ್ಕ ಒಳಪಟ್ಟವರೆ ಆರಿಸಿ ಬರುವಂತೆ ಪ್ರಯತ್ನಿಸುವುದು ಮತ್ತು ಪ್ರತಿ ಸಾರೆ ಸರಕಾರದಿಂದ ನಾಮಿನೇಶನ್ ಪ್ರತಿ ಸಾರೆ ಖಾಯಂ ಆಗಿ ತಾವೇ ಆರಿಸಿ

ಬರುವ ಸದಸ್ಯರು ಇವರೆನ್ನೆಲ್ಲ ಕರೆ ಹಾಕಿಕೊಂಡು ಸಂಸ್ಥೆಯಲ್ಲಿ ಸೆಕ್ರೆಟರಿಗೆ ಹೆಚ್ಚಿನ ಸಂಬಳ ಕೊಡಬೇಕೆಂದು ಠರಾವು ಪಾಸು ಮಾಡಿಸಿ ಸರಕಾರಕ್ಕೆ ಮಂಜೂರಿಗಾಗಿ ಕಳುಹಿಸಿದ್ದು, ಮಂಜೂರು ಕೂಡ ಆಗದೇ ಇದ್ದರೂ ಹೆಚ್ಚಿನ ಸಂಬಳ ಸೆಕ್ರೆಟರಿಯು ತೆಗೆದುಕೊಳ್ಳುತ್ತಾ ಬಂದು ಸದರಿ ಕಮಿಟಿಯವರು ಮಾಡಿದ ಠರಾವಿಗೆ ತೀವ್ರ ಮಂಜೂರಿ ಕೊಡದೆ ಇದ್ದಲ್ಲಿ ಹೈಕೋರ್ಟಿಗೆ ಹೋಗ ಬೇಕಾಗುತ್ತದೆಂದು ಸರಕಾರಕ್ಕೆ ಬೆದರಿಕೆಯ ಠರಾವು ಮಾಡಿ ಕಳಿಸಿ, ಸುಮಾರು ಹತ್ತು ಹನ್ನೆರಡು ಸಾವಿರ ರೂಪಾಯಿ ಸಂಬಳ ಹೆಚ್ಚು ಪಡಕೊಂಡು ಬಗ್ಗೆ ತಿಳಿದು ಬಂದಿದ್ದು ಇದು ನಿಜವಿದ್ದರೆ ಸರಕಾರವು ಕ್ರಮ ಕೈಕೊಂಡು ಮುಂದೆ ಇಂಥ ಕೃತಿಗಳು ಜರುಗದಂತೆ ಲಕ್ಷವಿಡಬೇಕೆಂದು ಸೂಚಿಸುವೆ.

ಚಿಪ್ಪಲಕಟ್ಟಿ ಹೋಸೂರಲ್ಲಿ ಒಂದು ಫಾರ್ಮಿಂಗ ಸೊಸೈಟಿಯು ಸದರಿ ಸೆಕ್ರೆಟರಿ ನೇತೃತ್ವದಲ್ಲಿ ಇದ್ದು ಅದರಲ್ಲಿಯೂ ಅಫರಾ ತಫರ ಆದ ಬಗ್ಗೆ ತಿಳಿದು ಬಂದಿದ್ದು ಸರಕಾರ ಅತ್ತ ಕೂಡ ಗಮನವಿಡಬೇಕು.

ನಮ್ಮ ರಾಜ್ಯದಲ್ಲಿ ನೇಕಾರ ಕೈ ಮಗ್ಗದ ಬಟ್ಟೆ ಉತ್ಪಾದಕ ಸಂಘಗಳು ಸಾವಿರಾರು ಸೊಸೈಟಿಗಳಿದ್ದು ಇವುಗಳಲ್ಲಿ ಹಲವಾರು ಸೊಸೈಟಿಗಳು ಕೇವಲ ಸರಕಾರದಿಂದ ರೀಬೇಟ್ ಪಡಕೊಳ್ಳುವ ಉದ್ದೇಶದಿಂದ ಜನ್ಮ ತಾಳಿದ ಸೊಸೈಟಿಗಳೇ ಹೆಚ್ಚಾಗಿದ್ದು ಇವುಗಳ ದುರ್ವ್ಯವಹಾರ ವನ್ನು ರಾಜ್ಯ ಸರಕಾರವು ಕಂಡು ರೀಬೇಟ ಕೊಡುವುದು ತಡೆ ಹಿಡಿದಿತ್ತು. ಆದರೆ ಇತ್ತೀಚೆಗೆ ಅದನ್ನು ಕೊಡಬೇಕೆಂದು ವಿಚಾರ ಸರಕಾರಕ್ಕೆ ಬಂದಿದೆ. ಇರಲಿ. ಇನ್ನು ಮುಂದೆ ರೀಬೇಟ್ ಲಾಭವು ತಮಗೆ ಹೆಚ್ಚಾಗಿ ದೊರಕುವುದಿಲ್ಲವೆಂದು ಕಂಡುಕೊಂಡು ಕೇವಲ ರೀಬೇಟಿನ ಲಾಭಕ್ಕಾಗಿ ಹುಟ್ಟಿದ ಸೊಸೈಟಿಗಳು ಬಡ ನೇಕಾರರ ಮನೆಗಳನ್ನು ಕಟ್ಟುವ ನೆವದಿಂದ ಹೌಸಿಂಗ್ ಕಾಲೋನಿ ಮಾಡುತ್ತೇವೆಂದು ಲೋನ ಬೇಡುವ ಕುರಿತು ಸರಕಾರಕ್ಕೆ ಅರ್ಜಿಗಳು ಬಂದಿವೆ ಎಂದು ತಿಳಿದು ಬಂದಿದೆ. ಈ ವಿಷಯವನ್ನು ಸರಕಾರವು ಯೋಗ್ಯ ಪರಿಶೀಲನೆ ಮಾಡಿ ತಾಲ್ಲೂಕಿನಲ್ಲಿ ಇರತಕ್ಕ ಎಲ್ಲ ಕೈ ಮಗ್ಗದ ಉತ್ಪಾದಕ ಸೊಸೈಟಿಯ ಪ್ರತಿನಿಧಿತ್ವವುಳ್ಳ ಒಂದು ಕಮಿಟಿ ಮಾಡಿ ಅದರ ಸಲಹೆಯಂತೆ ತಾಲ್ಲೂಕ ಮಟ್ಟದ ನೇಕಾರ ಉತ್ಪಾದಕ ಸಹಕಾರಿ ಸಂಘಗಳ ಬಡ ನೇಕಾರರಿಗೆ ಮನೆಗಳಿಲ್ಲದವರಿಗೆ ಮನೆ ಕಟ್ಟಿಕೊಳ್ಳುವ ಕುರಿತು ಲೋನ್ ಮಂಜೂರು ಮಾಡಬೇಕೇ ವಿನಹ ಇಂಡಿವಿಜ್ಯುಅಲ್ ಆಗಿ ಒಂದೊಂದು ಸೊಸೈಟಿ ಹೆಸರಿನ ಮೇಲೆ ಸರಕಾರವು ಲಕ್ಷಾಂತರ ರೂಪಾಯಿ ಸಾಲ ಕೊಟ್ಟರಷ್ಟು ಪೋಲಾಗಿ ಬಡ ನೇಕಾರರಿಗೆ ಇದರಿಂದ ಏನೂ ಪ್ರಯೋಜನವಿಲ್ಲದಂತಾದೀತೆಂದು ಈ ವಿಷಯವನ್ನು ಸ್ವತಃ ಸಹಕಾರಿ ಮಂತ್ರಿಗಳೇ ಹೆಚ್ಚಿನ ಆಸ್ಥೆ ವಹಿಸಿ ಪರಿಶೀಲಿಸಬೇಕೆಂದು ಸೂಚಿಸುವೆ.

ಮಾನ್ಯರೇ, ಈ ವರೆಗೂ ನನಗೆ ನಾಲ್ಕು ಮಾತುಗಳನ್ನಾಡಲು ಅನುವು ಕೊಟ್ಟದ್ದಕ್ಕೆ ತಮ್ಮನು ಅಭಿವಂದಿಸುವೆ.

ಶ್ರೀ ಎಂ. ನಾಗಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಮಂತ್ರಿಗಳು ಮಂಡಿಸಿರುವ ಬೇಡಿಕೆಗಳನ್ನು ತೀವ್ರವಾಗಿ ವಿರೋಧಿಸುತ್ತಾ ಕೆಲವು ವಿಷಯ ಸಭೆಯ ಗಮನಕ್ಕೆ ತರಬಯಸುತ್ತೇನೆ. ಮೊದಲನೇಯದಾಗಿ ಸಹಕಾರ ಸಂಘಗಳು ಬಡ ರೈತರಿಗಾಗಿ ಬಡ ಕೂಲಿಕಾರರಿಗಾಗಿ ಹಾಗು ಇನ್ನಿತರ ಕೈಗಾರಿಕೆಗಳಲ್ಲಿ ನಿರತರಾಗಿರತಕ್ಕಂಥ ಜನಗಳಿಗೆ ಮಾತ್ರ ಇರಬೇಕಾದುದು ನ್ಯಾಯ. ಆದರೆ ಈ ದಿವಸ ಸಹಕಾರ ಸಂಘಗಳು ಹಣವಂತರಿಗಾಗಿ ಇವೆ. ಬಡ ರೈತರು ಸದಸ್ಯರಾಗಿದ್ದರೂ ಕೂಡ ಇದುವರೆಗೆ ಅವರಿಗೆ ಬೇಕಾಗಿರುವ ಯಾವ ಸವಲತ್ತು ಸೌಲಭ್ಯ ಈ ಸಹಕಾರ ಸಂಘದಿಂದ ದೊರೆಯುತ್ತಿಲ್ಲ. ಹಣವಂತರು ಹೆಚ್ಚಾಗಿ ಸದಸ್ಯರಾಗಿದ್ದಾರೆ. ಹಣವಂತರು ಬುದ್ಧಿವಂತರಾಗಿದ್ದು ವಿದ್ಯಾವಂತರೂ ಆಗಿರುವುದರಿಂದ ಎಲ್ಲ ಸೌಲಭ್ಯಗಳನ್ನು ಅವರೇ ಪಡೆಯುತ್ತಿದ್ದಾರೆ. ಬಡವರಿಗೆ ಯಾವುದೂ ದೊರೆಯುತ್ತಿಲ್ಲ ಬಡವರ ಹೆಸರಿನಲ್ಲಿ ಅವರು ಪಡೆಯುತ್ತಿದ್ದಾರೆ. ಹಣವಂತರು ಹೆಚ್ಚು ಆಸಕ್ತಿ ಉಳ್ಳವರಾಗಿ ಸಂಘದ ಹೆಸರಿನಲ್ಲಿ ಬರತಕ್ಕಂಥ ಹಣವನ್ನು ಉಪಯೋಗ ಮಾಡಿಕೊಳ್ಳುತ್ತಿರುವುದು ಇದು ಹೊಸ ವಿಷಯವೇನೂ ಅಲ್ಲ. ಪ್ರತಿಯೊಂದು ಸೊಸೈಟಿಯಲ್ಲಿ ಇದು ನಡೆಯತಕ್ಕಂಥಾದ್ದು ಸಹಜವಾಗಿದೆ. ಆದುದರಿಂದ ಕೋಆಪರೇಟಿವ್ ಆಕ್ಟಿನಲ್ಲಿ ಒಂದು ಸರಿಯಾದ ತಿದ್ದುಪಡಿ ತರಬೇಕು. ಯಾವ ಮನುಷ್ಯನಿಗೆ ಇಂತಿಷ್ಟು ಭೂಮಿ ಇದೆ ಅಂಥವನು ಸಹಕಾರ ಸಂಘದ ಸದಸ್ಯನಾಗಲು ಅರ್ಹನಲ್ಲ, ಅವನಿಗೆ ಯೋಗ್ಯತೆ ಇಲ್ಲ ಎಂದು. ಈ ವಿಷಯ ತಿದ್ದುಪಡಿಯಲ್ಲಿ ಬರತಕ್ಕದ್ದು ಅಗತ್ಯ. ಯಾಕಂದರೆ ಸಾವಿರಾರು ಎಕರೆ ಜಮೀನು ಇರತಕ್ಕಂಥ ಸದಸ್ಯರಿಗೆ ಟ್ರ್ಯಾಕ್ಟರ್ ಸಿಕ್ಕುತ್ತದೆ. ಅದರ ಉಪಯೋಗ ಪಡೆಯತಕ್ಕಂಥವರು ಹಣವಂತರು. ಬಡ ರೈತರಿಗೆ ಅದರ ಉಪಯೋಗ ದೊರೆಯುತ್ತಿಲ್ಲ. ಅದೇ ರೀತಿ ಕೈ ಮಗ್ಗದ ಸೊಸೈಟಿಗಳಲ್ಲಿ ಕೂಡ ಸರಕಾರದಿಂದ ದೊರೆಯುವ ಸೌಲಭ್ಯಗಳ ಬಗ್ಗೆ

(ಶ್ರೀ ಎಂ. ನಾಗಪ್ಪ)

ಒಂದು ಸೀಲಿಂಗ ಹಾಕುವುದು ಒಳ್ಳೆಯದು. ಹೆಚ್ಚು ಹಣವಂತರಿಗೆ ಸದಸ್ಯರಾಗುವ ಅರ್ಹತೆ ಇರಕೂಡದು. ಈ ರೀತಿ ಒಂದು ಸೀಲಿಂಗ ಹಾಕಬೇಕು. ಅಂದರೆ ಸಹಕಾರ ಸಂಘಗಳ ಬೆಳವಣಿಗೆಯಾಗುತ್ತದೆ. ಮತ್ತು ಅವುಗಳನ್ನು ಸ್ಥಾಪನೆ ಮಾಡುವ ಸದುದ್ದೇಶ ಪೂರ್ಣ ಮಾಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ಸರಕಾರದ ಗಮನಕ್ಕೆ ತರುತ್ತೇನೆ.

ಎರಡನೆಯದಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಆಕ್ಟ್ ಪಾಸಾಗಿದೆ. ಅದನ್ನು ಕಾರ್ಯರೂಪಕ್ಕೆ ತರಲಾರದೆ ಏಕೆ ಇಟ್ಟಿದ್ದಾರೆಯೋ ಗೊತ್ತಿಲ್ಲ. ನನಗೆ ತಿಳಿದಮಟ್ಟಿಗೆ ಇದರಲ್ಲಿ ಏನೋ ರಾಜಕೀಯ ಇದೆ ಎಂದು ಕಾಣಿಸುತ್ತದೆ. ಹೈದರಾಬಾದ್ ಕರ್ಣಾಟಕದಲ್ಲಿ ಗಂಗಾವತಿ ತಾಲ್ಲೂಕು ಮಾರ್ಕೆಟಿಂಗ್ ಸೊಸೈಟಿಯ ಅವಧಿ ಮುಗಿದುಹೋದ ಮೇಲೆ ಆರು ತಿಂಗಳವರೆಗೆ ಅಧಿಕಾರ ರಿಜಿಸ್ಟ್ರಾರ್ ಅವರಿಗೆ ಇತ್ತು. ಆ ಆರು ತಿಂಗಳ ಅವಧಿ ಮುಗಿದ ಮೇಲೆ ಕೂಡ ರೂಲ್ಸ್‌ನಲ್ಲಿ ಯಾವ ರೀತಿಯ ಅವಕಾಶವೂ ಇರಲಾರದೆ ಮತ್ತೆ ರಿಜಿಸ್ಟ್ರಾರ್ ಅವರು ಅದಕ್ಕೆ ಜೀವದಾನ ಕೊಟ್ಟಿದ್ದಾರೆ ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಯಾವುದೇ ವ್ಯವಹಾರ ಮಾಡಿದರೂ ಕಾಯದೆಗೆ ವಿರೋಧವಾಗುತ್ತದೆ. ಯಾರಾದರೂ ದುಡ್ಡು ಕೊಡದೆ ಹೋದರೆ ಅದನ್ನು ವಸೂಲ್ಮಾಡತಕ್ಕ ಅಧಿಕಾರ ಸರ್ಕಾರಕ್ಕೆ ಉಳಿಯುವುದಿಲ್ಲ. ಅದಕ್ಕಾಗಿ ಸರ್ಕಾರ ತೀವ್ರವಾಗಿ ಇಂಥ ವಿಷಯಗಳನ್ನು ಗಮನಿಸಬೇಕು. ರಾಯಚೂರು ಮಾರ್ಕೆಟಿಂಗ' ಸೊಸೈಟಿಯ ಅವಧಿ ಸಹಿತ ಮೊನ್ನೆ ಮಾರ್ಚಿ ತಿಂಗಳಿಗೆ ಮುಗಿದು ಹೋಯಿತು. ಸರ್ಕಾರ ಇನ್ನೂ ಯಾವ ತರಹ ಕ್ರಮವನ್ನೂ ಕೈಕೊಂಡಿಲ್ಲ. ಏಕರೂಪವಾದ ಕಾಯದೆಯನ್ನು ಈ ಸಭೆ ಅಂಗೀಕರಿಸಿದೆ. ಅದನ್ನು ತೀವ್ರವಾಗಿ ಕಾರ್ಯರೂಪಕ್ಕೆ ತರಬೇಕು, ಅದನ್ನು ಚಲಾಯಿಸಬೇಕು ಎನ್ನುವ ವಿಷಯವನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

[MR. CHAIRMAN (SRI G. RAME GOWDA) in the Chair]

ಮಾನ್ಯ ಮಂತ್ರಿಗಳು 40 ಪರ್ಸೆಂಟ್ ಸೊಸೈಟಿಗಳು ಮಾತ್ರ ಚೆನ್ನಾಗಿ ಕೆಲಸ ಮಾಡುತ್ತಿವೆ, 60 ಪರ್ಸೆಂಟ್ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದರು. ಅವು ನಿರ್ಜೀವಿಗಳಾಗಿವೆ ಎಂದರೂ ತಪ್ಪಾಗಲಾರದು. ಅಂಥ ನಿರ್ಜೀವಿಗಳಾದ ಸೊಸೈಟಿಗಳನ್ನು ತೀವ್ರವಾಗಿ ಸರ್ಕಾರ ಲಿಕ್ವಿಡೇಟ್ ಮಾಡಿ ಮುಗಿಸತಕ್ಕುದು ಯೋಗ್ಯ. ಇಲ್ಲದೆ ಇದ್ದರೆ ಇದ್ದಂಥ ಸ್ವಲ್ಪ ಆಸ್ತಿಪಾಸ್ತಿಗಳು ಸಹಿತ ಅಪವ್ಯಯವಾಗಿ ಜನತೆಗೆ ಅದರಿಂದ ಸಾಕಷ್ಟು ಕೆಟ್ಟ ಪರಿಣಾಮವಾಗಬಹುದು ಎನ್ನುವ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. 40 ಪರ್ಸೆಂಟ್ ಸೊಸೈಟಿಗಳು ಮಾತ್ರ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂದು ಮಾನ್ಯ ಮಂತ್ರಿಗಳು ಹೇಳಿದರು. ನಾನು ಒಂದು ವಿಷಯವನ್ನು ಅವರ ಗಮನಕ್ಕೆ ತರಬಯಸುತ್ತೇನೆ. ನಮ್ಮ ರಾಜ್ಯದಲ್ಲಿ ಮತ್ತು ನಮ್ಮ ದೇಶದಲ್ಲಿ 15 ಪರ್ಸೆಂಟ್ ಸೊಸೈಟಿಗಳು ಮಾತ್ರ ಸರಿಯಾಗಿ ಕೆಲಸ ಮಾಡುತ್ತಿವೆ, ಬಾಕಿ ಎಲ್ಲ ಸೊಸೈಟಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನತಕ್ಕ ವಿಷಯವನ್ನು ಲೋಕಸಭೆಯ ಎಸ್ಟಿಮೇಟ್ಸ್ ಕಮಿಟಿಯವರು ಕೊಟ್ಟಿರುವ ವರದಿಯಲ್ಲಿ ಲೋಕಸಭೆಗೆ ತಿಳಿಸಿದ್ದಾರೆ. ನಾನು ನನ್ನ ಜಿಲ್ಲೆಯಮಟ್ಟಿಗೆ ಹೇಳಬೇಕಾದರೆ 40 ಪರ್ಸೆಂಟ್ ಸೊಸೈಟಿಗಳು ಕೂಡ ಸರಿಯಾಗಿ ನಡೆಯುತ್ತಿಲ್ಲ, ಬಹಳ ಕೆಟ್ಟಾದ ಪರಿಸ್ಥಿತಿಯಲ್ಲಿ ನಡೆಯುತ್ತಿವೆ. ಅದರಲ್ಲಿ ಆಗತಕ್ಕ ಅಪವ್ಯಯ, ಮಿಸ್‌ಅಪ್ರೋಪ್ರಿಯೇಷನ್, ಅಲ್ಲಿ ನಡೆದಿರತಕ್ಕ ಕೆಟ್ಟದಾದಂಥ ನಡತೆ ಬಹಳ ಇದೆ. ಆದರಿಂದ ಜನರಿಗೆ ಅಹಿತವಾಗುತ್ತದೆ, ಹಿತವಾಗುವುದಿಲ್ಲ ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಸಾಮೂಹಿಕ ಅಭಿವೃದ್ಧಿ ಆಡಳಿತವನ್ನು ದಯವಿಟ್ಟು ಮುಗಿಸಿಬಿಡಿ. ಆದರಿಂದ ಏನೂ ಪ್ರಯೋಜನವಿಲ್ಲ. ಆದರಿಂದ ಆಗತಕ್ಕುದು ರಾಜಕೀಯ ಆಡಳಿತ. ತಾಲ್ಲೂಕು ಬೋರ್ಡಿಗೆ ಅದನ್ನು ವಹಿಸಿದ್ದಾರೆ. ಅದರ ಸದುದ್ದೇಶ ನನಗೆ ಕಾಣಲಿಲ. ಮುಖ್ಯವಾಗಿ ಸದುದ್ದೇಶದಿಂದ ಅದನ್ನು ಮಾಡಿ ಅದಕ್ಕೆ ಮೂಲಭೂತವಾಗಿ ಆರೇಳು ಉದ್ದೇಶಗಳನ್ನು ಇಟ್ಟುಕೊಂಡಿದ್ದರು. ಮೊದಲನೆಯ ಉದ್ದೇಶ ಹಳ್ಳಿಯ ಜನತೆಯಲ್ಲಿ ನೂತನ ಒಕ್ಕಲುತನದ ಬಗ್ಗೆ, ಪಶುಸಂಗೋಪನೆ ಬಗ್ಗೆ ಸಣ್ಣ ಕೈಗಾರಿಗಳ ಬಗ್ಗೆ, ಸರಿಯಾದ ಮಾಹಿತಿ ಮತ್ತು ತಿಳುವಳಿಕೆ ಕೊಡುವುದು, ಎರಡನೆಯ ಉದ್ದೇಶ ಸ್ವಾವಲಂಬನೆಯಲ್ಲಿ ವಿಶ್ವಾಸವನ್ನು ಹುಟ್ಟಿಸುವುದು, ಮೂರನೆಯದು ಸಹಕಾರಿ ಯೋಜನೆಗಳಿಂದ ಆಗತಕ್ಕ ಲಾಭಗಳು ಏನು ಎನ್ನುವುದನ್ನು ಜನತೆಗೆ ತೋರಿಸಿಕೊಡುವುದು, ನಾಲ್ಕನೆಯದಾಗಿ ಸಾಮೂಹಿಕ ಜೀವನ ನಡೆಸುವುದು, ಐದನೆಯದು ಸರಕಾರಿ ಅಧಿಕಾರಿಗಳಲ್ಲಿ ಮತ್ತು ಸರಕಾರೇತರರಲ್ಲಿ ಪರಸ್ಪರ ಹೊಂದಾಣಿಕೆ ಮತ್ತು ಸಹಕಾರ ಭಾವನೆ ಬೆಳೆಯುವಂತೆ

ಮಾಡುವುದು, ಎರನೆಯದಾಗಿ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿ ಬಗ್ಗೆ ಮಾಹಿತಿ ಮಾಡಿ ಕೊಳ್ಳುವುದು, ಇತ್ಯಾದಿ. ಇಂಥ ಸದುದ್ದೇಶಗಳನ್ನು ರಾಷ್ಟ್ರೀಯ ವಿಸ್ತರಣಾ ಯೋಜನೆ ಸಾಧಿಸಿ ದೆಯೇ ಎಂದರೆ ಇಲ್ಲವೆಂದು ಹೇಳಬಹುದು. ಅದಕ್ಕಾಗಿ ತೀವ್ರವಾಗಿ ಇದನ್ನು ಮುಗಿಸಬೇಕು.

ರಾಯಚೂರು ಜಿಲ್ಲೆಯನ್ನು ತೆಗೆದುಕೊಂಡರೆ ಅಲ್ಲಿ ಕೆಲವು ಶಾಲೆಗಳನ್ನು ತಾಲ್ಲೂಕು ಬೋರ್ಡ್ ವತಿಯಿಂದ ಮತ್ತು ಎನ್.ಇ.ಎಸ್. ಕಟ್ಟಿಸಲಾಗಿದೆ, ಕೆಲವು ಬಾವಿಗಳನ್ನು ತೋಡಿಸಲಾಗಿದೆ. ಇವುಗಳಲ್ಲಿ ಆರೇಳು ಶಾಲೆಗಳ ಬಗ್ಗೆ ವಿಜಿಲೆನ್ಸ್ ಕಮಿಷನ್ ರೆಫರ್‌ಮಾಡಿದ್ದಾರೆ. ಅವುಗಳನ್ನು ಕಟ್ಟಿದ ಮೂರು ತಿಂಗಳಲ್ಲೇ ನೆಲಸಮವಾಗಿವೆ. ಜನತೆಯ ಸಹಕಾರಬೇಕು ಎನ್ನುವುದಕ್ಕೆ ಕೆಲವು ಯೋಜನೆ ಗಳನ್ನು ಮಾಡಿದ್ದಾರೆ. ಅದರ ಪ್ರಕಾರ ಕೆಲವು ಭಾಗವನ್ನು ಜನತೆ ಕೊಡಬೇಕು, ಅವರ ಸಹಕಾರ ಬೇಕು ಎಂದು ಮಾಡಿದ್ದಾರೆ. ಅದರ ಪ್ರಕಾರ ಮೈನರ್ ಇರಿಗೇಷನ್ 10 ಪರ್ಸೆಂಟ್ ಕೊಡಬೇಕು, ಕುಡಿಯುವ ನೀರಿನ ಸರಬರಾಜಿಗೆ 25 ಪರ್ಸೆಂಟ್, ಕಚ್ಚಾ ರಸ್ತೆಗಳಿಗೆ 25 ಪರ್ಸೆಂಟ್, ಕಲವರ್ಟ್ಸ್ ಮತ್ತು ಇತರ ಕೆಲಸಗಳಿಗೆ 25 ಪರ್ಸೆಂಟ್, ಶಾಲಾ ಕಟ್ಟಡಗಳಿಗೆ 50 ಪರ್ಸೆಂಟ್, ದವಾಖಾನೆ ಗಳಿಗೆ 25 ಪರ್ಸೆಂಟ್, ಕಮ್ಯೂನಿಟಿ ರೀಕ್ರಿಯೇಷನ್ ಸೆಂಟರ್‌ಗಳಿಗೆ 50 ಪರ್ಸೆಂಟ್ ಕೊಡಬೇಕು ಎನ್ನುವ ನಿಗದಿಯನ್ನು ಮಾಡಿದ್ದಾರೆ. ಆದರೆ ಇದೆಲ್ಲ ಕಾಯಿದೆಯಲ್ಲಿ ಇದೆ. ಅದು ಹೇಗೆ ನಡೆಯು ತ್ತಿದೆ ಎಂದರೆ ವಿಲೇಜ್ ರೆಪ್ರೆಸೆಂಟೇಟೀವ್ ಎಂದು ಗ್ರಾಮದಲ್ಲಿ ಒಂದು ಅಸ್ಪತ್ರೆ ಕಟ್ಟಬೇಕು, ಬೇರೆ ವ್ಯವಹಾರ ನಡೆಯಬೇಕು ಎಂದರೆ ಅದನ್ನೆಲ್ಲ ಆ ವಿಲೇಜ್ ರೆಪ್ರೆಸೆಂಟೇಟಿವ್‌ಗೆ ಕೊಡುತ್ತಿದ್ದಾರೆ. ಹೀಗೆ ಕೊಡತಕ್ಕ ಕಂಟ್ರಾಕ್ಟ್‌ನಲ್ಲಿ ಹಳ್ಳಿಯವರು ಕೊಡತಕ್ಕ ದುಡ್ಡು ಕೊಡದೇ ಇದ್ದರೆ ಕಂಟ್ರಾಕ್ಟ್ ಮಾಡುವವನಿಗೆ ಅಷ್ಟು ದುಡ್ಡು ಕಡಮೆ ಮಾಡುತ್ತಾರೆ. ಹಳ್ಳಿಗಳಲ್ಲಿ ಕಟ್ಟತಕ್ಕ, ಸಾಮೂಹಿಕ ಸಹಕಾರದಿಂದ ಆಗತಕ್ಕ ಕೆಲಸಗಳನ್ನು ವಿಲೇಜ್ ರೆಪ್ರೆಸೆಂಟೇಟಿವ್ ಮಾಡಲು ಒಪ್ಪಿಕೊಳ್ಳುತ್ತಾನೆ. ಅಂದಾಜು ಆಗಿರುವ ಹಣದಲ್ಲಿ 25 ಪರ್ಸೆಂಟ್ ಕಡಮೆ ಕೊಡಿ ಎಂದು ಹೇಳಿ ತನ್ನ ಕೈಗೆ ಬರುವ ಹಣದಲ್ಲ ಕಟ್ಟಡವನ್ನು ಅಥವಾ ಕೆಲಸವನ್ನು ಮುಗಿಸುತ್ತಾನೆ. ಆ ರೀತಿ ಆಗಿರುವ ಕಟ್ಟಡಗಳ ಸ್ಥಿತಿ ಏನಾಯಿತು ಎಂದರೆ ಅಂಥವುಗಳ ವಿಚಾರದಲ್ಲಿ ವಿಜಿಲೆನ್ಸ್ ಕಮಿಷನ್ನಿಗೆ ಕಳಿಸತಕ್ಕುದು ಸಹಜವೇ ಆಗಿದೆ. 75 ಪರ್ಸೆಂಟ್ ಹಣವೂ ಆಯಾ ಕೆಲಸಗಳಿಗೆ ವಿನಿಯೋಗವಾಗದೆ ಆ ಹಣವೆಲ್ಲ ದುರುಪ ಯೋಗವಾಗಿ, ವೇಸ್ಟ್ ಆಗಿದೆ ಎಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ಆದ್ದರಿಂದ ಈ ಸಾಮೂಹಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೂಡಲೇ ಬಂದ್ ಮಾಡುವುದು ಒಳ್ಳೆಯದು.

ವಿದ್ಯಾ ಇಲಾಖೆಯಿಂದ ಬೇರೆ ಶಾಲೆಗಳನ್ನು ಕಟ್ಟಿಸುತ್ತಾರೆ, ಪಬ್ಲಿಕ್ ವರ್ಕ್ಸ್ ಇಲಾಖೆ ಯಿಂದ ಬೇರೆ ಶಾಲೆಗಳನ್ನು ಕಟ್ಟಿಸುತ್ತಾರೆ, ಎನ್.ಇ.ಎಸ್. ನಿಂದ ಶಾಲೆಗಳನ್ನು ಕಟ್ಟಿಸುತ್ತಾರೆ. ಹೀಗೆ ಬೇರೆ ಬೇರೆ ಇಲಾಖೆಗಳಿಂದ ಒಂದೇ ಕೆಲಸ ಮಾಡುವುದು ಬೇಡ, ಯಾವುದಾದರೂ ಒಂದು ಇಲಾಖೆಗೆ ಆ ಕೆಲಸವನ್ನು ಕೊಟ್ಟರೆ ಅದರ ಲೆಕ್ಕಪತ್ರಗಳು ಗೊತ್ತಾಗುತ್ತವೆ. ಬೇರೆ ಬೇರೆ ಇಲಾಖೆ ಗಳಿಂದ ಒಂದೇ ಕೆಲಸವನ್ನು ಮಾಡಿಸಿದರೆ ಶಾಲೆಗಳಿಗೆ ಎಷ್ಟು ದುಡ್ಡು ಖರ್ಚಾಗಿದೆ, ದವಾಖಾನೆ ಗಳಿಗೆ ಎಷ್ಟು ದುಡ್ಡು ಖರ್ಚಾಗಿದೆ ಎನ್ನುವ ಲೆಕ್ಕ ಗೊತ್ತಾಗುವುದಿಲ್ಲ; ಹೊಂದಾಣಿಕೆ ಇಲ್ಲದೆ ಕೆಲಸ ಆಗುತ್ತದೆ. ಎನ್.ಇ.ಎಸ್. ಏನಿದೆ ಅದನ್ನು ಕೂಡಲೇ ತೆಗೆದುಹಾಕಬೇಕು ಮತ್ತು ಯಾವ ಸದು ದ್ದೇಶಗಳನ್ನು ಸಾಧಿಸಲು ಇದನ್ನು ಪ್ರಾರಂಭ ಮಾಡಲಾಯಿತೋ ಅವುಗಳನ್ನು ಸಾಧಿಸಲು ಆಗಿಲ್ಲ, ಇದರಿಂದ ಕೆಟ್ಟ ಪರಿಣಾಮವಾಗಿದೆ ಎನ್ನುವ ವಿಷಯವನ್ನು ನಾನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಹಳ್ಳಿಗಳ ರಸ್ತೆಗಳ ವಿಷಯವಾಗಿ ಹೇಳಬೇಕಾದರೆ ಹೈದರಾಬಾದ್ ಕರ್ಣಾಟಕದಲ್ಲಿ ಇರುವ ರಸ್ತೆಗಳು ಬಹಳ ಹಿಂದುಳಿದಿವೆ. ಅಲ್ಲಿ ಸಾಕಾದಷ್ಟು ರಸ್ತೆಗಳಿಲ್ಲ. ರಾಯಚೂರಿನಲ್ಲಿ ಸರ್ಕಾರಿ ಬಸ್ ಡಿಪೋ ತೆಗೆಯಬೇಕಾದರೆ ಅಲ್ಲಿ ಸರಿಯಾದ ರಸ್ತೆಗಳಿಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ರಸ್ತೆಗಳಿಗೆ ಕೊಟ್ಟಿರತಕ್ಕ ಹಣ ಬಹಳ ಕಡಮೆ ಇದೆ. ರಸ್ತೆಗಳ ಪರಿಸ್ಥಿತಿ ಏನಿದೆ ಎನ್ನುವುದನ್ನು ಎಸ್.ಪಿ. ಖೇರ್ ಎಂಬುವರು ಫೈನಾನ್ಸಸ್ ಆಫ್ ಮೈಸೂರ್ ಸ್ಟೇಟ್ ಎನ್ನುವ ಪುಸ್ತಕದಲ್ಲಿ ಹೀಗೆ ಹೇಳಿದ್ದಾರೆ:

> "These were the taluks which are already known as backward talukas of Hyderabad Karnataka. The tendency to neglect backward talukas is really deplorable. In fact, more attention to develop communications in these areas is required to be paid for proper integration of this State."

1966ರಲ್ಲಿ ಸರ್ಕಾರದವರು ಒಂದು ನಿಯಮ ಮಾಡಿದ್ದಾರೆ. ಪ್ರತಿ ತಾಲ್ಲೂಕಿನಲ್ಲಿಯೂ 50 ಮೈಲಿ ರಸ್ತೆಯನ್ನು ತೆಗೆದುಕೊಳ್ಳತಕ್ಕ ಯೋಜನೆಯನ್ನು ಮಾಡಿದರು ಅದರ ದುರುಪಯೋಗ ಬಹಳವಾ

(ಶ್ರೀ ಎಂ. ನಾಗಪ್ಪ)

ಕೆಲವು ತಾಲ್ಲೂಕುಗಳಲ್ಲಿ 200 ಮೈಲಿ ರಸ್ತೆಯನ್ನು ತೆಗೆದುಕೊಂಡು ಕೆಲವು ತಾಲ್ಲೂಕುಗಳಲ್ಲಿ ಎರಡು ಮೈಲಿನಷ್ಟು ಸಹಿತ ರಸ್ತೆ ಮಾಡಲಿಕ್ಕೆ ಹೋಗಿಲ್ಲ. ಈ ಪರಿಸ್ಥಿತಿ ರಾಯಚೂರು, ಗುಲ್ಬರ್ಗ ಮತ್ತು ಬಿದರೆ ಜಿಲ್ಲೆಗಳಲ್ಲಿ ಇದ್ದು ಅಲ್ಲಿ ಯಾವ ತರಹ ರಸ್ತೆಯೂ ಆಗಿಲ್ಲ. ಆ ಭಾಗ ಬಹಳ ಹಿಂದುಳಿದಿದೆ. ಅಬಗ್ಗೆ ವಿವರಗಳನ್ನು ಬೇಕಾದರೆ ತಮ್ಮ ಎದುರಿಗೆ ಇಡಬಯಸುತ್ತೇನೆ. ಅದಕ್ಕಾಗಿ ಈಗಾಗಲೇ ಹಿಂದೆ ಬಿದ್ದಂಥ ಹೈದರಾಬಾದ್ ಕರ್ಣಾಟಕದಲ್ಲಿ ರಸ್ತೆಗಳಿಗೆ ಹೆಚ್ಚಿಗೆ ಸಹಾಯವನ್ನು ಕೊಟ್ಟು ತೀವ್ರವಾಗಿ ರಸ್ತೆಗಳು ಆಗತಕ್ಕ ವ್ಯವಸ್ಥೆ ಮಾಡಿಕೊಡಬೇಕು ಎಂದು ಹೇಳಿ ನನಗೆ ನಾಲ್ಕು ಮಾತುಗಳನ್ನಾಡುವುದಕ್ಕೆ ಸಮಯ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—8 ಜನರು ಸಹಿಮಾಡಿ ಒಂದು ಪತ್ರವನ್ನು ಕಳುಹಿಸಿದ್ದೇವು, ಅದನ್ನು ಪರಿಶೀಲಿಸಬೇಕು.

ಛೇರ್ಮನ್ನರು.—ಪರಿಶೀಲಿಸುತ್ತಿದ್ದೇನೆ.

† ಶ್ರೀ ಬಿ. ವೆಂಕಟರಾಯಪ್ಪ (ಶಿಡ್ಲಘಟ್ಟ).—ಸನ್ಮಾನ್ಯ ಅಧ್ಯಕ್ಷರೇ, ಈ ದಿವಸ ಗ್ರಾಮಾಂತರ ಅಭಿವೃದ್ಧಿ, ಸಹಕಾರ, ಸಾಮಾದಾಯುಕ ಅಭಿವೃದ್ಧಿ ಯೋಜನೆ ಮುಂತಾದವುಗಳಿಗೆ ಸಂಬಂಧಪಟ್ಟ ಬೇಡಿಕೆಯೇನಿದೆ ಅದನ್ನು ಅನುಮೋದಿಸುತ್ತಾ ಕೆಲವು ಸಲಹೆಗಳನ್ನು ಕೊಡುತ್ತೇನೆ. ನಾವು ಪ್ರಜಾಪ್ರಭುತ್ವದಲ್ಲಿದ್ದು ಸಹಕಾರ ತತ್ವದಲ್ಲಿ ನಂಬಿಕೆಯಿಟ್ಟು ಕೆಲಸ ಮಾಡುತ್ತಿದ್ದೇವೆ. ದೇಶದಲ್ಲಿ ರೈತರ ಅಭಿವೃದ್ಧಿ, ಜನರ ಏಳಿಗೆ ಆಗಬೇಕಾದರೆ ಸಹಕಾರ ತತ್ವವಿರಬೇಕು ಮತ್ತು ಸಹಕಾರ ಸಂಘಗಳಿರಬೇಕು ಎಂಬ ವಿಚಾರವನ್ನು ಮನದಟ್ಟು ಮಾಡಿಕೊಂಡು ಸರಕಾರ ಸಹಕಾರ ಸಂಘಗಳ ಅಭಿವೃದ್ಧಿಗಾಗಿ ಸಾಕಾದಷ್ಟು ಸೌಲಭ್ಯಗಳನ್ನು ನೀಡಿದೆ. ಅನೇಕ ಕಡೆ ಸಹಕಾರ ಸಂಘಗಳಿಗೆ ಗೋಡೌನ್ ಕಟ್ಟಿಸಿಕೊಟ್ಟಿದ್ದಾರೆ, ಮ್ಯಾನೇಜೀರಿಯಲ್ ಕಾಸ್ಟ್, ಷೇರ್ ಕಾಂಟ್ರಿಬ್ಯೂಷನ್ ಮುಂತಾದ ಅನೇಕ ಸಹಾಯಗಳನ್ನು ಸರಕಾರದವರು ಮಾಡಿದ್ದಾರೆ. ಆದರೆ ಸರಕಾರ ಇಷ್ಟು ಸೌಲಭ್ಯಗಳನ್ನೊದಗಿಸಿದರೂ ಸಹಕಾರ ಸಂಘಗಳ ಅಭಿವೃದ್ಧಿ ಸಾಕಷ್ಟು ಆಗುತ್ತಿಲ್ಲ; ನಿರೀಕ್ಷೆಗನುಗುಣವಾಗಿ ಆಗುತ್ತಿಲ್ಲ. ಅನೇಕ ದೂರುಗಳು ಸಹಕಾರ ಸಂಘಗಳ ಬಗ್ಗೆ ಬರುತ್ತಿವೆ, ಅವುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ, ಅಧಿಕಾರಿಗಳು ಹೋಗಿ ಸಹಕಾರ ಸಂಘಗಳ ಮೇಲ್ವಿಚಾರಣೆ ಮಾಡುತ್ತಿಲ್ಲ ಸರಿಯಾಗಿ ನಿಗಾ ಇಡುತ್ತಿಲ್ಲ ಎಂಬ ದೂರಿದೆ. ಉದಾಹರಣೆಗೆ ಸರಕಾರ ಒಂದು ಸರ್ಕ್ಯುಲರ್ ಹೊರಡಿಸಿತ್ತು, ವರ್ಷಕ್ಕೊಂದು ಸಲ ಪ್ರತಿ ಸಂಘದಲ್ಲೂ ಸರ್ವ ಸದಸ್ಯರ ಸಭೆ ನಡೆಸಬೇಕು ಎಂದು ತಿಳಿಸಿತ್ತು. ಆದರೆ ಅದು ಕಾಗದದಮೇಲೆ ಇದೆ, ಅಷ್ಟೆ. ಸುಮಾರು ಸೇಕಡ 70 ಸಹಕಾರ ಸಂಘಗಳಲ್ಲಿ ಈ ರೀತಿ ಸರ್ವಸದಸ್ಯರ ಸಭೆ ಪ್ರತಿವರ್ಷ ಆಗುತ್ತಿಲ್ಲ. ಈ ವಿಚಾರದಲ್ಲಿ ರಿಜಿಸ್ಟ್ರಾರರಿಗೆ ಅಥವಾ ಸರಕಾರಕ್ಕೆ ಅನೇಕ ದೂರುಗಳು ಬಂದರೂ ಕಟ್ಟುನಿಟ್ಟಾಗಿ ನಿಯಮಗಳನ್ನು ಪಾಲಿಸಲು ಅಧಿಕಾರಿಗಳು ಸಹಕರಿಸುತ್ತಿಲ್ಲ. ಇನ್ನು ಮುಂದಾದರೂ ಸಹಕಾರ ಸಂಘಗಳಿಗೆ ನಿರ್ದೇಶ ಕೊಟ್ಟು ಸರ್ವ ಸದಸ್ಯರ ಸಭೆ ಪ್ರತಿ ವರ್ಷವು ನಡೆಯಲು ಅವಕಾಶ ಕಲ್ಪಿಸಬೇಕು. ಈಗಿರುವಂಥ ಲೋಪದೋಷಗಳಿಗೆ ಅವಕಾಶ ಇರಬಾರದು.

ಸಹಕಾರ ಸಂಘಗಳಲ್ಲಿ ಪ್ರತಿವರ್ಷ ಚುನಾವಣೆ ನಡೆಯುತ್ತದೆ. ನಮ್ಮದು ಈಗ ಬರೀ ಚುನಾವಣಾ ರಾಜ್ಯವಾಗಿದೆ, ಪಂಚಾಯಿತಿ, ತಾಲ್ಲೂಕು ಬೋರ್ಡ್, ಅಸೆಂಬ್ಲಿ ಮುಂತಾದುವುಗಳ ಚುನಾವಣೆ ಒಂದಾದಮೇಲೆ ಒಂದು ನಡೆಯುತ್ತಲೇ ಇವೆ. ಇದರಿಂದ ಪಾರ್ಟಿ ವೈಷಮ್ಯವು ಜಾಸ್ತಿಯಾಗಿ ಸಹಕಾರ ತತ್ವ ಅನುಷ್ಠಾನಕ್ಕೆ ಧಕ್ಕೆ ಬಂದಿದೆ. ಈ ಕಾರಣದಿಂದ ಇದನ್ನು ಪುನರ್ವಿಮರ್ಶೆಮಾಡಿ ಸಹಕಾರ ಸಂಘಗಳ ಚುನಾವಣೆ ಆದಷ್ಟು ಕಡಿಮೆಮಾಡಲು ವ್ಯವಸ್ಥೆ ಮಾಡಬೇಕು.

ಸಹಕಾರ ಸಂಘಗಳ ಚುನಾವಣೆಯ ಬಗ್ಗೆ ಕೇಸುಗಳನ್ನು ಇತ್ಯರ್ಥಮಾಡಲು ಆರ್ಬಿಟ್ರೇಟರನ್ನು ನೇಮಕಮಾಡುತ್ತಾರೆ. ಇದಕ್ಕೆ ಯಾವ ನಿಯಮವನ್ನು ಅನುಸರಿಸುತ್ತಾರೆ? ಇದಕ್ಕೇನು ಅರ್ಹತೆ ಇರಬೇಕು? ಈ ವಿಚಾರದಲ್ಲಿ ಒಂದು ಸಂಶಯವಿದೆ. ಉದಾಹರಣೆಗೆ ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಶ್ಯಾನುಭೋಗರನ್ನು ಆರ್ಬಿಟ್ರೇಟರ್ ಆಗಿ ನೇಮಕ ಮಾಡಿದ್ದಾರೆ. ಅವರು ಒಂದು ರಾಜಕೀಯ ಪಕ್ಷದಲ್ಲಿದ್ದಾರೆ. ಒಂದು ಕೇಸು ಬಂದಾಗ ಚಿಕ್ಕಬಳ್ಳಾಪುರದ ಅಸಿಸ್ಟೆಂಟ್ ರಿಜಿಸ್ಟ್ರಾರರು ಅದನ್ನು ಶ್ಯಾನುಭೋಗರು ಆರ್ಬಿಟ್ರೇಟರ್ ಆಗಿರುವ ಕಡೆಗೆ ರಿಫರ್ ಮಾಡಿದರು. ಪ್ರತಿವಾದಿಗಳು ನಮ್ಮ ತಾಲ್ಲೂಕು ರಾಜಕೀಯ ಪಕ್ಷದಲ್ಲಿದ್ದಾರೆ, ಆದುದರಿಂದ ಶಾನುಭೋಗರು ಆರ್ಬಿಟ್ರೇಟರ್ ಆಗಿರುವ

ಕಡಗೆ ರೆಫರ್ ಮಾಡಿದ್ದಾರೆ ನ್ಯಾಯ ದೊರೆಯುವುದಿಲ್ಲ ಎಂದು ತಿಳಿಸಿದರೂ ಕೂಡ ಅಸಿಸ್ಟೆಂಟ್ ರಿಜಿಸ್ಟ್ರಾರರು ಅದನ್ನು ಬೆರೆಯುವರಿಗೆ ರೆಫರ್ ಮಾಡಲಿಲ್ಲ. ಹೀಗಾದರೆ ನ್ಯಾಯ ದೊರೆಯುವುದಿಲ್ಲ. ಅದೇ ನ್ಯಾಯಾಂಗದಲ್ಲಿ ಬೇರೆ ಕೋರ್ಟಿಗೆ ನಾಯ್ಯವಾದ ಸಂದರ್ಭಗಳಲ್ಲಿ ಕೇಳಿದರೆ ಬದಲಾಯಿಸುವುದಕ್ಕೆ ಅವಕಾಶವಿದೆ. ಹಾಗಿರುವಾಗ ನ್ಯಾಯ ದೊರೆಯಲು ಅವಕಾಶವಿಲ್ಲವೆಂದು ಹೇಳಿದಾಗ ಕೂಡ ಅರ್ಬಿಟ್ರೇಟರನ್ನು ಬದಲಾಯಿಸದಿರುವುದು ಶೋಚನೀಯ. ಸೂಕ್ತ ಕಂಡಾಗ ಬದಲಾಯಿಸದಿದ್ದರೆ ನ್ಯಾಯ ದೊರೆಯುದೆ ತೊಂದರೆಯಾಗುತ್ತದೆ. ಇದನ್ನು ಸರಕಾರ ತೀವ್ರವಾಗಿ ಪರಿಶೀಲಿಸಬೇಕು.

ನಂತರ ಕೆಲವೊಂದು ಅಭಿವೃದ್ಧಿ ಬ್ಯಾಂಕುಗಳ ವಿಚಾರ. ಸರಕಾರ ಬಾವಿಗಳಿಗೆ ಸಾಲವನ್ನು ತಾಲ್ಲೂಕು ಅಭಿವೃದ್ಧಿ ಬ್ಯಾಂಕುಗಳಿಂದ ಕೊಡುತ್ತಿದೆ. ಅಧಿಕಾರಿಗಳು, ಎಂಜನಿಯರು, ಅಸಿಸ್ಟೆಂಟ್ ಕಮಿಷನರು ಈ ಸಂಬಂಧವಾದ ಕೆಲಸ ಮೇಲ್ವಿಚಾರಣೆ ಮಾಡಬೇಕು. ಕೆಲವು ಬಾವಿಗಳ ಕೆಲಸ ಪೂರ್ಣವಾಗಿಲ್ಲ, ಹೆಚ್ಚು ಬಾವಿಗಳಿಗೆ ಹಣ ಕೊಡುತ್ತಿದ್ದಾರೆ, ಇಂದು ಒಂದು ಕಾಂಟ್ರಾಕ್ಟ್ ಸಿಸ್ಟಂ ಇದೆ, ಅದರಂತೆ ಅಧ್ಯಕ್ಷರಿಗೆ ಸೇಕಡ 10 ಭಾಗ, ಶಿಫಾರ್ಸು ಮಾಡುವವರಿಗೆ ಸೇಕಡ 10 ಭಾಗ, ಉಳಿದವರಿಗೆ ಸೇಕಡ 15 ಭಾಗ ಹೀಗೆ ಕೊಡುವ ಸಾಲದಲ್ಲಿ ಸಲ್ಲುತ್ತಿದೆ. ಹೀಗಾಗಿ ಸಾಲ ತೆಗೆದುಕೊಳ್ಳುವವನು ಸಾಲ ತೀರಿಸಲು ಕೆಲವು ಜಮೀನುಗಳನ್ನು ಮನೆ ಮಠಗಳನ್ನು ಮಾರಾಟಮಾಡಬೇಕಾದ ಪರಿಸ್ಥಿತಿ ಬರುತ್ತಿದೆ. ರಾಜಕೀಯ ಪಕ್ಷದವರ ಜೊತೆಯಲ್ಲಿ ಹೋಗಿ ಅವರಿಂದ ಶಿಫಾರಸು ಮಾಡಿಸಿದರೆ ಮಾತ್ರ ಸಾಲ ಕೊಡುತ್ತಾರೆ, ಇಲ್ಲವಿದ್ದರೆ ಇಲ್ಲ. ಇಂದು ನಮ್ಮ ತಾಲ್ಲೂಕಿನಲ್ಲಿ ಹೇಳುವುದಾದರೆ ಹಾಳು ಬಾವಿಗಳಿಗೆ ಸಾಲ ಕೊಟ್ಟು ಅವನ್ನು ಹೊಸ ಬಾವಿಗಳೆಂದು ತೋರಿಸಿ ಸುಳ್ಳು ರಿಕಾರ್ಡು ಮಾಡಿದ್ದಾರೆ. ಹೊಸ ಬಾವಿಗಳನ್ನು ಎಷ್ಟೋ ಕಡೆ ಮಾಡಿಲ್ಲ ಸೇಕಡ 20 ಸಂದರ್ಭಗಳಲ್ಲಿ ಬಾವಿ ತೆಗೆಸಿಲ್ಲ, ಇನ್ನು 20 ಭಾಗ ಅಪೂರ್ಣವಾಗಿವೆ, 10 ಭಾಗ ಬಾವಿಗಳಾಗಿವೆ. ಹೀಗಾದರೆ ವ್ಯವಸಾಯಾಭಿವೃದ್ಧಿ, ರೈತನ ಏಳಿಗೆ ಹೇಗಾಗುವುದು ? ಸಾಲವನ್ನು ಮರು ಪಾವತಿ ಮಾಡುವುದು ಹೇಗೆ ? ಇದನ್ನು ವಿಚಾರಮಾಡಬೇಕು. ತಾಲ್ಲೂಕು ಬೋರ್ಡುಗಳಲ್ಲಿ, ವಿಧಾನ ಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಸದಸ್ಯರಾಗಿರುವವರನ್ನು ಭೂ ಅಭಿವೃದ್ಧಿ ಬ್ಯಾಂಕುಗಳಲ್ಲಿ ಎಕ್ಸ್ ಅಫಿಷಿಯೋ ಡೈರೆಕ್ಟರುಗಳಾಗಿ ನಾಮಕರಣ ಮಾಡಿದರೆ ಒಳ್ಳೆಯದಾಗುತ್ತದೆ. ಈ ವಿಚಾರದಲ್ಲಿ ಸರಕಾರಕ್ಕೆ ಈ ದಿವಸ ಮನವಿಯನ್ನು ಸಹ ಕೊಟ್ಟಿದ್ದಾರೆ. ಇದು ಮುಖ್ಯವಾದುದರಿಂದ ಇದನ್ನು ತೀವ್ರವಾಗಿ ವಿಚಾರಮಾಡಬೇಕು. ಇದನ್ನು ಆದಷ್ಟು ಜಾಗ್ರತೆ ವಿಚಾರಮಾಡಿ ಈ ಮನೆಯ ಸದಸ್ಯರಿಗೆ ಸರಕಾರ ಸಂಘಗಳಲ್ಲಿ ಅವಕಾಶ ಕಲ್ಪಿಸುತ್ತಾರೆಂದು ನಂಬಿದ್ದೇನೆ.

ನಮ್ಮ ಸಂಸ್ಥಾನದ ಮಟ್ಟದಲ್ಲಿ ಹರಿಜನ-ಗಿರಿಜನರ ಅಭಿವೃದ್ಧಿಗಾಗಿ ಹೌಸಿಂಗ್ ಕಾರ್ಪೊರೇಷನ್ ಮಾಡಿದ್ದಾರೆ, ಅದು ಸಾಲವನ್ನು ಮಂಜೂರುಮಾಡಿ ಅನೇಕರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಈಗ ಹಣವಿಲ್ಲವೆಂದು ಹೇಳುತ್ತಿದ್ದಾರೆ ಪುನಃ ಹಣವನ್ನು ಒದಗಿಸಬೇಕು. ಹಣವನ್ನು ಎರಡು ಮೂರು ಕಂತುಗಳಲ್ಲಿ ಕೊಡಬಹುದು, ಸಂಘಗಳಿಗೆ ಅವಕಾಶ ಕೊಟ್ಟು ಮನೆ ಕಟ್ಟಿಕೊಳ್ಳಲು ಸಹಾಯಮಾಡಬೇಕು.

ಇನ್ನು ಸಾಮೂಹಿಕ ಅಭಿವೃದ್ಧಿ ವಿಚಾರ. ಈ ಯೋಜನೆ ಪ್ರಾರಂಭವಾದಾಗ ಅಧಿಕಾರಿಗಳಿಗೆ ಒಂದು ಸೇವಾ ಮನೋಭಾವ ಪೂರ್ಣವಾಗಿತ್ತು. ಅವರಿಗೆ ತರಬೇತಿ ಕೊಟ್ಟು ಇಲಾಖೆಗೆ ಕಳಿಸಬೇಕು, ಅವರು ಉತ್ತೇಜನ ಕೊಡಬೇಕು ಎಂದು ಮಾಡಿದ್ದರು, ಬರುಬರುತ್ತಾ ಅಧಿಕಾರಿಗಳಲ್ಲಿದ್ದ ಸೇವಾ ಮನೋಭಾವ ಅಳಿಸಿಹೋಗುತ್ತಿದೆ, ಅವರಲ್ಲಿ ಲಂಚರುಷುವತ್ತು ಬೆಳೆದಿದೆ, ಅವರ ಮನಸ್ಸು ಬೇರೆ ಕಡೆ ಬೆಳದಿದೆ. ಈ ಬಗ್ಗೆ ಪರಿಶೀಲಿಸಿ ಸರಿಯಾಗಿ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಬೇಕು.

ಹಳ್ಳಿಗಾಡಿನಲ್ಲಿ ಕುಡಿಯುವ ನೀರಿನ ವಿಚಾರ. ನಮ್ಮ ದೇಶಕ್ಕೆ ಸ್ವಾತಂತ್ರ್ಯಬಂದು 20 ವರ್ಷಗಳಾದರೂ ಇನ್ನೂ ಅನೇಕ ಹಳ್ಳಿಗಳಲ್ಲಿ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಿಲ್ಲ. ಪ್ರತಿಯೊಂದು ಹಳ್ಳಿಗೂ ಕುಡಿಯುವ ನೀರಿನ ಬಾವಿಯನ್ನು ಒದಗಿಸಬೇಕು. ಈ ಬಗ್ಗೆ ಅನೇಕ ಹಳ್ಳಿಗಳಿಂದ ಒತ್ತಾಯ ಬಂದಿದೆ. ಸಾಕಾದಷ್ಟು ಹಣ ಕೊಟ್ಟು ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಬಾವಿಗಳನ್ನು ಒದಗಿಸಬೇಕೆಂದು ಸೂಚಿಸುತ್ತೇನೆ.

ಕೊನೆಯದಾಗಿ ಒಂದು ಮಾತು. ತಾಲ್ಲೂಕು ಅಭಿವೃದ್ಧಿ ಸಮಿತಿಗಳಿಗೆ ಆಡಳಿತ ನಡೆಸಲು ಭೂ ಕಂದಾಯದ ಸೇಕಡ 25 ಭಾಗವನ್ನು ಸರಕಾರ ಕೊಡುವುದು. ಇದರಿಂದ 50 ಸಾವಿರ ರೂಪಾಯಿ ವರಮಾನ ಪಡೆಯುವ ಭಾಗಗಳೂ ಇವೆ, 7-8 ಲಕ್ಷ ರೂಪಾಯಿ ವರಮಾನ ಪಡೆಯತಕ್ಕವು ಇವೆ. 50 ಸಾವಿರ ವರಮಾನ ಪಡೆಯುವವರು ಸರಿಯಾಗಿ ಕೆಲಸಮಾಡುವುದಕ್ಕೆ

(ಶ್ರೀ ಬಿ. ವೆಂಕಟರಾಯಪ್ಪ)

ಸಾಧ್ಯವಿಲ್ಲ. ಆದುದರಿಂದ ದೇಶದಲ್ಲಿ ಬರುವ ಎಲ್ಲ ಭೂ ಕಂದಾಯವನ್ನೂ ಶೇಖರಿಸಿ ಜನಸಂಖ್ಯೆಯ ಆಧಾರದಮೇಲೆ ವರಮಾನವನ್ನು ಹಂಚಿಕೆ ಮಾಡಿದರೆ ತಾಲ್ಲೂಕುಗಳ ಅಭಿವೃದ್ಧಿಯಾಗುವುದು. ಈ ವಿಚಾರವನ್ನು ಅನೇಕ ಸೆಮಿನಾರುಗಳಲ್ಲಿ ಹೇಳಿದ್ದೇವೆ. ಹಿಂದೆ ಇದನ್ನು ಪರಿಶೀಲನೆ ಮಾಡುತ್ತಿದ್ದರು, ಈಗ ಈ ವಿಚಾರ ಪರಿಶೀಲನೆಯಲ್ಲಿರುವಂತೆ ಕಾಣುವುದಿಲ್ಲ. ತೀವ್ರವಾಗಿ ಇದನ್ನು ಯೋಚನೆಮಾಡಿ ತಕ್ಕ ಕ್ರಮ ಕೈಕೊಳ್ಳಬೇಕು ಎಂದು ಸಲಹೆಮಾಡಿ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ತಿಮ್ಮಯ್ಯ (ಬಸವನಗುಡಿ).—ಅಧ್ಯಕ್ಷರೇ, ಸಹಕಾರ ಸಂಘಗಳ ವಿಷಯದಲ್ಲಿ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಸಹಕಾರ ಸಂಘಗಳು ಕೆಲವು ಚೆನ್ನಾಗಿ ಕೆಲಸಮಾಡುತ್ತಿವೆಯೆಂದು ಇಲ್ಲಿ ಸದಸ್ಯರು ಹೇಳುವುದೇ ವಿನಾ ಹೋಗಿ ನೋಡಿದರೆ ಸಹಕಾರ ಸಂಘಗಳಲ್ಲಿ ಹೆಗ್ಗಣಗಳು ಜಾಸ್ತಿಯಾಗಿದೆ. ಆ ಸಂಘಗಳಲ್ಲಿರುವವರು ತಮ್ಮ ಸೌಕರ್ಯಕ್ಕಾಗಿ ಬೇಕಾದ್ದನ್ನು ಮಾಡಿಕೊಳ್ಳುತ್ತಿದ್ದಾರೆ, ಇದು ನನ್ನ ಅನುಭವ. ಅಧ್ಯಕ್ಷರಿಗೂ ಇದರ ಅನುಭವವಿದೆ. ಈ ಸಂಘಗಳಲ್ಲಿ ಡೈರೆಕ್ಟರುಗಳ ಚುನಾವಣೆ ನಡೆಯುತ್ತದೆ, ಅಲ್ಲಿ ನವಗ್ರಹಗಳಿದ್ದ ಹಾಗೆ 9 ಜನರಿರುತ್ತಾರೆ. ಸಹಕಾರ ಸಂಘಗಳಲ್ಲಿರುವ ಡೈರೆಕ್ಟರುಗಳು ಇಂದು ಸಂಘಗಳಲ್ಲಿರುವ ರಾಗಿ, ಅಕ್ಕಿ ಮುಂತಾದ ಸಾಮಾನುಗಳನ್ನು ಮೆಂಬರುಗಳಿಗೆ ಹಂಚಿ ಮುಂದಿನ ವರ್ಷ ಓಟು ಪಡೆಯಲು ಏನು ಬೇಕೋ ಅದನ್ನು ಮಾಡಿಕೊಂಡಿರುತ್ತಾರೆ. ಇಂಥ ಹೆಗ್ಗಣಗಳು ಈ ಸಂಘಗಳಲ್ಲಿವೆ. ಮಂತ್ರಿಗಳು ಆಗಾಗ್ಯೆ ಈ ಸಂಘಗಳಿಗೆ ಭೇಟಿ ಕೊಟ್ಟರೆ ಆಗ ಸಫಲ ವಾಗುತ್ತದೆ, ಅಲ್ಲಿಯವರೆಗೇನೂ ಆಗುವುದಿಲ್ಲ. ಯಾರೂ ಸಹಕಾರಮಾಡುತ್ತಿಲ್ಲ. ಲೋಪದೋಷ ಗಳಿಗೆ ಅವಕಾಶ ಕೊಡದೆ ಸರಿಯಾಗಿ ನೋಡಿಕೊಳ್ಳುವವರೆಗೆ ಯಾವ ಸಹಕಾರ ಸಂಘಗಳು ಮುಂದೆ ಬರುವುದಿಲ್ಲ. ಜನರಿಗೆ ಬ್ಯಾಂಕುಗಳಿಂದ ಹಣ ಕೊಡುತ್ತಾರೆ. ಆದರೆ ಅದರ ಉಪಯೋಗ ಜನರಿಗೆ ಸರಿಯಾಗಿ ಆಗುತ್ತಿಲ್ಲ. ಚುನಾವಣೆ ನಡೆಯುವಾಗ ಬೇಕಾದಷ್ಟು ಕ್ಯಾನ್‌ವಾಸ್ ಮಾಡುತ್ತಾರೆ, ಆಗ ಬಾಟಲುಗಳನ್ನು ಸಹ ಕೊಡುತ್ತಾರೆ.

3-00 P. M.

ಇದು ಧರ್ಮದ ಸೇವೆ, ಸರ್ಕಾರದವರು ಟ್ರಸ್ಟಿಗಳು ಇದ್ದಹಾಗೆ. ನಾವು ಏನೇ ಬಡಿದು ಕೊಳ್ಳುತ್ತಾ ಇದ್ದರೂ ಕೂಡ ಕೇಳುತ್ತಾ ಇರುತ್ತೇವೆ ಅಂದರೆ ಅದರಿಂದ ಏನೂ ಪ್ರಯೋಜನ ವಾಗುವುದಿಲ್ಲ. ಸ್ವಾಮಿ, ಸಹಕಾರ ಸಂಘಗಳಲ್ಲಿ ಸಹಕಾರ ಹೇಗೆ ಇರಬೇಕೆಂದರೆ ಜನಗಳು, ಅಲ್ಲಿ ಕೆಲಸ ಮಾಡತಕ್ಕ ಟ್ರಸ್ಟಿಗಳು ಮತ್ತು ನಿಮ್ಮ ಆಫೀಸರುಗಳು ಈ ಮೂರು ಜನರೂ ಕೂಡ ಕಂಬೈನ್ಡ್ ಆಗಿರಬೇಕು, ಹಾಗಿದ್ದರೇ ಸಹಕಾರ ಸಂಘ ಚೆನ್ನಾಗಿ ನಡೆಯುವುದು. ಸಹಕಾರ ಸಂಘಗಳಲ್ಲಿ ಅನ್ನಕೊಡಿ ಅಂತ ಹೇಳಿ ಬಡವ ಹೋದರೆ ಆತನನ್ನು ನೂಕಿಬಿಡುತ್ತಾರೆ. ಹಣ ಇರುವವರು ಹೋದರೆ ಅವರಿಗೆ ಸೀಟು ಹಾಕುತ್ತಾರೆ. ಆದ್ದರಿಂದ ಈ ಸಹಕಾರ ಸಂಘಗಳಿಗೆ ತಮ್ಮ ಆಫೀಸರು ಆಗಾಗ್ಗೆ ಭೇಟಿ ಕೊಡುತ್ತಾ ಇದ್ದರೆ ಒಳ್ಳೆಯದು. ಬಡಬಗ್ಗರಿಗೆ ದವಸ ಧಾನ್ಯ ಸರಿಯಾಗಿ ಸಿಕ್ಕು ವಂತೆ ವ್ಯವಸ್ಥೆ ಮಾಡಿದರೆ ಅವರಿಗೆ ಬಹಳ ಉಪಕಾರ ಮಾಡಿದಂತಾಗುತ್ತದೆ. ಇರತಕ್ಕ ದವಸವನ್ನು ಸರಿಯಾಗಿ ವಿನಿಯೋಗ ಮಾಡಿದರೆ ನಿಜವಾಗಿಯೂ ಕೂಡ ದೇಶದಲ್ಲಿ ಕ್ಷಾಮ ಇರುವುದಿಲ್ಲ. ಹಾಗೆ ಮಾಡದೇ ಹೋದ ಪಕ್ಷದಲ್ಲಿ, ಈ ಸಹಕಾರ ಸಂಘಗಳನ್ನು ರದ್ದುಮಾಡುವುದು ಒಳ್ಳೆಯದು ಎಂದು ಹೇಳುತ್ತೇನೆ. ಲಾರಿಗಳಲ್ಲಿ, ವ್ಯಾನ್‌ಗಳಲ್ಲಿ ದವಸಧಾನ್ಯಗಳನ್ನು ತುಂಬಿಕೊಂಡು ಹೋಗುತ್ತಾರೆ, ಅದನ್ನು ಏನಾದರೂ ನಾವು ಪೋಲೀಸ್‌ನವರಿಗೆ ಹಿಡಿದುಕೊಟ್ಟರೆ ಅವರು, ಸ್ವಲ್ಪಹೊತ್ತು ಸುಮ್ಮನೆ ಇದ್ದು ಸಂದಿಯಲ್ಲಿ ಏನಾದರೂ ಅಷ್ಟು ಗಿಟ್ಟಿಸಿಕೊಂಡು ಬಿಟ್ಟುಬಿಡುವುದು ಈ ರೀತಿ ಮಾಡುತ್ತಾ ಇದ್ದಾರೆ. ಇದರಿಂದ ತೊಂದರೆಯಾಗುತ್ತಾ ಇರುವುದು ಯಾರಿಗೆ ಎಂದರೆ ಜನಗಳಿಗೆ. ಆದ್ದರಿಂದ ಸಹಕಾರ ಸಂಘಗಳಿಗೆ ತಮ್ಮ ಅಧಿಕಾರಿಗಳು ಆಗಾಗ್ಗೆ ಭೇಟಿ ಕೊಟ್ಟು ನೋಡುತ್ತಾ ಇದ್ದರೆ ಒಳ್ಳೆಯದು ಎಂದು ಹೇಳುತ್ತೇನೆ. ಕೊನೆಯದಾಗಿ ನಾನು ಹೇಳುವುದೇನೆಂದರೆ ಮಿನಿಸ್ಟರಿಗೆ ನಾವೇನಾದರೂ ಹೀಗೆಲ್ಲಾ ಆಗುತ್ತಾ ಇದೆ ಎಂದು ಹೇಳಿದರೆ ಕಣ್ಣು ಒರೆಸಿ ಕಳುಹಿಸುತ್ತಾರೆ ಈ ರೀತಿ ಮಾಡಬಾರದು ಎಂದು ಹೇಳುತ್ತೇನೆ. ನಮ್ಮ ಅನುಭವ, ನಮ್ಮ ಕಷ್ಟವನ್ನು ಹೇಳಿದ್ದನ್ನು ಅವರು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕು. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಚ್. ಸಿದ್ದವೀರಪ್ಪ (ಹರಿಹರ).—ಸ್ವಾಮಿ ಅಧ್ಯಕ್ಷರೇ, ಈ ಡಿಮ್ಯಾಂಡ್ ಮೇಲೆ ಒಂದೆರಡು ಅಂಶಗಳನ್ನು ಈ ಸಭೆಯ ಗಮನಕ್ಕೆ ತರಬೇಕಾದ ಅವಶ್ಯಕತೆ ಇದೆ. ತಾವು ನನಗೆ

ಅವಕಾಶ ಕೊಟ್ಟದ್ದಕ್ಕಾಗಿ ತಮಗೆ ವಂದಿಸಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಮುಖ್ಯ ವಾದ ಈಗ ಹೇಳಬೇಕೆಂದಿರುವುದು ಮೊನ್ನೆತಾನೆ ವಿಲೇಜ್‌ಪಂಚಾಯ್ತಿ ಚುನಾವಣೆ ನಡೆಯಿತು, ಇನ್ನೂ ಕೆಲವು ಕಡೆ ನಡೆಯುತ್ತಾ ಇದೆ. ಈ ವಿಷಯದ ಮಟ್ಟಿಗೆ ಒಂದೆರಡು ಮಾತುಗಳನ್ನು ಮೊದಲು ತಿಳಿಸುತ್ತೇನೆ.

ನಮಗೆಲ್ಲ ಗೊತ್ತಿರುವ ಹಾಗೆ ನಮ್ಮ ರಾಜ್ಯಾಂಗದಲ್ಲಿ 40ನೇ ವಿಧಿಯಲ್ಲಿ Organisation of Village Panchayat ಎಂಬುದರಲ್ಲಿ ಆ ರೀತಿ ನಮೂದಿಸಿದ್ದಾರೆ. ಅದರಲ್ಲಿ :

> "The State shall take steps to organise Village Panchayats and endow them with such powers and authority, as may be necessary for them to functien as units of Self-government"

ಇದನ್ನು ಅಲ್ಲಿ ಯಾವ ಉದ್ದೇಶದಿಂದ ಕೊಟ್ಟಿದ್ದಾರೆಂದರೆ, ಗ್ರಾಮ ಪಂಚಾಯತಿಗಳಿಗೆ, ಈ ದೇಶ ದಲ್ಲಿ ಪ್ರಜಾಪ್ರಭುತ್ವ ಸರಿಯಾದ ದಾರಿಯಲ್ಲಿ ಹೋಗಬೇಕಾದರೆ, ಪ್ರಜಾಪ್ರಭುತ್ವದ ತಳಹದಿ ಸರಿ ಯಾಗಿರಬೇಕಾದರೆ, ತಕ್ಕ ಅಧಿಕಾರ ಇರಬೇಕು. ಗ್ರಾಮ ಪಂಚಾಯತಿಗಳು ಬಹಳ ಸುಗಮವಾಗಿ ನಡೆಯಬೇಕು. ಜನಗಳು ಸ್ವಯಂಪ್ರೇರಿತರಾಗಿ ತಮಗೆ ಬೇಕಾದ ಜನಗಳನ್ನು ಚುನಾವಣೆ ಮಾಡ ಬೇಕೆಂಬ ದೃಷ್ಟಿಯಿಂದ ಗ್ರಾಮಪಂಚಾಯತಿಗಳಿಗೆ ಆದ್ಯ ಗಮನವನ್ನು ರಾಜ್ಯಾಂಗದಲ್ಲಿ ಕೊಟ್ಟಿ ದ್ದಾರೆ. ಸರ್ಕಾರದವರು 7 ವರ್ಷಗಳ ಕಾಲ ಈ ಗ್ರಾಮಪಂಚಾಯತಿ ಚುನಾವಣೆಗಳನ್ನು ಮಾಡಲಿಲ್ಲ. 1967 ನೇ ಫೆಬ್ರವರಿಯಲ್ಲಿ ಸಾರ್ವಜನಿಕ ಚುನಾವಣೆಯಾದಮೇಲೆ ಕಣ್ಣುಬಿಟ್ಟು ಈಗ ಈಗ ಗ್ರಾಮ ಪಂಚಾಯತಿಯ ಚುನಾವಣೆಗಳನ್ನು ಮಾಡುತ್ತೇವೆಂದು ಹೊರಟಿದ್ದಾರೆ. ಅದನ್ನು ಈಗ ಹೇಗೆ ಮಾಡುತ್ತಿದ್ದಾರೆಂದರೆ, ಮಾಡುತ್ತಾ ಇರತಕ್ಕ, ಮಾಡಿರತಕ್ಕ ಅನ್ಯಾಯ, ಅತ್ಯಾಚಾರ, ಹಸ್ತಕ್ಷೇಪಗಳನ್ನು ನೋಡಿದರೆ, ಇವರಿಗೆ ಯಾವ ಶಿಕ್ಷೆ ಕೊಟ್ಟರೂ ತೀರದು. ಪ್ರಜಾಪ್ರಭುತ್ವ ಕೊಲೆ ಯನ್ನು ಈ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಮಾಡಿದ್ದಾರೆ. ಅದನ್ನು ವಿವರವಾಗಿ ಹೇಳು ವುದಕ್ಕೆ ಕಾಲವಿಲ್ಲ. ಕೇವಲ ಒಂದೆರಡು ವಿಷಯಗಳನ್ನು ಮಾತ್ರ ಅವರ ಗಮನಕ್ಕೆ ತರುತ್ತೇನೆ. ಈ ಗ್ರಾಮಪಂಚಾಯತಿಗಳ ಚುನಾವಣೆಗಳಾದಮೇಲೆ ಅವರಷ್ಟಕ್ಕೇ ಅವರು ಬಿಟ್ಟಿದ್ದರೆ, ಅಥವಾ ಹಸ್ತಕ್ಷೇಪವನ್ನು ಅಧಿಕಾರಿಗಳಿಂದ ಮಾಡದೇ ಇದ್ದಿದ್ದರೆ, ಪ್ರಜಾಪ್ರಭುತ್ವದಲ್ಲಿ ಜನಗಳೇ ಅವರಿಗೆ ಬೇಕಾದಂಥವರನ್ನು ಆರಿಸಿಕೊಳ್ಳುತ್ತಿದ್ದರು. ಆ ಪ್ರಕಾರವೇ ಆಡಳಿತವನ್ನು ಮಾಡುತ್ತಿದ್ದರು. ಯಾವುದೇ ಒಂದು ಗ್ರೂಪ್ ಅಥವಾ ಗುಂಪು ಬೆಳೆಯಬೇಕೆಂಬ ದೃಷ್ಟಿಯಿಂದ ಅದಕ್ಕೊಂದು ತಳಹದಿ ಹಾಕಿ ಕೆಲವು ಕಡೆಗಳಲ್ಲಿ ಒಳ್ಳೆಯ ಜನರು ಆರಿಸಿ ಬಾರದೇ ಇರುವ ರೀತಿಯಲ್ಲಿ ಅವರ ಅರ್ಜಿಗಳನ್ನು ವಜಾಮಾಡಿದ್ದಾರೆ. ಇದು ಅವರಿಗೆ ಆಶ್ಚರ್ಯವಾಗಬಹುದು. ಕೆಲವು ಕಡೆಗಳಲ್ಲಿ ಫೋರ್ಜರಿ ಮಾಡು ತ್ತಿದ್ದಾರೆ. ನನ್ನ ಉಮೇದುವಾರಿಕೆಯನ್ನು ವಾಪಸ್ಸು ತೆಗೆದುಕೊಂಡಿದ್ದೇನೆಂದು ಹೇಳಿದರೂ ಕೆಲವು ಕಡೆಗಳಲ್ಲಿ ಅರ್ಜಿಯೇ ಕೊಟ್ಟಿರುವುದಿಲ್ಲ. ಅಭ್ಯರ್ಥಿಗಳ ಹೆಸರಿನಲ್ಲಿ ಹೆಬ್ಬೆಟ್ಟು ಗುರುತು ಹಾಕಿಸಿದ್ದಾರೆ. ಅರ್ಜಿಗಳನ್ನು ವಾಪಸ್ಸು ತೆಗೆದುಕೊಂಡು ತಮಗೆ ಬೇಕಾದವರನ್ನು ಅಲ್ಲಿ ನಿಲ್ಲಿಸಿ ದ್ದಾರೆ. ಮಹತ್ವವಾದಂಥ ಇಂಡಿಯನ್ ಪೀನಲ್ ಕೋಡ್‌ನ ಸೆಕ್ಷನ್ನನ್ನೂ ಕೂಡ ತಮ್ಮ ಅಧಿಕಾರಿ ಗಳಿಂದ ಮೀರಿಸಿ ನಡೆದಿದ್ದಾರೆ. ಅಲ್ಲಿ ಸಣ್ಣ ಸಣ್ಣ ಅಧಿಕಾರಿಗಳು ಮತ್ತು ಅವರ ಮೇಲೆ ಇರತಕ್ಕ ದೊಡ್ಡ ದೊಡ್ಡ ಅಧಿಕಾರಿಗಳಿದ್ದರೂ, ಅಲ್ಲಿರತಕ್ಕ ಸ್ಥಳೀಯ ಕಾಂಗ್ರೆಸ್ ಮುಖಂಡರ ಒತ್ತಡದಿಂದ ಆ ರೀತಿ ಮಾಡಿ ಇವತ್ತು ಕೆಲವು ಕಡೆಗಳಲ್ಲಿ ನಿಷ್ಪಕ್ಷಪಾತವಾಗಿ ಚುನಾವಣೆಯಾಗದ ರೀತಿಯಲ್ಲಿ ತಡೆ ಹಿಡಿದಿದ್ದಾರೆ. ಇನ್ನು ಕೆಲವು ಕಡೆಗಳಲ್ಲಿ ಈ ಗ್ರಾಮ ಪಂಚಾಯತಿ ಚುನಾವಣೆಗಳಲ್ಲಿ ಅತಿ ಮುಖ್ಯ ವಾಗಿ ಆಗಿರತಕ್ಕ ಅನ್ಯಾಯಗಳು ಅಂದರೆ, ಅಲ್ಲಲ್ಲಿ ಗ್ರೂಪ್‌ಗಳನ್ನು ಮಾಡುವುದು ಬಹು ಮುಖ್ಯ ವಾದಂಥಾದ್ದು. ಒಂದೇ ಹಳ್ಳಿಯಲ್ಲಿ ಈಶಾನ್ಯ ದಿಕ್ಕಿನಲ್ಲಿ ಒಂದು ಗ್ರೂಪ್, ವಾಯುವ್ಯ ದಿಕ್ಕಿನಲ್ಲಿ ಒಂದು ಗ್ರೂಪ್, ಇನ್ನೊಂದು ಮೂಲೆಯಲ್ಲಿ ಇನ್ನೊಂದು ಗ್ರೂಪ್, ಈ ಮಧ್ಯ ಮತ್ತೊಂದು ಮೂಲೆ ಯಲ್ಲಿ ಬರೀ ಮನೆಗಳನ್ನು ಆರಿಸಿಕೊಂಡು ಅಲ್ಲಿಯೇ ಗ್ರೂಪ್‌ಗಳನ್ನು ಮಾಡಿರುವ ನಿದರ್ಶನಗಳು ಬೇಕಾದಷ್ಟು ಇವೆ. ಇದರ ಬಗ್ಗೆ ನಮ್ಮ ಹೈಕೋರ್ಟಿನಲ್ಲಿ 340 ರಿಟ್ ಅರ್ಜಿಗಳು ಬಿದ್ದಿವೆ ಎಂಬು ದಾಗಿ ಕೇಳಿದ್ದೇನೆ. ಇವರ ಮೇಲೆ ಜನಗಳ ಅಪಾದನೆಗಳನ್ನು ಮತ್ತು ಅಫಿಡವಿಟ್‌ಗಳನ್ನು ಹಾಕಿ ದ್ದಾರೆ. ಇಂತಹ ಮಹನೀಯರುಗಳು ಕಾಂಗ್ರೆಸ್ಸಿನವರಿಗೆ ಓಟು ಕೊಟ್ಟಿಲ್ಲವೆಂದು ನಮ್ಮನ್ನು ಸೋಲಿಸಬೇಕೆಂಬ ದೃಷ್ಟಿಯಿಂದ ಈ ರೀತಿಯಾಗಿ ಹಸ್ತಕ್ಷೇಪಗಳನ್ನು ಮಾಡಿದ್ದಾರೆಂದು ಪ್ರಮಾಣ ಪತ್ರಗಳನ್ನೂ ಮತ್ತು ಅಫಿಡವಿಟ್ಟುಗಳನ್ನೂ ಹೈಕೋರ್ಟಿನಲ್ಲಿ ಅನೇಕರು ಕೊಟ್ಟಿದ್ದಾರೆ. ಅದು ಏನು ತೋರಿಸುತ್ತದೆ, ಆ ವಿಷಯ ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. The Divisional Commissioner is the final authority for the formation of this ಎಂಬುದು. ಒಂದು ಗ್ರಾಮದಲ್ಲಿ ಮೊದಲು ಡಿವಿಜನಲ್ ಕಮಿಷನರ್ ಒಂದು ಫೈನಲ್ ಆರ್ಡರ್ ಮಾಡಿದ್ದರೂ, ಇವರು

(ಶ್ರೀ ಎಚ್. ಸಿದ್ಧವೀರಪ್ಪ)

ಬರುವುದಿಲ್ಲವೆಂದು ಗೊತ್ತಾದಮೇಲೆ ಇವರು ಹಸ್ತಕ್ಷೇಪಮಾಡುವುದಿಲ್ಲವೆಂದು ಹೇಳಿದರು. ನನ್ನ ಆರ್ಡರ್ ಆಗಿದೆ, ಯಾರೇನೂ ಮಾಡುವುದಿಲ್ಲ, ಇವರಿಗೆ ಅಧಿಕಾರವಿಲ್ಲದಿದ್ದರೂ ಮತ್ತೆ ರಿವೈಸ್ ಮಾಡಿ ಆರ್ಡರ್ ಕೊಟ್ಟಿದ್ದಾರೆಂದು ಮಂತ್ರಿಗಳು ಹೇಳುತ್ತಾರೆ. ಆ ಮಾತು ಸುಳ್ಳು. ಬೇಕಾದರೆ ಗ್ರಾಮದ ಹೆಸರು, ಯಾವ ತಾರೀಖು ಎಲ್ಲವನ್ನೂ ಇಲ್ಲಿ ಹೇಳಿ ರುಜುವಾತುಮಾಡುತ್ತೇನೆ. ಈಗಾಗಲೇ ನನ್ನ ಕ್ಷೇತ್ರಕ್ಕೆ ಹೋಗಿ ಬಂದಿರುವ ಕಾರಣ, ನನಗನ್ನಿಸುತ್ತದೆ. ಅನೇಕ ಗ್ರಾಮಗಳಲ್ಲಿ ಚುನಾವಣೆ ನಡೆಯಬೇಕಾದರೆ ತಮ್ಮ ಕಡೆಯವರಿಗೆ ಓಟು ಬರುವುದಿಲ್ಲವೆಂದು ಕಂಡಾಗ, ನಾಳೆ ಬೆಳಿಗ್ಗೆ ಚುನಾವಣೆ ಅಂದರೆ, ಇವತ್ತು ರಾತ್ರಿಯೇ ಬಣವೆಗಳಿಗೆ ಬೆಂಕಿ ಹಚ್ಚಿದ್ದಾರೆ. ಇವರಿಗೆ ಬೇಕಾದಂಥ ಅಧಿಕಾರಿಗಳನ್ನು ಅಲ್ಲಿಯೇ ಇಟ್ಟುಕೊಂಡಿದ್ದಾರೆ. ಯಾರ್ಯಾರು ಸಾರ್ವತ್ರಿಕ ಚುನಾವಣೆಯಲ್ಲಿ ಇವರಿಗೆ ಸಹಾಯಮಾಡಿದ್ದರೋ ಅಂತಹ ಅಧಿಕಾರಿಗಳನ್ನು ಅಲ್ಲಿಯೇ ಇಟ್ಟುಕೊಂಡಿದ್ದಾರೆ. ಅಂತಹವರನ್ನೂ ಕೂಡ ಇದುವರೆಗೆ ಎಲ್ಲಿಗೂ ವರ್ಗಮಾಡಿಲ್ಲ. ಅವರಿಂದ ಮಾಡಬೇಕಾದ ಕೆಲಸಗಳನ್ನು ಮಾಡಿಸುತ್ತಿದ್ದಾರೆ, ಬಹುಶಃ ಎಲ್ಲಾ ಜಿಲ್ಲೆಗಳಲ್ಲಿಯೂ ಈ ರೀತಿಯೇ ನಡೆದಿದೆಯೆಂದು ನಾನು ಹೇಳಬಹುದು. ಹೀಗೆಯೇ ಮಾಡುತ್ತಿದ್ದರೆ, ನಾನು ಹೇಳುತ್ತೇನೆ, ಸಾರ್ವತ್ರಿಕ ಚುನಾವಣೆ ಏನಾದರೂ ವಿಲೇಜ್ ಪಂಚಾಯಿತಿ ಚುನಾವಣೆಯಾದನಂತರ ಆಗಿದ್ದರೆ, ನಿಜವಾಗಿ ಇವರು ಈ ಪ್ರಮಾಣದಲ್ಲಿ ಈ ಅಧಿಕಾರದಲ್ಲಿ ಇರುತ್ತಿರಲಿಲ್ಲವೆಂದು. 127 ಅಲ್ಲ, ಅದರಲ್ಲಿ ಅರ್ಧ ಕೂಡ ಬರುತ್ತಿದ್ದರೋ ಇಲ್ಲವೋ ಎಂದು ಹೇಳಬಹುದು. ಅಷ್ಟೊಂದು ಹಸ್ತಕ್ಷೇಪ ಮಾಡುತ್ತಿದ್ದಾರೆ.

[Mr. DEPUTY SPEAKER in the Chair]

ಸಾರ್ವತ್ರಿಕ ಚುನಾವಣೆಗೆ ಮುಂಚೆ ಗ್ರಾಮಪಂಚಾಯತಿಗಳ ಚುನಾವಣೆಯಾಗದೆ ಈ ರೀತಿ ಮಾಡುತ್ತಿದ್ದಾರೆ. ಈ ರೀತಿ ಪಾಪ ಮಾಡಬೇಡಿ. ಈಗ ಮಾಡಿದ್ದು ಆಯಿತು, ಇನ್ನುಮುಂದೆ ಮಾಡಬೇಡಿ ಎಂದು ನಾನು ಈ ಪ್ರಜಾಪ್ರಭುತ್ವದ ಉಳಿಗಾಲದ ದೃಷ್ಟಿಯಿಂದ ಹೇಳುತ್ತಿದ್ದೇನೆ. ಅಧಿಕಾರಿಗಳ ಹಸ್ತಕ್ಷೇಪವನ್ನೂ ಸಹ ಕೂಡಲೇ ನಿಲ್ಲಿಸಬೇಕು. ಈ ವಿಚಾರವಾಗಿ ಹೆಚ್ಚಿಗೆ ಹೇಳಲು ಕಾಲಾವಕಾಶವಿಲ್ಲ. ಈ ಪ್ರಕರಣವನ್ನು ಇಲ್ಲಿಗೆ ಮುಗಿಸುತ್ತೇನೆ.

ಇನ್ನು ಸಹಕಾರ ಸಂಘಗಳ ವಿಚಾರದಲ್ಲಿ ನನಗೆ ಬಹಳ ಪ್ರಿಯವಾದಂಥಾದ್ದು ಅಂದರೆ ರೆಗ್ಯುಲೇಟೆಡ್ ಮಾರ್ಕೆಟ್. ಈ ರೆಗ್ಯುಲೇಟೆಡ್ ಮಾರ್ಕೆಟ್ಟಿಗೋಸ್ಕರ ನಮ್ಮ ರೈತ ಬೆಳೆದಂಥ ಫಸಲಿಗೆ ಅನ್ಯಾಯವಾಗದ ರೀತಿಯಲ್ಲಿ ಧಾರಣೆ ಮಾಡಿಕೊಟ್ಟರೆ, ಮಾನ್ಯ ಶ್ರೀ ನಾಡಗೌಡರ ಪುತ್ಥಳಿಯನ್ನು ಎಲ್ಲಾ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿಯೂ ಇಡಲಾಗುವುದು. ನಿಮ್ಮಲ್ಲಿ ಆ ಶಕ್ತಿ ಇದೆಯೇ ? ಹೆಸರಿಗೆ ಮಾತ್ರ ರೆಗ್ಯುಲೇಟೆಡ್ ಮಾರ್ಕೆಟ್ ಮಾಡಿದ್ದೇವೆ ಎಂದು ತೋರಿಸುತ್ತೀರಿ. ಅದನ್ನು ಜಾರಿಗೆ ಕೊಡುವಾಗ ತಿಣಿಕಿ ತಿಣಿಕಿ ಮಾಡುತ್ತಿದ್ದೀರಿ. ಇಂತಹ ಅಕ್ಟ್ ಹಿಂದೂಸ್ಥಾನದಲ್ಲಿ ಎಲ್ಲಿಯೂ ಇಲ್ಲ, ಬಹಳ ಅತ್ಯುತ್ತಮವಾದಂಥ ಕಾನೂನನ್ನು ಮಾಡಿದ್ದೀರಿ. ಆದರೆ ಅದನ್ನು ಜಾರಿಗೆ ಕೊಡುವ ಧೈರ್ಯ ಇವರಿಗೆ ಇಲ್ಲ. ಪುಕ್ಕಲು ಮನಸ್ಸು. ನಿಜವಾಗಿ ನಿಮಗೆ ಅದನ್ನು ಜಾರಿಗೆ ಕೊಡುವ ಶಕ್ತಿ ಇಲ್ಲ. ಏನೋ ಇನ್ನೂ ರೂಲ್ಸ್ ಮಾಡಬೇಕೆಂದು ಹೇಳುತ್ತೀರಿ. ಅಂತೂ ಏನೋ ಮಾಡಿ ದಾವಣಗೆರೆ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯನ್ನು ರಚನೆಮಾಡಿದ್ದೀರಿ. Better late than never.

Sri P. M. NADGOUDA.—You should congratulate the Government on the constitution of the Davangere Regulated Market Committee. ನಿಮ್ಮ ಕ್ಷೇತ್ರದಲ್ಲಿ ಮಾಡಿದ್ದನ್ನು ಒಂದನ್ನಾದರೂ ಕ್ವೋಟ್ ಮಾಡಿದಿರಿ.

ಶ್ರೀ ಎಚ್. ಸಿದ್ಧವೀರಪ್ಪ.—ಹಿಂದೆ ಏನು ಮಾಡಿದ್ದರೋ ಅದನ್ನೇ ನೀವು ಮಾಡಿದ್ದೀರಿ. ಹೊಸದಾಗಿ ಏನಾದರೂ ಮಾಡಿದ್ದರೆ, ಅದನ್ನು ನಾನು ಆತ್ಮೀಯತೆಯಿಂದ ವಂದಿಸುತ್ತಿದ್ದೆನು. ಈ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಒಬ್ಬ ಸದಸ್ಯರನ್ನು ನಾಮಕರಣ ಮಾಡಿದ್ದೀರಿ. ಒಬ್ಬ ವರ್ತಕರನ್ನು ನಾಮಕರಣ ಮಾಡಿದ್ದೀರಿ. 5 ಜನರು ಪ್ರತಿನಿಧಿಗಳು ಇದ್ದಾರೆ. ಯಾವ ಸ್ಪೆಷಲ್ ಅರ್ಹತೆ ಇದೆಯೆಂದು ಮತ್ತೊಬ್ಬರನ್ನು ನಾಮಕರಣಮಾಡಿದ್ದೀರಿ ? ಮಾನ್ಯ ಶ್ರೀ ವಿ. ಎಲ್. ಶಿವಪ್ಪನವರು ತಿಪಟೂರಿನಿಂದ ಬಂದಿರತಕ್ಕ ಸದಸ್ಯರು. ಅವರಿಗೆ ಇದರ ಸೆಕೆ ಬಹಳ ಗೊತ್ತು. ಯಾರಿಗೋ ನಾಮಕರಣ ಮಾಡಬೇಕೆಂಬ ಅಭಿಪ್ರಾಯ ನಿಮಗೆ ಇರಬೇಕು. ಅವರನ್ನು ಮಾಡದೇ ನಿಮಗೆ

ಬೇಕಾದಂಥವರಿಗೆ ನಾಮಕರಣ ಮಾಡಿದ್ದರೂ ನಿಮ್ಮದು ಏನೂ ನಡೆಯುತ್ತಾ ಇಲ್ಲ. ರೈತರು ಬಹಳ ಬಲವಾಗಿದ್ದಾರೆ. ಇನ್ನೂ ಕೆಲವು ಕಾಲ ಬೇಕು. ಇದುವರೆಗೆ ಯಾರು ಹತ್ತಿಕ್ಕಿದ್ದರೂ ಅದನ್ನು ತಪ್ಪಿಸಿಕೊಂಡು ಇರುತ್ತಿದ್ದಿರಿ. ಈಗಾಗಲೇ 100 ಅಡಿ ಮೇಲಕ್ಕೆ ಹಾರಿ ನಿಮ್ಮನ್ನು ಜಿಗುಟುವ ಶಕ್ತಿ ನಮ್ಮ ರೈತರಿಗೆ ಬರುತ್ತಾ ಇದೆ. ನಿಜವಾಗಿ ನಾವು ಅದನ್ನು ತಡೆದು ನಿಲ್ಲಿಸುತ್ತಿದ್ದೇವೆ. ತಿಪಟೂರಿನ ರೆಗ್ಯುಲೇಟೆಡ್ ಮಾರ್ಕೆಟ್ಟಿನಲ್ಲಿ ಅಧಿಕಾರಿಗಳ ಸಂಬಳವನ್ನು ನಿಮ್ಮ ಮನಸ್ಸಿಗೆ ಬಂದ ರೀತಿಯಲ್ಲಿ ಏರಿಸಿದ್ದೀರಿ. 125 ರಿಂದ 600ರ ವರೆಗೆ ಸಂಬಳ ಸಾರಿಗೆ ಇದ್ದರೆ 13-3-67ರಲ್ಲಿ ಅವರ ಅವಧಿ ಮುಗಿದಿದ್ದರೂ 11-3-67 ರಿಂದ 600 ರೂಪಾಯಿಗಳ ಸಂಬಳವನ್ನು ಕೊಡುತ್ತಿದ್ದೀರಿ ಇದಕ್ಕೆ ಕಾರಣವೇನೆಂದರೆ, ಅಲ್ಲಿನ ಅಧಿಕಾರಿಗಳು ನಿಮಗೆ ಬೆಂಬಲ ಕೊಡಲಿ ಎಂದು ಆ ರೀತಿ ಮಾಡುತ್ತಿದ್ದೀರಿ. ನಮ್ಮ ಅಧಿಕಾರಿಗಳು ಇಂತಹ ಅನ್ಯಾಯವನ್ನು ಮಾಡುವುದಕ್ಕಾಗುವುದಿಲ್ಲ. ಇದಕ್ಕೆ ಕಾರಣವೇನು ಹೇಳುತ್ತೇನೆಂದರೆ, ಆ ಪಾಪವನ್ನು ಅವರ ಕೈನಲಿ ಮಾಡಿಸುತ್ತಿದ್ದೀರಿ ಅವರಿಂದ ನಿಮಗೆ ಶಾಬಾಸಗಿರಿ ಬೇಕು, ನಿಮ್ಮ ಶಿಫಾರಸು ಇರುತ್ತದೆ. ಮಾನ್ಯ ಶ್ರೀ ಚಿಕ್ಕೇಗೌಡರು ವಿಜಿಲೆನ್ಸ್ ಕಮಿಷನ್ ಬಗ್ಗೆ ಒಂದು ದೂರನ್ನು ಕೊಟ್ಟಿದ್ದಾರೆ. ಅದನ್ನು ಮುಚ್ಚಿಸಬೇಕಾದರೆ ನಿಮಗೆ ಸೆಕ್ರೆಟರಿ ಸಹಾಯ ಬೇಕು. ಅದನ್ನು ಮಾಡುವುದು ಸರಿಯೇ? ಇವರಿಗೆ ಇರತಕ್ಕ ಅಧಿಕಾರವನ್ನು ಮೊಟಕು ಮಾಡಕೂಡದು. ಆ ರೀತಿಯಾಗಿ ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯಲ್ಲಿ ಅನ್ಯಾಯ ಮಾಡಿದೆ. ಅದರಿಂದ ಅಲ್ಲಿ ಬಹಳ ಬದಲಾವಣೆಗಳು ಆಗಬೇಕಾಗಿವೆ. ಇವತ್ತಿನವರೆಗೂ ಒಂದು ಕ್ವಿಂಟಾಲಿಗೆ 5—6 ಕೆ. ಜಿ. ಹತ್ತಿಯನ್ನು ಎಕ್ಸ್‌ಟ್ರಾ ಹಾಕಿಕೊಳ್ಳುತ್ತಿದಾರೆ ಅದಕ್ಕೆ ಬೆಲೆ ಎಷ್ಟು ಗೊತ್ತಿದೆಯೇ? ಪ್ರತಿ ವರ್ಷಕ್ಕೆ 6 ಕೋಟಿ ರೂಪಾಯಿಗಳ ದಾಸ್ತಾನು ಆಗುತ್ತಿದೆ. ಇದರಲ್ಲಿ ರೈತರ ದುಡ್ಡು ವರ್ಷಕ್ಕೆ 50 ಲಕ್ಷ ರೂಪಾಯಿಗಳು ಪೋಲಾಗುವುದನ್ನು ಕೂಡಲೇ ನಿಲ್ಲಿಸಬೇಕು. ಆ ಕೆಲಸವನ್ನು ಮಂತ್ರಿಗಳು ಜಾಗ್ರತೆಯಾಗಿ ಮಾಡುತ್ತಾರೆಂದು ನಾನು ನಂಬುತ್ತೇನೆ. ಇನ್ನು ಹೆಚ್ಚಿಗೆ ಈ ವಿಚಾರದಲ್ಲಿ ಹೇಳಲು ನನಗೆ ಅವಕಾಶ ಇರುವುದಿಲ್ಲ.

ಇನ್ನು ಸಹಕಾರ ಸಂಘಗಳ ವಿಚಾರವಾಗಿ ನಮ್ಮ ಮಾನ್ಯ ಸ್ನೇಹಿತರು ಹೇಳಿದ್ದಾರೆ. ನಿಮ್ಮ ಗಮನಕ್ಕೂ ಒಂದೆರಡು ವಿಷಯಗಳನ್ನೂ ತರುತ್ತೇನೆ. ಸಹಕಾರ ಸಂಘಗಳ ಪರಿಸ್ಥಿತಿ ಹೇಗಾಗಿದೆ ಎಂದರೆ ಯಾರು ಯಾರೋ ಕಲ್ಪನೇ ಇಲ್ಲದೇ ಇರತಕ್ಕಂಥ ಸಹಕಾರ ಸಂಘಗಳನ್ನು ಮಾಡಿಕೊಂಡು ನಿಮ್ಮ ಕೈಯಿಂದ ಹಣವನ್ನು ಕಸಿದುಕೊಳ್ಳಲು ಬಂದಿದ್ದಾರೆ. ನಮ್ಮ ಸ್ನೇಹಿತರಾದ ಬಳ್ಳಾರಿ ಜಿಲ್ಲೆಯವರು ನಮಗೆ ವಾಸ್ತವವಾದ ಅಂಕಿಸಂಖ್ಯೆಗಳನ್ನು ಕೊಟ್ಟರು, ಸರ್ಕಾರಕ್ಕೂ ಬರೆದರು. ಮುಖ್ಯ ಮಂತ್ರಿಗಳಿಗೂ ಬರೆದೆವು, ಯಾರೂ ವಿಚಾರಣೆ ಮಾಡುವುದಿಲ್ಲ ಎಂದು ತಿಳಿಸಿದ್ದಾರೆ. ಬಳ್ಳಾರಿ ಡಿಸ್ಟ್ರಿಕ್ಟ್ ಮೈನ್ ಓನರ್ಸ್ ಕೋ ಆಪರೇಟಿವ್ ಸೊಸೈಟಿ ವಿಚಾರ ಕೇಳಿದರೆ ನಗು ಬರುತ್ತದೆ. ಅವರು ಕ್ಯಾಪಿಟಲಿಸ್ಟ್ ಕ್ಲಾಸ್. ಅವರಿಗೆ ಬ್ಯಾಂಕುಗಳಲ್ಲಿ ಲಕ್ಷಗಟ್ಟಲೆ ದುಡ್ಡು ಕೊಡುತ್ತಾರೆ. ಅವರು ಏತಕ್ಕೆ ಸಹಕಾರ ಸಂಘ ಮಾಡಿದ್ದಾರೆ? ಅಂತಹ ಸಂಘಕ್ಕೆ 27-28 ಲಕ್ಷ ಚಿಲ್ಲರೆ ರೂಪಾಯಿಗಳನ್ನು ಕೊಟ್ಟಿದ್ದೀರಿ. 1963 ನೇ ಇಸವಿಯಲ್ಲಿ ಆಡಿಟ್ ರಿಪೋರ್ಟ್ ಕೊಟ್ಟಿದ್ದಾರೆ. ಅಲ್ಲಿ ಏನು ಅನ್ಯಾಯ ನಡೆಯುತ್ತಾ ಇದೆ ಎಂದು ನಮಗೆ ತಿಳಿಸಿದ್ದಾರೆ. ಒಬ್ಬ ಮಾನ್ಯ ಸದಸ್ಯರಾದ ಎಂ.ಎಲ್.ಎ. ಅವರು ಬಳ್ಳಾರಿ ಜಿಲ್ಲೆಯ ಪ್ರಮುಖರುಗಳು ಸೇರಿ ಅರ್ಜಿ ಬರೆದಿದ್ದಾರೆ. ವಿವರ ಕೊಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಸದಸ್ಯರುಗಳು ಮಾತನಾಡುವವರು ಇದ್ದಾರೆ. ಇವನ್ನು ನೋಡಿದರೆ ಯಾವುದಾದರೂ ದುಡ್ಡು ಹೊಡೆಯಬೇಕು ಎಂದರೆ ಸಹಕಾರ ಸಂಘದಿಂದ ಮಾಡಬೇಕು ಬೇರೆ ಇನ್ನಾವ ದಾರಿಯೂ ಬೇಕಿಲ್ಲ. ನಾನು ಹಿಂದೆ ಹೇಳಿದಹಾಗೆ ಅಲಿಬಾಬ ಮತ್ತು 40 ಕಳ್ಳರು ಇದಕ್ಕೆ ಹೋಲಿಕೆಯಾಗುತ್ತಿದೆ. ಸಹಕಾರ ಸಂಘಗಳಲ್ಲಿ ಕೋಟಿ ಕೋಟಿ ದುಡ್ಡು ಲುಕ್ಸಾನು ಆಗಿದೆ. ನಿಮಗೆ ಹಿಡಿಯುವ ಶಕ್ತಿ ಇಲ್ಲ, ಅವರನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ, ಮನೆ ಕಟ್ಟಿರುವುದಿಲ್ಲ, ಮನೆ ಕಟ್ಟಿದ್ದೇವೆ ಎಂದು 10-15 ವರ್ಷ ಇದ್ದನಾಳೇ ಮನೆಗಳಿಗೆ 1 ಲಕ್ಷ, 2 ಲಕ್ಷ ತೆಗೆದುಕೊಂಡಿದ್ದಾರೆ. ಕೆಟ್ಟ ಸೊಸೈಟಿಗಳೂ ಇವೆ. ಎಲ್ಲಾ ಕೆಟ್ಟದ್ದು ಆಗಿದ್ದರೆ ದೇಶವೇ ಉಳಿಯುವುದಿಲ್ಲ. ಆದರೆ ಕೆಟ್ಟ ಸಂಘಗಳನ್ನು ಜಾಸ್ತಿ ಮಾಡದೇ ಇರುವ ಅಧಿಕಾರ ನಿಮ್ಮ ಕೈಯಲ್ಲಿ ಇದೆ. ಸಹಕಾರ ಸಂಘಗಳು ಸ್ವಯಂಪ್ರೇರಿತವಾಗಿ ವಾಲಂಟೀರ್ ಆಗಿ ಬರುತ್ತವೆ. 100 ರೂಪಾಯಿ ಷೇರು ಮಾಡಿದರೆ ಸಾಕು. ಅವರಿಗೆ ಲಕ್ಷರೂಪಾಯಿ ಕೊಡುವುದಕ್ಕೆ ಹೊರಟಿದ್ದೀರಿ. ಇದು ನಮ್ಮ ದುರ್ದೈವ. ಎಲ್ಲಿ ದುಡ್ಡು ಬಿಟ್ಟಿ ಸಿಕ್ಕುತ್ತದೋ ಅಲ್ಲಿ ಏನೇನೋ ನೆಪ ಹಾಕಿಕೊಂಡು ಬರುತ್ತಾರೆ. ಅದನ್ನು ನಿಮಗೆ ಪ್ಲಗ್ ಮಾಡುವುದಕ್ಕಾಗುವುದಿಲ್ಲ. ನೀವು ಕೊಟ್ಟ ದುಡ್ಡಿನಲ್ಲಿ 50 ಪರ್ಸೆಂಟು ರೈಟ್ ಆಫ್ ಮಾಡಬೇಕಾಗುತ್ತದೆ. ಅವರ ಹತ್ತಿರ ಹೋದರೆ ಏನೂ ಇರುವುದಿಲ್ಲ. ಅವರಿಗೆ ಕೊಡುವುದಕ್ಕೆ ಯಾವ ಆಧಾರ ಇದೆ. ಈ ರೀತಿ ಅನ್ಯಾಯವಾಗುತ್ತಾ ಇದೆ. ಇದಕ್ಕೆ ನೀವೇ ಕಾರಣರು. ಇದನ್ನು ನಿಲ್ಲಿಸಬೇಕು ಎಂದು ಹೇಳುತ್ತೇನೆ.

(ಶ್ರೀ ಎಚ್. ಸಿದ್ಧವೀರಪ್ಪ)

ಇನ್ನು ಕಮ್ಯೂನಿಟಿ ಡೆವಲಪ್‌ಮೆಂಟ್ ಮತ್ತು ಎನ್. ಇ. ಎಸ್. ವಿಚಾರ ಇದರಲ್ಲಿ ಒಂದು ಮಾತನ್ನು ಅವಶ್ಯಕವಾಗಿ ಹೇಳಬೇಕಾಗಿದೆ. ಅಡ್ಮಿನಿಸ್ಟ್ರೇಟೀವ್ ರೀಫಾರಂಸ್ ಕಮೀಷನ್ನಿನವರು ಚೆನ್ನಾಗಿ ಯೋಚನೆ ಮಾಡಿ ಇದನ್ನು ವಜಾ ಮಾಡಿ ಎಂದು ಹೇಳಿದ್ದಾರೆ. ಇದು ದೇಶದಲ್ಲಿ ಬೇಡ, ಇದರಂಥ ಪೀಡೆ ಬೇರೆ ಯಾವುದೂ ಇಲ್ಲ ಎಂದು ಹೇಳಿದ್ದಾರೆ. ಇದು ಮೊದಲು ಬಂದಾಗ ಕಾಮ ದೇನು ಕಲ್ಪವೃಕ್ಷದ ಹಾಗೆ ಬಂದು ಗ್ರಾಮಂತರ ಪ್ರದೇಶದಲ್ಲಿ ಹಾಲು ಹರಿಯುವ ರೀತಿ ಮಾಡು ತ್ತೇವೆ ಎಂದು ಹೇಳುತ್ತಾ ಇದ್ದರು. ಈಗ ಸರ್ಕಾರ ಸಿಬ್ಬಂದಿಯನ್ನು ಏನು ಇಟ್ಟುಕೊಂಡಿದ್ದಾರೋ ಅದು ಯಾವುದಕ್ಕೂ ಪ್ರಯೋಜನ ಇಲ್ಲ. 3 ಕೋಟಿ, 29 ಲಕ್ಷದ 29 ಸಾವಿರ ರೂಪಾಯಿನಲ್ಲಿ 2 ಕೋಟಿ ರೂಪಾಯಿನಷ್ಟು ಅವರ ಸಂಬಳಕ್ಕೆ ಹೋಗುತ್ತದೆ. ಇದರಲ್ಲಿ ಏನೂ ಅನುಮಾನ ಇಲ್ಲ. ಈ ಬಡ್ಜೆಟ್ಟನ್ನು ನೋಡಿದರೆ ಡೆವಲಪ್‌ಮೆಂಟ್ ವರ್ಕ್‌ಗೆ ಪ್ರಾವಿಷನ್ ಮಾಡಿಲ್ಲ. ಕೇಂದ್ರದಿಂದ ಬರಬೇಕು, ಅವರು ಕೊಟ್ಟರೆ ಹಂಚಬೇಕು, ನಮ್ಮ ಹತ್ತಿರ ದುಡ್ಡು ಇಲ್ಲ. ಸ್ಕೆಲಿಟನ್ ದುಡ್ಡು ಇಟ್ಟುಕೊಂಡಿದ್ದೀರಿ. ಇಲ್ಲಿ ಅಗತಕ್ಕ ಅನ್ಯಾಯ ಬೇಕಾದಷ್ಟು ಇದೆ. ನನ್ನ ಕ್ಷೇತ್ರದ ಉದಾಹ ರಣೆ ಹೇಳುತ್ತೇನೆ. ನಾನು ಒಂದು ವರ್ಷದಿಂದ ಮೆಂಬರ್ ಆಗಿದ್ದೇನೆ. ಅಲ್ಲಿರತಕ್ಕ ವ್ಯಕ್ತಿಯನ್ನು ಬಾರಯ್ಯ ಹಳ್ಳಿಯಲ್ಲಿ ನೋಡಿಕೊಂಡು ಬರೋಣ ಎಂದು ಕರೆದೆ. ಇವೊತ್ತಿನವರೆಗೂ ನನ್ನ ಜೊತೆ ಯಲ್ಲಿ ಬರಲಿಲ್ಲ. ಬೇಕಾದಷ್ಟು ಕಾಗದ ಬರೆದಿದ್ದೇನೆ. ನನ್ನ ಹತ್ತಿರ ರಿಪ್ಲೈಸ್ ಇದೆ. ಹಳ್ಳಿ ಗಳಲ್ಲಿ ಹೋಗಿ ಪರಿಸ್ಥಿತಿ ನೋಡೋಣ ಎಂದರೆ ನಮ್ಮ ಜೊತೆಗೆ ಬರುವುದಕ್ಕೆ ನಾಚಿಕೆ. ನಿಮ್ಮ ಪಾರ್ಟಿಯವರು ಹೇಳಿರುತ್ತಾರೆ ವಿರೋಧಪಕ್ಷದ ಜನರ ಜೊತೆಗೆ ಹೋಗಕೂಡದು ಎಂದು. ಶುಧ್ಧ ಅನ್ಯಾಯ. ಕಮ್ಯೂನಿಟಿ ಡೆವಲಪ್‌ಮೆಂಟ್‌ನಿಂದ ಏನು ಅನ್ಯಾಯವಾಗುತ್ತಿದೆ ಎನ್ನುವುದನ್ನು ಡಿಟೈಲ್ ಆಗಿ ಹೇಳಬೇಕಾಗಿಲ್ಲ. ಶ್ರೀಮಾನ್ ನಾಡಗೌಡರಿಗೆ ಸವಾಲು ಹಾಕುತ್ತೇನೆ. ನಿಮಗೆ ಮನವರಿಕೆ ಆಗಿದ್ದರೆ ಇವನ್ನು ಕೇಂದ್ರ ಸರ್ಕಾರಕ್ಕೆ ಬರೆದುಬಿಡಿ ಕಮ್ಯೂನಿಟಿ ಡೆವಲಪ್‌ಮೆಂಟ್ ನಮ್ಮ ರಾಜ್ಯದಲ್ಲಿ ತೆಗೆದುಹಾಕುತ್ತೇವೆ ಎಂದು. ಇದರಿಂದ ಪುಣ್ಯವೂ ಇಲ್ಲ, ಪುರುಷಾರ್ಥವೂ ಇಲ್ಲ. ಈ ರೀತಿ ಮಾಡಿದರೆ ಉಪಕಾರ ಮಾಡಿದಂತಾಗುತ್ತದೆ. ಇಲ್ಲಿ ಕಾಲು ಇಟ್ಟರೆ ಉಸುಬಿನಲ್ಲಿ ಹೂತು ಹೋಗುತ್ತದೆ. ಸ್ಟ್ರಾಂಗ್ ಫೌಂಡೇಷನ್ ಇಲ್ಲ. ನಿಮ್ಮ ಕಷ್ಟ ನೋಡಿದರೆ ಪಶ್ಚಾತ್ತಾಪ ಪಡಬೇಕಾಗುತ್ತದೆ. ಈ ಕಷ್ಟ ಬರಬಾರದಾಗಿತ್ತು. ನೇರವಾಗಿ ಜನಗಳ ಸಂಪರ್ಕ ಬರತಕ್ಕ ಖಾತೆ ಇಟ್ಟುಕೊಂಡಿದ್ದೀರಿ. ನಿಮಗೆ ಹುರುಪು ಬರಲಿ ಎಂದು ಕಟುವಾಗಿ ಟೀಕೆ ಮಾಡುತ್ತಿದ್ದೇವೆ. ನೀವು ಉತ್ತರ ಕರ್ನಾಟಕದ ಜನ. ನಿಮಗೆ ಹುರುಪು ಕೊಟ್ಟು ಏನಾದರೂ ಎಬ್ಬಿಸೋಣ ಎಂದು ಹೇಳುತ್ತಿದ್ದೇವೆ. ಎಬ್ಬಿಸಿದರೂ ಏಳಿ ಮಲಗಿಕೊಳ್ಳಬೇಕು ಎಂದರೆ ಮಲಗಿಕೊಳ್ಳಿ. ದಯವಿಟ್ಟು ಈ ಡಿಪಾರ್ಟ್‌ಮೆಂಟ್‌ನಲ್ಲಿ ಹೊಸ ನೀತಿಯನ್ನು ತಂದು ಹೊಸ ಆಡಳಿತ ತರಬೇಕಾದರೆ ಮೆಹನತ್‌ನಿಂದ ಕೆಲಸ ಮಾಡಲಿ ಎಂದು ಹೇಳಿ ನಾನು ಈ ಡಿಮ್ಯಾಂಡನ್ನು ವಿರೋಧಿಸುತ್ತೇನೆ.

† ಶ್ರೀ ಬಿ. ಎಲ್. ಗೌಡ (ಚಳ್ಳಕೆರೆ).—ಮಾನ್ಯ ಸಭಾಪತಿಗಳೇ, ಸಹಕಾರ ಮತ್ತು ಅಧಿವೃಧ್ಧಿ ಇಲಾಖೆಯ ಬೇಡಿಕೆಯನ್ನು ಸಮರ್ಥಿಸುತ್ತಾ ಒಂದೆರಡು ವಿಷಯಗಳನ್ನು ಹೇಳಲು ಬಯಸುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ತಾಲ್ಲೂಕು ಬೋರ್ಡುಗಳಿಗೂ ಗ್ರಾಮಪಂಚಾಯಿತಿಗಳಿಗೂ ಚುನಾವಣೆ ನಡೆದು 8 ವರ್ಷವಾಯಿತು. 8 ವರ್ಷವಾಯಿತು. 8 ವರ್ಷದ ಅನುಭವದಲ್ಲಿ ನನ್ನ ಅಭಿಪ್ರಾಯದಲ್ಲಿ ಸ್ಥಳೀಯ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ. ಅಧಿಕಾರ ವಿಕೇಂದ್ರಿಕರಣ ನಡೆದಿದೆ. ಒಟ್ಟಿನಲ್ಲಿ ಹೇಳುವುದಾದರೆ ಪ್ರಜಾಪ್ರಭುತ್ವಬುನಾದಿ ಸರಿಯಾಗಿ ಪಡೆದಿದೆ. ಈಗ ಮಾನ್ಯ ಹಿರಿಯ ಸ್ನೇಹಿತರಾದ ಶ್ರೀಮಾನ್ ಸಿದ್ಧವೀರಪ್ಪನವರು ಕಮ್ಯೂನಿಟಿ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳುತ್ತಾ ಇದು ಅನುಪಯೋಗ, ಇದರಲ್ಲಿರತಕ್ಕ ಅಧಿಕಾರಿಗಳಿಂದ ಪ್ರಯೋಜನ ಇಲ್ಲ ಎನ್ನುವ ಅರ್ಥ ಬರುವ ರೀತಿಯಲ್ಲಿ ಹೇಳಿದರು. ಅದು ನನಗೆ ವಿಷಾದವಾಗುತ್ತದೆ. ಕೆಲವರು ಆರೀತಿ ಇರ ಬಹುದು. ಒಟ್ಟಿನಲ್ಲಿ ಸಂಸ್ಥೆ ಬಹಳ ಚೆನ್ನಾಗಿ ಕೆಲಸ ಮಾಡಿದೆ. ಇವೊತ್ತಿನ ದಿವಸ ಧೈರ್ಯ ದಿಂದ ಹೇಳಿ. ಜನಗಳ ಬೇಡಿಕೆಗಳನ್ನು ಅಧಿಕಾರಿಗಳ ಗಮನಕ್ಕೆ ತರುವ ಶಕ್ತಿ ಉಂಟು ಮಾಡುವು ದಕ್ಕೆ ಸ್ಥಳೀಯ ಸಂಸ್ಥೆಗಳೇ ಮುಖ್ಯ ಕಾರಣ. ಎಂದು ಹೇಳುತ್ತೇನೆ. ಸ್ಥಳೀಯ ಸಂಸ್ಥೆಗಳನ್ನು ಹೆಚ್ಚು ಹೆಚ್ಚು ಬಲಪಡಿಸಿಕೊಳ್ಳಬೇಕೇ ಹೊರತು ಇದನ್ನು ತೆಗೆದು ಹಾಕಬೇಕಾಗಿಲ್ಲ.

ಇದೇ ರೀತಿ ಕಮ್ಯೂನಿಟಿ ಡೆವಲಪ್‌ಮೆಂಟ್ ವಿಷಯ. ಇದು ಚೆನ್ನಾಗಿ ಕೆಲಸ ನಡೆಯುತ್ತದೆ. ನಮ್ಮ ತಾಲ್ಲೂಕಿನ ಉದಾಹರಣೆ ಹೇಳಬೇಕಾದರೆ ಇಲ್ಲಿ ಸರಿಯಾಗಿ ಮಳೆ ಬರುವುದಿಲ್ಲ. ಆದುದರಿಂದ ಕುಡಿಯುವ ನೀರು ಇಲ್ಲ. ಇಲ್ಲಿಗೆ 7 ವರ್ಷಗಳ ಹಿಂದೆ ಕಮ್ಯೂನಿಟಿ ಡೆವಲಪ್‌ಮೆಂಟ್ ಬಂತು. ಇವೊತ್ತಿನ ದಿವಸದ ಚಿತ್ರ ನೋಡಿದರೆ 193 ಹಳ್ಳಿಗಳಲ್ಲೂ ಕುಡಿಯುವ ನೀರಿನ ಬಾವಿ ಇವೆ. ಒಂದು

ಬಾವಿ ಸಾಲದು ಎಂದು 300 ಕ್ಕೂ ಹೆಚ್ಚಿಗೆ ಇರತಕ್ಕಂಥ ಜನಸಂಖ್ಯೆಗೆ ಈಗಾಗಲೇ ಎರಡು ಬಾವಿಗಳನ್ನು ಕೊಟ್ಟಿದ್ದಾರೆ. ಸಾಮಾನ್ಯವಾಗಿ ಯಾವ ಊರಿಗಾದರೂ ಮೋಟಾರ್ ವಾಹನಗಳನ್ನು ಬಿಟ್ಟು ಕೊಂಡು ಹೋಗಬಹುದು. 8 ವರ್ಷದ ಹಿಂದೆ ಯಾವ ಹಳ್ಳಿಗಳಿಗೂ ಹೋಗದೇ ಇರತಕ್ಕಂಥ ಸನ್ನಿವೇಶ ಇತ್ತು. ಬೇಕಾದಷ್ಟು ಪಾಠಶಾಲೆಗಳನ್ನು ಮಾಡಿದ್ದಾರೆ. ಕಟ್ಟಡ ಕೊಟ್ಟಿದ್ದಾರೆ. ಒಟ್ಟಿನಲ್ಲಿ ಯಾರು ಯಾರಿಗೆ ಅಧಿಕಾರ ಇದೆಯೋ ಅವರು ಅಧಿಕಾರಿ ಇಲ್ಲದೇ ಇರುವವರನ್ನು ಬೇರೆ ದೃಷ್ಟಿಯಿಂದ ನೋಡುತ್ತಾರೆ. ವೈಯುಕ್ತಿಕವಾಗಿ ಮಾನ್ಯ ಸಿದ್ಧವೀರಪ್ಪನವರಿಗೆ ಹೇಳುತ್ತಾ ಇಲ್ಲ. ಯಾರಿಗೆ ತಾಲ್ಲೂಕು ಬೋರ್ಡ್‌ನಲ್ಲಿ ಅಧಿಕಾರ ಇಲ್ಲವೋ ಅವರ ದೃಷ್ಟಿಯಲ್ಲಿ ತಾಲ್ಲೂಕು ಬೋರ್ಡ್ ಚೆನ್ನಾಗಿ ಕೆಲಸ ಮಾಡುತ್ತಾ ಇಲ್ಲ ಎಂದು ಹೇಳುತ್ತಿದ್ದಾರೆ. ಬಡಪಾಯಿ ಒಬ್ಬ ಬಿ. ಡಿ. ಒ. ಎಷ್ಟು ಜನರನ್ನು ತನ್ನ ಜೀಪಿನಲ್ಲಿ ಕರೆದುಕೊಂಡು ಹೋಗುವುದಕ್ಕೆ ಸಾಧ್ಯ. ರಾಜ್ಯದಲ್ಲಿರುವ ಪ್ರತಿಯೊಬ್ಬರನ್ನೂ ಕರೆದುಕೊಂಡು ಹೋಗುವುದಕ್ಕೆ ಕಷ್ಟವಾಗುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಕಮ್ಯೂನಿಟಿ ಡೆವಲಪ್‌ಮೆಂಟ್ ಸ್ಥಳೀಯ ಸಂಸ್ಥೆಗಳು ಬಹಳ ಚೆನ್ನಾಗಿ ಕೆಲಸ ಮಾಡಿವೆ. ಇವನ್ನು ಭದ್ರಪಡಿಸಬೇಕು ಇದೂ ಅಲ್ಲದೆ ಕೇಂದ್ರ ಸರ್ಕಾರದವರು ಇದನ್ನು ಮುಂದುವರಿಸಬೇಕು ಎನ್ನುವ ತೀರ್ಮಾನವನ್ನು ತೆಗೆದುಕೊಂಡಿದ್ದಾರೆ. ಹೆಚ್ಚು ಹೆಚ್ಚು ಹಣ ಒದಗಿಸಿ ಬಲಪಡಿಸಬೇಕು ಎಂದು ಒತ್ತಾಯ ಮಾಡುತ್ತೇನೆ.

ತಾಲ್ಲೂಕು ಬೋರ್ಡ್ ಚುನಾವಣೆ ಇನ್ನೂ ಮಾಡಿಲ್ಲ. ಪಂಚಾಯಿತಿ ಚುನಾವಣೆ ಮಾಡಿದ್ದಾರೆ. ಶೀಘ್ರವಾಗಿ ತಾಲ್ಲೂಕು ಬೋರ್ಡ್ ಚುನಾವಣೆ ನಡೆಸಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಬಹಳ ದಿವಸ ಅದಕ್ಕೆ ಜೀವದಾನ ಕೊಡುತ್ತಾ ಹೋಗಬಾರದು. ಆದುದರಿಂದ ಕ್ಯಾಲೆಂಡರ್ ಈವೆಂಟ್ಸನ್ನು ಕೂಡಲೇ ಹಾಕಿ ತಾಲ್ಲೂಕು ಬೋರ್ಡ್ ಚುನಾವಣೆ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಸ್ಥಳೀಯ ಸಂಸ್ಥೆಗಳ ಕೆಲಸ ಬಹಳ ಚೆನ್ನಾಗಿ ಆಗಬೇಕಾದರೆ ತ್ರೀ ಟಯರ್ ಸಿಸ್ಟಂ ಜಾರಿಗೆ ತರಬೇಕು. ಅದಕೋಸ್ಕರವಾಗಿ ಅಂದಿನ ಉಪಮಂತ್ರಿಗಳಾದ ಕೊಂಡಜ್ಜಿ ಬಸಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ಮಾಡಿದ್ದರು. ಆ ಸಮಿತಿಯವರು ನಮ್ಮ ಸರ್ಕಾರಕ್ಕೆ ರಿಪೋರ್ಟ್ ಕೊಟ್ಟಮೇಲೆ ಉಭಯ ಸದನಗಳ ಮುಂದೆ ಬಂದು ಒಂದು ಸೆಲೆಕ್ಟ್ ಕಮಿಟಿ ರಚನೆ ಆಯಿತು. ಅವರು ಇದರ ಬಗ್ಗೆ ರಿಪೋರ್ಟ್ ಕೊಟ್ಟಿದ್ದಾರೆ. ಇದು ಇನ್ನೂ ಜಾರಿಗೆ ಬಂದಿಲ್ಲ. ಈಗಾಗಲೇ ಮಹಾರಾಷ್ಟ್ರ ಮತ್ತು ಆಂಧ್ರದಲ್ಲಿ ತ್ರೀ ಟಯರ್ ಸಿಸ್ಟಂ ಜಾರಿಗೆ ಬಂದಿದೆ. ಅಲ್ಲಿ ಕೆಲಸ ಚೆನ್ನಾಗಿ ನಡೆದಿದೆ. ಎಲ್ಲಾ ಜಿಲ್ಲಾ ಮಟ್ಟದಲ್ಲಿ ಒಂದು ಮಂಡಲಿ ರಚನೆಯಾಗುವುದು ಅವಶ್ಯಕ. ಒಂದು ಎಲೆಕ್ಟ್ರಿಸಿಟಿ ಬೇಕಾದರೆ ಸಣ್ಣ ಪುಟ್ಟ ಅಭಿವೃದ್ಧಿ ಕಾರ್ಯಗಳಿಗೆ ಬೆಂಗಳೂರಿಗೆ ಬಂದು ಶಾಸನಾಸಭಾ ಸದಸ್ಯರನ್ನು ಹಿಡಿದುಕೊಂಡು ಅವರ ಮೂಲಕ ನಮ್ಮ ಸ್ಟೇಟ್ ಅಧಿಕಾರಿಗಳನ್ನು ಮತ್ತು ಮಂತ್ರಿಗಳನ್ನೂ ನೋಡಿಕೊಂಡು ಕೆಲಸ ಮಾಡಿಸಬೇಕು. ಇಲ್ಲದಿದ್ದರೆ ಅಭಿವೃದ್ಧಿ ಕಾರ್ಯಗಳಿಗೆ ತೊಂದರೆಯಾಗುತ್ತದೆ. ಆದುದರಿಂದ ಥ್ರೀ ಟಯರ್ ಸಿಸ್ಟಂ ಪಂಚಾಯತ್ ರಾಜ್ಯವನ್ನು ಜಾರಿಗೆ ತರಬೇಕಾದುದು ಬಹಳ ಮುಖ್ಯ. ಉತ್ಸಾಹಿಶಾಲಿಗಳ ನೇತೃತ್ವದಲ್ಲಿ ಇದನ್ನು ಜಾರಿಗೆ ತರಬೇಕು. ಈ ಸಭೆಯು ಅಂಗೀಕಾರ ಪಡೆದು ತಾಲ್ಲೂಕು ಬೋರ್ಡುಗಳಿಗೆ ಹೊಸ ಚುನಾವಣೆ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡುಗಳ ಆಡಿಟ್ ವಿಚಾರಕ್ಕೆ ಬಂದರೆ ಅದಂತೂ ಬಹಳ ಹೀನಾಯವಾಗಿದೆ. ಅಲ್ಲಿ ಕಳೆದ 3 – 4 ವರ್ಷಗಳಿಂದಲೂ ಆಡಿಟ್ ನಡೆದಿಲ್ಲ. ಈ ದಿವಸ ಕೆಲವು ತಾಲ್ಲೂಕ್ ಬೋರ್ಡುಗಳು ಹೈಸ್ಕೂಲುಗಳನ್ನು ನಡೆಸುತ್ತಿವೆ. ಅವು ತಮಗೆ ದೊರೆಯತಕ್ಕ ಗ್ರಾಂಟನ್ನು ಪಡೆಯಬೇಕಾಗಿದ್ದರೆ ಆ ಗ್ರಾಂಟ್ ಇನ್ ಎಯಿಡ್‌ರೂಲ್ಸ್ ಪ್ರಕಾರ ಆ ತಾಲ್ಲೂಕ್ ಬೋರ್ಡ್ ಮಂಡಳಿಯ ಲೆಕ್ಕಪತ್ರಗಳೆಲ್ಲಾ ಆಡಿಟ್ಟಾಗಿರಬೇಕು. ಹಾಗೆ ಆಡಿಟ್ಟಾಗದಿದ್ದರೆ ಅವುಗಳಿಗೆ ಗ್ರಾಂಟ್ ಸಿಕ್ಕುವುದಿಲ್ಲ. ಆದುದರಿಂದ ಈ ದಿವಸ ಈ ಆಡಿಟ್ಟಿನ ಮಹತ್ವ ಎಷ್ಟಿದೆ ಎನ್ನುವುದು ಅವರಿಗೆ ಗೊತ್ತಿಲ್ಲ. ಸರ್ಕಾರದವರೂ ಈ ವಿಚಾರದಲ್ಲಿ ಸಾಕಷ್ಟು ಗಮನ ಕೊಡುತ್ತಿಲ್ಲ. ಆದ್ದರಿಂದ ಅನೇಕ ತಾಲ್ಲೂಕ್ ಬೋರ್ಡುಗಳಿಗೆ ಆ ಗ್ರಾಂಟ್ ಡ್ರಾ ಮಾಡುವುದಕ್ಕಾಗುತ್ತಿಲ್ಲ. ಅವರು ಇಂಥ ಒಂದು ತೊಂದರೆಯಲ್ಲಿ ಸಿಕ್ಕಿಕೊಂಡಿದ್ದಾರೆ. ಆದ್ದರಿಂದ ಸರ್ಕಾರದವರು ಆಡಿಟ್ಟನ್ನೂ ಆಯಾ ವರ್ಷವೇ ಮುಗಿಸುವಂತೆ ಕಡ್ಡಾಯ ಮಾಡಬೇಕು. ಇದನ್ನು ಮಾಡದಿದ್ದರೆ ಈ ಸಂಸ್ಥೆಗಳಲ್ಲಿ ಹಣ ದುರುಪಯೋಗವಾಗುವುದಕ್ಕೆ ಅವಕಾಶವಾಗುತ್ತದೆ.

3-30 P.M.

ಇನ್ನು ಸಹಕಾರದ ಇಲಾಖೆಗೆ ಬಂದರೆ–ನಾನು ಈ ವಿಚಾರದಲ್ಲಿ ಬಹಳ ಹೆಮ್ಮೆಯಿಂದಹೇಳಬೇಕಾಗಿದೆ. ಈ ಸಹಕಾರ ಸಂಸ್ಥೆಗಳುಇಲ್ಲದಿದ್ದರೆ ನಿಜವಾಗಿಯೂ ನಮ್ಮ ರೈತರಿಗೆ ಬಹಳಕಷ್ಟವಾಗುತ್ತಿತ್ತು.

(ಶ್ರೀ ಬಿ. ಎಲ್. ಗೌಡ)

ನಮ್ಮ ರೈತರಿಗೆ ಸಕಾಲದಲ್ಲಿ ಹಣವನ್ನು ಒದಗಿಸುವುದಕ್ಕೆ ಈ ಸಂಸ್ಥೆಗಳು ಬಹಳ ನೆರವಾಗಿವೆ ಅನೇಕರು ದೇಶದಲ್ಲಿ ಈ ದಿವಸ ಈ ಸಹಕಾರಿ ಸಂಸ್ಥೆಗಳನ್ನೂ ಮತ್ತು ಬ್ಯಾಂಕುಗಳನ್ನು ಸರ್ಕಾರಿ ಬ್ಯಾಂಕುಗಳೆಂದು ನಂಬಿದ್ದಾರೆ. ಆದ್ದರಿಂದ ಇವುಗಳಿಗೆ ಸರ್ಕಾರದವರು ಹೆಚ್ಚಿನ ಹಣವನ್ನು ಒದಗಿಸಬೇಕಾದ್ದು ಅತ್ಯಗತ್ಯ; ಹಾಗೂ ಇದು ಅವರ ಆದ್ಯ ಕರ್ತವ್ಯ. ಆದರೆ ನಮ್ಮ ರಾಜ್ಯದಲ್ಲಿ ಕೆಲವು ಜಿಲ್ಲಾ ಬ್ಯಾಂಕುಗಳು ಬಹಳ ಹಿಂದೆ ಬಿದ್ದಿವೆ. ಸಕಾಲಕ್ಕೆ ಮಳೆಬಾರದೆ ಕೊಟ್ಟ ಸಾಲದ ಹಣವನ್ನು ಸಕಾಲಕ್ಕೆ ವಸೂಲ್ಮಾಡುವುದಕ್ಕೆ ತುಮಕೂರು, ಚಿತ್ರದುರ್ಗ, ಕೋಲಾರ, ಬೆಂಗಳೂರು ಹಾಸನ ಈ 5 ಜಿಲ್ಲೆಗಳ ಬ್ಯಾಂಕುಗಳು ಬಹಳ ಹಿಂದೆ ಬಿದ್ದಿವೆ. ಇಲ್ಲಿ ಸಾಲ ಮಾಡಿ ಹಣವನ್ನು ಮರುಪಾವತಿ ಮಾಡುವುದಕ್ಕಾಗದಂಥ ಕಷ್ಟ ಪರಿಸ್ಥಿತಿಯಲ್ಲಿ ಜನರು ಇರುವುದನ್ನು ಸರ್ಕಾರದವರು ಮನಗಂಡು ಅವರಿಗೆ ಬಹಳ ಉದಾರ ಮನಸ್ಸಿನಿಂದ ಒಂದು ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಕೆಲವು ವಿನಾಯಿತಿಗಳನ್ನು ಕೊಟ್ಟಿದ್ದಾರೆ. ಯಾರು ನೂರು ರೂಪಾಯಿಗಳ ಸಾಲ ಪಡೆದು ಅದನ್ನು ನೂರಕ್ಕೆ ನೂರನ್ನು ಹಿಂದಿರುಗಿಸದಿದ್ದರೆ ಅವರಿಗೆ ಮತ್ತೆ ಸಾಲ ಕೊಡುವುದಕ್ಕೆ ಕಾನೂನು ಪ್ರಕಾರ ಅವಕಾಶವಿರಲಿಲ್ಲ. ಅಂಥಾದ್ದರಲ್ಲಿ ಸರ್ಕಾರದವರು ಯಾರು ನೂರಕ್ಕೆ 75 ರಷ್ಟು ಅಥವಾ 65 ರಷ್ಟು ಸಾಲವನ್ನು ಮರುಪಾವತಿ ಮಾಡಿದ್ದಾರೋ ಅವರಿಗೆಲ್ಲಾ ಸಾಲ ಕೊಡುವುದಕ್ಕೆ ಒಂದು ವಿನಾಯಿತಿಯನ್ನು ಸರ್ಕಾರದವರು ಕೊಟ್ಟರು. ಅಂಥ ಒಂದು ವಿನಾಯಿತಿಯನ್ನು ಕೊಡದಿದ್ದರೆ ಅನೇಕರಿಗೆ ಬಹಳ ತೊಂದರೆ ಆಗುತ್ತಿತ್ತು. ಅಷ್ಟೇ ಅಲ್ಲ ನಮ್ಮ ಆಹಾರವನ್ನು ಹೆಚ್ಚು ಬೆಳೆಯಬೇಕು ಅನ್ನುವ ಕಾರ್ಯ ಕೂಡ ಸ್ಥಗಿತವಾಗತಕ್ಕ ಪರಿಸ್ಥಿತಿ ಉಂಟಾಗುತ್ತಿತ್ತು. ಇಂಥ ಒಂದು ಮಹದುಪಕಾರವನ್ನು ಸರ್ಕಾರದವರು ಮಾಡಿದ್ದಾರೆ. ಆದರೆ ಯಾರು ಯಾರು ಹಣವನ್ನು ಸಾಲವಾಗಿ ಈ ಸಂಸ್ಥೆಗಳಿಂದ ಪಡೆದಿದ್ದಾರೋ ಅವರು ಅದನ್ನು ಮರುಪಾವತಿ ಮಾಡತಕ್ಕ ಬಗ್ಗೆ ಅದನ್ನು ನಗದು ಹಣದ ರೂಪದಲ್ಲಿ ಪಾವತಿ ಮಾಡುವುದಕ್ಕೆ ಬದಲಾಗಿ ಅವರು ಏನು ಬೆಳೆಯನ್ನು ಬೆಳೆಯುತ್ತಾರೋ ಅದನ್ನೇ ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿ ಆ ಹಣವನ್ನು ಮರುಪಾವತಿ ಮಾಡುವಂಥ ಒಂದು ನಿಯಮವನ್ನೂ ಜಾರಿಗೆ ಬರಲಿಲ್ಲ. ಇದನ್ನು ಸರ್ಕಾರದವರು ಕೂಡಲೆ ವಿಚಾರ ಮಾಡಿ ಒಂದು ವ್ಯವಸ್ಥೆಯನ್ನು ಮಾಡಬೇಕು ಎಂದು ಸಲಹೆ ಮಾಡುತ್ತೇನೆ. ಆದರೆ ಈ ಸಹಕಾರ ಸಂಘಗಳ ಆಡಿಟ್ ಆ ಪಂಚಾಯಿತಿಗಳ ಆಡಿಟ್ಟಿಗಿಂತ ಸ್ವಲ್ಪ ಉತ್ತಮವಾಗಿದೆ ಎನ್ನಬಹುದು. ಆದರೆ ಜಿಲ್ಲಾ ಕೇಂದ್ರ ಬ್ಯಾಂಕುಗಳಲ್ಲಿ ಆಡಿಟ್ ನಡೆಯದೆ ಇರುವುದು ಬಹಳ ವ್ಯಸನಕರ. ಈಗ ಕೋಆಪರೇಟೀವ್ ಇಯರ್‌ನ್ನು ಜೂನ್ ತಿಂಗಳಿಂದ ಜೂನ್ ತಿಂಗಳಾಖೈರಿಗೆ ಎಂದು ನಿಗದಿ ಮಾಡಿದ್ದಾರೆ. ಆದರೆ ಈ ಅವಧಿಗೆ ಸರಿಯಾಗಿ ಎಲ್ಲಿಯೂ ಆಡಿಟ್ ಮಾಡುತ್ತಿಲ್ಲ. ಇನ್ನು ರಾಜ್ಯ ಮಟ್ಟದಲ್ಲಿರುವ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಇತ್ಯಾದಿ ಸಂಸ್ಥೆಗಳ ಆಡಿಟ್ಟು ಆಗಸ್ಟ್ — ಸೆಪ್ಟೆಂಬರಿಗೆ ಆಗಬೇಕಾದ್ದು ಜನವರಿ ತಿಂಗಳೂ ಕಳೆದರೂ ಆಗಿಲ್ಲ. ಈ ಸಂಸ್ಥೆಗಳಿಗೆಲ್ಲಾ ರಿಜಿಸ್ಟ್ರಾರ್ ಆಫ್ ಕೋಆಪರೇಟೀವ್ ಸೊಸೈಟಿಯವರೇ ಅಧ್ಯಕ್ಷರು. ಆದರೆ ಅವರು ಬಹಳ ಚೆನ್ನಾಗಿ ಕೆಲಸ ಮಾಡತಕ್ಕವರು. ಹಾಗೂ ಒಳ್ಳೆಯ ಉದಾರಿಗಳು ಮತ್ತು ಜಾಣ್ಮೆಯಿಂದ ಕೆಲಸ ಮಾಡತಕ್ಕವರು. ಏನಾದರೂ ಒಂದು ತೊಡಕುಂಟಾದಾಗ ಯಾವ ಜಿಲ್ಲಾ ಬ್ಯಾಂಕುಗಳ ಅಧ್ಯಕ್ಷರೇ ಆಗಲಿ ಅವರು ನಮ್ಮ ರಿಜಿಸ್ಟ್ರಾರ್ ಅವರಲ್ಲಿ ಹೋದರೆ ಆ ಸಮಸ್ಯೆಗೆ ಏನಾದರೂ ಒಂದು ಸೂಕ್ತ ಪರಿಹಾರವನ್ನು ಕಂಡುಹಿಡಿದು ಆ ತೊಡಕನ್ನು ನಿವಾರಣೆ ಮಾಡಿ ಆ ಸಂಸ್ಥೆಗಳು ಬಹಳ ಉತ್ತಮ ರೀತಿಯಲ್ಲಿ ಕೆಲಸ ಮಾಡುವಂತೆ ಎಲ್ಲರಿಗೂ ಸಹಕರಿಸಿ ಕೆಲಸ ಮಾಡಿಕೊಂಡು ಹೋಗುತ್ತಿದ್ದಾರೆ. ಆದರೆ ಈ ಜನರಲ್ ಬಾಡಿ ಮೀಟಿಂಗುಗಳು ಮಾತ್ರ ಕಾಲಕ್ಕೆ ಸರಿಯಾಗಿ ಒಂದೂ ನಡೆಯುತ್ತಿಲ್ಲ. ಇನ್ನು ಮುಂದಾದರೂ ಈ ಜನರಲ್ ಬಾಡಿ ಮೀಟಿಂಗುಗಳು ಕಾಲಕ್ಕೆ ಸರಿಯಾಗಿ ನಡೆಯುವಂತೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ರಾಜ್ಯಮಟ್ಟದಲ್ಲಿ ಕೆಲಸ ಮಾಡತಕ್ಕ ಬ್ಯಾಂಕುಗಳು ಇನ್ನುಳಿದ ಬ್ಯಾಂಕುಗಳಿಗೆ ಒಂದು ಮಾದರಿಯಾಗಿರುವಂತೆ ಅವು ಕೆಲಸ ಮಾಡಬೇಕು. ಇನ್ನು ರಾಜ್ಯದಲ್ಲಿ ಸುಮಾರು 20-26 ಸಹಕಾರಿ ಪ್ರೋಸೆಸಿಂಗ್ ರೈಸ್ ಮಿಲ್‌ಗಳು ಕೆಲಸ ಮಾಡುತ್ತಿವೆ. ಇವೆಲ್ಲಾ ಆ ಸಹಕಾರ ಸಂಘಗಳ ಬಲದ ಮೇಲೆ ಕೆಲಸ ಮಾಡತಕ್ಕವುಗಳಾಗಿವೆ. ಆದರೆ ನಮ್ಮ ಜಿಲ್ಲೆಯಲ್ಲಿ ಒಂದು ಸಹಕಾರ ಸಕ್ಕರೆ ಕಾರ್ಖಾನೆಯು ಸ್ಥಾಪಿತವಾಗಿ ಕಳೆದ 8-10 ವರ್ಷಗಳಿಂದಲೂ ಬಹಳ ತೊಂದರೆಯಲ್ಲಿತ್ತು. ಇದನ್ನು ಅಭಿವೃದ್ಧಿಗೆ ತರಲು ಇಂಡಿಯನ್ ಫೈನಾನ್ಷಿಯಲ್ ಕಾರ್ಪೊರೇಷನ್ನಿನವರು ಧನ ಸಹಾಯ ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ನನ್ನ ಧನ್ಯವಾದಗಳನ್ನರ್ಪಿಸುತ್ತೇನೆ. ಈ ದಿವಸ ಇಲ್ಲಿ ನನಗಿಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಆರ್. ಬೊಮ್ಮಾಯಿ (ಕುಂದಗೋಳ).—ಮಾನ್ಯ ಅಧ್ಯಕ್ಷರೇ, ಈಗ ಈ ಸಭೆಯು ಮುಂದಿರತಕ್ಕ ಸಹಕಾರ ಮತ್ತು ಸಮುದಾಯ ಅಭಿವೃದ್ಧಿ ಶಾಖೆಗಳ ಬೇಡಿಕೆಯನ್ನು ನಾನು ವಿರೋಧಿಸುತ್ತಾ ಒಂದೆರಡು ಮಾತುಗಳನ್ನು ನಾನು ಹೇಳಬೇಕೆಂದಿದ್ದೇನೆ. ನಮ್ಮ ದೇಶದ ಆರ್ಥಿಕ ರಂಗದಲ್ಲಿ ಸಹಕಾರಿ ಶಾಖೆಯು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ಅದು ವಕ್ಕಲುತನ ಇರಲಿ ಮಾರ್ಕೆಟಿಂಗ್ ಪ್ರೊಸೆಸಿಂಗ್ ಇರಲಿ, ಕೈಗಾರಿಕೆ ಆಗಲೀ ಪ್ರತಿಯೊಂದು ಜೀವನರಂಗದಲ್ಲೂ ಸಹಕಾರ ಒಂದು ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ವಿಷಯವನ್ನು ತಿಳಿದುಕೊಳ್ಳಬೇಕಾದರೆ ಸಹಕಾರಿ ಇಲಾಖೆಯು ಖರ್ಚು ಮಾಡತಕ್ಕ ಹಣವನ್ನು ನೋಡಿದರೆ ನಮಗೆ ಗೊತ್ತಾಗುತ್ತದೆ. ನಾಲ್ಕನೆ ಪಂಚವಾರ್ಷಿಕ ಯೋಜನೆಯಲ್ಲಿ ಸಹಕಾರಿ ಶಾಖೆಯು 80 ಕೋಟಿ ರೂಪಾಯಿಗಳನ್ನು ಅಭಿವೃದ್ಧಿಯ ಸಲುವಾಗಿ ಖರ್ಚು ಮಾಡುತ್ತದೆ. ಕೈಗಾರಿಕೆ, ಬಾವಿಗಳ ಸಲುವಾಗಿ, ಲಾಂಗ್ ಟರ್ಮ್ ಸಾಲ, ಸಾಯಿಲ್ ಕನ್‌ಸರ್‌ವೇಷನ್ ಸಲುವಾಗಿ ಈ ರೀತಿಯಾಗಿ ಅನೇಕ ವಿಷಯಗಳಲ್ಲಿ ಸಹಕಾರಿ ಸಂಘಗಳ ಮುಖಾಂತರ ಹಣವನ್ನು ಖರ್ಚು ಮಾಡುತ್ತಿದ್ದಾರೆ. ನಮ್ಮ ರಾಜ್ಯದ ಸಹಕಾರಿ ರಂಗದಲ್ಲಿ ತೊಡಗಿಸಿದಂತಹ ಹಣ 218 ಕೋಟಿ ರೂಪಾಯಿಗಳು ಇದೆ. ಇದರಲ್ಲಿ ಸರ್ಕಾರದವರು 28 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಉಳಿದ ಹಣ ಜನತೆಯು ಸಹಕಾರ ರಂಗದಲ್ಲಿ ತೊಡಗಿಸಿ ಮಹತ್ವದ ಪಾತ್ರವನ್ನು ವಹಿಸಿದ್ದಾರೆ. ಪ್ರಜಾಪ್ರಭುತ್ವದಲ್ಲ ಸಮಾಜ ಉದ್ಧಾರವಾಗಬೇಕಾದರೆ ಬಂಡವಾಳಶಾಹಿ ಹೋಗಬೇಕು. ಸಮಾಜವಾದವನ್ನು ರಚನೆ ಮಾಡಬೇಕಾದರೆ ಸಹಕಾರ ಸಂಘಗಳು ಅತ್ಯಂತ ಆವಶ್ಯಕ. ಈ ದೃಷ್ಟಿಯಿಂದ ನಾವು ಸಹಕಾರಿ ಖಾತೆಯ ಬಗ್ಗೆ ವಿಚಾರ ಮಾಡುವಾಗ ಅದನ್ನು ಕೂಲಂಕಷವಾಗಿ ನೋಡಬೇಕು. ಸಹಕಾರಿ ಶಾಖೆಯು ಎಷ್ಟು ಹಣವನ್ನು ಖರ್ಚು ಮಾಡಿದರೂ ಕೂಡ ಅದು ಇನ್ನೂ ಸರ್ಕಾರದ ಚಳುವಳಿಯಾಗಿಯೇ ಉಳಿದಿದೆಯೇ ವಿನಾ ಜನತೆಯ ಚಳುವಳಿಯಾಗಿಲ್ಲ, ಜನತೆಯ ಚಳುವಳಿ ಆದರೆ ಅದರಿಂದ ಜನತೆಗೆ ಹೆಚ್ಚಿನ ಉಪಯೋಗವಾಗುತ್ತದೆ. ಸಮಾಜದಲ್ಲಿ ಕೆಲವೊಂದು ಮುಖಂಡರು, ಅದರಲ್ಲಿ ದೊಡ್ಡ ದೊಡ್ಡ ಶ್ರೀಮಂತ ರೈತರು, ವ್ಯಾಪಾರಸ್ಥರು, ರಾಜಕೀಯ ಮುಖಂಡರು, ಸಹಕಾರಿ ಚಳುವಳಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಇವೊತ್ತು ಸಹಕಾರ ಸಂಘಗಳು ಸಾಹುಕಾರರ ಮುಖಾಂತರ ಹಿಂದಿನ ಸಾವುಕಾರರ ಜಾಗವನ್ನು ತೆಗೆದುಕೊಂಡು ಕಮಿಷನ್ ಏಜೆಂಟ್‌ಗಳಾಗಿ ಕೆಲಸ ಮಾಡುತ್ತಿವೆ. ಹಿಂದಿನ ಸಾಹುಕಾರರು ಬಡ್ಡಿ ವ್ಯಾಪಾರಿಗಳಂತೆ ಸಹಕಾರಿ ಸಂಘಗಳು ಕೆಲಸ ಮಾಡುತ್ತಿವೆ. ಇದಕ್ಕೆ ಸಂಬಂಧಿಸಿದ ಮುಖಂಡರು ಕಮಿಷನ್ ಬಡ್ಡಿ ಹೊಡಿಯುತ್ತಿದ್ದಾರೆ ಹಣವನ್ನು ಬಂಡವಾಳ ಹಾಕದೆ ಸಹಕಾರಿ ಸಂಸ್ಥೆಗಳು ಬಡ್ಡಿಯನ್ನು ತೆಗೆದುಕೊಳ್ಳುತ್ತವೆ. ಹಣವನ್ನು ತೊಡಗಿಸದೆ ಕಮಿಷನ್ ಪಡೆಯುತ್ತದೆ ಹಣವನ್ನು ತೊಡಗಿಸದೆ ವ್ಯಾಪಾರಸ್ಥರು ಲಾಭ ತೆಗೆದುಕೊಳ್ಳುತ್ತಾರೆ. ಅನೇಕ ಸಹಕಾರ ಸಂಘಗಳು ಒಳ್ಳೆಯ ಕೆಲಸವನ್ನು ಮಾಡುತ್ತವೆ. ಬಹು ಸಂಸ್ಥೆಗಳು ಹಿಂದಿನ ಸಾಹುಕಾರರು ಬಡ್ಡಿ ವ್ಯಾಪಾರ ಮಾಡಿದಂತೆ ಹಣಕ್ಕೆ ಬಡ್ಡಿ ಪಡೆಯುವಂತೆ ಕಮಿಷನ್ ಪಡೆಯುತ್ತವೆ ಲಾಭ ಪಡಿಯುತ್ತಿವೆ. ಯಾವ ಅಂಜಿಕೆಯೂ ಇಲ್ಲದೆ ಬ್ಲಾಕ್ ಮಾರ್ಕೆಟ್ ಮಾಡುತ್ತಿವೆ ಬಡ್ಡಿ ಹೊಡಿಯುತ್ತಿವೆ. ರೈತರಿಗೆ ಸಹಕಾರ ಸಂಘಗಳ ಮುಖಾಂತರ ಆಗಬೇಕಾದಂತ ಲಾಭ ಆಗುತ್ತಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಸಹಕಾರ ಸಂಘಗಳ ಮುಖಾಂತರ ರೈತನಿಗೆ ಸಾಲ ಕೊಟ್ಟು ಅದಕ್ಕೆ 9 ಪರ್ಸೆಂಟ್ ಬಡ್ಡಿ ಹಾಕುತ್ತಾರೆ. ಸಹಕಾರ ಸಂಘದ ಸೆಕ್ರೆಟರಿಗೆ 2 ಪರ್ಸೆಂಟ್ ಬಡ್ಡಿ ಕೊಡಬೇಕು, ಚೇರ್ಮನ್ನಿಗೆ 1 ಪರ್ಸೆಂಟ್ ಬಡ್ಡಿ ಕೊಡಬೇಕಾಗುತ್ತದೆ. ಹೀಗಾಗಿ ರೈತನಿಗೆ 12 ಪರ್ಸೆಂಟ್ ಬಡ್ಡಿ ಬೀಳುತ್ತದೆ ಈ ಸಹಕಾರ ಸಂಘಗಳು ನಡೆಯುತ್ತಿರುವುದು ಒಂದು ದೊಡ್ಡ ರಾಮಾಯಣವಾಗಿದೆ.

ಇನ್ನು ಈ ಕೊ-ಆಪರೇಟೀವ್ ಮಾರ್ಕೆಟಿಂಗ್ ಸೊಸೈಟಿಗಳು ಕಮಿಷನ್ ಏಜೆನ್ಸಿಗಳಾಗಿ ಅನೇಕ ಅನ್ಯಾಯಗಳು ಅಲ್ಲಿ ಆಗುತ್ತವೆ. ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿ, ಷೇರ್ ಸೇಲ್ಸ್ ಸೊಸೈಟಿಗಳ ಮುಖಾಂತರ ಮತ್ತು ಅಗ್ರಿಕಲ್‌ಚರಲ್ ಪ್ರೊಡ್ಯೂಸ್ ಮಾರ್ಕೆಟಿಂಗ್ ಸೊಸೈಟಿಗಳ ಮುಖಾಂತರ ನಡೆಯುತಕ್ಕ ವ್ಯವಹಾರದ ಸಂಬಂಧದಲ್ಲಿ ಯಾವ ನಿರ್ಬಂಧವನ್ನೂ ಹಾಕಿಲ್ಲ. ಅಲ್ಲಿರತಕ್ಕ ಡೈರೆಕ್ಟರುಗಳು 3 ಲಕ್ಷ 4 ಲಕ್ಷ ರೂಪಾಯಿಗಳನ್ನು ಪಡೆಯುತ್ತಿದ್ದಾರೆ. ಆ ಸೊಸೈಟಿಗಳಲ್ಲಿ ಬಹಳ ಅನ್ಯಾಯಗಳು ನಡೆಯುತ್ತಿವೆ. ಅವರಿಗೆ ಮೊದಲು ಒಂದು ಮನೆ ಕೂಡ ಆಸ್ತಿ ಇರಲಿಲ್ಲ. ಇಂಥವರು ಇವೊತ್ತಿನ ದಿವಸ ಲಕ್ಷಾಂತರ ರೂಪಾಯಿಗಳನ್ನು ಗಳಿಸಿಕೊಂಡು ಆರಾಮಾಗಿ ಕಾರುಗಳಲ್ಲಿ ತಿರುಗಾಡುತ್ತಿದ್ದಾರೆ. ಅವರು ಬೇಕಾದಷ್ಟು ಹಣವನ್ನು ಗಳಿಸಿಕೊಂಡು ಆಸ್ತಿಪಾಸ್ತಿಗಳನ್ನು ಮಾಡಿಕೊಂಡಿದ್ದಾರೆ. ಸಹಕಾರಿ ಚಳುವಳಿಯು ಜನತೆಯ ಚಳುವಳಿ ಆಗಬೇಕಾದರೆ ಸಹಕಾರಿ ಶಾಖೆಯಲ್ಲಿ ಸ್ವಲ್ಪ ಸುಧಾರಣೆ ಆಗಬೇಕು. ಅತ್ಯಂತ ಕ್ರಾಂತಿಕಾರಕವಾದ ಸುಧಾರಣೆಗಳಾಗಬೇಕು ಎಂದು ನಾನು ಸೂಚನೆ ಮಾಡಬಯಸುತ್ತೇನೆ.

(ಶ್ರೀ ಎಸ್. ಆರ್. ಬೊಮ್ಮಾಯಿ)

ಇನ್ನು ಈ ಕೋ-ಅಪರೇಟೀವ್ ಸೊಸೈಟಿಗಳಿಗೆ ಸಂಬಂಧಪಟ್ಟಹಾಗೆ ಇರತಕ್ಕಂಥ ಆಡಿಟ್ ಡಿಪಾರ್ಟ್‌ಮೆಂಟ್ ಏನಿದೆ ಇದು ಒಂದು ಸ್ವತಂತ್ರವಾದ ಆಡಿಟ್ ಶಾಖೆ ಆಗಿರಬೇಕು. ಆಡಿಟರುಗಳು ಸೊಸೈಟಿಗಳ ಮ್ಯಾನೇಜರುಗಳಾಗುತ್ತಾರೆ. ಇದರಿಂದ ಅಲ್ಲಿ ಕೆಲಸ ಸರಿಯಾಗಿ ನಡೆಯುವುದಿಲ್ಲ. ಆಡಿಟ್ ಶಾಖೆ ಸ್ವಲ್ಪ ಚುರುಕಾಗಿ ಕೆಲಸ ಮಾಡಿದರೆ ಸೊಸೈಟಿಗಳ ಆಡಿಟ್‌ಗಳು ಸರಿಯಾಗಿ ಆಗುತ್ತವೆ. ಈಗ ಸೊಸೈಟಿಗಳ ಆಡಿಟ್ ಸರಿಯಾಗಿ ನಡೆಯುತ್ತಿಲ್ಲ. ಆಡಿಟರುಗಳ ಸಂಬಂಧದಲ್ಲಿ ಸ್ವಲ್ಪ ನಿರ್ಬಂಧ ಇರಬೇಕು. ಅವರಿಗೆ ಅಡ್ಮಿನಿಸ್ಟ್ರೇಷನ್ ಸಂಬಂಧ ಇರಬಾರದು. ಅವರು ವರ್ಷದ ಆಖೈರಿನಲ್ಲಿ ಸೊಸೈಟಿಗಳ ಆಡಿಟ್ ಆಗಬೇಕು. ಮತ್ತು ಬ್ಯಾಲೆನ್ಸ್‌ಷೀಟ್ ತಯಾರಾಗಬೇಕು ಎಂಬ ನಿಯಮ ಇರಬೇಕು. ಈ ಕೊ ಆಪರೇಟೀವ್ ಸೊಸೈಟಿಯ ಶಾಸನದಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡಬೇಕು. ಸಹಕಾರ ಸಂಘಗಳಲ್ಲಿ ಚೇರ್ಮನ್ ಮತ್ತು ಡೈರೆಕ್ಟರುಗಳಾಗುವವರಿಗೆ ಕೆಲವೊಂದು ನಿರ್ಬಂಧಗಳನ್ನು ಹಾಕಬೇಕು. ಮತ್ತು ಅವರಿಗೆ ಕೆಲವೊಂದು ಅರ್ಹತೆಗಳಿರಬೇಕೆಂದು ಗೊತ್ತು ಮಾಡಬೇಕು. ಮತ್ತು ಅವರಿಗೆ ಲಯಬಲಿಟೀಸ್ ಫಿಕ್ಸ್ ಮಾಡಬೇಕು. ಸೊಸೈಟಿಗಳಲ್ಲಿ ಹಣವನ್ನು ಬಳಸಿದ್ದರೆ, ಹಾನಿಯಾಗಿದ್ದರೆ, ಅನ್ಯಾಯ ಆಗಿದ್ದರೆ ಅಂಥಾ ಸಂದರ್ಭಗಳಲ್ಲಿ ಡೈರೆಕ್ಟರುಗಳು ಮತ್ತು ಚೇರ್ಮನ್‌ಗಳ ಮೇಲೆ ಜವಾಬ್ದಾರಿಯನ್ನು ಫಿಕ್ಸ್ ಮಾಡುವಂತೆ ಸೊಸೈಟಿಯ ಕಾಯಿದೆಯಲ್ಲಿ ಒಂದು ಅಗತ್ಯವಾದ ನಿಯಮವನ್ನು ಸೇರಿಸಬೇಕು. ಈಗ ಒಂದು ಉದಾಹರಣೆಯನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಹುಬ್ಬಳ್ಳಿಯಲ್ಲಿ ಒಂದು ಕಾಟನ್ ಮಿಲ್ಲಿಗೆ ಸರ್ಕಾರದವರು 40 ಲಕ್ಷ ರೂಪಾಯಿಗಳನ್ನು ಹಾಕಿದ್ದಾರೆ ಸಹಕಾರ ಸಂಘಗಳು 20 ಲಕ್ಷ ರೂಪಾಯಿಗಳನ್ನು ಹಾಕಿದ್ದಾರೆ. ಸಹಕಾರಿ ಬ್ಯಾಂಕಿನವರು 4 ಲಕ್ಷ ರೂಪಾಯಿಗಳನ್ನು ಹಾಕಿದ್ದಾರೆ. ಅದರಲ್ಲಿ ಹಾನಿಯಾಗಿದೆ. ಕೆ. ಸಿ. ಪಿ. ಮಿಲ್ಲಿನಲ್ಲಿ 50 ಲಕ್ಷ ರೂಪಾಯಿಗಳ ಹಾನಿಯಾಗಿದೆ ಆ 50 ಲಕ್ಷ ರೂಪಾಯಿಗಳಿಗೆ ಜವಾಬ್ದಾರರು ಯಾರು ? ಹಿಂದಿನ ಡೈರೆಕ್ಟರುಗಳು ಆ ಮಿಲ್ಲನ್ನು ಬಿಟ್ಟುಹೋಗಿದ್ದಾರೆ. ಮ್ಯಾನೇಜ್‌ಮೆಂಟಿನವರು, ಡೈರೆಕ್ಟರು ಹಣವನ್ನು ತೆಗೆದುಕೊಂಡು ಹೋದರ ಜನತೆಯ ಹಣಕ್ಕೆ ಹೊಣೆಗಾರರು ಯಾರು ? ಆ ರೀತಿ ಆಗದಂತೆ ಮಾಡಬೇಕಾದರೆ ಮ್ಯಾನೇಜಿಂಗ್ ಡೈರೆಕ್ಟರು, ಚೇರ್ಮನ್ ಆಗಿರುವವರಿಗೆ ಲಯಬಲಿಟೀಸ್ ಫಿಕ್ಸ್ ಮಾಡಬೇಕೆಂದು ಈ ಕಾಯಿದೆಯಲ್ಲಿ ಸೂಕ್ತ ಬದಲಾವಣೆ ಆಗತಕ್ಕದ್ದು ಅವಶ್ಯ ಇದೆ.

ಇನ್ನು ಕನ್‌ಸ್ಯೂಮರ್ಸ್ ಸೊಸೈಟಿಯ ಬಗ್ಗೆ ಹೇಳುವುದಾದರೆ ಸ್ಟೇಟ್ ಫೆಡರೇಷನ್ ಸಂಸ್ಥೆಗಳಿಗೂ, ನ್ಯಾಷನಲ್ ಫೆಡರೇಷನ್ ಸಂಸ್ಥೆಗಳಿಗೂ, ಡಿಸ್ಟ್ರಿಕ್ಟ್ ಕನ್‌ಸ್ಯೂಮರ್ಸ್ ಸೊಸೈಟಿಗಳಿಗೂ, ಮತ್ತು ಪ್ರೈಮರಿ ಕನ್‌ಸ್ಯೂಮರ್ಸ್ ಸೊಸೈಟಿಗಳಿಗೂ ಸಾಕಷ್ಟು ಕೋ-ಆರ್ಡಿನೇಷನ್ ಇಲ್ಲ. ನ್ಯಾಷನಲ್ ಫೆಡರೇಷನ್ ಸಂಸ್ಥೆಗಳು ಸ್ಟೇಟ್ ಫೆಡರೇಷನ್ ಸಂಸ್ಥೆಗಳಿಗೆ ಮಾರಾಟಕ್ಕಾಗಿ ದ್ರಾಕ್ಷಿ, ಲವಂಗ ಇತ್ಯಾದಿ ವಸ್ತುಗಳನ್ನು ಕಳುಹಿಸುತ್ತಾರೆ. ಅವರು ಡಿಸ್ಟ್ರಿಕ್ಟ್ ಹೋಲ್ ಸೇಲ್ ಕನ್‌ಸ್ಯೂಮರ್ಸ್ ಸೊಸೈಟಿಗಳಿಗೆ ಮಾರಾಟ ಮಾಡುವುದಕ್ಕೆ ಕಳುಹಿಸುತ್ತಾರೆ. ಅವು ಡಿಸ್ಟ್ರಿಕ್ಟ್ ಹೋಲ್ ಸೇಲ್ ಕನ್‌ಸ್ಯೂಮರ್ಸ್ ಸೊಸೈಟಿಗಳಿಂದ ಪ್ರೈಮರಿ ಕನ್‌ಸ್ಯೂಮರ್ಸ್ ಸೊಸೈಟಿಗಳಿಗೆ ಮಾರಾಟ ಮಾಡುವುದಕ್ಕೆ ಸರಿಯಾಗಿ ವಿತರಣೆ ಆಗುತ್ತಿಲ್ಲ. ಪ್ರೈಮರಿ ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಮಾರಾಟ ಮಾಡುವುದಕ್ಕೆ ಜೀವನಾವಶ್ಯಕ ವಸ್ತುಗಳು ಸಿಕ್ಕುವುದಿಲ್ಲ. ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿಗಳು ಸರಿಯಾಗಿ ನಡೆಯಬೇಕಾದರೆ ಜನತೆಯ ಒಂದು ಚಳುವಳಿ ಆಗಬೇಕು. ಕನ್‌ಸ್ಯೂಮರ್ಸ್ ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಜೀವನಾವಶ್ಯಕ ವಸ್ತುಗಳಾದ ಅಕ್ಕಿ ಸಕ್ಕರೆ, ಗೋಧಿ ರೇಷನ್ ಇತ್ಯಾದಿಗಳನ್ನು ಮಾರಾಟ ಮಾಡಬೇಕು. ಈಗ ಆ ವಸ್ತುಗಳನ್ನು ಈ ಸೊಸೈಟಿಗಳಲ್ಲಿ ಮಾರಾಟ ಮಾಡುತ್ತಿಲ್ಲ. ಈ ಸಂಸ್ಥೆಗಳಲ್ಲಿ ಸರಿಯಾದಂತಹ ಕೋ-ಆರ್ಡಿನೇಷನ್ ಆಗುವುದು ಅತ್ಯಂತ ಅವಶ್ಯ ಇದೆ. ಕೋ-ಆಪರೇಟೀವ್ ಸೊಸೈಟಿಗಳು ಸರಿಯಾಗಿ ನಡೆಯುವಂತೆ ಆಗಬೇಕು. ಯಾವುದೇ ಕೋ-ಆಪರೇಟೀವ್ ಸಂಸ್ಥೆಯಾಗಲೀ ಅದಕ್ಕೆ ಚೇರ್ಮನ್ ಆಗತಕ್ಕವರು 3 ವರ್ಷಗಳಿಗಿಂತ ಹೆಚ್ಚು ಸಮಯ ಇರಬಾರದು. ನಾನು ಇದರಲ್ಲ ಸಾಕಷ್ಟು ಅನುಭವದಿಂದ ಹೇಳುತ್ತಿದ್ದೇವೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಡಿಸ್ಟ್ರಿಕ್ಟ್ ಹೋಲ್ ಸೇಲ್ ಸೊಸೈಟಿಯ ಚೇರ್ಮನರು, ಡಿಸ್ಟ್ರಿಕ್ ಕೋ-ಆಪರೇಟೀವ್ ಬ್ಯಾಂಕ್ ಚೇರ್ಮನರುಗಳು 20 ವರ್ಷಗಳ ಕಾಲ ಒಬ್ಬೊಬ್ಬರೇ ಇರುತ್ತಾರೆ. ಅಧಿಕಾರಕ್ಕೆ ಬಂದವರು ಅಲ್ಲಿಗೆ ಬೇರೆಯವರು ಬಾರದಂತೆ ಚುನಾವಣೆಯ ತಂತ್ರದಿಂದಲಾಗಲೀ, ಬೇರೆ ಅನೇಕ ತಂತ್ರಗಳನ್ನು ಉಪಯೋಗ ಮಾಡಿ ಅವರು ಆ ಅಧಿಕಾರದಲ್ಲೇ ಉಳಿಯುತ್ತಾರೆ. ಕೆಲವರು ಒಳ್ಳೆಯ ಕೆಲಸವನ್ನು ಮಾಡುತ್ತಾರೆ. ಪ್ರಜಾಪ್ರಭುತ್ವ ದೃಷ್ಟಿಯಿಂದ ಸಹಕಾರಿ

ಚಳುವಳಿಯು ಒಂದು ಉತ್ತಮವಾದ ಬೆಳವಣಿಗೆಯ ದೃಷ್ಟಿಯಿಂದ ಕೋ-ಆಪರೇಟೀವ್ ಸೊಸೈಟಿಗಳ ಚೇರ್ಮನ್‌ಗಳು ಮತ್ತು ಡೈರೆಕ್ಟರುಗಳು 3ವರ್ಷಗಳಿಗೊಮ್ಮೆ ಬದಲಾವಣೆ ಆಗಬೇಕು. ಅದು ಆಗದೇ ಹೋದರೆ ಮನಾಪಲಿ ಬರುತ್ತದೆ ಮಿಸ್ ಅಪ್ರೋಪ್ರಿಯೇಷನ್ ಎಲ್ಲಾ ಬರುತ್ತದೆ. ಆದ್ದರಿಂದ ಆದಷ್ಟು ತೀವ್ರವಾಗಿ ಅದನ್ನು ಬದಲಾವಣೆ ಮಾಡುವುದು ಅವಶ್ಯ ಇದೆ. ಇನ್ನು ದೊಡ್ಡ ದೊಡ್ಡ ಸಂಸ್ಥೆಗಳು ಆಡಿಟಿಂಗ್ ಬಗ್ಗೆ ಚಾರ್ಟೆಡ್ ಬ್ಯಾಲೆನ್ಸ್‌ಷೀಟ್ ತಯಾರು ಮಾಡುವುದಕ್ಕೆ ಅಕೌಂಟೆಂಟ್ ಗಳನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಸಹಕಾರ ಇಲಾಖೆಯಲ್ಲಿ ಕೆಲವೊಂದು ಬದಲಾವಣೆಗಳನ್ನು ಮಾಡುವುದು ಅವಶ್ಯಕವಿದೆ.

ಇನ್ನು ಬಾವಿಗಳನ್ನು ತೋಡಿಸಲು ಸಾಲ ಕೊಡಿಸುವ ಬಗ್ಗೆ ಅಫಿಡವಿಟ್ ಮೇಲೆ ಕೊಡುವಂತೆ ಮಾಡಿರುವುದು ಸುತ್ಯಾರ್ಹವಾದ ವ್ಯವಸ್ಥೆ. ಈ ವಿಚಾರದಲ್ಲಿ ಸಹಕಾರ ಮಂತ್ರಿಗಳನ್ನು ವಂದಿಸುತ್ತೇನೆ.

ಇನ್ನು ಆಗ್ರಿಕಲ್‌ಚರ್ ರೀಫೈನಾನ್ಸ್ ಕಾರ್ಪೊರೇಷನ್ ಅವರು ಈಗಾಗಲೇ ಕೊಕನಟ್, ಅರೆಕನಟ್ ಬೆಳೆಯುವುದಕ್ಕೆ ಪ್ರೋತ್ಸಾಹ ಕೊಡಲು ಕೆಲವು ಸಮಿತಿಗಳನ್ನು ಮಾಡಿದ್ದಾರೆ. ಇದೇ ರೀತಿ ಹತ್ತಿ ನೆಳೆಗೂ ಸಹ ಸಮಿತಿ ಮಾಡುವುದು ಒಳ್ಳೆಯದು. ಏಕೆಂದರೆ ಹತ್ತಿಯು ಹಣ ತರುವಂತಹ ವಸ್ತುವಾಗಿದೆ. ಮತ್ತು ರೈತರು ಉತ್ತಮ ಜಾತಿಯ ಹತ್ತಿಯನ್ನು ಬೆಳೆಯು ತ್ತಿದ್ದಾರೆ. ಆದ್ದರಿಂದ ಆಗ್ರಿಕಲ್ಚರ್ ರೀಫೈನಾನ್ಸ್ ಕಾರ್ಪೊರೇಷನ್ ಅವರು ಹತ್ತಿ ಬೆಳೆಗೆ ಒಳ್ಳೆಯ ಅನುಕೂಲಗಳನ್ನು ಮಾಡಿಕೊಡುವುದು ಒಳ್ಳೆಯದು.

ಇನ್ನು ಸಹಕಾರ ಇಲಾಖೆಯವರು ಟ್ರಾಕ್ಟರ್‌ಗಳನ್ನು ಖರೀದಿ ಮಾಡಿದ್ದಾರೆ. ಇವುಗಳು ಕೆಟ್ಟು ಹೋದರೆ ರಿಪೇರಿ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ಸಿಗುತ್ತಿಲ್ಲ. ಮತ್ತು ವರ್ಕ್ಸ್ ಷಾಪ್‌ಗಳು ಸಹ ಇಲ್ಲ. ಇದರಿಂದ ರೈತರಿಗೆ ತೊಂದರೆಯಾಗುತ್ತದೆ. ಈ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಡಿಸ್ಟ್ರಿಕ್ಟ್ ಸೆಂಟರ್‌ಗಳಲ್ಲಿ ಕೊ-ಆಪರೇಟಿವ್ ಬೇಸಿಸ ಮೇಲೆ ವರ್ಕ್‌ಷಾಪನ್ನು ತೆಗೆಯುವುದು ಒಳ್ಳೆಯದು. ವರ್ಕ್‌ಷಾಪ್‌ನಲ್ಲಿ ಟೈರ್, ಆಯಿಲ್, ಸ್ಪೇರ್ ಪಾರ್ಟ್ಸ್ ಮತ್ತು ಇತರ ಸಾಮಾನುಗಳು ಸಿಗುವಂತೆ ಏರ್ಪಾಡು ಮಾಡುವುದು ಅತ್ಯಂತ ಅವಶ್ಯಕವಿದೆ.

ಇನ್ನು ಸಹಕಾರ ಇಲಾಖೆ ಇದುವರೆಗೆ ಬಹಳಷ್ಟು ಕೆಲಸ ಮಾಡಿದೆ. ಇನ್ನೂ ಆಗಬೇಕಾದ ಕೆಲಸಗಳು ಬಹಳ ಇವೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಾಪೂಗೌಡ (ಷಹಾಪುರ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸಹಕಾರ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳಾದ ಗ್ರಾಮಾಂತರ ಅಭಿವೃದ್ಧಿ, ಸಹಕಾರ, ಸಾಮುದಾಯಿಕ ಅಭಿವೃದ್ಧಿ ಇತ್ಯಾದಿ ಮತ್ತು ವಿವಿಧ ಬಾಬುಗಳು ಇವುಗಳನ್ನು ಅನುಮೋದಿಸುತ್ತಾ ಕೆಲವು ಮಾತು ಗಳನ್ನು ಹೇಳಬಯಸುತ್ತೇನೆ. ಈಗಾಗಲೇ ದೇಶದಲ್ಲಿ ಸುಮಾರು 20 ಸಾವಿರಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಹಕಾರ ಸಂಘಗಳು ಅಸ್ತಿತ್ವಕ್ಕೆ ಬಂದಿವೆ. ತಾಲ್ಲೂಕ್ ಮಟ್ಟದಲ್ಲಿ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಮತ್ತು ಸರ್ವಿಸ್ ಕೋಆಪರೇಟಿವ್ ಸೊಸೈಟಿಗಳು 1957ರಿಂದ 1967ರ ವರೆಗೆ ಸಾಕಷ್ಟು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯುತ್ತಿವೆ. ಸಹಕಾರ ಕ್ಷೇತ್ರವು ಜನಜೀವನದಲ್ಲಿ ಹೆಚ್ಚಿನ ಪಾತ್ರವನ್ನು ವಹಿಸುತ್ತಿದೆ. ಆರ್ಥಿಕ ದೃಷ್ಟಿಯಿಂದ ಜನರಿಗೆ ಅನುಕೂಲವಾಗಲೀ ಎಂದು ಈ ಸಹಕಾರ ಖಾತೆಯನ್ನು ಎಷ್ಟು ಬೆಳೆಸಿದರೂ ಕಡಿಮೆಯೆಂದೇ ಹೇಳಬಹುದು. ಈ ಕ್ಷೇತ್ರದಲ್ಲಿ ಇಂದಿನ ದಿವಸ 218ಕೋಟಿ ರೂಪಾಯಿಗಳ ವ್ಯವಹಾರ ವಿವಿಧ ಸಹಕಾರ ಸಂಘಗಳ ಮೂಲಕ ಜನರ ಅನುಕೂಲಕ್ಕಾಗಿ ನಡೆಯುತ್ತಿದೆ. ಸಹಕಾರ ಸಂಘಗಳ ಮುಖಾಂತರವಾಗಿ ಜನರ ಜೀವನ ಮಟ್ಟ ಮತ್ತು ಆರ್ಥಿಕ ಮಟ್ಟ ಹೆಚ್ಚಿ ಅವರ ಜೀವನ ವಿಕಾಸವಾಗಲೀ ಎನ್ನುವ ವಿಚಾರದಲ್ಲಿ ಸಹಕಾರ ಸಂಘ ಗಳು ಅಷ್ಟೊಂದು ಆಶಾದಾಯಕವಾಗಿ ಮುಂದುವರೆದಿಲ್ಲ. ಇನ್ನೂ ಮುಂದುವರೆಯಬೇಕಾಗಿದೆ. ಗ್ರಾಮಾಂತರ ಜನರು ಈ ಸಹಕಾರ ಸಂಘಗಳ ಉಪಯೋಗವನ್ನು, ಲಾಭವನ್ನು ಪಡೆಯುವ ಬಗ್ಗೆ ಕಡಿಮೆ ಅವಕಾಶವಿದೆಯೆಂದು ಹೇಳಿದರೆ ತಪ್ಪಾಗಲಾರದು. ಒಂದೇ ಮಾತಿನಲ್ಲಿ ಹೇಳುವುದಾದರೆ ರೈತರಿಗೆ ಈ ಸಂಘಗಳಿಂದ ಸಕಾಲಕ್ಕೆ ಸರಿಯಾಗಿ ಸಾಲ ಸಿಗುತ್ತಿಲ್ಲ. ರೈತರಿಗೆ ಬೇಕಾಗುವಂತಹ ಸಾಲಗಳು ಸಕಾಲದಲ್ಲಿ ಸಿಗುವಂತೆ ಈ ಸಹಕಾರ ಸಂಘಗಳು ಕೆಲಸ ಮಾಡಬೇಕಾಗಿದೆ. ಈ ರೀತಿ ರೈತರಿಗೆ ಕೊಟ್ಟ ಹಣ ಸರಿಯಾಗಿ ವಸೂಲಾಗಬೇಕಾದರೆ ಆ ಸಂಘದಲ್ಲಿ ಕೆಲಸ ಮಾಡತಕ್ಕಂಥ ಡೈರೆಕ್ಟರ್ ಮತ್ತು ಇನ್ನಿತರ ಅಧಿಕಾರಿಗಳು ಸರಿಯಾಗಿ ಕೆಲಸ ಮಾಡಬೇಕು. ಇಂತಹ ಒಂದು ವಿಚಾರ ಮಾಡುವ ಕಾಲದಲ್ಲಿ ಹಳ್ಳಿಯ ಮಟ್ಟದಲ್ಲಿ ಕೆಲಸ ಮಾಡತಕ್ಕಂಥ ಸಹಕಾರ ಸಂಘಗಳು ಸಹ ಜನರಿಗೆ ಅನುಕೂಲ ಮಾಡುವ ದೃಷ್ಟಿಯಿಂದ ಸರಿಯಾಗಿ ಕೆಲಸ ಮಾಡಿದರೆ ಜನರು ಸಾಲ ಪಡೆಯಲು

(ಶ್ರೀ ಬಾಪೂಗೌಡ)

ಅನುಕೂಲವಾಗುತ್ತದೆ. ದುರ್ದೈವದ ಸಂಗತಿಯೆಂದರೆ, ಹಳ್ಳಿಯ ಮಟ್ಟದಲ್ಲಿ ಕೆಲಸ ಮಾಡುತ್ತಿರುವ ಸಹಕಾರ ಸಂಘಗಳು ಯಾರಿಗೆ ಸಹಾಯ ಮಾಡುತ್ತಿವೆಯೆಂದರೆ, ಸಮಾಜದಲ್ಲಿ ಗೌರವ ಘನತೆ ಇರುವಂತಹವರಿಗೆ ಮಾತ್ರ ಸಹಾಯ ಮಾಡುತ್ತದೆಯೇ ಹೊರತು ಕೆಳದರ್ಜೆಯ ಜನರಿಗೆ, ಬಡವರಿಗೆ ಸಹಾಯ ಮಾಡುತ್ತಿಲ್ಲ. ಈ ಮೂಲಕ ಹಣದ ದುರುಪಯೋಗವಾಗುತ್ತಿದೆ. ಈ ರೀತಿಯ ಅಂಶಗಳನ್ನು ನಾನು ಸಾಕಷ್ಟು ಕೇಳಿದ್ದೇನೆ. ಈ ವಿಚಾರವನ್ನು ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕ್ ಮಟ್ಟದಲ್ಲಿ ಕಾನ್‌ಫರೆನ್ಸ್ ನಡೆದಾಗ ಸಹಕಾರ ಕ್ಷೇತ್ರದ ಕಾರ್ಯಕರ್ತರು ಸ್ಪಷ್ಟವಾಗಿ ತಿಳಿಸಿದ್ದಾರೆ. ಹಳ್ಳಿಯ ಮಟ್ಟದ ಸರ್ವಿಸ್ ಕೋಆಪರೇಟಿವ್ ಸೊಸೈಟಿಗಳು ಚೆನ್ನಾಗಿ ಬೆಳೆಯ ಬೇಕಾದರೆ ಇಂದಿನ ಸಮಾಜದ ಪರಿಸ್ಥಿತಿ, ಜನರ ಪರಿಸ್ಥಿತಿ ನೋಡಿಕೊಂಡು ಕೆಲಸ ಮಾಡಲು ನುರಿತ ಕಾರ್ಯದರ್ಶಿಗಳು ನೇಮಕವಾಗಬೇಕೆಂದು ಹೇಳಿದ್ದಾರೆ. ನಿರ್ದಿಷ್ಟವಾದಂತಹ ತತ್ವವನ್ನು ಒಳಗೊಂಡಂತೆ ಕೆಲಸಗಳನ್ನು ಮಾಡಿಕೊಂಡು ಹೋದರೆ ಮಾತ್ರ ಸಹಕಾರ ಸಂಘಗಳು ಚೆನ್ನಾಗಿ ಬೆಳೆಯಲು ಸಾಧ್ಯ ಎಂದು ಸಹ ಹೇಳಿದ್ದಾರೆ. ಈ ರೀತಿ ಸಮಾಜ ಕಾರ್ಯಕರ್ತರು ಹೇಳಿದಂತಹ ಮಾತುಗಳನ್ನು ಸರ್ಕಾರದವರು ಕಾರ್ಯಗತ ಮಾಡುವುದಕ್ಕೆ ಇದುವರೆಗೂ ಪ್ರಯತ್ನವನ್ನು ಮಾಡಿಲ್ಲ. ಸಹಕಾರ ಸಂಘಗಳನ್ನು ಮತ್ತು ಪಂಚಾಯಿತಿಗಳನ್ನು ಸ್ಥಾಪನೆ ಮಾಡುವ ಉದ್ದೇಶವಾದರೂ ಸಹ ಪ್ರಜಾ ಪ್ರಭುತ್ವ ಬಾಳಲಿ, ಬೆಳೆಯಲಿ, ಹಳ್ಳಿಗಳು ಮುಂದಕ್ಕೆ ಬರಲಿ ಎಂಬ ಉದ್ದೇಶದಿಂದ. ಆದರೆ ಇವತ್ತು ನಾವು ಕಾಣುವುದೇನೆಂದರೆ, ಹಳ್ಳಿಯ ಮಟ್ಟದಲ್ಲಿರತಕ್ಕಂಥ ಸೊಸೈಟಿಗಳಲ್ಲಿ ಹಣದ ದುರುಪಯೋಗವಾಗುತ್ತಿರುವುದನ್ನು, ಸಮಾಜ ಬೆಳೆಯುವುದಕ್ಕೆ ಅವಕಾಶ ಕೊಡದಿರುವುದನ್ನು ಮಾತ್ರ. ಈ ರೀತಿಯಾಗುತ್ತಿರುವ ತೊಂದರೆಗಳನ್ನು ಕಡಿಮೆ ಮಾಡಿ ಸರ್ಕಾರದವರು ಈ ಸೊಸೈಟಿಗಳು ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಮತ್ತು ಈ ಸೊಸೈಟಿಗಳಲ್ಲಿ ಸರ್ಕಾರದಿಂದ ನೇಮಕವಾದಂಥ ಕಾಯದರ್ಶಿಗಳು ಇಲ್ಲದಿರುವುದರಿಂದ, ಸಾಲ ಕೊಟ್ಟ ಹಣ 20 ಪರ್‌ಸೆಂಟ್‌ವರೆಗೂ ಸಹ ಸರಿಯಾಗಿ ವಸೂಲಾಗುತ್ತಿಲ್ಲ. ಇದರಿಂದ ಇಲ್ಲಿಯ ಸೊಸೈಟಿಗಳ ಆರ್ಥಿಕ ಮಟ್ಟ ಉತ್ತಮವಾಗಿಲ್ಲ. ಹೆಚ್ಚಿನ ರೀತಿಯಲ್ಲಿ ಹಣದ ದುರುಪಯೋಗವಾಗುತ್ತಿದೆ. ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದಾಗ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೋ ಆ ರೀತಿಯ ಕ್ರಮ ತೆಗೆದುಕೊಳ್ಳುತ್ತಿಲ್ಲ. ಈ ಕಾರಣದಿಂದ ಇಲ್ಲಿ ಕೆಲಸ ಮಾಡತಕ್ಕಂಥವರು ಉದ್ದೇಶಪೂರ್ವಕವಾಗಿ ತಪ್ಪು ಮಾಡಿ ಹೇರಳವಾಗಿ ಹಣ ದುರುಪಯೋಗ ಮಾಡುತ್ತಿದ್ದಾರೆ. ಎಷ್ಟು ಸಾರಿ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೂ ಸಹ ಇವರ ಮೇಲೆ ಯಾವ ಒಂದು ಶೀಘ್ರ ಕ್ರಮವನ್ನೂ ಸಹ ತೆಗೆದುಕೊಳ್ಳುತ್ತಿಲ್ಲ. ನಮ್ಮ ಹೈದರಾಬಾದ್ ಕರ್ನಾಟಕದಲ್ಲಿರುವ ಸಹಕಾರ ಸಂಘಗಳ ಬಗ್ಗೆ ಹೇಳಬೇಕಾದರೆ ಅಲ್ಲಿ 28 ನೂಲಿನ ಸಹಕಾರಸಂಘಗಳು ಇವೆ. ಈ ಸೊಸೈಟಿಗೆ ಹೇರಳವಾದಂಥ ಗ್ರಾಂಟನ್ನು ಸರ್ಕಾರದವರು ಕೊಟ್ಟಿದ್ದಾರೆ. ದುರ್ದೈವದ ಸಂಗತಿಯೆಂದರೆ ಈ ಸೊಸೈಟಿಗಳಲ್ಲಿಯೂ ಸಹ ಕೆಲಸ ಮಾಡತಕ್ಕಂಥ ಕಾರ್ಯಕರ್ತರು ತಪ್ಪು ಮಾಡಿದಾಗ ಅದನ್ನು ಸಂಬಂಧಪಟ್ಟ ಅಧಿಕಾರಿಗಳ ಮತ್ತು ಸಂಬಂಧಪಟ್ಟ ಇಲಾಖೆಯವರ ಗಮನಕ್ಕೆ ತಂದರೂ ಸಹ ಎಲ್ಲರೂ ಸಹ ಕಿವಿ ಮುಚ್ಚಿಕೊಂಡು ಕುಳಿತುಕೊಂಡಿದ್ದಾರೆಯೇ ವಿನಃ ಯಾವ ಕ್ರಮವನ್ನೂ ಸಹ ತೆಗೆದುಕೊಂಡಿಲ್ಲ. 28ಸೊಸೈಟಿಗಳ ಪೈಕಿ 9ಸೊಸೈಟಿಗಳು ಪೂರ್ತವಾಗಿ ಹಣವನ್ನು ದುರುಪಯೋಗ ಮಾಡಿಕೊಂಡಿರುವುದನ್ನು ಸಹಕಾರ ಸಚಿವರ ಗಮನಕ್ಕೆ ತಂದಿದ್ದೇನೆ. ಉದ್ದೇಶಪೂರ್ವಕವಾಗಿ ಯಾವ ಸೊಸೈಟಿಗಳಲ್ಲಿ ಹಣದ ದುರುಪಯೋಗವಾಗಿದೆಯೋ ಅಂತಹ ಸೊಸೈಟಿಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಯಕರ್ತರುಗಳ ಮೇಲೆ ಸರಿಯಾದ ಕ್ರಮ ತೆಗೆದುಕೊಳ್ಳುವುದು ಸರ್ಕಾರದ ಕರ್ತವ್ಯ. ಈ ರೀತಿ ಕ್ರಮ ತೆಗೆದುಕೊಂಡರೆ ಬೇರೆ ಸಹಕಾರ ಸಂಘಗಳು ಚೆನ್ನಾಗಿ ಬೆಳೆಯುವುದಕ್ಕೆ ಅವಕಾಶವಾಗುತ್ತವೆ. ಇವತ್ತಿನ ದಿವಸ ಹೈದರಾಬಾದ್ ಕರ್ನಾಟಕದಲ್ಲಿರತಕ್ಕಂಥ ನೂಲಿನ ಸಹಕಾರ ಸಂಘಗಳು ಕೆಲವು ಮುಚ್ಚಿಹೋಗಿವೆ. ಗುರುಮಿಟ್‌ಕಲ್, ಚಿತಾಪುರ, ಮುದೋಳ, ಗೊಗಿ, ರಗಂಪೇಟ್-ನಲ್ಲಿರುವ ನೂಲಿನ ಗಿರಣಿಗಳು ಮುಚ್ಚಿ–ಹೋಗಿವೆ.

4–00 P.M.

ಅಲ್ಲಿ ಮೂರು ಲಕ್ಷದಷ್ಟು ಹಣ ದುರುಪಯೋಗವಾಗಿದೆ. ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟಿನಿಂದ ಕೆಲವು ಸಹಕಾರ ಸಂಘಗಳಿಗೆ ಸಾಲವಾಗಿ ಹಣ ಕೊಡುತ್ತಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ದುರುಪಯೋಗವಾಗಿರುವುದು ಕಂಡು ಬಂದು ಅದರ ಮೇಲೆ ತನಿಖೆ ಮಾಡಿ ಸರಕಾರದ ಆರ್ಡರು ಕೂಡ ಆಗಿದೆ. ಇದರ ಮೇಲೆ ಆರ್‌ಬಿಟ್ರೇಷನ್ ಮಾಡಲು ಅಧಿಕಾರಿಗಳು ಬಂದಾಗ ಇಲ್ಲಿನ

ಸೊಸೈಟಿಗಳಲ್ಲಿ ತನಿಖೆ ಮಾಡಲು ಬಂದಾಗ ಇಲ್ಲಿ ಯಾವ ಮಾಲು ಅಥವ ಬಟ್ಟೆಗಳೇ ಆಗಲೀ ಯಾವುದೂ ಇರಲಿಲ್ಲ ಮತ್ತು ಇಲ್ಲಿ ಯಾವ ಸಹಕಾರ ಸಂಘಗಳ ಶಿಬ್ಬಂಧಿಯೂ ಸಂಪೂರ್ಣವಾಗಿ ಇರಲಿಲ್ಲ. ಇಂತಹ ಸಹಕಾರ ಸಂಘಗಳ ಮೇಲೆ ಸರಕಾರ ಯಾವ ಕಾರ್ಯಕ್ರಮವನ್ನೂ ತೆಗೆದು ಕೊಳ್ಳುವ ಸಾಹಸವನ್ನೂ ಮಾಡುತ್ತಿಲ್ಲ. ತಪ್ಪು ಮಾಡಿಯೇ ಮಾಡುತ್ತಾರೆ. ಯಾವ ಮನುಷ್ಯನೇ ಆಗಲಿ ಯಾವ ಕಾಲಕ್ಕ ಯಾವ ಸಮಯದಲ್ಲಿ ಇಂತಹ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಾನೋ ಉದ್ದೇಶಪೂರ್ವಕವಾಗಿ ತಪ್ಪು ಮಾಡುವುದಿಲ್ಲ. ಕೇವಲ ಸರಕಾರದ ದೃಷ್ಟಿಯಿಂದ ಕೆಲಸ ಮಾಡು ವಾಗ ಇಂತಹ ಕಾರ್ಯಕರ್ತರ ಮೇಲೆ ಸರಿಯಾದ ಬೆಂಬಲವನ್ನು ಸಹಕಾರವನ್ನೂ ಕೊಡುವುದೂ ಸರಿಯಾಗಿರುತ್ತದೆ. ಆದರೆ ಸರಕಾರದ ಹಣವನ್ನೂ ಉದ್ದೇಶಪೂರ್ವಕವಾಗಿಯೇ ಹಾಳು ಮಾಡುವ ವರಿಗೆ ಸರಕಾರ ಯಾವ ವಿಧವಾದ ಬೆಂಬಲ ಹಾಗೂ ಸಹಕಾರಗಳನ್ನು ಖಂಡಿತ ಕೊಡಬಾರದು ಎಂದು ಸಲಹೆ ಮಾಡುತ್ತೇನೆ.

ಈಗೇನೋ ಆಡಿಟ್ ಕೂಡ ಹೆಚ್ಚಿನ ಪ್ರಮಾಣದಲ್ಲ ಮಾಡಬೇಕು ಎಂದು ತಾಲ್ಲೂಕಾ ಮಟ್ಟದಲ್ಲಿ ರುವ ಎಲ್ಲ ಸಹಕಾರ ಸಂಸ್ಥೆಗಳಲ್ಲೂ ಮಾಡುತ್ತಿದ್ದಾರೆ. ಆದರೆ ಆಡಿಟ್ ಮಾಡಿದ ನಂತರ ಅದಕ್ಕನು ಸಾರವಾಗಿ ಸರಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತಿದ್ದಾರೆಯೇ ಎಂದರೆ ಎಲ್ಲವೂ ಶೂನ್ಯ ವಾಗಿ ಕಾಣುತ್ತಿದೆ. ಆಡಿಟ್ ಆದಮೇಲೆ ಆಯಾ ಸಂಘ ಸಂಸ್ಥೆಗಳವರು ಅದರ ಬ್ಯಾಲೆನ್ಸ್ ಷೀಟನ್ನು ಮಾಡುತ್ತಾರೆ. ಇದರಲ್ಲಿ ಹೆಚ್ಚಿನ ಪ್ರಮಾಣದ ತಪ್ಪುಗಳು ಹಾಗೂ ಮಿಸ್ ಅಪ್ರೊಪ್ರಿಯೇಷನ್ ಆಗಿದೆ ಎಂದು ಕಂಡು ಬಂದರೆ ಅದನ್ನು ನೇರವಾಗಿ ಪೋಲೀಸು ಇಲಾಖೆಗೆ ಪ್ರಾಸಿಕ್ಯೂಷನ್ ಮಾಡುವಂತಹ ಅಧಿಕಾರ ಇಲ್ಲಿ ಕೊಡಬೇಕು. ಸೀನಿಯರ್ ಆಡಿಟ್ ಅಫೀಸರವರು ತನಿಖೆ ಮಾಡಿ ಒಂದು ಸ್ಪೆಷಲ್ ರಿಪೋರ್ಟನ್ನು ಸರಕಾರಕ್ಕೆ ಕೊಟ್ಟಾಗ ಅದರಲ್ಲಿ ಏನಾದರೂ ದುರುಪಯೋಗಗಳಿವೆ ಎಂದು ತಿಳಿದು ಬಂದರೆ ಅದರ ಬಗ್ಗೆ ಸರಕಾರದವರು ಸರಿಯಾಗಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುತ್ತಿಲ್ಲ. ಸುಮಾರು ನೂರರಲ್ಲಿ ಇಪ್ಪತ್ತೈದು ಕೇಸುಗಳಲ್ಲಾದರೂ ಉಗ್ರವಾದ ಕಾರ್ಯಕ್ರಮ ತೆಗೆದುಕೊಂಡು ಶಿಕ್ಷೆ ಮಾಡಬೇಕು ಎನ್ನುವ ಸಾಹಸ ಮಾಡುತ್ತಿಲ್ಲ. ಸರಕಾರ ಸ್ವಲ್ಪಮಟ್ಟಿಗಾದರೂ ಬಿಗಿಯಿಂದ ತಕ್ಕ ಕ್ರಮವನ್ನು ತೆಗೆದುಕೊಂಡರೆ ಸ್ವಲ್ಪವಾದರೂ ಇಂತಹ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡ ಬಲ್ಲವು. ಆಡಿಟ್ ಆದನಂತರ ರಿಪೋರ್ಟು ತಯಾರು ಮಾಡಿ ಕಾಯಿದೆಯ ಪ್ರಕಾರ ದಕ್ಷತೆಯಿಂದ ಇಲ್ಲಿ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಇದ್ದರೂ ಇಲ್ಲಿನ ಅಧಿಕಾರಿಗಳು ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎನ್ನುವ ಒಂದು ಸಾಹಸವನ್ನೂ ಮಾಡುತ್ತಿಲ್ಲ. ಒಂದು ಸಾರಿ ಒಂದು ಸಂಸ್ಥೆಯಲ್ಲಿ ಆಡಿಟ್ ಮಾಡಿದ ನಂತರ ಅಡ್ಮಿನಿಸ್ಟ್ರೇಷನ್ ಮಾಡುವ ಅಧಿಕಾರಿಗಳು ಸ್ವಲ್ಪ ಬಿಗಿ ಯಾದ ಕಾರ್ಯಕ್ರಮ ತೆಗೆದುಕೊಳ್ಳುವುದು ಅವಶ್ಯಕ. ನಮ್ಮ ಸ್ಟೇಟಿನಲ್ಲಿ ಸುಮಾರು ಹತ್ತೊಂಬತ್ತು ಸಾವಿರ ಸಹಕಾರ ಸಂಸ್ಥೆಗಳು ಇವೆ. ಹಳ್ಳಿಗಳಲ್ಲಿರುವ ಸಂಸ್ಥೆಗಳಿಂದಲೂ ಸಾಕಾದಷ್ಟು ದುರುಪ ಯೋಗಗಳು ಆಗುತ್ತಿವೆ. ಹಾಗೇ ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಅಲ್ಲಲ್ಲಿ ದುರುಪಯೋಗಗಳು ಆಗಿವೆ, ದುರ್ವ್ಯವಹಾರಗಳು ಆಗಿವೆ ಎಂದು ಸರಕಾರಕ್ಕೆ ವರದಿ ಮಾಡಿ ಅದರ ಫೈಲುಗಳನ್ನು ಕಳುಹಿಸಿ ಕೊಟ್ಟಿದ್ದರೂ ಕೂಡ ಅದರ ಬಗ್ಗೆ ಸರಕಾರ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುತ್ತಿಲ್ಲ. ಈ ರೀತಿಯಾಗಿ ಸಹಕಾರ ಸಂಸ್ಥೆಗಳಿಗೆ ಅವಕಾಶ ಮಾಡಿಕೊಟ್ಟರೆ ಇದು ಸರಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ಆದುದರಿಂದ ರಾಜ್ಯ ಮಟ್ಟದಲ್ಲಿರುವ ಸಂಸ್ಥೆಗಳಲ್ಲಿ, ಜಿಲ್ಲಾ ಮಟ್ಟದಲ್ಲಿರುವ ಸಹಕಾರ ಸಂಸ್ಥೆಗಳಲ್ಲಿ ಹಾಗೂ ಹಳ್ಳಿಗಳಲ್ಲಿರುವ ಸಹಕಾರ ಸಂಸ್ಥೆಗಳ ಮಟ್ಟದಲ್ಲಿ ಸರಿಯಾದ ರೀತಿಯಲ್ಲಿ ಕೆಲಸಗಳು ನಡೆಯುವ ವ್ಯವಸ್ಥೆ ಮಾಡಬೇಕಾದುದು ಸರಕಾರದ ಜವಾಬು ದಾರಿ ಮತ್ತು ಇಲಾಖೆಗಳ ಮುಖ್ಯ ಕರ್ತವ್ಯ. ಇದರಲ್ಲಿ ಕೆಲ ಕೆಲವು ಕಡೆ ಒಳ್ಳೆಯ ಸೆಕ್ರಟರಿಗಳೂ ಇದ್ದಾರೆ. ಕೆಲವು ಕಡೆಗಳಲ್ಲಿ ಒಳ್ಳೆಯ ಕೆಲಸಗಳನ್ನೂ ಮಾಡುತ್ತಿದ್ದಾರೆ ಆದರೆ ಅಂತಹ ಕಡೆಗಳಲ್ಲಿ ಸರಕಾರ ಅವರ ಕರ್ತವ್ಯವನ್ನು ಸರಿಯಾಗಿ ಮಾಡುತ್ತಿದ್ದಾರೆ ಎನ್ನುವ ಭಾವನೆ ಬೆಳೆಯುವಂತೆ ಮಾಡಿ ಅದನ್ನು ಪುಷ್ಟೀಕರಿಸಿ ಎಲ್ಲ ಕಡೆಗಳಲ್ಲೂ ಡಿಪಾರ್ಟ್‌ಮೆಂಟಿನವರು ಸರಿಯಾಗಿ ಕೆಲಸ ನಡೆಯುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಇಲಾಖೆಯಲ್ಲಿ ರಿಜಿಸ್ಟ್ರಾರ್‌ರವರು ಜಾಯಿಂಟು ರಿಜಿಸ್ಟ್ರಾರ್‌ರವರು ಹಾಗೂ ಅಸಿಸ್ಟೆಂಟು ರಿಜಿಸ್ಟ್ರಾರ್‌ರವರು ಎನ್ನುವ ಅಧಿಕಾರಿಗಳು ಇದ್ದಾರೆ. ಇವರು ಆಯಾ ಪ್ರದೇಶ ಗಳಲ್ಲಿರುವ ಸಂಘ ಸಂಸ್ಥೆಗಳಿಗೆ ಹೋಗಿ ತನಿಖೆ ಮಾಡಿ ಅಲ್ಲಿ ಏನಾದರೂ ಲೋಪದೋಷಗಳಿದ್ದರೆ ಅವನ್ನು ಸರಿಯಾಗಿ ಮಾಡಲು ಕ್ರಮ ತೆಗೆದುಕೊಳ್ಳಬೇಕು. ಆದರೆ ಇಂದು ಇಲಾಖೆಯಲ್ಲಿರುವ ಅಧಿಕಾರಿಗಳು ಯಾವ ರೀತಿಯಲ್ಲಿ ಅವರ ಕರ್ತವ್ಯವನ್ನು ನಿರ್ವಹಣೆ ಮಾಡಬೇಕೋ ಆ ರೀತಿ ಅವರುಗಳು ಮಾಡುತ್ತಿಲ್ಲ. ಆದುದರಿಂದ ಸರಕಾರದವರು ಇಲಾಖೆಯಲ್ಲಿರುವ ಅಧಿಕಾರಿಗಳ ಬಗ್ಗೆ ಸ್ವಲ್ಪ ಬಿಗಿಯಾಗಿ ಕೆಲಸ ಮಾಡುವಂತೆ ವ್ಯವಸ್ಥೆ ಮಾಡಬೇಕು ಮತ್ತು ಅವರಿಗೆ ಇನ್ನೂ ಹೆಚ್ಚು ಅನುಕೂಲಗಳನ್ನು ಮಾಡಿಕೊಡಬೇಕು. ಮತ್ತು ಇಲ್ಲಿರುವ ಅಧಿಕಾರಿಗಳು ಆಗಾಗ್ಗೆ ಸಹಕಾರ ಸಂಘಗಳಿಗೆ ಹೋಗಿ ಅಲ್ಲಿರುವ ತಪ್ಪುಗಳನ್ನು ತಿದ್ದಿ ಅಲ್ಲಿ ಏನಾದರೂ ದುರ್ವ್ಯವಹಾರಗಳು ಆಗಿದ್ದರೆ

(ಶ್ರೀ ಬೋಪೂಗೌಡ)

ಅದನ್ನು ಕಡಿಮೆ ಮಾಡಲಿಕ್ಕೆ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ಮಾಡುವ ಒಂದು ವ್ಯವಸ್ಥೆಯನ್ನು ಸ್ವಲ್ಪ ಬಿಗಿಯಾಗಿ ಮಾಡಬೇಕು.

ಇಷ್ಟು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ಸ್ವಾತಂತ್ರ್ಯ ಬಂದು ಇಪ್ಪತ್ತು ವರ್ಷಗಳಾದ ನಂತರ ಸಹಕಾರ ಸಂಘ ಸಂಸ್ಥೆಗಳ ಸಂಖ್ಯೆಗಳು ಜಾಸ್ತಿಯಾಗುತ್ತಿದೆಯೇ ವಿನಾ ಸಹಕಾರದ ತತ್ವದಲ್ಲಿ ಹಾಗೂ ಅದರ ನೀತಿಯೆಲ್ಲಾ ಗಾಳಿ ಗೋಪುರದಂತೆ ಹಾರಿ ಹೋಗುತ್ತಿದೆ. ಸರಕಾರದವರು ನಮಗೆ ಒದಗಿಸಿರುವ ಅಡ್ಮಿನಿಸ್ಟ್ರೇಷನ್ ರಿಪೋರ್ಟಿನಲ್ಲಿ ಹೇಳಿರುವಂತೆ ಸಹಕಾರ ಇಲಾಖೆ ಬಗ್ಗೆ ಹೇಳುತ್ತಾ ಸುಮಾರು ಇಪ್ಪತ್ತು ಸಹಸ್ರ ಸಹಕಾರ ಸಂಘಗಳಿವೆ ಮತ್ತು ಇದಕ್ಕಾಗಿ ಸುಮಾರು ಮೂರು ಕೋಟಿ ಚಿಲ್ಲರೆ ಮೆಂಬರ್ಸ್‌ಗಳಿದ್ದಾರೆ ಮತ್ತು ಸುಮಾರು 211 ಕೋಟಿಯವರೆಗೆ ಬಂಡವಾಳ ಹೂಡಿದ್ದಾರೆ ಎಂದು ಹೇಳುತ್ತಾರೆ. ಇದರಿಂದ ಕ್ವಾಲಿಟಿ ಬಿಸಿನೆಸ್ ಹಾಗೂ ಕ್ವಾಂಟಿಟಿ ಬಿಸಿನೆಸ್ ಎಷ್ಟು ಮಟ್ಟಿಗೆ ಜಾಸ್ತಿಯಾಗಿದೆ ಎನ್ನುವುದನ್ನು ನಾವು ನೋಡಿದ ಪಕ್ಷದಲ್ಲಿ ದಿನೇ ದಿನೇ ಸಹಕಾರ ಸಂಘಗಳಲ್ಲಿ ಮೂಲ ತತ್ವ ಏನು ಇದೆಯೋ ಇಂದು ಅದು ನಾಶವಾಗಿ ಹೋಗುತ್ತಿದೆ ಎಂದು ಹೇಳಿದರೆ ಅದು ಖಂಡಿತ ತಪ್ಪಾಗಲಾರದು. ಮಿತವ್ಯಯ ಮಾಡಬೇಕು ಎಂದು ಹೇಳುತ್ತಿರುವುದು ಇಂದು ದುಂದಿನ ವೆಚ್ಚವಾಗಿದೆ, ಪ್ರಾಮಾಣಿಕತೆ ಎನ್ನುವುದು ಹೋಗಿ ಭ್ರಷ್ಟಾಚಾರ ಹೆಚ್ಚಾಗುತ್ತಾ ಬರುತ್ತಿದೆ. ಸ್ವಚ್ಛ ಆಡಳಿತ ಬೇಕು ಎಂದು ಹೇಳುತ್ತಿರುವುದು ಈಗ ರಾಜಕೀಯ ವೈಪರೀತ್ಯವಾಗುತ್ತಾ ಬರುತ್ತಿದೆ. ಸಹಕಾರ, ಸಮಾಜವಾದ ಎನ್ನುವುದು ಹೋಗಿ ಇಂದು ದಿವಾಳಿತನದ ಭ್ರಷ್ಟಾಚಾರ ಜಾಸ್ತಿಯಾಗುತ್ತಾ ಬರುತ್ತಿದೆ ಎಂದು ಹೇಳಿದರೆ ಅದು ಖಂಡಿತ ತಪ್ಪಾಗಲಾರದು. ಇವೊತ್ತು ದೇಶದಲ್ಲಿ ಸಹಕಾರದ ಬಗ್ಗೆ ಯಾವ ರೀತಿಯಾದ ಭಾವನೆ ಬರುತ್ತಿದೆ ಎಂದರೆ,

> ಹೆಸರದು ಬಲು ಸೊಗಸು
> ದಾರಿಯದು ಬಲು ಹೊಲಸು
> ಎಲ್ಲ ಕುಲಕೆ ಒಂದೊಂದು ಸಂಘ,
> ಎಲ್ಲ ಕಸಬಿಗೆ ಒಂದೊಂದು ಸಂಘ,
> ಎಲ್ಲ ಸಂಸಾರಕೆ ಒಂದೊಂದು ಸಂಘ, ಒಳಹೊಕ್ಕಡೆ ಎಲ್ಲ ಬರಿ ಮಂಗ,
> ಇದನು ನೋಡಿ ನೀ ನಗಬೇಡ ರಂಗ......

ಎಂಬಂತೆ ಆಗುತ್ತಿದೆ. ಇಂದು ಈ ರೀತಿ ಸಹಕಾರ ನಮ್ಮಲ್ಲಿ ಬೆಳೆಯುತ್ತಿದೆ. ಸಹಕಾರ ಸಂಘಗಳಲ್ಲಿ ಸೇವೆಯೇ ಮುಖ್ಯ ಗುರಿ ಹಾಗೂ ವ್ಯವಸ್ಥಿತವಾದ ವಾತಾವರಣದಲ್ಲಿ ಬೆಳೆಯಲು ಪ್ರಾಮಾಣಿಕತೆಯಿಂದ ಕೆಲಸ ಮಾಡುವವರು, ಇಂತಹವರನ್ನೇ ಇಲ್ಲಿ ಕೆಲಸ ಮಾಡಲು ತೆಗೆದುಕೊಳ್ಳಬೇಕು ಎಂದು ಇದ್ದರೂ ಇವೊತ್ತಿನ ದಿನ ಸಹಕಾರ ಸಂಘಗಳಲ್ಲಿ ಆಗುತ್ತಿರುವ ಅನ್ಯಾಯ ಹಾಗೂ ಅಕ್ರಮಗಳು ಅವ್ಯವಸ್ಥೆಗಳು ದಿನೇ ದಿನೇ ಹೆಚ್ಚುತ್ತಿವೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇದರ ಬಗ್ಗೆ ಉದಾಹರಣೆಗಾಗಿ ಇಲ್ಲಿ ಹೇಳಬೇಕಾದರೆ ಈಚೆಗೆ ನಮ್ಮ ದೇಶದಲ್ಲಿ ಸಹಕಾರ ತತ್ವವನ್ನು ಚೆನ್ನಾಗಿ ದೇಶದಲ್ಲಿ ಆಚರಣೆಗೆ ತರಬೇಕು ಎಂದು ಮತ್ತು ದೇಶದಲ್ಲಿ ಕೋ-ಆಪರೇಟಿವ್ ಫಾರ್ಮಿಂಗ್ ಪದ್ಧತಿಯನ್ನು ಹೇಗೆ ತರಬಹುದು ಎನ್ನುವುದನ್ನು ವಿವೇಚನೆ ಮಾಡುವುದಕ್ಕಾಗಿ ಮಾನ್ಯ ಶ್ರೀ ನಿಜಲಿಂಗಪ್ಪನವರ ನೇತೃತ್ವದಲ್ಲೇ ಒಂದು ಎಕ್ಸ್‌ಪರ್ಟ್ ಕಮಿಟಿ ಎಂದು ಮಾಡಿದ್ದುದು ಎಲ್ಲರಿಗೂ ಗೊತ್ತಿದ್ದ ವಿಷಯ. ಈ ಕಮಿಟಿಯವರು ಶಿಫಾರಸು ಮಾಡಿದಂತೆ ಇಂದು ದೇಶದಲ್ಲಿ ಎಲ್ಲಾ ಕಡೆಗಳಲ್ಲಿಯೂ ಜಾಯಿಂಟು ಫಾರ್ಮಿಂಗು ಕೋ-ಆಪರೇಟಿವ್ ಸೊಸೈಟಿಗಳು ಸ್ಥಾಪನೆಯಾಗಿವೆ. ಇದರ ವೈಶಿಷ್ಟ್ಯವನ್ನು ತೆಗೆದುಕೊಂಡು ನೋಡುವುದಾದರೆ ಇದರಲ್ಲಿ ಕಾರ್ಯತಃ ಏನೂ ಆಗಿಲ್ಲ ಎನ್ನುವುದು ಅನೇಕ ಸಂಘಗಳಲ್ಲಿ ನೋಡಿದರೂ ನಮಗೆ ಏನೂ ಕಾಣಿಸುತ್ತಿಲ್ಲ. ಇವೊತ್ತಿನ ದಿನ ಹೇಳಬೇಕಾದರೆ ನಮ್ಮ ರಾಜ್ಯದ ಶಿವಮೊಗ್ಗ ಜಿಲ್ಲೆಯಲ್ಲಿ ಸುಮಾರು 24-26 ಫಾರ್ಮಿಂಗು ಕೋ-ಆಪರೇಟೀವ್ ಸೊಸೈಟಿಗಳನ್ನು ಸ್ಥಾಪನೆ ಮಾಡಿದ್ದಾರೆ. ಇದರಲ್ಲಿ ಸುಮಾರು ಅರ್ಧದಷ್ಟು ಸಂಖ್ಯೆ ಸಿಂಗಲ್ ಫಾರ್ಮಿಂಗ್ ಕೊ-ಆಪರೇಟೀವ್ ಸೊಸೈಟಿಗಳೆಂದು ಮಾಡಿದ್ದಾರೆ. ಇದಕ್ಕೆಲ್ಲಾ ಸರಕಾರದವರು ಗ್ರಾಂಟುಗಳನ್ನು ಕೊಡುತ್ತಾರೆ ಮತ್ತು ಸಬ್‌ಸಿಡಿಯನ್ನು ಕೊಟ್ಟಿದ್ದಾರೆ ಮತ್ತು ಸಾಲವನ್ನೂ ಕೊಟ್ಟಿದ್ದಾರೆ. ಇದರ ಜೊತೆಗೆ ಸರಕಾರದ ಜಮೀನು ಏನಾದರೂ ಇದ್ದರೆ ಅಂತಹ ಸರಕಾರದ ಜಮೀನನ್ನೂ ಕೊಡುತ್ತಾರೆ.

ಲ್ಯಾಂಡ್ ರಿಫಾರಂಸ್ ಆಕ್ಟ್ ಪ್ರಕಾರ ಸೀಲಿಂಗು ಲಿಮಿಟ್ ಇಷ್ಟೇ ಇರಬೇಕು ಎಂದು ನಿಗದಿಯಾಗಿದೆ ಎಂದು ಇದನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅಣ್ಣ ತಮ್ಮ ಇವರು ಸೇರಿಕೊಂಡು ಒಂದು ಸೊಸೈಟಿ ಮಾಡುವುದು, ಗಂಡ ಹೆಂಡತಿ ಸೇರಿಕೊಂಡು ಒಂದು ಸೊಸೈಟಿ ಮಾಡುವುದು ಮತ್ತು ಮಕ್ಕಳುಗಳು ಅಳಿಯಂದಿರುಗಳು ಸಂಬಂಧಿಗಳು ಸೇರಿಕೊಂಡು ಒಂದು ಸೊಸೈಟಿ ಮಾಡುವುದು ಹೀಗೆ ಒಂದು ಸಂಸಾರದಲ್ಲಿರುವವರೇ ಒಂದು ಸೊಸೈಟಿ ಮಾಡಿಕೊಂಡು ಮೋಸ ಮಾಡುತ್ತಿದ್ದಾರೆ. ಇವೊತ್ತು ದೇಶದಲ್ಲಿ ಇಂತಹ ಸೊಸೈಟಿಗಳನ್ನು ಮಾಡಿಕೊಂಡು ಸರಕಾರದ ಹಣವನ್ನು ಹೊಡೆಯುತ್ತಿದ್ದಾರೆ, ಸರಕಾರದ ಜಮೀನನ್ನು ಹೊಡೆಯುತ್ತಿದ್ದಾರೆ. ನಮ್ಮ ಸಭೆಯಲ್ಲಿ ಸದಸ್ಯರಾಗಿರುವ ಮಾನ್ಯ ಸದಸ್ಯರಾದ ಶ್ರೀಮಾನ್ ಚನ್ನಬಸಪ್ಪನವರನ್ನು ಏತಕ್ಕಾಗಿ ಇಂತಹ ಸೊಸೈಟಿಗಳನ್ನು ಮಾಡಿದ್ದಾರೆ ಎಂದು ಕೇಳಿದರು. ಮಾನ್ಯ ಸದಸ್ಯರು ಹಿಂದೆ ಮಂತ್ರಿಗಳಾಗಿದ್ದವರು ಮತ್ತು ಇಂದು ಕಾಂಗ್ರೆಸ್ ಪಕ್ಷದಲ್ಲಿಲ್ಲದವರು. ಅವರ ವಿಚಾರ ಗೊತ್ತಿದ್ದರೆ ಈ ರೀತಿಯಾಗಿ ಹೇಳುತ್ತಿರಲಿಲ್ಲ. ಅವರು ಮಾಡಿರುವುದರ ಮೂಲ ಉದ್ದೇಶವಾದರೂ ಏನು ಎನ್ನುವುದನ್ನು ಯಾರೂ ಅರ್ಥಮಾಡಿಕೊಂಡಿಲ್ಲ, ನಿಜವಾಗಿಯೂ ಶ್ರಮ ವಹಿಸಿ ಒಂದು ಸಂಘ ಮಾಡಿಕೊಂಡು ವ್ಯವಸಾಯವನ್ನು ಅಭಿವೃದ್ಧಿ ಮಾಡುವುದಕ್ಕಾಗಿ ಅವರು ಸೊಸೈಟಿ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ ಮತ್ತು ಸರಕಾರದಿಂದ ಅವರೇನು ಹಣವನ್ನು ಪಡೆದಿಲ್ಲ. ನಾನು ಯಾರಮೇಲೂ ಇಲ್ಲಿ ಹೇಳುತ್ತಿಲ್ಲ. ಅವರು ಹಿಂದೆ ಮಂತ್ರಿಗಳಾಗಿದ್ದಾಗ ಅವರೇನು ಸಹಕಾರ ಮಂತ್ರಿಗಳಾಗಿದ್ದರೋ ಇಲ್ಲವೊ ನನಗೆ ಗೊತ್ತಿಲ್ಲ. ಅವರು ಮಾಡಿರುವುದು ಸರಿ ಎಂದು ಸಮರ್ಥಿಸುವುದಕ್ಕಾಗಿ ಹೇಳುತ್ತಿಲ್ಲ. ಸರಕಾರದವರು ತಮ್ಮ ಪಕ್ಷದವರನ್ನು ಬೆಳೆಸುವುದಕ್ಕೋಸ್ಕರ ಸರ್ಕಾರದ ಲಕ್ಷಾಂತರ ಎಕರೆಗಳಷ್ಟು ಭೂಮಿಯನ್ನು ಇಂದು ಫಾರ್ಮಿಂಗು ಕೋ-ಆಪರೇಟಿವ್ ಸೊಸೈಟಿಗಳಾಗಿ ಮಾಡಿಕೊಂಡಿದ್ದಾರೆ, ಇದರಲ್ಲಿ ಸಿಂಗಲ್ ಫ್ಯಾಮಿಲಿ ಫಾರ್ಮಿಂಗ ಸೊಸೈಟಿಗಳೇ ಬಹು ಜಾಸ್ತಿಯಾಗಿವೆ. ಇವಕ್ಕೆಲ್ಲಾ ಎಷ್ಟು ಹಣ ಸರಕಾರ ವೆಚ್ಚ ಮಾಡುತ್ತಿದೆ ಎನ್ನುವ ದಾಖಲಾ ನೋಡಿದರೆ ಎಷ್ಟು ಹಣ ಇದರಲ್ಲಿ ಹಾಳಾಗಿ ಹೋಗುತ್ತದೆ ಎನ್ನುವುದನ್ನು ಇಲ್ಲಿ ನೋಡಬಹುದು. ಫಾರ್ಮಿಂಗು ಕೋ-ಆಪರೇಟಿವ್ ಸೊಸೈಟಿಗಳು ಎಷ್ಟೋ ಆಗುತ್ತಿವೆ ಎಷ್ಟೋ ಕಡೆ ಇದರಲ್ಲಿ ಲೆಕ್ಕ ಹಾಕಿ ಹೇಳಬಹುದು. ನಮ್ಮ ಬೆಂಗಳೂರು ಸಿಟಿಗೆ ಹತ್ತಿರದಲ್ಲೇ ಯಶವಂತಪುರದಲ್ಲಿ ಮಲ್ಲಗಲ್ಲಿ ವ್ಯಾಲೀ ಫಾರ್ಮಿಂಗ್ ಕೋ-ಆಪರೇಟಿವ್ ಸೊಸೈಟಿ ಎಂದು ಒಂದು ಬೋರ್ಡಿದೆ. ಇಲ್ಲಿ ಇರುವ ಜಮೀನನ್ನು ಟ್ರಸ್ಟು ಬೋರ್ಡಿನವರು ಈಗ ಹತ್ತು ಸಾವಿರದಿಂದ ಹದಿನೈದು ಸಾವಿರದವರೆಗೆ ಬೆಲೆಯನ್ನು ನಿರ್ಧಾರ ಮಾಡಿದ್ದಾರೆ. ಇದನ್ನು ಅಕ್ವೈರು ಮಾಡಿಕೊಳ್ಳಬೇಕು ಎಂದೂ ಇದ್ದರು. ಇಲ್ಲಿ ಇರುವ ಜಮೀನು ಸುಮಾರು 159 ಎಕರೆ 22 ಗುಂಟೆಯಷ್ಟು ಇದೆ. ಸುಮಾರು ಹತ್ತು ಸಾವಿರದಂತೆ ಇವರ ಬೆಲೆಯಾದರೂ ಇವರ ಒಟ್ಟು ಬೆಲೆ ಸುಮಾರು 17 ಲಕ್ಷದಷ್ಟು ಆಗುತ್ತದೆ. ಈಗಾಗಲೇ ಶೇಕಡಾ 80ರಷ್ಟು ಭೂಮಿಯನ್ನು ಇಲ್ಲಿ ಎಲ್ಲರೂ ಮಾರಿಕೊಂಡಿದ್ದಾರೆ. ಇದಕ್ಕಾಗಿ ಹಾಕಿದ ಬಂಡವಾಳವೇನು ಮತ್ತು ಇದರ ಖರ್ಚುಗಳೇನು ಎನ್ನುವ ವಿವರಗಳೆಲ್ಲಾ ನನ್ನಲ್ಲಿವೆ. ಇದನ್ನೆಲ್ಲಾ ಲೆಕ್ಕ ಹಾಕಿ ನೋಡಿದರೆ ಸರಕಾರ ಕೊಟ್ಟಂತಹ ಹಣ ದುರ್ವ್ಯಯವಾಗಿ ಹೇಗೆ ಹೋಗುತ್ತಿದೆ ಎನ್ನುವುದು ಗೊತ್ತಾಗುತ್ತದೆ. ಸುಮ್ಮನೆ ಹೆಸರಿಗೆ ಮಾತ್ರ ಇಲ್ಲಿ ಒಂದು ಬೋರ್ಡು ಇದೆ. ಆ ಬೋರ್ಡು ಕೂಡ ಈಗ ಗೆದ್ದಲು ತಿಂದು ಹೋಗುತ್ತಿದೆ. ಹೆಸರಿಗೆ ಮಾತ್ರ ಇಂತಹ ಸೊಸೈಟಿಗಳು ಇವೆ ಎಂದು ಇದೆ. ಇದು ಬೆಂಗಳೂರಿಗೆ ಸಮೀಪದಲ್ಲೇ ಇದೆ. ಇಂತಹ ಸಂಸ್ಥೆಗಳಿಗೆ ಸರಕಾರ ಹಣ ಕೊಟ್ಟು ಸಹಾಯ ಮಾಡುವಂತಾದರೆ ಸಹಕಾರ ತತ್ವ ಎಲ್ಲಿದೆ ಸಮಾಜವಾದ ಎಲ್ಲಿದೆ ಎಂದರೆ ಸಹಕಾರ ತತ್ವ ಇಲ್ಲಿ ಸಂಪೂರ್ಣವಾಗಿ ನಿರ್ನಾಮವಾಗಿ ಹೋಗಿದೆ. ಎಂದು ಹೇಳಿದರೆ ಅದು ತಪ್ಪಾಗಲಾರದು. ಈ ಸೊಸೈಟಿ ಯಾವಾಗ ರಿಜಿಸ್ಟರು ಆಗಿದೆ ಮತ್ತು ಯಾರ್ಯಾರು ಎಷ್ಟೆಷ್ಟು ಎಕರೆಗಳಷ್ಟು ಭೂಮಿ ಇದರಲ್ಲಿ ಇದ್ದುದನ್ನು ಬೇರೆ ಕಡೆಗೆ ಮಾರಿದ್ದಾರೆ ಮತ್ತು ಯಾವ ಪ್ರಮಾಣದಲ್ಲಿ ಇಲ್ಲಿ ಪ್ರಾಮಾಣಿಕತೆ ಆಡಳಿತ ನಡೆದಿದೆ ಎನ್ನುವ ವಿವರಗಳೆಲ್ಲಾ ನನ್ನಲ್ಲಿವೆ. ಬೇಕಾದರೆ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಸ್ವತಃ ಹೋಗಿ ಈ ಸೊಸೈಟಿ ಹೇಗೆ ನಡೆಯುತ್ತಿದೆ ಎನ್ನುವುದನ್ನು ನೋಡಬೇಕು.

ಖಾದಿ ಬೋರ್ಡು ನಡೆಸುವ ಅನೇಕ ಸೊಸೈಟಿಗಳು ಇವೆ. ಖಾದಿ ಬೋರ್ಡಿನ ಸೊಸೈಟಿಗಳ ಮೇಲೆ ಅನುಮಾನ ಬರುತ್ತದೆ. ನಮ್ಮ ಚಿಕ್ಕನಾಯಕನಹಳ್ಳಿಯಲ್ಲಿ ಒಂದು ಸೊಸೈಟಿ ಇದೆ. ಈ ಸೊಸೈಟಿಯ ಗಾಣ ಗೆದ್ದಲು ತಿಂದಿದೆ. ಸೊಸೈಟಿಯ ಬೋರ್ಡಿಗೆ ಕೂಡ ಗೆದ್ದಲು ಹಿಡಿದಿರುತ್ತವೆ. ಮನಸ್ಸು ಬಂದ ಹಾಗೆ ಜನರಿಗೆ ಸಾಲ ಕೊಟ್ಟಿದ್ದಾರೆ. ಆದುದರಿಂದ ಸೊಸೈಟಿಗಳು ಹೇಗೆ ನಡೆಯುತ್ತಿವೆ ಎನ್ನುವುದನ್ನು ಪರಿಶೀಲನೆ ಮಾಡಬೇಕು ಎಂದು ಹೇಳುತ್ತೇನೆ.

ಈ ಸೊಸೈಟಿಗಳಲ್ಲಿ ಶಾರ್ಟೇಜ್ ಬಂದಿದೆ ಎಂದು ಲೆಕ್ಕ ತೋರಿಸುತ್ತಾರೆ. ಕಬ್ಬಿಣ ಹೇಗೆ ಶಾರ್ಟೇಜ್ ಬರುತ್ತದೆ, ಅಕ್ಕಿ ಬೇಳೆ ಸಕ್ಕರೆ ಶಾರ್ಟೇಜ್ ಬರುತ್ತದೆ. ಈ ರೀತಿ ಶಾರ್ಟೇಜ್ ಬಂದರೂ ಕೂಡ ಕಳೆದ ಐದು ವರ್ಷಗಳಿಂದ ಅದೇ ಸೆಕ್ರೆಟರಿ ಅಲ್ಲಿ ಇದ್ದಾರೆ. ಅಲ್ಲಿರುವ ಅಧಿಕಾರಿಗಳು ಶಾರ್ಟೇಜ್ ಬಂದಿದೆ ಎಂದು ತೋರಿಸಿ ಬ್ಲಾಕ್ ಮಾರ್ಕೆಟ್ ಮಾಡುತ್ತಿದ್ದಾರೆ. ಇದರ ಬಗ್

(ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ)

ಒಂದು ರೆಜಲ್ಯೂಷನ್ ಮಾಡಿ ಕಳಿಸಿದರೂ ಕೂಡ ಏನು ಕ್ರಮ ತೆಗೆದುಕೊಂಡಿಲ್ಲ. ಇದು ಸಹಕಾರ ಸಂಘಗಳನ್ನು ಬೆಳೆಸುವ ಉದ್ದೇಶವೇ ಅಥವಾ ನಿಮ್ಮ ಪಕ್ಷ ಬೆಳೆಸುವುದಕ್ಕೆ ಇದು ಇದೆಯೇ ? ಕಾಂಗ್ರೆಸ್ ಪಕ್ಷದ ಜನರು ಸೊಸೈಟಿಗಳಲ್ಲಿ ಹಣ ಹೊಡೆದಿದ್ದಾರೆ, ಮೋಸ ಮಾಡುತ್ತಾರೆ ಎಂದು ಹೇಳುತ್ತೇನೆ. ಸೊಸೈಟಿಗಳಲ್ಲಿ ಅನ್ಯಾಯ ಅತ್ಯಾಚಾರ ನಡೆಯುತ್ತಿರುವುದನ್ನು ಹೇಳುವುದಕ್ಕಾಗುವುದಿಲ್ಲ.

ಇನ್ನು ವುಲನ್ ವೀವರ್ಸ್ ಸೊಸೈಟಿ ಎಂದು ಇದೆ. ಇದರ ಕೇಂದ್ರ ಸೊಸೈಟಿಯಲ್ಲಿ ಒಂದು ಲಕ್ಷ ರೂಪಾಯಿ ಉಣ್ಣೆ ಇದೆ. ಅಲ್ಲಿನ ಸಂಘಕ್ಕೆ ಯುದ್ಧಕ್ಕೆಂದು 40 ಸಾವಿರ ಕಂಬಳಿ ಆರ್ಡರ್ ಕೇಂದ್ರ ಉಲ್ಲನ್ ಸಂಘದಿಂದ ಬಂತು. ಪ್ರತಿಯೊಂದು ಕಂಬಳಿಯ ಕಾಸ್ಟ್‌ಶೀಟ್‌ನಲ್ಲಿ ಅಗತ್ಯವಾದ ಎಲ್ಲಾ ಐಟಂಗಳಿಗೂ ಬೆಲೆ ತೋರಿಸಿ ಕೇಂದ್ರ ಸಂಘವು ಕಳುಹಿಸಿತು. ಅಲ್ಲಿನ ಆಡಳಿತ ವರ್ಗವು ಕಂಬಳಿ ಒಂದಕ್ಕೆ 2 ರೂಪಾಯಿ ಬೆಲೆ ಬಾಳುವ ಉಣ್ಣೆಯನ್ನು ಹೆಚ್ಚಿಗೆ ಡ್ರಾ ಮಾಡಿ ಕೆಲ್ಸ ಸಾಗಿಸಿತು. 40 ಸಾವಿರ ಕಂಬಳಿಗೆ ಆಡಳಿತ ವರ್ಗಕ್ಕೆ 80 ಸಾವಿರ ಲಾಭ. ಸಂಘಕ್ಕೆ ಅಷ್ಟೆ ಲುಕ್ಸಾನು ಇದನ್ನು ಕೇಳುವವರು ಯಾರು ಸ್ವಾಮಿ. ಇಂದು ಈ ಸೊಸೈಟಿಯಲ್ಲಿ ಹತ್ತು ಸಹಸ್ರ ರೂಪಾಯಿ ಮೈನಸ್ ಅಸೆಟ್ಸ್ ಆಗಿದೆ. ಈ ರೀತಿ ಸಹಕಾರ ಸಂಘಗಳು ನಡೆಯುತ್ತಿವೆ. ಕಳೆದ 25 ವರ್ಷ ನಾನು ಸಹಕಾರ ಸಂಘಗಳ ವ್ಯಾಪ್ತಿಯಲ್ಲಿದ್ದೇನೆ. ಕೆಲವು ಸಮಯ ನಾನು ಸೆಕ್ರೆಟರಿ ಆಗಿದ್ದೆ ಅಧ್ಯಕ್ಷ ಕೂಡ ಆಗಿದ್ದೆ. ನನಗೆ ಇವುಗಳ ವ್ಯವಹಾರ ಚೆನ್ನಾಗಿ ಗೊತ್ತಿದೆ. ಹಿಂದಕ್ಕೆ ಇವು ಚೆನ್ನಾಗಿ ನಡೆಯುತ್ತಿದ್ದವು. ಆದರೆ ಇವತ್ತಿನ ದಿವಸ ಇವು ಕೆಲಸ ಮಾಡುವುದರಲ್ಲಿ ದಕ್ಷತೆ ಇಲ್ಲ. ಇದೇ ರೀತಿ ಸಹಕಾರ ಸಂಘಗಳು ನಡೆದರೆ ದೇಶದಲ್ಲಿ ಖಂಡಿತವಾಗಿ ಸಹಕಾರ ಸಂಘಗಳು ಉಳಿಯುವುದಿಲ್ಲ.

†ಶ್ರೀ ಎಸ್. ಕೆ. ಅಮೀನ್ (ಉಡುಪಿ).—ಸನ್ಮಾನ್ಯ ಸಭಾಪತಿಗಳೇ, ಈ ಹೊತ್ತು ಈ ಸದನದ ಮುಂದೆ ಸಹಕಾರ ಸಚಿವರು ಇಟ್ಟಿರತಂಕ್ಕಂಥ ಬೇಡಿಕೆಗಳನ್ನು ಗ್ರಾಮಾಂತರ ಅಭಿವೃದ್ಧಿ, ಸಹಕಾರ, ಸಾಮುದಾಯಿಕ ಅಭಿವೃದ್ಧಿ ಇತ್ಯಾದಿ ವಿವಿಧ ಬಾಬುಗಳ ಬೇಡಿಕೆಗಳನ್ನು ಮನಃ ಪೂರ್ವಕವಾಗಿ ಸಮರ್ಥಿಸುತ್ತಾ ಈ ಬೇಡಿಕೆಗಳ ಪರವಾಗಿ ಒಂದೆರಡು ವಿಷಯ ಹೇಳಲು ಆಶಿಸುತ್ತೇನೆ. ನಮ್ಮ ಸಭೆಯ ಹಿರಿಯ ಸದಸ್ಯರಾದ ಮಾನ್ಯ ಸಿದ್ಧವೀರಪ್ಪನವರು ತಮ್ಮ ಭಾಷಣದಲ್ಲಿ ಗ್ರಾಮಾಂತರ ಅಭಿವೃದ್ಧಿ ಕುರಿತು ಮಾತನಾಡುತ್ತಾ ನಮ್ಮ ನಾಡಿನಲ್ಲಿ ಗ್ರಾಮ ಪಂಚಾಯಿತಿಗಳಿಗೆ ಯಾವ ಸ್ಥಾನ ಕೊಟ್ಟಿದೆ ಎನ್ನುವುದನ್ನು ಸ್ಥೂಲವಾಗಿ ವಿವರಿಸಿದರು. ಗ್ರಾಮ ಪಂಚಾಯಿತಿಗಳಿಗೆ ಏಳು ವರ್ಷದಿಂದ ಚುನಾವಣೆ ನಡೆಯದೇ ಇರುವುದಕ್ಕೆ—ಈ ವರ್ಷ ಚುನಾವಣೆ ನಡೆದಿದ್ದರೂ ಕೂಡ—ಇದರಲ್ಲಿ ಕಾಂಗ್ರೆಸ್ಸಿಗರ ಹಸ್ತಕ್ಷೇಪ ಇದೆ ಎಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ಒಂದು ವಿಷಯ ಸೂಚಿಸ ಬಯಸುತ್ತೇನೆ. ಅದೇನೆಂದರೆ ನಮ್ಮ ಪಂಚಾಯಿತಿಗಳಲ್ಲಿ ಚುನಾವಣೆಗಳನ್ನು ನಡೆಸಿದಂಥ ರಿಟರ್ನಿಂಗ್ ಆಫೀಸರರು ಪ್ರಿಸೈಡಿಂಗ್ ಆಫೀಸರರು ನೇಮಿಸಿರುವುದು ಸರಕಾರಿ ಅಧಿಕಾರಿಗಳು ಇರತಕ್ಕಂಥಾದ್ದು. ಇರತಕ್ಕಂಥ ಈ ಅಧಿಕಾರಿಗಳ ಪೈಕಿ 85 ಪರ್ಸೆಂಟ್ ಜನ ಕಾಂಗ್ರೆಸ್ಸಿಗೆ ವಿರೋಧವಾಗಿದ್ದಾರೆ, ಅವರು ಸಹಕರಿಸುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಬಯಸುತ್ತೇನೆ. ನಮ್ಮ ಜಿಲ್ಲೆಯ ಬಗ್ಗೆ ಹೇಳವುದಾದರೆ ಹಸ್ತಕ್ಷೇಪ ಆಗಿಲ್ಲ ಅವರು ಅದನ್ನು ಪ್ರೋತ್ಸಾಹಿಸಿಲ್ಲ ಎಂದು ಸೂಚಿಸ ಬಯಸುತ್ತೇನೆ. ಅವರು ಹೇಳಿದಂತೆ ಇರದೆ ಇಂದು ಜನ ಹಸ್ತಕ್ಷೇಪ ಪ್ರತಿಭಟಿಸುವ ವಿಚಾರ ತಿಳಿದಿದ್ದಾರೆ. 380 ಇಲೆಕ್ಷನ್ ಪಿಟಿಷನ್ಸ್ ಹೈಕೋರ್ಟ ಮುಂದೆ ಬಂದಿವೆ. ಯಾವ ರೀತಿ ಹಸ್ತಕ್ಷೇಪ ಇರಲಿಲ್ಲ ಎಂದು ನಾನು ನಂಬಿದ್ದೇನೆ. ಇಂದು ದೇಶದಲ್ಲಿ ಗ್ರಾಮಾಭಿವೃದ್ಧಿಯಾಗ ಬೇಕು, ಪಂಚಾಯಿತಿಗಳ ಕಾರ್ಯಕ್ಷೇತ್ರ ಬೆಳೆಯಬೇಕು, ಈ ಮೂಲಕ ಹೆಚ್ಚಿನ ಕೆಲಸ ನಡೆದು ನಮ್ಮ ಪ್ರಜಾಪ್ರಭುತ್ವ, ನಮ್ಮ ಗಣರಾಜ್ಯ ಹೆಚ್ಚಿನ ಪ್ರಗತಿ ಪಡೆಯಬೇಕು ಮತ್ತು ಸರಕಾರ ಇದನ್ನು ಗಮನದಲ್ಲಿಟ್ಟುಕೊಂಡು ಕಾರ್ಯ ಮಾಡಬೇಕು ಎಂದು ಸೂಚಿಸ ಬಯಸುತ್ತೇನೆ.

ಎರಡನೇಯದಾಗಿ ಸಹಕಾರ ರಂಗದ ಬಗ್ಗೆ ನಮ್ಮ ಈ ಸಭೆಯ ಎರಡೂ ಕಡೆಯ ಸದಸ್ಯರು ಕೂಡ ವಿರೋಧಿಸುತ್ತಿರುವವರೇ ಆಗಲಿ ಅನುಮೋದಿಸುತ್ತಿರುವವರೇ ಆಗಲಿ ಇದು ಕಟ್ಟಿದೆ ಅಂದರೆ ಅದರಲ್ಲಿಯ ಅನೀತಿ ಹೋಗುವುದಿಲ್ಲ. ಸಹಕಾರ ಸಂಘಗಳು ಆಗಬೇಕು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಆರ್ಥಿಕ ರಂಗದಲ್ಲಿ ಇದು ಗಂಭೀರವಾದ ಸೇವೆ ಸಲ್ಲಿಸಬೇಕಾಗಿದೆ, ಸಲ್ಲಿಸುತ್ತಾ ಬಂದಿದೆ. ಇದನ್ನು ಕಾರ್ಯಗತ ಗೊಳಿಸುವಲ್ಲಿ ಕೆಲವು ಟೀಕೆ ಮಾಡುತ್ತಿದ್ದಾರೆ. ಇದರಲ್ಲಿ ಕೊರತೆ ಕಾಣುತ್ತಿದೆ, ದುರ್ವ್ಯವಹಾರ ಸೇರಿದೆ ಎಂದು ಹೇಳುತ್ತಿದ್ದಾರೆ. ಇದರಲ್ಲಿ ಎರಡು ತರಹ ಇದೆ. ನಮ್ಮ ದೇಶದಲ್ಲ ಪರನಿಂದೆ ಪರಮ ಪಾಪ ಎಂದು ಹೇಳುತ್ತಾರೆ. ಆದರೆ ಇತ್ತೀಚೆಗೆ ಇತರ

ಜನರಲ್ಲಿರಬಹುದಾದ ಕೊರತೆಗಳನ್ನು ತಪ್ಪುಗಳನ್ನು ಮಾತ್ರ ಕಂಡುಕೊಂಡು ಅದನ್ನು ಹೆಚ್ಚಾಗಿ ಹೇಳುತ್ತಿದ್ದೇವೆಯೇ ಹೊರತು ಒಳ್ಳೆಯದನ್ನು ಕಂಡು ಅದನ್ನು ಹೇಳುವ ಗುಣವನ್ನು ನಾವು ಬಿಟ್ಟು ಬಿಟ್ಟಂತೆ ಕಾಣುತ್ತಿದೆ. ನಮ್ಮ ರಾಜ್ಯದಲ್ಲಿ ಸಹಕಾರ ರಂಗದಲ್ಲಿ ರಾಜ್ಯ ಪುನರ್ರಚನೆಯಾಗಿ ಐದೂ ರಾಜ್ಯಗಳಿಂದ ಎಲ್ಲರೂ ಬಂದು ಸೇರಿದ್ದೇವೆ. ನಮ್ಮಲ್ಲಿ ಸಹಕಾರ ಚಳುವಳಿ ಬಂದು 64 ವರ್ಷಗಳಾಗಿವೆ. ಹತ್ತು ವರ್ಷಗಳಿಂದೀಚೆಗೆ ಪ್ರತಿಯೊಂದು ರಾಜ್ಯದಲ್ಲಿಯೂ ಅವರವರಿಗೆ ಬೇಕಾದಂಥ ಘಟನೆಗಳು ಅವರಲ್ಲಿದ್ದು ಪ್ರತಿಯೊಂದು ಕಡೆಯಲ್ಲಿಯೂ ಅವರ ರಾಜ್ಯಕ್ಕೆ ಅನುಗುಣವಾಗಿ ಕಾನೂನನ್ನು ಅವರು ಅನ್ವಯಿಸಿಕೊಂಡು ಬರುತ್ತಿದ್ದಾರೆ. ಈ ರಾಜ್ಯದಲ್ಲಿ ಕೂಡ ಅದನ್ನು ಒಂದುಗೂಡಿಸುವಂಥ ಪ್ರಸಂಗದಲ್ಲಿ ಕೆಲವು ತೊಂದರೆಗಳು ಘಟಿಸಿರಬೇಕು. ಆದಾಗ್ಯೂ ಕೂಡ ನಮ್ಮ ಈ ಮೈಸೂರು ರಾಜ್ಯ ಪುನರ್ರಚಿತವಾದ ನಂತರ 19 ಸಾವಿರ ಸರಕಾರ ಸಂಸ್ಥೆಗಳಿದ್ದು 280 ಕೋಟಿ ರೂಪಾಯಿಗಳಿಗೂ ಮಿಕ್ಕಿದ ವ್ಯವಹಾರ ನಡೆಯುತ್ತಿರುವಾಗ ಕೆಲವು ಕಡೆಗಳಲ್ಲಿ ಕೊರತೆ ಬರುವುದು ಸ್ವಾಭಾವಿಕವಾಗಿದೆ. ಆದರೂ ನಾವು ಸಾಧಿಸಿರುವುದು ಬಹಳವಾಗಿದೆ. ಇದನ್ನು ನಾನು ಒತ್ತಿ ಹೇಳಬಯಸುತ್ತೇನೆ. ಕೆಟ್ಟವರು ಎಲ್ಲ ಕಡೆಯಲ್ಲಿಯೂ ಇದ್ದಾರೆ, ಕೆಟ್ಟತನ ಅಲ್ಲಲ್ಲಿ ಆಗುತ್ತಿರಬಹುದು. ಅದನ್ನು ನಿಲ್ಲಿಸುವುದು ನಮ್ಮೆಲ್ಲರ ಕರ್ತವ್ಯ. ಆದುದರಿಂದ ಒಂದು ನಿರ್ದಿಷ್ಟವಾದ, ಒಂದು ಒಳ್ಳೆಯ ಕೆಲಸವನ್ನು ನಾವು ನಿಂದಿಸುವುದು ಸರಿಯಲ್ಲ; ಆ ಮನೋಭಾವನೆಯನ್ನು ನಾವೆಲ್ಲರೂ ಬದಲಾಯಿಸಿಕೊಳ್ಳಬೇಕಾಗಿದೆ. ಜನತೆಯು ಅಭಿವೃದ್ಧಿ ವಿಷಯದಲ್ಲಿ ಆಸಕ್ತಿಯನ್ನು ವಹಿಸಿ ನಾವೆಲ್ಲರೂ ದುಡಿಯುವುದು ಆವಶ್ಯಕ. ಈ ದಿಸೆಯಲ್ಲಿ ನಮ್ಮ ರಾಜ್ಯದ ಸಹಕಾರಿ ರಂಗಕ್ಕೆ ಅಗ್ರಿಕಲ್ಚರಲ್ ರೀ ಫೈನಾನ್ಸಿಂಗ್ ಕಾರ್ಪೋರೇಷನ್‌ನವರು 15 ಕೋಟಿ ರೂಪಾಯಿಗಳನ್ನು ಕೊಡಲು ನಿರ್ಧರಿಸಿದ್ದಾರೆ. ಆದರೆ ನಾವು ನಮ್ಮ ಸಹಕಾರ ಸಂಸ್ಥೆಗಳನ್ನು, ನಮ್ಮ ಸಹಕಾರ ರಂಗವನ್ನು ತೆಗಳುತ್ತಿದ್ದರೆ ಇದಕ್ಕೆ ಹಣವನ್ನು ಕೊಡುವವರು ಸ್ವಲ್ಪ ಬೆದರುತ್ತಾರೆ, ಅಂಜಿಕೆಯನ್ನು ತೋರಿಸುತ್ತಾರೆ. ಆ ಪ್ರಸಂಗವನ್ನು ನಾವು ತಂದುಕೊಳ್ಳಬಾರದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಮೀನುಗಾರಿಕೆಯ ಸರಕಾರಿ ಸಂಸ್ಥೆ ಯಾವ ರಾಜಕೀಯ ಆಸಕ್ತಿಯೂ ಇಲ್ಲದೆ, ಯಾರ ಪ್ರೇರಣೆಯೂ ಇಲ್ಲದೆ, ಸಹಕಾರ ರಂಗದಲ್ಲಿ ಮಾಡಿದಂಥ ಕೆಲಸವನ್ನು ಮೆಚ್ಚಿಕೊಂಡು ಅದನ್ನು ನೋಡಿದಂಥ ಜನರು ಪ್ರಥಮ ಬಾರಿಗೆ ಭಾರತದೇಶದಲ್ಲಿ, ಮೈಸೂರು ರಾಜ್ಯದಲ್ಲಿರುವಂಥ ಈ ಸಂಸ್ಥೆಗೆ ಒಂದು ಕೋಟಿ 25 ಲಕ್ಷ ರೂಪಾಯಿಗಳ ಒಂದು ಯೋಜನೆಯನ್ನು ಮಂಜೂರುಮಾಡಿದೆ. ನಿಜವಾಗಿ ಇದು ಬಹಳ ಸಂತೋಷಪಡತಕ್ಕ ವಿಚಾರ. ಮೈಸೂರು ರಾಜ್ಯದಲ್ಲಿ ಮೀನುಗಾರಿಕೆ ಬಹಳ ಹಿಂದುಳಿದಂಥ ವೃತ್ತಿ. ಇದನ್ನು ಯಾರೂ ಮಾಡಲಿಕ್ಕೆ ಬರುತ್ತಿದ್ದಿಲ್ಲ. ಹರಿಜನರಿಗಿಂತಲೂ ಹಿಂದೆ ಇದ್ದ ಜನಾಂಗವಾಗಿತ್ತು ಮೀನು ಹಿಡಿಯುವವರ ಜನಾಂಗ. ಅವರಲ್ಲಿ ಯುವಜನರು ಮುಂದೆ ಬಂದ ನಂತರ ಸಹಕಾರ ಸಂಘಗಳನ್ನು ಮಾಡಿಕೊಂಡು ಅವರೂ ಮುಂದೆ ಬಂದಿದ್ದಾರೆ ಮತ್ತು ಆರ್ಥಿಕವಾಗಿ ಶಕ್ತಿಯನ್ನು ಬೆಳೆಸಿಕೊಂಡಿದ್ದಾರೆ. ಅವರು ಈಗ ಸಂತೋಷವಾಗಿ ಬಾಳುತ್ತಿದ್ದಾರೆ. ನಮ್ಮ ರಾಜ್ಯದ ಕರಾವಳಿ ಪ್ರದೇಶದಲ್ಲಿ ಮೀನುಗಾರಿಕೆಯಲ್ಲಿ ಬಹಳ ಮುಂದೆ ಬಂದಿದ್ದಾರೆ, ಮುಂದೆ ಬರುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ ಮತ್ತು ಸಂತೋಷದಿಂದ ಈ ವೃತ್ತಿಯನ್ನು ಹೊಂದಿಕೊಂಡು ಜೀವಿಸುತ್ತಿದ್ದಾರೆ. ವಿದ್ಯಾವಂತರು ಕೂಡ ಮೀನುಗಾರಿಕೆಯನ್ನು ಈಗ ಅವಲಂಬಿಸಿ ಮುಂದೆ ಬರುತ್ತಿದ್ದಾರೆ. ಇದು ಒಳ್ಳೆಯ ಲಕ್ಷಣ. ಆದುದರಿಂದ ನಾವು ಸಹಕಾರ ರಂಗದ ಬಗ್ಗೆ ತೆಗಳುವುದು ಒಳ್ಳೆಯದಲ್ಲ; ನಾವು ಇದರ ವಿಚಾರವಾಗಿ ಬಹಳ ಲಘುವಾಗಿ ಮಾತನಾಡುವುದರಿಂದ ನಮಗೆ ಬರಬಹುದಾದ ನೆರವು ತಪ್ಪಿಹೋಗುವ ಪ್ರಸಂಗ ಬರುತ್ತದೆ. ಸಹಕಾರ ಸಂಘಗಳಿಗೆ ಬೇಕಾದ ಹಣವನ್ನು ಸರ್ಕಾರದವರೇ ಕೊಡಲಿಕ್ಕೆ ಸಾಧ್ಯವಾಗುವುದಿಲ್ಲ. ಸಂಘ ಸಂಸ್ಥೆಗಳವರು ಮುಂದೆ ಬರಬೇಕಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ದಕ್ಷತೆಯನ್ನು ತೋರಿಸಿ, ನಮ್ಮಲ್ಲಿರುವಂಥ ಕೊರತೆಯನ್ನು ನೀಗಿಸಿ ಸಹಕಾರ ಸಂಸ್ಥೆಗಳು ಹೆಚ್ಚಿನ ಕೆಲಸವನ್ನು ಮಾಡುವಂತೆ ಜನರಿಗೆ ಹೆಚ್ಚಿನ ಪ್ರಯೋಜನ ಸಿಕ್ಕುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಕೇಂದ್ರ ಮಂತ್ರಿಗಳಾದ ಜಗಜೀವನರಾಂ ಅವರು ಸಹಕಾರ ಮಂತ್ರಿಗಳ ಸಮ್ಮೇಳನವೊಂದನ್ನು ಕರೆದಿದ್ದಾರೆ. ಅದರಲ್ಲಿ ಸಹಕಾರಿ ಸಂಸ್ಥೆಗಳಿಗೆ ಸಂಬಂಧಪಟ್ಟ ಕಾನೂನನ್ನು ಒಂದೇ ವಿಧವಾಗಿ ತರುವಂತೆ ಪ್ರಯತ್ನಿಸಬೇಕು ಎಂಬುದಾಗಿ ಸಹಕಾರ ಮಂತ್ರಿಗಳನ್ನು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಸಭಾಪತಿಗಳಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವಿ. ಎನ್. ಪಾಟೀಲ್.—ಅಧ್ಯಕ್ಷ ಮಹಾಶಯರೇ, ಈ ಬೇಡಿಕೆಯನ್ನು ನಾನು ಕೆಳಕಂಡ ಕೆಲವು ಕಾರಣಗಳಿಂದ ವಿರೋಧ ಮಾಡುತ್ತೇನೆ. ಕೋ-ಆಪರೇಟಿವ್ ಡಿಪಾರ್ಟಮೆಂಟಿನಲ್ಲಿ ಕೋ-ಆರ್ಡಿನೇಷನ್ ಇಲ್ಲದೆ ಇರುವುದಕ್ಕಾಗಿ ಅದು ಯಶಸ್ವಿಯಾಗಿ ನಡೆಯುತ್ತಿಲ್ಲ. ಒಬ್ಬ ಮನುಷ್ಯನಿಗೆ

(ಶ್ರೀ ವಿ. ಎನ್. ಪಾಟೀಲ್)

ಇದನ್ನು ಹೋಲಿಸಿದರೆ ಅದು ಆ ಮನುಷ್ಯನ ಅಸ್ಥಿಪಂಜರದ ಹಾಗೆ ಇದೆ. ಅದರಲ್ಲಿ ಪ್ರಾಣವಿಲ್ಲ ದಂತಾಗಿದೆ. ತಾಲ್ಲೂಕು ಮಟ್ಟದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಆಫೀಸರ್‌ಗಳು ಏನೂ ಅಧಿಕಾರಗಳಿಲ್ಲದೆ ಎಕ್ಸಿಕ್ಯೂಟ್ ಮಾಡುವುದಕ್ಕೆ ಇದ್ದಾರೆ ಎಂದರೆ ಕೋರ್ಟಿನಲ್ಲಿ ಅಮೀನ ಆದವರನ್ನು ಎಕ್ಸಿಕ್ಯೂಟ್ ಮಾಡುವುದಕ್ಕೆ ಕರೆದುಕೊಂಡು ಹೋಗುತ್ತಾರೆ. ಆ ರೀತಿ ಇದೆ. ಆದೃಷ್ಟಿಯಿಂದ ತಾಲ್ಲೂಕು ಮಟ್ಟದಲ್ಲಿ ಏನೇನೂ ಅಧಿಕಾರವಿಲ್ಲದೆ ಪಂಖಗಳನ್ನು ಕತ್ತರಿಸಿ ಗಿಣಿಯನ್ನು ಪಂಜರದಲ್ಲಿ ಕೂಡಿದ ಹಾಗೆ ಇವರನ್ನು ಮಾಡಿದ್ದಾರೆ. ಯಾರಾದರೂ ಮಂತ್ರಿಗಳು ಬಂದರೆ ಅವರಜೊತೆಯಲ್ಲಿ ಟೂರ್ ಹೋಗಬೇಕು ಎಂ.ಎಲ್.ಎ. ಆದವರಿಗೆ ಹೆದರಿಸಿ ಕೊಳ್ಳುವಂಥವರೂ ದುರುಪಯೋಗಪಡಿಸಿಕೊಳ್ಳುವಂಥಾವರೂ ಇದ್ದು ಅವರ ಜೊತೆಯಲ್ಲಿಯೂ ಜೀಪ್ ತೆಗೆದುಕೊಂಡು ಸುತ್ತಾಡುತ್ತಾರೆ. ಅದಕ್ಕಿಂತ ಹೆಚ್ಚು ಅಧಿಕಾರವನ್ನು ಅವರಿಗೆ ಕೊಟ್ಟಿಲ್ಲ. ಅವರನ್ನು ಯಾವುದಾದರೂ ವಿಚಾರವಾಗಿ ಕೇಳಿದರೆ ಡಿವಿಜನಲ್ ಕಮಿಷನರಿಗೆ ಬರೆದು ಕೇಳಿಕೊಳ್ಳಬೇಕು ಇಲ್ಲವೆ ಡೆಪ್ಯೂಟಿ ಕಮೀಷನರನ್ನು ಬರೆದು ಕೇಳಬೇಕೆಂದು ಎಂದು ಹೇಳುತ್ತಾರೆ. ಕೋ-ಆಪರೇಟಿವ್ ಇಲಾಖೆ, ನ್ಯಾಷನಲ್ ಎಕ್ಸ್‌ಟೆನ್‌ಷನ್ ಸ್ಕೀಮು, ನ್ಯಾಷನಲ್ ಡೆವಲಪ್‌ಮೆಂಟ್ ಸ್ಕೀಮ್ ಇವುಗಳ ಕೆಳಗೆ ನಮ್ಮ ರಾಜ್ಯ ಮುಂದುವರಿಯಬೇಕು, ನಮ್ಮ ದೇಶವನ್ನು ಮುಂದಕ್ಕೆ ತರಬೇಕು ಎನ್ನುವ ಕಾರ್ಯಕ್ರಮ ಎಷ್ಟರ ಮಟ್ಟಿಗೆ ಫೇಲ್ ಆಗುತ್ತ ಬಂದಿದೆ ಎಂದರೆ ಕೇಂದ್ರ ಸರ್ಕಾರದವರು ಕೂಡ ಇದರ ಸಲುವಾಗಿಯೇ ಕ್ಯಾಬಿನೆಟ್ ದರ್ಜೆಯ ಮಂತ್ರಿ ಇದ್ದವರನ್ನು ತೆಗೆದು ಬೇರೆ ಮಂತ್ರಿಗಳಿಗೆ ಈ ಕೆಲಸವನ್ನು ಅವರ ಕೆಲಸದ ಜೊತೆಗೆ ಕೊಟ್ಟಿದ್ದಾರೆ. ಈ ರೀತಿಯಾಗಿ ಕೇಂದ್ರ ಸರ್ಕಾರದವರು ಈ ಯೋಜನೆಗಳ ಪ್ರಾಮುಖ್ಯತೆಯನ್ನು ಕಳೆದಿದ್ದಾರೆ. ನಿಜವಾಗಿಯೂ ಇವು ಸರಿಯಾಗಿ ಕೆಲಸ ಮಾಡಬೇಕಾದರೆ ಎಲ್ಲ ಖಾತೆಗಳಲ್ಲಿಯೂ ಕೋ ಆರ್ಡಿನೇಷನ್ ಬೇಕು. ಸೋಷಿಯಲಿಸ್ಟಿಕ್ ಪ್ಯಾಟರ್ನ್‌ನಲ್ಲಿ ನಂಬಿಕೆ ನಿಮಗೆ ಇಲ್ಲದಂತಾಗಿದೆ. ಹಳ್ಳಿಯ ರೈತನಿಗೆ ಸಾಲದ ಶೂಲದಿಂದ ವಿಮೋಚನೆ ಸಿಗಲಿಲ್ಲ. ಯಾರು ಅಶಕ್ತರಿರುತ್ತಾರೆ ಅವರನ್ನು ಮುಂದೆ ತರಬೇಕು. ಯಾರು ಕೆಳಗೆ ಬಿದ್ದವರಿರುತ್ತಾರೆ ಅವರನ್ನು ಮೇಲೆ ತರುವುದಕ್ಕೆ ಪ್ರಯತ್ನ ಮಾಡಬೇಕು. ಸಹಕಾರ ಇಲಾಖೆ ಈ ದಿಸೆಯಲ್ಲಿ ಅಷ್ಟಿಷ್ಟು ಫೇಲ್ ಆಗಿಲ್ಲ, ಪೂರ್ತಿಯಾಗಿ ಫೇಲ್ ಆಗಿದೆ. ಸ್ವಾತಂತ್ರ್ಯ ಬಂದು 20 ವರ್ಷಗಳಾದರೂ ಕೂಡ ಇವೊತ್ತಿನ ದಿವಸ ಹೊಸದಾಗಿ ಸ್ಥಾಪನೆಯಾದಂಥ ಸೊಸೈಟಿಗಳಿಂದ ಸುಖ ಯಾರಿಗೆ ಸಿಕ್ಕುತ್ತಿದೆ, ಯಾರಿಗೆ ಅನುಕೂಲವಾಗುತ್ತದೆ ಎಂದರೆ ಅಲ್ಲಿ ಕೆಲವರು ಸಿರಿವಂತ ವ್ಯವಸಾಯಗಾರರು ಮತ್ತು ಬಡ ರೈತರಿಗೆ ಸಾಲ ಕೊಡುವ ಸಾಲಗಾರರಿಗೆ ಮನಾಫಲ ಆಗಿ ಯಾರಿಗೆ ಎಷ್ಟು ಶಕ್ತಿ ಇದೆ ಅವರಿಗೆ ಕೆಲಸವಾಗುತ್ತಿದೆಯೇ ಹೊರತಾಗಿ ಸಾಲದಿಂದ ಹೊಲ ಬಿಡಿಸಿಕೊಳ್ಳುವ ರೈತನಿಗೆ ಸಹಾಯವಿಲ್ಲ. ಪ್ರಾಮಾಣಿಕತನದಿಂದ ಕೆಲಸಗಳು ನಡೆಯುತ್ತಿಲ್ಲ. ತಾಲ್ಲೂಕು ಮಟ್ಟದ ಸೊಸೈಟಿಗಳಿಂದ ಜಿಲ್ಲಾ ಮಟ್ಟದ ಬ್ಯಾಂಕುಗಳಿಗೆ ಬಂದು, ಅಲ್ಲಿಂದ ಬೆಂಗಳೂರಿಗೆ ಬಂದು ತಿರುಗಿ ಹೋಗಬೇಕಾಗಿದೆ. ಬಾವಿ ತೋಡುವ ಸಾಲ ಬಾವಿ ಕಟ್ಟಡ ಮುಗಿದರೂ ಕೂಡ ಕುಂಟ ನೆಪದಿಂದ ಪೂರ್ತಿ ಹಣ ಕೊಡುವುದಿಲ್ಲ. ಈ ತೆರನಾದ ವ್ಯವಸ್ಥೆಯಿಂದ ಮೂರು ವರ್ಷವಾದರೂ ಕೂಡ ಬಾವಿಗಳಿಗೆ ಸಂಬಂಧಿಸಿದ ಕಡೇ ಕಂತು, ಫೈನಲ್ ಇನ್‌ಸ್ಟಾಲ್‌ಮೆಂಟುಗಳು ಎಷ್ಟೋ ಜನರಿಗೆ ಸಿಕ್ಕಿಲ್ಲ. ಮಂಜೂರು ಆಗಿರುವ ಕೆಲಸಗಳಿಗೂ ಹಣ ಸಿಕ್ಕುತ್ತಿಲ್ಲ. ಕೋ-ಆಪರೇಟಿವ್ ಡಿಪಾರ್ಟಮೆಂಟಿನಲ್ಲಿ ಬಾವಿಗಾಗಿ ಸಾಲ ಮಂಜೂರಾಗಿದೆ ಎಂದು ಸಾಲ ಮಾಡಿ ಪೂರ್ತಿ ಕೆಲಸ ಮಾಡಿಸುತ್ತಾರೆ. ಲಂಚದ ಆಶೆಯಿಂದ ಲಂಚ ಕೊಡುವವರೆಗೆ ಸರ್ವೆ ಮಾಡಿ ದುಡ್ಡು ಕೊಡುವುದಿಲ್ಲ. ಅವರಿಗೆ ಮಂಜೂರಾಗಿರುವ ಹಣ ಬಾರದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಕೈಕೊಂಡ ಟೈಂನಲ್ಲಿ ಬಾವಿ ತೋಡಲಿಲ್ಲವೆಂದು ಬಾವಿ ಮುಗಿದರೂ ಸಾಲ ಕೊಡುವುದಿಲ್ಲ. ಈ ರೀತಿಯಾಗುವುದಕ್ಕೆ ಯಾರು ಕಾರಣಕರ್ತರು ಎನ್ನುವುದನ್ನು ನೋಡಬೇಕು. ಮುಂದೆ ಈ ರೀತಿಯಾಗಿ ನಡೆದುಕೊಳ್ಳದಂತೆ ತಕ್ಕ exemplary ಶಿಕ್ಷೆ ಒಬ್ಬ ಅಧಿಕಾರಿಗೆ ಕೊಟ್ಟರೆ ಇಂಥ ಅನ್ಯಾಯ ಮಾಡುವುದು ಕಡಿಮೆಯಾಗುವುದು.

4-30 P.M.

ಬಿ. ಡಿ. ಓ ಬಳಿಗೆ ರೈತ ಬಂದಕೂಡಲೆ ಸೂಪರ್‌ವೈಜರು ಸರ್ವೆ ಮಾಡಿಲ್ಲ, ಫೈನಲ್ ಎಸ್ಟಿಮೇಟ್ ಮಾಡಿಲ್ಲ, ಎಷ್ಟು ಕೆಲಸವಾಗಿದೆ ಎಂದು ವರದಿ ಬಂದಿಲ್ಲ ಎಂದು ಹೇಳುತ್ತಾರೆ. ಅನಕ್ಷರಸ್ಥನಾದ ಬಡ ರೈತ ಸೂಪರ್‌ವೈಜರ ಹತ್ತಿರ ಹೋಗಿ ವರದಿ ತರಬೇಕೆಂದರೆ ಆ ಅಧಿಕಾರಿ ಹೋದಾಗ ಊರಿನಲ್ಲಿರುವುದಿಲ್ಲ. ಕಾರ್ಮಿಕರಿಗೆ ರೈತರಿಗೆ ನಿಜವಾಗಿಯೂ ಸಹಾಯವಾಗಬೇಕಾದರೆ ಅಧಿಕಾರಿಗಳು ಸೇವಾ ಮನೋಭಾವದಿಂದ ಕೆಲಸ ಮಾಡಬೇಕು. ನಮ್ಮ ಬಿದರೆ ಜಿಲ್ಲೆ ಬಹಳ ಹಿಂದುಳಿದಿದೆ, ಎಷ್ಟೋ ಸೊಸೈಟಿಗಳಿಂದ ಮನೆ ಕಟ್ಟಲು ಇನ್‌ಸ್ಟಾಲ್‌ಮೆಂಟ್ ಬಂದಿಲ್ಲ,

ಹರಿಜನರ ಸೊಸೈಟಿಗಳಿಗೆ ಅವಕಾಶ ಸಿಕ್ಕುವುದಿಲ್ಲ. ಹರಿಜನರಾಗಿ ಹುಟ್ಟಿರುವುದೇ ಮಹಾ ಪಾಪವಾಗಿದೆ. ಹರಿಜನರ ಸೊಸೈಟಿಗೆ ಹಣ ಮಂಜೂರು ಮಾಡಬೇಕಾದರೆ ಹೆಚ್ಚು ಅಬ್‌ಜೆಕ್‌ಷನ್ನುಗಳನ್ನು ಹಾಕುತ್ತಾರೆ. ಇದು ಸಲ್ಲದು. ಒಂದುವೇಳೆ ಟೆಕ್ನಿಕಲ್ಲಾಗಿ ಏನಾದರೂ ತೊಂದರೆಯಿದ್ದರೆ ಅದನ್ನು ನಿವಾರಣೆ ಮಾಡಿ ಹಳ್ಳಿಗಳಲ್ಲಿರುವವರಿಗೆ ಬೇಗ ಸಾಲ ಒದಗಿಸಬೇಕು. ವೀಕರ್ ಸೆಕ್‌ಷನ್ನಿಗೆ ಅನುಕೂಲವಾಗುವಂತೆ ವ್ಯವಸ್ಥೆ ಮಾಡಬೇಕು. ಹಳ್ಳಿಯಲ್ಲಿ ರೈತರಿಗೆ ಕನ್‌ಸ್ಯೂಮರ್ಸ್ ಕೋಆಪರೇಟಿವ್ ಸೊಸೈಟಿ ಇದೆ, ತಾಲ್ಲೂಕು ಅಗ್ರಿಕಲ್ಚರಲ್ ಪ್ರೊಡ್ಯೂಸಿಂಗ್ ಸೊಸೈಟಿ ಇದೆ. ಅಲ್ಲಿ ಜೋಳದ ವಿಚಾರವಾಗಿ ಆರೋಪವಾಯಿತು. ಅದಕ್ಕೆ ಹೊಣೆ ಯಾರು? ಹಳ್ಳಿಯಿಂದ ಜೋಳ ತಂದರೆ ಅದರಲ್ಲಿ ವೇಸ್ಟೇಜ್ ಹೋಗುತ್ತದೆ ಎಂದು ಎರಡು ಕೆ.ಜಿ. ಹೆಚ್ಚಾಗಿ ತೆಗೆದುಕೊಳ್ಳುತ್ತಾರೆ, ಅದನ್ನು ಹೆಗ್ಗಣಗಳು ತಿಂದು ಹಾಕುತ್ತವೆ. ಒಬ್ಬ ರೈತನಿಂದ ವ್ಯತ್ಯಾಸ ಬರುವುದೆಂದು ಐದು ಕೆ.ಜಿ ಹೆಚ್ಚಾಗಿ ಪಡೆಯುತ್ತಾರೆ, ಹೀಗೆಲ್ಲಾ ಮಾಡಿ ತಿಂದು ಹಾಕುತ್ತಾರೆ. ಹೈದರಾಬಾದು ಕರ್ಣಾಟಕದಲ್ಲಿ ಕೆ.ಜಿ. ಲೆಕ್ಕದಲ್ಲಿ ತೂಕ ಮಾಡುವುದಿಲ್ಲ, ಅಲ್ಲಿ ಒಕ್ಕಳ, ಇಕ್ಕಳ ಎಂದು ಹೇಳುತ್ತಾರೆ, ಒಂದು ಚೀಲ ತುಂಬಿದರೆ ಒಂದು ಕ್ವಿಂಟಾಲ್—ಹತ್ತು ಕೆ.ಜಿ. ಜೋಳ ಇರುತ್ತದೆ. ಆದರೆ ಅದಕ್ಕೆ ಒಂದು ಕ್ವಿಂಟಾಲಿನ ಬೆಲೆ ಕೊಡುತ್ತಾರೆ. ರೈತರಿಗೆ ಸೊಸೈಟಿಗಳಲ್ಲಿ ಒಳ್ಳೆಯ ಜೋಳ ಸಿಕ್ಕುವುದಿಲ್ಲ. ಬಿದರೆ ಕನ್‌ಸ್ಯೂಮರ್ಸ್ ಕೋ-ಆಪರೇಟಿವ್ ಸೊಸೈಟಿ 800 ಕ್ವಿಂಟಾಲ್ ಕೆಟ್ಟುಹೋಗಿದೆ ಹಿಂದೆ 220 ಕ್ವಿಂಟಾಲ್ ಎಂದು ನಾನು ಹೇಳಿದ್ದು ತಪ್ಪು. ಜನರಿಗೆ ಕೆಟ್ಟದ್ದು ಮಾರಾಟವಾಗಿದೆ. ಬಡವರಿದ್ದಾರೆ ಎಂದು ಹೀಗೆ ಮಾಡಬಾರದು. ಎಲ್ಲರೂ ಮನುಷ್ಯರೇ. ಡೆಪ್ಯುಟಿ ಕಮಿಷನರು ಅದು ಮನುಷ್ಯರು ಉಪಯೋಗಿಸುವುದಕ್ಕೆ ಲಾಯಕ್ಕಿಲ್ಲವೆಂದು ಹೇಳಿದ ಮೇಲೂ ಕೂಡ ಅದನ್ನು ಹಂಚಿದರೆ ಏನು ಹೇಳಬೇಕು? ಅವಿದ್ಯಾವಂತರು ಹೆಚ್ಚಾಗಿದ್ದಾರೆ, ಅವರುಗಳಿಗೆ ಅನುಕೂಲವಾಗಲಿ ಎಂದು ಸಹಕಾರ ಚಳವಳಿ ಜಾರಿಗೆ ಬಂದರೂ ಕೂಡ ಅದರಿಂದ ಹಿಂದುಳಿದವರಿಗೆ ಸಾಕಷ್ಟು ಸಹಾಯವಾಗಿಲ್ಲ. ಹೆಂಗಸರ ಸಲುವಾಗಿ ಮಹಿಳಾ ಸಮಾಜ ಮಾಡಿದ್ದಾರೆ, ಬಿ ಡಿ ಓ ಗಳ ಕೈಕೆಳಗೆ ಅವು ಕೆಲಸ ಮಾಡುತ್ತಿವೆ. ಆರು ತಿಂಗಳಾದರೂ ಕೆಲವು ಮಂಜೂರಾತಿ ಇಲ್ಲದೆ ಇವೆ. ಇದಕ್ಕೆ ಮುಖ್ಯ ಕಾರಣ ಜವಾಬ್ದಾರಿಯಿಲ್ಲದೆ ಇರುವುದು, ಮತ್ತು ಸ್ವಾರ್ಥ ಹೆಚ್ಚಾಗಿ ಬೆಳೆದಿರುವುದು. ಯಾರೋ ಮಾಡಿದ ಪಾಪಕ್ಕೆ ಬಡವರು ಹೊಣೆಯಾಗಬೇಕಾಗಿದೆ.

ಇನ್ನೊಂದು ಸಲಹೆ. ಅಗ್ರಿಕಲ್ಚರಲ್ ಕ್ರೆಡಿಟ್ ಸೊಸೈಟಿಯಿದೆ, ಬಾವಿಗಳಿಗೆ ಸಾಲ ಕೊಡುವ ವ್ಯವಸ್ಥೆ ಇದೆ. ಆದರೆ ರೈತರು ಅರ್ಜಿಕೊಟ್ಟು ಎರಡು ತಿಂಗಳಾದರೂ ಸಾಲ ಮಂಜೂರಾಗುವುದಿಲ್ಲ ಒಂದು ಕಂತನ್ನ ಕೊಟ್ಟರೆ ಮುಂದಿನ ಕಂತನ್ನು ಕೊಡುವುದು ಕಷ್ಟ. ಹೆಚ್ಚು ಆಹಾರ ಬೆಳೆಯಬೇಕೆಂದು ಹೇಳುವಾಗ ಅವಕ್ಕೆ ತಕ್ಕಂತೆ ಸಹಾಯ ಮಾಡಬೇಕು. ಸಹಕಾರ ಇಲಾಖೆ ಸಾಕಷ್ಟು ಸಹಾಯ ಮಾಡಿ ಆಹಾರವನ್ನು ಹೆಚ್ಚಾಗಿ ಬೆಳೆಯಲು ಅವಕಾಶ ಮಾಡಬೇಕು ಎಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಂ. ಎಂ. ಜೆ. ಸದ್ಯೋಜಾತ್ (ಕೂಡ್ಲಿಗಿ).—ಅಧ್ಯಕ್ಷರೇ, ನಮ್ಮ ಮುಂದಿರುವ ಬೇಡಿಕೆಗಳನ್ನು ಸಮರ್ಥಿಸುತ್ತಾ, ಒಂದೆರಡು ಅಂಶಗಳನ್ನು ಪ್ರಸ್ತಾಪಿಸುತ್ತೇನೆ. ಈಗ ಮಾನ್ಯ ಮಿತ್ರರಾದ ಶ್ರೀ ರಾಮೇಗೌಡರು ಜಾಯಿಂಟ್ ರಿಜಿಸ್ಟ್ರಾರ್ ಮತ್ತು ಡೆಪ್ಯುಟಿ ರಿಜಿಸ್ಟ್ರಾರ್ ವಿಚಾರ ಹೇಳಿದರು. ಹಿಂದೆ ಇಬ್ಬರು ಅಧಿಕಾರಿಗಳಿದ್ದರು, ಈಗ ಹೆಚ್ಚು ಅಧಿಕಾರಿಗಳಿದ್ದರೂ ಕೆಲಸಕಾರ್ಯ ಸರಿಯಾಗಿ ನಡೆಯುತ್ತಿಲ್ಲ ಎಂದು ಹೇಳಿದರು. ಆದರೆ ಜಾಯಿಂಟ್ ರಿಜಿಸ್ಟ್ರಾರರು ಮತ್ತು ಡೆಪ್ಯುಟಿ ರಿಜಿಸ್ಟ್ರಾರರು ಬಹಳ ದಕ್ಷತೆಯಿಂದ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅವರು ಸರಿಯಾಗಿ ಕೆಲಸ ಮಾಡಬೇಕಾದರೆ ಜೀಪ್ ಕೊಡಬೇಕು. ನಮ್ಮ ಬಳ್ಳಾರಿ ಜಿಲ್ಲೆಯಲ್ಲಿ ಕೆಲವು ಸೊಸೈಟಿಗಳಲ್ಲಿ ದುರುಪಯೋಗ ನಡೆದಿರುವುದರ ಬಗ್ಗೆ ಸಂಬಂಧಪಟ್ಟ ಮಂತ್ರಿಗಳಿಗೆ, ಅಧಿಕಾರಿಗಳಿಗೆ ಮತ್ತು ಮುಖ್ಯ ಮಂತ್ರಿಗಳಿಗೆ ಹೇಳಿದರೂ ಇದುವರೆಗೆ ಅವರು ಸೊಸೈಟಿಗಳ ಮೇಲೆ ಯಾವ ಚರ್ಯೆಯನ್ನೂ ತೆಗೆದುಕೊಂಡಿಲ್ಲ, ಶೀಘ್ರ ಕ್ರಮ ತೆಗೆದುಕೊಳ್ಳಬೇಕು.

ಈಗ ಸರಕಾರದವರು ಎಕ್ಸ್‌ಪರ್ಟ್ ಕಮಿಟಿ ಸಹಕಾರಿ ಬ್ಯಾಂಕುಗಳಿಗೆ ನೇಮಕ ಮಾಡಬೇಕೆಂದಿದ್ದಾರೆಂದು ಕೇಳಿದ್ದೇನೆ. ಅದು ನಿಜವಾಗಿಯೂ ಒಳ್ಳೆಯ ಸೂಚನೆ. ಅದಷ್ಟು ಬೇಗ ಅದನ್ನು ನೇಮಕ ಮಾಡಬೇಕು. ಈ ಬ್ಯಾಂಕುಗಳು ಉತ್ತಮ ರೀತಿಯಿಂದ ಕೆಲಸ ಮಾಡುವಂತೆ ನೋಡಿಕೊಳ್ಳಬೇಕು. ಈಗ ಜಿಲ್ಲಾ ಸಹಕಾರಿ ಬ್ಯಾಂಕ್ ಡೈರೆಕ್ಟರ ಚುನಾವಣೆ ಪದ್ಧತಿ ಸರಿಯಾಗಿಲ್ಲ, ಕನಿಷ್ಠ ಪಕ್ಷ ಅದರಲ್ಲಿ ಭಾಗವಹಿಸುವವರ ಹೆಸರನ್ನು ಡೆಲಿಗೇಟುಗಳ ಹೆಸರನ್ನು 15 ದಿವಸ ಮುಂಚೆಯಾದರೂ ತಿಳಿಸಬೇಕು. ಕೋ-ಆಪರೇಟಿವ್ ಎಕ್ಸ್‌ಟೆನ್‌ಷನ್ ಆಫೀಸರುಗಳನ್ನು ತಾಲ್ಲೂಕು ಮಟ್ಟದಲ್ಲಿ ಕಳುಹಿಸುತ್ತಾರೆ, ಅವರಿಗೆ ಟ್ರೈನಿಂಗ್ ಕೊಟ್ಟು ಕಳುಹಿಸಬೇಕು, ಇಲ್ಲದಿ ಸಾಕಷ್ಟು ಅವರಿಂದ ಪ್ರಯೋಜನವಾಗುವುದಿಲ್ಲ. ಶ್ರೀ ಚಿಕ್ಕೇಗೌಡರು ಪಿ.ಎಲ್.ಡಿ. ಬ್ಯಾಂಕ್

(ಶ್ರೀ ಎಂ. ಎಂ. ಜೆ. ಸದ್ಯೋಜಾತ್)

ಎಂ.ಎಲ್.ಎ ಗಳನ್ನು ಡೈರಕ್ಟರಗಳಾಗಿ ನೇಮಿಸಬೇಕೆಂದು ಹೇಳಿದ್ದನ್ನು ನಾನು ಒತ್ತಾಯಪೂರ್ವಕವಾಗಿ ಹೇಳುತ್ತೇನೆ.

ಇನ್ನು ನಮ್ಮ ತಾಲ್ಲೂಕಿನಲ್ಲಿ ಕೆಲವು ಪಂಚಾಯಿತಿಗಳು ಸರಿಯಾಗಿ ನಡೆಯುತ್ತಲೇ ಇಲ್ಲ. ಈ 4 ವರ್ಷಗಳಿಂದ ಕೆಲವು ಪಂಚಾಯಿತಿಗಳಲ್ಲಿ ದುರಾಡಳಿತ ನಡೆಯುತ್ತಾ ಇದೆ. ಪಂಚಾಯಿತಿ ಅಧ್ಯಕ್ಷರುಗಳು ಹಣವನ್ನು ಬಳಸಿದ್ದಾರೆ, 3–4 ವರ್ಷಗಳಾದರೂ ಕೂಡ ಅವರ ಮೇಲೆ ಯಾವ ಚರ್ಯೆಯನ್ನೂ ತೆಗೆದುಕೊಂಡಿಲ್ಲ. ಪಂಚಾಯಿತಿಗಳನ್ನು ಈ ರೀತಿಯಾಗಿ ಬಿಟ್ಟರೆ ಪ್ರಜಾಪ್ರಭುತ್ವದ ಕೊಲೆಯಾದಂತೆ ಆಗುತ್ತದೆ. ಆದ್ದರಿಂದ ದುರಾಡಳಿತ ನಡೆದಿದೆ ಅಂತ ಗೊತ್ತಾದ ತಕ್ಷಣ ವಾರ ಅಥವಾ ಹದಿನೈದು ದಿವಸಗಳಲ್ಲಿ ಸಂಬಂಧಪಟ್ಟವರ ಮೇಲೆ ಚರ್ಯೆ ತೆಗೆದುಕೊಳ್ಳಬೇಕೆಂದು ಸೂಚಿಸ ಬಯಸುತ್ತೇನೆ.

ಟಿ ಎ ಪಿ ಎಂ ಸಿ ಅವರು ಧಾನ್ಯಗಳನ್ನು ಖರೀದಿ ಮಾಡಲಿಕ್ಕೆ ಸರ್ಕಾರದವರು ಅನುಮತಿ ಕೊಡಬೇಕು, ಮತ್ತು ಸಣ್ಣಸಣ್ಣ ರೈತರಿಂದ ಖರೀದಿ ಮಾಡಿ ಧಾನ್ಯಗಳ ಧಾರಣೆ ಇಳಿಯದಂತೆ, ರೈತರಿಗೆ ಲುಕ್ಸಾನಾಗದಂತೆ ಖರೀದಿ ಮಾಡಲಿಕ್ಕೆ ಸರ್ಕಾರದವರು ಅವರಿಗೆ ಅನುಮತಿ ಕೊಡಬೇಕು ಮತ್ತು ಸೊಸೈಟಿಗಳಿಗೆ ಲುಕ್ಸಾನಾದರೆ ಆ ಹಣವನ್ನು ಸರ್ಕಾರದವರೇ ಭರ್ತಿಮಾಡಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳಿ ನನ್ನ ಒಂದೆರಡು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಬೆಂಗಳೂರು ಕೋಟೆ).—ಮಾನ್ಯ ಅಧ್ಯಕ್ಷರೇ, ಈ ದಿನ ಮುನಿಸಿಪಲ್ ಅಡ್ಮಿನ್‌ಸ್ಟ್ರೇಷನ್ ಡಿಮ್ಯಾಂಡ್ ತೆಗೆದುಕೊಳ್ಳುತ್ತೇವೆ ಎಂಬುದು ಅನಿರೀಕ್ಷಿತವಾಗಿ ನಮಗೆ ತಿಳಿಸಲ್ಪಟ್ಟಿತು, ನಾಳೆದಿನ ಅಂತ ಹೇಳಿ ನಾವು ತಿಳಿದುಕೊಂಡಿದ್ದೆವು. ಆದರೂ ಕೂಡ ತಾವು ದೊಡ್ಡ ಮನಸ್ಸು ಮಾಡಿ ಈಗ ಇದರ ಬಗ್ಗೆ ಮಾತನಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ಈ ದಿನ ನಮ್ಮ ಮುಂದೆ ಇಟ್ಟಿರತಕ್ಕ ಈ ಮುನಿಸಿಪಲ್ ಡಿಮ್ಯಾಂಡನ್ನು ವಿರೋಧಿಸಿ, ಇದರ ಬಗ್ಗೆ ಏಕೆ ನಮ್ಮ ವಿರೋಧ ಎನ್ನುವುದನ್ನು ಈಗ ನಾನು ಸ್ಪಷ್ಟೀಕರಿಸುತ್ತೇನೆ. ನಮ್ಮ ಈ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಿನಿಸ್ಟರು ಈ ಖಾತೆಗೆ ಮಿನಿಸ್ಟರ್ ಆಗಿರುವುದಕ್ಕೆ ಲಾಯಕ್‌ಅಲ್ಲ ಅಂತ ಅನ್ನುವುದನ್ನು ಮೊದಲು ತಿಳಿಸಬೇಕಾಗಿದೆ. ಏಕೆ ಎಂದರೆ ಮೊದಲನೆಯದು: ಅವರಿಗೆ ಸೂಪರ್‌ಸೀಡ್ ಮಾಡದೇ ಮುನಿಸಿಪಾಲಿಟಿ ಮತ್ತು ಕಾರ್ಪೊರೇಷನ್ ಆಡಳಿತ ನಡೆಸುವುದಕ್ಕೆ ಸಾಧ್ಯವಿಲ್ಲ. ಅವರು ಅಧಿಕಾರ ತೆಗೆದುಕೊಂಡ ಮೇಲೆ 18 ಮುನಿಸಿಪಾಲಿಟಿಗಳನ್ನು ಮತ್ತು ಕಾರ್ಪೊರೇಷನ್‌ಗಳನ್ನು ಸೂಪರ್‌ಸೀಡ್ ಮಾಡಿದ್ದಾರೆ, ಮತ್ತು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅವರಿಗೆ ಯಾವ ಯೋಗ್ಯತೆಯೂ ಇಲ್ಲದೆ ಕೇಳಿದ್ದಕ್ಕೆ ಒರಟಾಗಿ ಜವಾಬು ಕೊಡುವರು, ಜನಗಳ ಅನುಕೂಲದ ಬಗ್ಗೆ ಯಾವ ಗಮನವನ್ನೂ ಕೊಡದೇ ಇರುವುದು ಈ ಕಾರಣಗಳಿಂದ ಅವರಿಗೆ ಅರ್ಹತೆ ಇಲ್ಲವೇ ಇರುವುದರಿಂದ ಈ ಮಾನ್ಯ ಮಂತ್ರಿಗಳು ಆ ಜಾಗದಲ್ಲಿ ಇರುವುದಕ್ಕೆ ನಾಲಾಯಕ್ಕು ಎಂದು ಈ ಸಂದರ್ಭದಲ್ಲಿ ತಿಳಿಯಪಡಿಸುತ್ತೇನೆ. ಮತ್ತು ಸರ್ಕಾರದಿಂದ ನಮ್ಮ ಬೆಂಗಳೂರು ನಾಗರೀಕರಿಗೆ ಒಂದು ದೊಡ್ಡ ಅಪರಾಧ ನಡೆಸಲ್ಪಟ್ಟಿದೆ. ಹಳೇ ಮೈಸೂರಿನ ವರಮಾನಕ್ಕಿಂತ ಹೆಚ್ಚು ವರಮಾನವನ್ನು ಪಡೆಯತಕ್ಕ, 15 ಲಕ್ಷ ಪ್ರಜಾಸಂಖ್ಯೆಯುಳ್ಳ ಈ ಬೆಂಗಳೂರು ನಗರವನ್ನು ಸೂಪರ್‌ಸೀಡ್ ಮಾಡಿದ್ದಾರೆ. ಇದರಿಂದ ಬೆಂಗಳೂರಿನ ನಾಗರೀಕರಿಗೆ ಬಹಳ ತೊಂದರೆಯಾಗಿದೆ. ಈಗ ಬೆಂಗಳೂರು ನಗರದ ನಾಗರೀಕರ ಅನುಕೂಲದ ಬಗ್ಗೆ ಅನೇಕ ಬೇಡಿಕೆಗಳನ್ನು ನಾವು ಕಾರ್ಪೊರೇಷನ್‌ನಿಂದ ತೀರ್ಮಾನ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೆವು. ಅವುಗಳ ಪೈಕಿ ಒಂದನ್ನೂ ಕೂಡ ತೀರ್ಮಾನ ಮಾಡಿಲ್ಲ. ಮೊದಲನೆಯದು ಸೈಕಲ್ ಟ್ಯಾಕ್ಸ್ ವಜಾ ಮಾಡಬೇಕೆಂದು ಅನ್ನತಕ್ಕ ವಿಷಯ. ಒಂದು ಲಕ್ಷ ಹನ್ನೆರಡು ಸಾವಿರ ರೂಪಾಯಿ ಇರತಕ್ಕ ಸೈಕಲ್ ಟ್ಯಾಕ್ಸನ್ನು ತೆಗೆದು ಅದಕ್ಕೆ ಬದಲಾಗಿ ಬೇರೆ 6 ಲಕ್ಷ ರೂಪಾಯಿಗಳ ವರಮಾನವನ್ನು ತೋರಿಸಿದ್ದು ಆಯಿತು. ಅದರ ಜೊತೆಗೆ ಸೈಕಲ್ ಟ್ಯಾಕ್ಸನ್ನೂ ಹಾಕುತ್ತಾ ಇದ್ದಾರೆ. ಇದು ಒಂದು ಅನ್ಯಾಯ. ಎರಡನೆಯದು: ಪ್ರೊಫೆಷನಲ್ ಟ್ಯಾಕ್ಸ್. ಇದನ್ನು ಯಾವುದೋ ಕಾಲದಲ್ಲಿ ಗೊತ್ತುಮಾಡಿತ್ತು. ಈಗ ಅನೇಕರಿಗೆ 200 ರೂಪಾಯಿಗಳ ವರಮಾನ ಬರುತ್ತಾ ಇದೆ. 200 ರೂಪಾಯಿನಿಂದ 500 ರೂಪಾಯಿಗಳವರೆಗೂ ವರಮಾನ ಬರತಕ್ಕವರಿಗೆ ಪ್ರೊಫೆಷನಲ್‌ಟ್ಯಾಕ್ಸ್ ತೆಗೆದು ಹಾಕಬೇಕೆಂದು ಒಂದೇ ಸಮನೆ ಒತ್ತಾಯ ಮಾಡುತ್ತಾ ಇದ್ದೇವೆ, ಇದರ ಬಗ್ಗೆ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರೂ ಕೂಡ, ಅನೇಕ ಸಾರಿ ಒತ್ತಾಯ ಮಾಡಿದರೂ ಕೂಡ, ತೀರ್ಮಾನ ಮಾಡಿಲ್ಲ ಮತ್ತು ಜನಗಳ ಬೇಡಿಕೆಯಾದಂತಹ ಅನೇಕ ಸಮಸ್ಯೆಗಳು ಹಾಗೆಯೇ ಇವೆ. ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡಿನಲ್ಲಿ ಒಬ್ಬ ಎಲೆಕ್ಟೆಡ್ ಮೆಂಬರೂ ಇಲ್ಲ, ತಮಗೆ ಬೇಕಾದ

ನಾಮಿನೇಟೆಡ್ ಮೆಂಬರುಗಳನ್ನು ಹಾಕಿಕೊಂಡು ಜನರಿಗೆ ತೊಂದರೆ ಮಾಡುತ್ತಾ ಇದ್ದಾರೆ. ಆಮೇಲೆ ಅವರಿಗೆ ಎಲೆಕ್ಷನ್‌ನಲ್ಲಿ ಅನುಕೂಲವಾಗುತ್ತದೆ ಅಂತ ಹೇಳಿ 34 ಹಳ್ಳಿಗಳನ್ನು ಬೆಂಗಳೂರು ನಗರದ ಕಾರ್ಪೊರೇಷನ್‌ಗೆ ಸೇರಿಸಿದರು. ಅವು ಆ ಕಡೆ ಹಳ್ಳಿಗಳಾಗಿಯೇ ಉಳಿದಿವೆ, ಪಟ್ಟಣದ ಸೌಲಭ್ಯ ಯಾವುದನ್ನೂ ಪಡೆಯದೇ ಅಲ್ಲಿನ ಜನರು ತೊಂದರೆಪಡುತ್ತಾ ಇದ್ದಾರೆ, ಆಮೇಲೆ ಬೆಂಗಳೂರು ನಗರದಲ್ಲಿ ಕಂದಾಯವನ್ನು ಪರಿಶೀಲನೆ ಮಾಡುವ ಬಗ್ಗೆ ಜನಗಳಿಗೆ ಕಿರುಕುಳವನ್ನು ಕೊಡುತ್ತಾ ಇದ್ದಾರೆ. ಬೆಂಗಳೂರು ನಗರದಲ್ಲಿ ಸುಮಾರು 80 ಸಾವಿರ ರೆವಿನ್ಯೂ ಸೈಟುಗಳು ಅಭಿವೃದ್ಧಿಯಾಗುವುದಕ್ಕೆ ಅವಕಾಶ ಕೊಟ್ಟರು. ಈಗ ಮನೆ ಕಟ್ಟಿಕೊಂಡಿರತಕ್ಕವರ ಮನೆಗಳನ್ನು ಒಡೆಯುವುದು ಮತ್ತು ಆ ಸೈಟುಗಳನ್ನು ದುಡ್ಡು ಕೊಟ್ಟು ತೆಗೆದುಕೊಂಡಿದ್ದರೂ ಕೂಡ ಬೇರೆಯವರಿಗೆ ಅಲಾಟ್ ಮಾಡತಕ್ಕ ಒಂದು ಅಕ್ರಮ ನೀತಿಯನ್ನು ಅನುಸರಿಸಿ ಬಡವರಿಗೆ ತೊಂದರೆಯನ್ನುಂಟು ಮಾಡುತ್ತಾ ಇದ್ದಾರೆ. ಇಷ್ಟೆಲ್ಲಾ ಅನಾನುಕೂಲ ಮಾಡಿದರೂ ಕೂಡ ಕಾರ್ಪೊರೇಷನ್‌ನವರಿಗೆ ಅನುಕೂಲ ಮಾಡಿಕೊಡುತ್ತಾ ಇದ್ದಾರೆಯೇ ಎಂದರೆ ಬೆಂಗಳೂರು ನಗರದಲ್ಲಿ ಒಂದೂವರೆ ಕೋಟಿ ರೂಪಾಯಿ ಮೋಟಾರ್ ವೆಹಿಕಲ್ಸ್ ಟ್ಯಾಕ್ಸ್ ವಸೂಲು ಮಾಡುತ್ತಾ ಇದ್ದಾರೆ ಆದರೂ ಕೂಡ ಓಬೀರಾಯನ ಕಾಲದಲ್ಲಿ ಗೊತ್ತುಮಾಡಿದ ನಾಲ್ಕೂವರೆ ಲಕ್ಷ ರೂಪಾಯಿಗಳನ್ನು ಮಾತ್ರ ಅವರಿಗೆ ಕೊಡುತ್ತಾ ಇದ್ದಾರೆ. ಮತ್ತು ಎಲ್ಲಾ ಮುನಿಸಿಪಾಲಿಟಿಗಳು ಮತ್ತು ಕಾರ್ಪೊರೇಷನ್‌ಗಳಿಗೂ ಕೂಡ ಡಿ ಎ ನಲ್ಲಿ ಅರ್ಧಭಾಗ ಕೊಟ್ಟು ಎಕ್ಸೆಪ್ಟ್ ಬೆಂಗಳೂರು ಸಿಟಿ ಕಾರ್ಪೊರೇಷನ್ ಅಂತ ಗವರ್ನ್‌ಮೆಂಟ್ ಆರ್ಡರ್‌ನಲ್ಲಿ ನಮೂದು ಮಾಡಿದ್ದಾರೆ. ಬೆಂಗಳೂರು ನಗರ ಕಾರ್ಪೊರೇಷನ್‌ನವರು ಮಾಡಿದ ಪಾಪ ಏನು ಎಂದು ಕೇಳಬೇಕಾಗಿದೆ. ಮತ್ತು ಧರ್ಮಾಂಬುಧಿ ಟ್ಯಾಂಕ್, ಸಂಪಂಗಿ ಟ್ಯಾಂಕ್ ಕಾರ್ಪೊರೇಷನ್‌ಗೆ ಸೇರಿದ ನಿವೇಶನ. ಬೆಂಗಳೂರು ನಗರ ಕಾರ್ಪೊರೇಷನ್‌ಗೆ ಸೇರಿದ ಜಾಗ ಅದು ಆದರೂ ಕೂಡ ಧರ್ಮಾಂಬುಧಿ ಟ್ಯಾಂಕ್ ಇರತಕ್ಕ ಪ್ರದೇಶದಲ್ಲಿ ಅರ್ಧಭಾಗವನ್ನು ರೋಡ್ ಟ್ರಾನ್ಸ್‌ಪೋರ್ಟ್ ನವರಿಗೆ ಕೊಟ್ಟಿದ್ದಾರೆ ಇನ್ನರ್ಧ ಭಾಗವನ್ನು ಕಾಂಗ್ರೆಸ್ ಎಕ್ಸಿಬಿಷನ್ ನಡೆಸುವುದಕ್ಕೆ ಕೊಟ್ಟಿದ್ದಾರೆ. ಸಂಪಂಗಿ ಟ್ಯಾಂಕ್ ಪ್ರದೇಶದಲ್ಲೂ ಕೂಡ ಫಿಸಿಕಲ್ ಕಲ್ಚರ್ ಇನ್‌ಸ್ಟಿಟ್ಯೂಷನ್‌ಗೆ ಜಾಗವನ್ನು ಕೊಟ್ಟಿದ್ದಾರೆ. ಕರಗ ಸೇರುತ್ತ ಇದ್ದಂಥ ಪ್ರದೇಶವನ್ನು ತಮ್ಮವರಿಗೆ ಯಾರಿಗೋ ಪೆಟ್ರೋಲ್ ಬಂಕ್ ತೆಗೆಯುವುದಕ್ಕಾಗಿ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ. ಆಮೇಲೆ ಕಾರ್ಪೊರೇಷನ್‌ನಿಂದ ತೆಗೆದುಕೊಂಡಂತಹ ಕೋಟ್ಯಾಂತರ ರೂಪಾಯಿ ನಷ್ಟ ನೀರಿನ ಮತ್ತು ಒಳಚರಂಡಿ ವ್ಯವಸ್ಥೆಯ ಬಗ್ಗೆ ಯಾವ ಕಿಮ್ಮತ್ತನ್ನೂ ಕೊಡದೇ ತಾವೆ ತೆಗೆದುಕೊಂಡು ಲೂಟಿ ಮಾಡಿದ್ದಾರೆ. ಮತ್ತು ಸರ್ಕಾರದ ಆಫೀಸುಗಳನ್ನು ಬಿಟ್ಟು ಮಿಕ್ಕ ಮನೆಗಳಿಗೆ ಕಂದಾಯ ಕೊಡಬೇಕೆಂದು ತೀರ್ಮಾನವಾಗಿ 3 ವರ್ಷವಾಯಿತು. ಇದುವರೆಗೂ ಕೂಡ ಮೂರು ಕಾಸೂ ಸರ್ಕಾರದವರು ಈ ಬಗ್ಗೆ ಕೊಟ್ಟಿಲ್ಲ. ಸರ್ಕಾರದಿಂದ ಕಾರ್ಪೊರೇಷನ್‌ಗೆ ಯಾವ ವಿಧವಾದ ಅನುಕೂಲವನ್ನೂ ಮಾಡಿಕೊಡದೇ ಕಾರ್ಪೊರೇಷನ್‌ನ್ನು ಸೂಪರ್‌ಸೀಡ್ ಮಾಡಿ ಜನರಿಗೆ ತೊಂದರೆ ಕೊಡುತ್ತಾ ಇರುವುದು ಬಹಳ ಶೋಚನೀಯವಾದ ವಿಚಾರ. ಬೆಂಗಳೂರಿನ ನಾಗರೀಕರಿಗೆ ಸಂಬಂಧಪಟ್ಟ ನೀರಿನ ಸಮಸ್ಯೆಯ ಬಗ್ಗೆ ಒಂದು ತಿಂಗಳಿನಿಂದಲೂ ಏನಾದರೂ ಇತ್ಯರ್ಥ ಮಾಡುತ್ತೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಭರವಸೆ ಕೊಟ್ಟರು. ಅವರು ಅನೇಕ ಭರವಸೆಗಳನ್ನು ಕೊಟ್ಟು ಯಾವ ಭರವಸೆಯನ್ನೂ ಕೂಡ ಜನರ ಹಿತದೃಷ್ಟಿಯಿಂದ ತೀರ್ಮಾನ ಮಾಡತಕ್ಕ ಮನೋಭಾವ ಅವರಲ್ಲಿ ಇಲ್ಲ. ಎಷ್ಟೋ ಸಾರಿ ಭರವಸೆಯನ್ನು ಕೊಟ್ಟಿದ್ದಾರೆ ಮೊನ್ನೆ ಖಂಡಿತವಾಗಿಯೂ ತೀರ್ಮಾನ ಮಾಡುತ್ತೇವೆ ಅಂತ ಹೇಳಿದ್ದರು, 30 ದಿವಸ ಆಗಿ ಎಷ್ಟೋ ದಿವಸ ಆಗಿಹೋಯಿತು. ಇನ್ನೂ ಕೂಡ ತೀರ್ಮಾನ ಮಾಡದೆ ಬೆಂಗಳೂರಿನ ನಾಗರೀಕರಿಗೆ ತೊಂದರೆ ಮಾಡುತ್ತಾ ಇದ್ದಾರೆ. ಸರ್ಕಾರದವರು ವಾಟರ್‌ಸಪ್ಲೈ ಬೋರ್ಡಿಗೆ ಆಸ್ತಿಯನ್ನು ವರ್ಗಾವಣೆ ಮಾಡಿಕೊಡುವ ಸಂದರ್ಭದಲ್ಲಿ ಅದಕ್ಕೆ ಬೆಲೆ ಹೆಚ್ಚು ಮಾಡಿದ್ದಾರೆ. ಮೊದಲು ಇದ್ದಂಥ 3 ಕೋಟಿ ರೂಪಾಯಿಗಳ ಆಸ್ತಿಯನ್ನು ವಾಟರ್‌ಸಪ್ಲೈ ಬೋರ್ಡಿಗೆ ಬದಲಾವಣೆ ಮಾಡಿದಾಗ 6 ಕೋಟಿ ರೂಪಾಯಿಗಳ ಬೆಲೆ ಕಟ್ಟಿ ಟ್ರಾನ್ಸ್‌ಫರ್ ಮಾಡಿದ್ದಾರೆ. ಆಮೇಲೆ ಕಾರ್ಪೊರೇಷನ್‌ನವರು ನಡೆಸುತ್ತಾ ಇದ್ದಾಗ 12 ಲಕ್ಷ ರೂಪಾಯಿ ಇದ್ದ ಬಡ್ಡಿಯನ್ನು ಇವತ್ತಿನ ದಿವಸ 50 ಲಕ್ಷ ರೂಪಾಯಿ ಕೊಡಬೇಕೆಂದು ಕೇಳುತ್ತಾ ಇದ್ದಾರೆ ಮೊದಲು 4 ಕೋಟಿ ರೂಪಾಯಿ ಡಿಪ್ರೀಸಿಯೇಷನ್ ಇತ್ತು. ಇವತ್ತೂ 15 ಕೋಟಿ ರೂಪಾಯಿ ಡಿಪ್ರೀಸಿಯೇಷನ್ ಅಂತ ಹೇಳುತ್ತಾ ಇದ್ದಾರೆ. ಬೆಂಗಳೂರು ನಗರದ ನೀರಿನ ವ್ಯವಸ್ಥೆಗಾಗಿ ಮೊದಲು ಕಾರ್ಪೊರೇಷನ್‌ನವರಿಗೆ 64 ಲಕ್ಷ ರೂಪಾಯಿ ಖರ್ಚಾಗುತ್ತಾ ಇದ್ದದ್ದು ಈಗ 147 ಲಕ್ಷ ರೂಪಾಯಿ ಖರ್ಚಾಗುತ್ತಾ ಇದೆ. ಇವನ್ನೆಲ್ಲಾ ಪರಿಶೀಲನೆ ಮಾಡಿ ಈ ನೀರಿನ ಸಮಸ್ಯೆಯನ್ನು ಬಗೆಹರಿಸಿ ಜನಗಳಿಗೆ ಅನುಕೂಲ ಮಾಡಿ ಎಂದರೆ ಇದರ ಬಗ್ಗೆ ಯಾವ ಗಮನವನ್ನೂ ಕೊಡದೇ ಇರುವುದು ಬಹಳ ಶೋಚನೀಯವಾದ ವಿಚಾರ. ಮೊನ್ನೆಯ ದಿವಸವೂ ಕೂಡ ಈ ಪ್ರಶ್ನೆಯನ್ನು ಕಟ್‌ಮೋಷನ್ ರೂಪದಲ್ಲಿ ತಂದಾಗ

(ಶ್ರೀ ಟಿ. ಆರ್. ಶಾಮಣ್ಣ)

ತಾವು ಮುನಿಸಿಪಲ್ ಅಡ್ಮಿನ್‌ಸ್ಟ್ರೇಷನ್ ಡಿಮ್ಯಾಂಡ್ ಬಂದಾಗ ಮಾತನಾಡಬೇಕೆಂದು ಹೇಳಿದಿರಿ, ಮೊದಲು ಸಾವಿರ ಗ್ಯಾಲನ್ನಿಗೆ ಒಂದು ರೂಪಾಯಿ ದರ ಇದ್ದಿತು. ಇವತ್ತು 1 ರೂಪಾಯಿ 35 ಪೈಸೆಯಿಂದ 2 ರೂಪಾಯಿ 95 ಪೈಸೆಗೆ ವಿನಾಕಾರಣ ಏರಿಸಿ 50 ಲಕ್ಷ ರೂಪಾಯಿಗಳ ವರಮಾನವಿದ್ದುದನ್ನು 150 ಲಕ್ಷ ರೂಪಾಯಿಗಳಷ್ಟು ವರಮಾನ ಬರುವ ಹಾಗೆ ಏರ್ಪಾಡು ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದವರಿಗೆ ಡಿಪ್ರಿಸಿಯೇಷನ್ ಮತ್ತು ಇಂಟರೆಸ್ಟಿಗಾಗಿ ಮೊದಲಿನಿಂದ ಬರುತ್ತಾ ಇದ್ದುದ್ದು, 17 ಲಕ್ಷ ರೂಪಾಯಿಗಳು. ಇವತ್ತಿನ ದಿವಸ ಸುಮಾರು 65 ಲಕ್ಷ ರೂಪಾಯಿಗಳನ್ನು ಜನಗಳಿಂದ ಲೂಟಿಮಾಡುವುದಕ್ಕೆ ಪ್ರಯತ್ನಪಡುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ವಿವರಣೆಗಳನ್ನು ಕೊಡುತ್ತಾ ಇಲ್ಲ. ಇದರ ಬಗ್ಗೆ ಜಾಗ್ರತೆ ತೀರ್ಮಾನ ತೆಗೆದುಕೊಳ್ಳಿ ಎಂದು ಹೇಳಿದರೆ ಇನ್ನೂ ಯಾವ ತೀರ್ಮಾನವನ್ನೂ ಸಹ ತೆಗೆದುಕೊಳ್ಳದೇ ಇದ್ದಾರೆ. ಮೊನ್ನೆದಿನ ನಾವು ಇಲ್ಲಿ ಕೇಳಿದ ಪ್ರಶ್ನೆಗೆ ಡಿಸ್‌ಕನೆಕ್ಷನ್ ಮಾಡುತ್ತಾ ಇಲ್ಲವೆಂದು ಹೇಳಿದರು. ಡಿಸ್‌ಕನೆಕ್ಷನ್ ಬಗ್ಗೆ ಕೆಲವು ಅಂಕಿ ಅಂಶಗಳನ್ನೂ ಸಹ ಕೊಟ್ಟರು. ಆದರೂ ಸಾವಿರಾರು ಮನೆಗಳಿಗೆ ಡಿಸ್‌ಕನೆಕ್ಷನ್ ಮಾಡುತ್ತಿದ್ದಾರೆ. ಅನೇಕ ಬಡಜನರನ್ನು ಹೆದರಿಸಿ, ಬೆದರಿಸಿ, ಅವರಿಗೆ ಇಲ್ಲದಸಲ್ಲದ ಕಿರುಕುಳಗಳನ್ನು ಕೊಡುವುದರಿಂದ ಅನೇಕ ಬಡಜನರು ತಮ್ಮಲ್ಲಿದ್ದ ಒಡವೆ, ಇತರ ವಸ್ತುಗಳನ್ನು ಒತ್ತೆ ಇಟ್ಟು ನೀರಿನ ಬಿಲ್‌ಗಳನ್ನು ಪಾವತಿಮಾಡುತ್ತಿದ್ದಾರೆ. ಬಡಜನಗಳಿಗೆ ಇದರಿಂದ ಬಹಳ ಕಷ್ಟವಾಗಿದೆ. ಮಾನ್ಯ ಮಂತ್ರಿಗಳ ಮನೆಯಲ್ಲಿ ಡಿಸ್‌ಕನೆಕ್ಟ್ ಮಾಡಿದರೆ ಆಗ ಅವರು ಏನು ಮಾಡುತ್ತಾರೆ, ಅಧಿಕಾರಿಗಳ ಮನೆಯಲ್ಲಿ ಡಿಸ್‌ಕನೆಕ್ಟ್ ಮಾಡಿದರೆ ಅವರು ಏನು ಮಾಡುತ್ತಾರೆ ? ಅವರಿಗೆ ನೋಟೀಸ್ ಬಂದ ಕೂಡಲೇ ಏನಾದರೂ ಒಂದು ಹೆದರಿಕೆ ಹಾಕಿ ಡಿಸ್‌ಕನೆಕ್ಟ್ ಮಾಡುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಪ್ರಯತ್ನಪಡುತ್ತಾರೆ. ಅಂದಮೇಲೆ ಇದರಲ್ಲಿ ಡಿಸ್ಕ್ರಿಮಿನೇಷನ್ ಬೇಕಾದಷ್ಟು ಇದೆ. ಸುಮಾರು 54 ಸಾವಿರ ಮನೆಗಳಿಗೆ ಈ ಕನೆಕ್ಷನ್ ಇದೆ ಎಲ್ಲೋ ಅಲ್ಲೊಂದು, ಇಲ್ಲೊಂದು ಸರಿ ಇರಬೇಕು. ಇದರಲ್ಲಿ ಬರೀ ಡಿಸ್ಕ್ರಿಮಿನೇಷನ್ ಇದೆ. ಯಾರ್ಯಾರು ದುಡ್ಡು ಕಟ್ಟಿಲ್ಲವೋ, ಯಾರ್ಯಾರು ಪುಕ್ಕಲಾಗಿರುತ್ತಾರೋ ಅಂತಹವರನ್ನೇ ಹೆದರಿಸುವುದು ಜಾಸ್ತಿ. ಬೇರೆಯವರನ್ನು ಬಿಟ್ಟುಬಿಡುತ್ತಾರೆ. ಇದರಲ್ಲಿ ಅಕ್ರಮ ಮಾರ್ಗ ಬಹಳವಾಗಿದೆಯೆಂದು ಅವತ್ತೇ ಹೇಳಿದ್ದೇನೆ. ಈ ಸಮಸ್ಯೆಯ ಬಗ್ಗೆ ಮುನಿಸಿಪಲ್ ಅಡ್ಮಿನಿಸ್ಟ್ರೇಷನ್ ಮಂತ್ರಿಗಳು ಸಮರ್ಪಕವಾಗಿ ತೀರ್ಮಾನವನ್ನು ಕೊಡದೇ ಇದ್ದ ಪಕ್ಷದಲ್ಲಿ ಇವತ್ತಿನ ದಿವಸ ಸಾಯಂಕಾಲ ಇಲ್ಲಿಯೇ ನಾವು ಕೂತುಕೊಳ್ಳುತ್ತೇವೆ. ಈ ತೀರ್ಮಾನ ನೀವು ತೆಗೆದುಕೊಳ್ಳುವವರೆಗೂ ನಾವು ಈ ತೀರ್ಮಾನ ತೆಗೆದುಕೊಂಡಿದ್ದೇವೆ. ಬೆಂಗಳೂರಿನ ಎಂ. ಎಲ್. ಎ.ಗಳು, ಕಾಂಗ್ರೆಸ್ಸಿನವರು ಯಾರು ಇದ್ದಾರೋ ಅವರೂ ಕೂಡಿ ಇವತ್ತು ಸಾಯಂಕಾಲ ಇಲ್ಲಿಯೇ ಕೂತುಕೊಳ್ಳುತ್ತೇವೆ. ನಮ್ಮ ಮೇಲೆ ಏನು ಕ್ರಮ ತೆಗೆದುಕೊಂಡರೂ ಅದಕ್ಕೂ ಸಿದ್ಧರಾಗಿದ್ದೇವೆ. ಮಂತ್ರಿಗಳು ಉತ್ತರ ಕೊಟ್ಟನಂತರ ಇವತ್ತು ಅದಕ್ಕಾಗಿಯೇ ಇಲ್ಲಿ ಕೂತುಕೊಳ್ಳುತ್ತೇವೆ. ತಾವು ಏನು ಬೇಕಾದರೂ ಮಾಡಿ. ಈ ಸಮಸ್ಯೆಯನ್ನು ಆದಷ್ಟು ಜಾಗ್ರತೆ ಹೇಗಾದರೂ ಮಾಡಿ ಮಂತ್ರಿಗಳು ಬಗೆಹರಿಸಬೇಕು. ಇದನ್ನು ಬೆಂಗಳೂರಿನ ನಾಗರೀಕರು ಖಂಡಿತವಾಗಿ ಸಹಿಸುವುದಕ್ಕಾಗುವುದಿಲ್ಲ. ಅದರ ಬಗ್ಗೆ ಈಗಾಗಲೇ ಸತ್ಯಾಗ್ರಹವನ್ನು ಆರಂಭಮಾಡಿ 28 ದಿನಗಳು ಮುಗಿದುವು. ಸತ್ಯಾಗ್ರಹಿಗಳು ಬಹಳ ಅಶಕ್ತರಾಗಿದ್ದರೂ ನಮ್ಮ ಕೆಲಸವನ್ನು ಬಹಳ ಐಕ್ಯಮತ್ಯದಿಂದ ಮಾಡುತ್ತೇವೆ. ಇದರ ಬಗ್ಗೆ ಕೂಡಲೇ ತಕ್ಕ ಕ್ರಮವನ್ನು ತೆಗೆದುಕೊಳ್ಳದಿದ್ದರೆ, ನಿಜವಾಗಿ ನಿಮ್ಮ ಆಡಳಿತ ಹೆಚ್ಚುಕಾಲ ಉಳಿಯುವುದಿಲ್ಲವೆಂದು ಹೇಳುತ್ತೇನೆ. ನಾನು ಇನ್ನು ಹೆಚ್ಚುಕಾಲ ಭಾಷಣಮಾಡಲು ತೆಗೆದು ಕೊಳ್ಳುವುದಿಲ್ಲವೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri D. M. SIDDAIAH (Beligere).—Sir, before you call upon another member, I want to submit that the Hon'ble Minister for Co-operation and Development has moved three demads, *viz*, Demand No.—21 Rural Development, No. 23—Co-operatian and 25—Community Development. Whereas the Municipal Administration under Demand No. 39—Miscellaneous will come under the next demand, which the Hon'ble Minister for Home and Municipal Administration will move tomorrow. It has been wrongly printed in the list of business. The Hon'ble Minister for Co-operation and Development has moved only the demands concerning his department. The Demand on Municipal Administration

will be moved to-morrow and therefore, it does not come up to-day for discussion.

Sri K. H. RANGANATH (Mudigere).—I verified it. After all, we cannot allow things which are not relevant to go into the proceedings. The Hon'ble Member Mr. Shamanna has already spoken on this demand and that has gone into the proceedings. Why I say this is that there is the technical difficulty. To take up discussion on the subject which has not been moved, would be highly irregular.

Sri M. S. KRISHNAN.—I had sent you a letter in regard to this and pointed out that in the list of business it has been stated that Demand No. 39—Miscellaneous will come-up to-day and therefore we had asked you to give us chance to speak. When I wanted to know whether it has been moved, I was told that it has been moved and the Municipal administration comes under 39 and therefore we requested you to see that permission be given to us to speak on this demand. If this has not been moved, we may be given opportunity tomorrow.

Mr. DEPUTY SPEAKER.—When it is moved I will certainly give chance. By mistake it is printed here. It will be moved and I will give chance to speak.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಮಾನ್ಯ ಶ್ರೀ ಶಾಮಣ್ಣನವರು ಮಧ್ಯ ಮಾತನಾಡಿದ್ದಾರೆ. ಅವರ ಭಾಷಣ/ರಿಕಾರ್ಡ್ ಆಗಿರುವ ಪ್ರೊಸೀಡಿಂಗ್ ಏನಾಗಬೇಕು ಎಂಬುದನ್ನು ತಾವು ತೀರ್ಮಾನಮಾಡಬೇಕು. ಈಗಾಗಲೇ ಅವರು ಭಾಷಣಮಾಡಿದ್ದಾರೆ. ಇವತ್ತು ಅವರು ಮಾತನಾಡಿದಂಥ ಪದಗಳನ್ನೇ ಉಪಯೋಗಿಸಿ ನಾಳೆ ಮಾತನಾಡದೇ ಇರಬಹುದು. ಇವತ್ತು ಹೇಳಿದಂಥ ವಿಷಯಗಳನ್ನು ಪುನಃ ಅವರು ಹೇಳದೇ ಇರಬಹುದು. ಅದ್ದರಿಂದ ಇವತ್ತಿನ ಅವರ ಭಾಷಣದ ಪ್ರೊಸೀಡಿಂಗ್ಸ್‌ನ್ನು ಏನು ಮಾಡಬೇಕೆಂಬುದನ್ನು ತಾವು ತೀರ್ಮಾನಮಾಡಬೇಕು. ಹಿಂದೆ ಸೆರಿಕಲ್ಚರ್ ವಿಷಯವಾಗಿ ಬೇಡಿಕೆ ಬಂದಾಗ ಈ ರೀತಿಯೇ ಅಗಿ ಉತ್ತರ ಕೊಡುವುದಕ್ಕಾಗಲಿಲ್ಲ. ಈ ಕಡೆ ಅನೇಕ ಸದಸ್ಯರು ಆ ವಿಚಾರವಾಗಿ ಮಾತನಾಡುವುದಕ್ಕಾಗಲಿಲ್ಲ. ಈ ಕನ್‌ಫ್ಯೂಷನ್ ಬೇರೆ ಆಗಿದೆ. ಆದ್ದರಿಂದ ಈ ವಿಚಾರದಲ್ಲಿ ಏನು ಮಾಡಬೇಕೆಂಬುದನ್ನು ತಾವು ತೀರ್ಮಾನಮಾಡಬೇಕು. ಇಲ್ಲದೇ ಹೋದರೆ ಮಾತನಾಡುವವರಿಗೆ ಸಾಕಷ್ಟು ಅವಕಾಶ ಸಿಗುವುದಿಲ್ಲ. ಈಗ ಉತ್ತರ ಕೊಡುವುದಕ್ಕೆ ಮಂತ್ರಿಗಳು ಇಲ್ಲ. ಇನ್ನೂ ಆ ಡಿಮ್ಯಾಂಡೇ ಮೂವ್ ಮಾಡಿಲ್ಲ. ಆದ್ದರಿಂದ ಇದನ್ನು ಯಾವರೀತಿ ಕ್ರಮಪಡಿಸಬೇಕೆಂಬುದನ್ನು ತಾವು ತೀರ್ಮಾನಮಾಡಿ ನಮಗೆ ತಿಳಿಸಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಭಾಪತಿಗಳೇ, ಮಾನ್ಯ ಶ್ರೀ ಶಾಮಣ್ಣನವರಿಗೆ ಮಾತನಾಡಲು ತಾವು ಅವಕಾಶವನ್ನು ಕೊಟ್ಟಿದ್ದಿರಿ. ಆದರೆ ಅವರು ಕೇವಲ ಐದು ನಿಮಿಷಗಳನ್ನು ಮಾತ್ರ ಉಪಯೋಗಿಸಿಕೊಳ್ಳುವುದಕ್ಕೆ ಸಾಧ್ಯವಾಯಿತು. ಅವರಿಗೆ ಹೆಚ್ಚು ಕಾಲಾವಕಾಶವಿಲ್ಲದೆ ಇವತ್ತು ಅವರು ಜಾಸ್ತಿ ಮಾತನಾಡಲಿಲ್ಲ. ಆದ್ದರಿಂದ ಅವರಿಗೆ ನಾಳೆ ಇನ್ನೊಂದು ಸಾರಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬೇಕು.

Mr. DEPUTY SPEAKER.—I will consider.

†ಶ್ರೀ ಎಸ್. ಶಿವಪ್ಪ.—ಅಧ್ಯಕ್ಷರೇ, ಅಭಿವೃದ್ಧಿ ಶಾಖಾ ಸಚಿವರು ಮತ್ತು ಸಹಕಾರ ಸಚಿವರು ತಮ್ಮ ಬೇಡಿಕೆಯನ್ನು ಮಂಡನೆ ಮಾಡಿದಾಗ ಒಂದು ಮುಖ್ಯವಾದಂಥ ಪ್ರಶ್ನೆಯನ್ನು ಕೇಳಿದಾಗ ಮಧ್ಯೆ ಪ್ರವೇಶಮಾಡಬೇಡಿ ಎಂದು ಹೇಳಿದರು. ಕಳೆದ 8 ವರ್ಷಗಳಿಂದ ಕಾಂಗ್ರೆಸ್ ಸರ್ಕಾರ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ವಿಚಾರವಾಗಿ ಯಾವ ಒಂದು ನಿರ್ದಿಷ್ಟವಾದ ನಿಲುವನ್ನು ತಗೆದುಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇನ್ನೊಂದು ಪ್ರಾಮುಖ್ಯವಾದಂಥ ವಿಚಾರವೇನೆಂದರೆ, ಈ ಶಾಸನ ಸಭೆಯಲ್ಲಿ ಆಗಿಂದಾಗ್ಗೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ ಮಾಡಿ ಆ ಪ್ರಕಾರ ಪುನರ್ರಚಿತವಾದ ತಾಲ್ಲೂಕು ಬೋರ್ಡ್‌ಗಳನ್ನು ಅಧಿಕಾರಕ್ಕೆ ತರಬೇಕು ಎಂಬುದಾಗಿ ನಾಲ್ಕೈದು ವರ್ಷಗಳಿಂದಲೂ ಒಂದೇ ಸಮನೆ ಹೇಳುತ್ತಿದ್ದೇವೆ. ಕಾಂಗ್ರೆಸ್ ವತಿಯಿಂದ ಒಂದೇ ಸಮನೆ ಈ ದೇಶಕ್ಕೆ ಮೋಸ ಮಾಡುತ್ತಾ ಇರತಕ್ಕ ಈ ಒಂದು ಕಾಂಗ್ರೆಸ್ ಸರ್ಕಾರ ಇವತ್ತು

(ಶ್ರೀ ಎಸ್. ಶಿವಪ್ಪ)

ಅಧಿಕಾರದಲ್ಲಿವೆ. ಇವತ್ತು ಹೊರದಾಗಿ ಬಂದಿರತಕ್ಕ ಮಾನ್ಯ ಶ್ರೀ ನಾಡಗೌಡರ ಬಗ್ಗೆ ಕೆಲವು ವಿಚಾರಗಳನ್ನು ಪ್ರಸ್ತಾಪಮಾಡುತ್ತೇನೆ. ಅವರು ಬಹಳ ಉತ್ಸಾಹದಿಂದ ಹೇಳಿದರು. ಎಮರ್ಜೆನ್ಸಿ ಕಾನೂನನ್ನು ವಜಾ ಮಾಡಿದಾಗ ತಾಲ್ಲೂಕು ಬೋರ್ಡ್‌ಗಳ ಚುನಾವಣೆಯನ್ನು 1968 ನೇ ಇಸವಿಯಲ್ಲಿ ಪೂರ್ವಭಾವಿಯಾಗಿ ಬೇಕಾದರೆ ಜೂನ್ ಒಳಗೆ ಮಾಡಿ ಆ ಬೋರ್ಡ್‌ಗಳನ್ನು ರಿ-ಕಾನ್‌ಸ್ಟಿಟ್ಯೂಟ್ ಮಾಡುತ್ತೇವೆಂಬ ಭರವಸೆಯನ್ನು ಈ ಶಾಸನ ಸಭೆಯಲ್ಲಿ ಕೊಟ್ಟರು. ಅವರು ಈಗ ಪಂಚಾಯಿತಿ ಚುನಾವಣೆಯನ್ನು ಮಾತ್ರ ಮಾಡಿದರು. ತಾಲ್ಲೂಕು ಅಭಿವೃದ್ಧಿ ಮಂಡಲಿಗಳ ಚುನಾವಣೆ ನಡೆಯದೆ ಹೊಸದಾಗಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ರಚನೆಮಾಡತಕ್ಕ ಕಾರ್ಯ ಅವರು ಇದುವರೆಗೂ ಮಾಡಲಿಲ್ಲ.

5-00 P.M.

ಈ ಸರ್ಕಾರ ನಿಜವಾಗಿ ತಾಲ್ಲೂಕಾಭಿವೃದ್ಧಿಮಂಡಳಿಗಳ ಚುನಾವಣೆ ನಡೆಪಿ ರೀಕಾನ್ಸಿಟ್ಯೂಟ್ ಮಾಡುತ್ತೇವೆ ಎನ್ನುವ ಬಗ್ಗೆ ಈ ಸಭೆಗೆ ಆಶ್ವಾಸನೆ ಕೊಡಲೇಬೇಕು. ಇದರ ತಾರೀಖು, ತಿಂಗಳು ಹೇಳಬೇಕು. ಮಾಡುತ್ತೇವೆ, ಮಾಡುತ್ತೇವೆ ಎಂದು ಹೇಳುತ್ತಾ ಬಂದರೇ ಹೊರತು ಇವೊತ್ತಿನವರೆಗೂ ಅದನ್ನು ಮಾಡಿಲ್ಲ. ಹೋದ ತಿಂಗಳು ಈ ಶಾಸನ ಸಭೆ ಮುಗಿಯುವುದರೊಳಗೆ ಅದಕ್ಕೆ ಸಂಬಂಧಪಟ್ಟ ಮಸೂದೆಯನ್ನು ಈ ಶಾಸನ ಸಭೆಯ ಮುಂದೆ ಮಂಡನೆ ಮಾಡುತ್ತೇವೆ. ಜಿಲ್ಲಾ ಪರಿಷತ್ತು ಇರಬೇಕೇ, ಬೇಡವೇ, ಅದು ಯಾವ ರೀತಿ ಹೊಸರೂಪ ತಾಳಬೇಕು ಎನ್ನುವುದನ್ನು ತೀರ್ಮಾನ ಮಾಡಿ ಈ ಶಾಸನ ಸಭೆಯ ಮುಂದೆ ಇಡುತ್ತೇವೆ ಎಂದು ಹೇಳಿದ್ದೀರಿ. ಅದನ್ನು ಮರೆತು ಬಿಟ್ಟಿದ್ದೀರಿ. ಸಹಕಾರ ಸೊಸೈಟಿಗಳ ಗೊಂದಲದಲ್ಲಿ ಮರೆಯತಕ್ಕದ್ದು ಸಹಜ. ಒಂದೊಂದು ಸೊಸೈಟಿಗೂ ಒಂದೊಂದು ತರಹ ಪ್ರೋತ್ಸಾಹ ಕೊಡಬೇಕು. ಏನು ಅನ್ಯಾಯ ಮಾಡಿದರೂ ಕಾಪಾಡತಕ್ಕದ್ದು ನಿಮ್ಮ ಮೇಲಿನ ಜವಾಬ್ದಾರಿ ಎಂದು ಮಾಡಿಕೊಂಡು ಹೋಗುತ್ತಿದ್ದೀರಿ. ಪ್ರಜಾಪ್ರಭುತ್ವದ ಅಡಿಗಲ್ಲು ಅಭಿವೃದ್ಧಿ ಮಂಡಲಿ. ಇವಕ್ಕೆ ಚುನಾವಣೆಗಳನ್ನು ಮಾಡುತ್ತೇವೆಂದು 8 ವರ್ಷದಿಂದ ತಳ್ಳಿಕೊಂಡು ಬಂದಿರುವಾಗ ನಿಮಗೆ ಯಾವ ಹೆಸರಿನಿಂದ ಕರೆಯಬೇಕು? ನಿಮಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇದೆಯೇ? ಈವೊತ್ತು ಕೂಡ ಚುನಾವಣೆ ಮಾಡಬೇಕೆಂದು ಮನಸ್ಸು ಮಾಡಿಲ್ಲ. ಚುನಾವಣೆ ಮಾಡಿದರೆ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಯಾರೋ ಬರುತ್ತಾರೆಂದು ಹೆದರುತ್ತೀರಿ. ಯಾರೇ ಬರಲಿ ಅವರು ರಚನೆ ಮಾಡಲಿ, ಎಂದು ಧೈರ್ಯ ಮಾಡಿ ಚುನಾವಣೆ ನಡೆಸಬೇಕು. ಅದರಿಂದ ದಯವಿಟ್ಟು ಉತ್ತರ ಹೇಳುವಾಗ ತಾಲ್ಲೂಕು ಅಭಿವೃದ್ಧಿ ಮಂಡಲಿಗಳನ್ನು ಯಾವಾಗ ಚುನಾವಣೆ ಮಾಡುತ್ತೀರಿ ಎನ್ನುವುದನ್ನು ಈ ಸಭೆಗೆ ನಿರ್ದಿಷ್ಟವಾಗಿ ತಿಳಿಸಬೇಕು. ಇದು ಸಾಧ್ಯ ಇಲ್ಲದೇ ಹೋದರೆ ಮಂತ್ರಿಮಂಡಲಕ್ಕೆ ರಾಜೀನಾಮೆ ಕೊಟ್ಟು ಬಿಜಾಪುರಕ್ಕೆ ಹೋಗಿ ಎಂದು ಹೇಳುತ್ತೇನೆ.

ಇನ್ನು ಎರಡನೆಯ ವಿಚಾರ. ಸಹಕಾರ ಸೊಸೈಟಿ ವಿಚಾರ. ಇದರ ಬಗ್ಗೆ ಎಲ್ಲವನ್ನೂ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿರತಕ್ಕ ಕಶ್ಮಲವನ್ನು ತೊಳೆಯುವುದಕ್ಕೆ ನಿಮ್ಮಿಂದ ಸಾಧ್ಯವಾಗುತ್ತದೆಯೇ ಎಂದು ನಾನು ತಮ್ಮನ್ನು ಕೇಳುತ್ತೇನೆ. ಒಂದು ವಿಚಾರ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಸೊಸೈಟಿ ವಿಚಾರ ಹೇಳುತ್ತೇನೆ. ಅಲ್ಲಿ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಇದೆ. ಆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಈವೊತ್ತು 1 ಲಕ್ಷ 20 ಸಾವಿರ ರೂಪಾಯಿ ಮಿಸ್ ಅಪ್ಲಿಕೇಷನ್ ಮಾಡಿದೆ. ಇತ್ತೀನವೊ ದಿವಸ ಅದು ಡಿಫಾಲ್ಟರ್ ಸೊಸೈಟಿ ಆಗಿದೆ. ಈ ಅಪೆಕ್ಸ್ ಬ್ಯಾಂಕ್‌ನಲ್ಲಿ ಸಾಲ ಮಂಜೂರು ಆಗಿರುವುದನ್ನು ಅವರಿಗೆ ಕೊಡದೆ ಡಿಫಾಲ್ಟರ್ ಸೊಸೈಟಿಗೆ ಅವರು ಮಾಡಿರತಕ್ಕ ಸಾಲ ತೀರಿಸುವುದಕ್ಕೋಸ್ಕರ ಈ ಹಣವನ್ನು ನಿಮ್ಮ ಬ್ಯಾಂಕಿನವರು ಕೊಟ್ಟಿದ್ದಾರೆ. ಇದನ್ನು ನೋಡಿ ಹೇಗೆ ಸುಮ್ಮನೆ ಇದ್ದೀರಿ? ಬ್ಯಾಂಕನ್ನು ಸೂಪರ್‌ಸೀಡ್ ಮಾಡಬೇಕು. ನಿಮ್ಮ ಇಲಾಖೆ ರಿಜಿಸ್ಟ್ರಾರ ಇದನ್ನು ಮನಗಂಡಿದ್ದಾರೆ. ಆದರೆ ಸೂಪರ್‌ಸೀಡ್ ಮಾಡುವುದಕ್ಕೆ ಶ್ರೀಮಾನ್ ನಾಡಗೌಡರು ಅಡ್ಡಿಯಾಗಿ ಬಂದಿದ್ದಾರೆ. ಸೂಪರ್ ಸೀಡ್ ಮಾಡಬೇಡರಿ, ನಮ್ಮವರು ಇದ್ದಾರೆ, ರಕ್ಷಣೆ ಕೊಡಿ ಎಂದು ಶ್ರೀಮಾನ್ ನಾಡಗೌಡರು ಹೇಳಿರುವುದು ನಾಚಿಕೆಗೇಡಿತನದ ಪ್ರಸಂಗ. ಏತಕ್ಕೋಸ್ಕರ ಸೂಪರ್‌ಸೀಡ್ ಮಾಡಲಿಲ್ಲ? ಯಾರ ಹಣವನ್ನು ಯಾರಿಗೆ ಕೊಡಬೇಕಾಗಿದೆಯೋ ಅದನ್ನು ಬಿಟ್ಟು ಸಾಲ ತೀರಿಸುವುದಕ್ಕೋಸ್ಕರ ಇನ್ನೊಬ್ಬರಿಗೆ ಕೊಡುವುದು ಎಂದರೆ ಹೇಗೆ? ಹೀಗೆ ಮಾಡಿದರೆ ಸಹಕಾರ ಸಂಘ ಸೊಸೈಟಿಗಳು ಈ ದೇಶದಲ್ಲಿ ಬೆಳೆಯುವುದಕ್ಕೆ ಸಾಧ್ಯವೇ ಎಂದು ಯೋಚನೆ ಮಾಡಬೇಕು. ಸೊಸೈಟಿ ರಿಜಿಸ್ಟ್ರಾರ್

ರವರೇ ಆಗಲಿ, ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರೇ ಆಗಲಿ, ಯಾವ ಸಹಕಾರ ಸಂಘಗಳೇ ಆಗಲಿ ಏನು ತಪ್ಪು ಮಾಡಿದರೂ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಇಲ್ಲ. ಕಾರಣ ಅಲ್ಲಿರತಕ್ಕ ವ್ಯಕ್ತಿ, ನಿಮಗೆ ಯಾರಾದರೂ ಬೇಕಾದವರು ಇದ್ದರೆ ಅವರ ಮೇಲೆ ಏನೂ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೂ ಸಾಧ್ಯ ಇಲ್ಲ. ಹೀಗಿರುವಾಗ ಸಹಕಾರ ಸಂಘಗಳಲ್ಲಿ ಆಗತಕ್ಕ ಲೂಟಿ ಸಹಕಾರ ಸಂಘಗಳ ಹೆಸರಿನಲ್ಲಿ ಆಗತಕ್ಕ ದರೋಡೆ ದೇಶದಲ್ಲಿ ನಡೆದುಕೊಂಡು ಬರುತ್ತಿದೆ. ಪ್ರತಿಯೊಂದು ಕಾಸಿಗೂ ನೀವು ಜವಾಬ್ದಾರರು. ಮೈಸೂರು ದೇಶದಲ್ಲಿ 9 ಕೋಟಿ ರೂಪಾಯಿಗಳನ್ನು ಸಹಕಾರ ಸಂಘಗಳಿಗೆ ಸಾಲದ ರೂಪದಲ್ಲಿ ಕೊಟ್ಟಿದ್ದೀರಿ. ಅದಕ್ಕೆ ಪ್ರತಿರೂಪವಾಗಿ ಬರತಕ್ಕದ್ದು ಕೇವಲ 0.25 ಪರ್ಸೆಂಟು ಬರುತ್ತಾ ಇಲ್ಲ. ಇಷ್ಟೊಂದು ಹಣವನ್ನು ಕೊಟ್ಟು ನಿಮಗೆ ಆ ಹಣವನ್ನು ಹೇಗೆ ಬೇಕಾದರೂ ದುರುಪಯೋಗ ಮಾಡಿಕೊಳ್ಳಲಿ ಎಂದು, ಕಂಡರೂ ಕಾಣದಂತೆ, ಸಹಕಾರ ಸಂಘಗಳ ಹೆಸರಿನಲ್ಲಿ ಹೊಸವರ್ಗದ ಸಾಹುಕಾರರನ್ನು ನಿರ್ಮಾಣ ಮಾಡಿದ್ದೀರಿ. ಹಾಸನದಲ್ಲಿ ಈಗಾಗಲೇ ಕಾನೂನು ಪ್ರಕಾರ ನಿರ್ಮಿತವಾದ ಒಂದು ಸಂಸ್ಥೆ ಇದೆ. ಬಡ್ಡಿ ಇಲ್ಲವೇ, ಯಾರೋ ಕೊಟ್ಟ ಬಂಡವಾಳ ಇದೆ. ಬೇರೆಯವರ ಬಂಡವಾಳದಿಂದ ಕಾನೂನು ರೀತ್ಯಾ ಮಾಡಿರತಕ್ಕಂಥ ಸಂಸ್ಥೆಯಾಗಿ ಈವೊತ್ತಿನ ದಿವಸ ಸಾಹುಕಾರರಾಗಿದ್ದಾರೆ. ಅಂತಹ ನೀತಿ ದೇಶದಲ್ಲಿ ಆಗಿದೆ. ತಾವು ಗಟ್ಟಿ ಮನಸ್ಸಿನಿಂದ ಅಂಥ ಸಹಕಾರ ಸಂಘಗಳನ್ನು ಮಾರ್ಪಾಟು ಮಾಡುತ್ತೀರಾ? ಯಾರು ಶಿಕ್ಷೆಗೆ ಒಳಗಾಗುತ್ತಾರೋ ಅಂತಹವರಿಗೆ ಶಿಕ್ಷೆ ಕೊಡತಕ್ಕ ಧೈರ್ಯ ಮಾಡುತ್ತೀರಾ? ಚನ್ನರಾಯಪಟ್ಟಣದಲ್ಲಿ ಸೂಪರ್‌ಸಿಡ್ ಆಗುವ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೆ ಏತಕ್ಕೆ ರಕ್ಷಣೆ ಕೊಟ್ಟಿರಿ? ಅಲ್ಲಿ ಮಾಡಿದಂಥ ವಿಚಾರ ಹೇಳುತ್ತೇನೆ. ಸಹಕಾರ ಸಂಘದ ಆಶ್ರಯದಲ್ಲಿ ಒಂದು ರೈಸ್‌ಮಿಲ್ ಹೊಸದಾಗಿ ರಚನೆ ಆಗುತ್ತಾ ಇದೆ. ಇದೇ ತರಹ ಸಹಕಾರ ಸಂಘದ ಆಶ್ರಯದಲ್ಲಿ ಅನೇಕ ಕಡೆ ಮಾಡುತ್ತಾ ಇದ್ದಾರೆ. ಏತಕ್ಕೋಸ್ಕರ ಮಾಡಿದ್ದೀರಿ? ದೇಶದಲ್ಲಿ ಹೊಸ ಕೈಗಾರಿಕೆಗಳು ಆಗಬೇಕಾದುದು ನಿಜ. ಅಲ್ಲಿ ಈಗಲೇ 4-5 ಮಿಲ್ಲುಗಳು ಇವೆ. ಭತ್ತವೂ ಸಹ ಹೆಚ್ಚಿಗೆ ಬೆಳೆಯುಲಿಲ್ಲ. ನಿಮ್ಮ ಸಹಕಾರ ಸಂಘದ ಆಶ್ರಯದಲ್ಲಿ ವ್ಯವಹಾರ ಸರಿಯಾಗಿ ನಡೆಯಬೇಕು. ಈ ಸಹಕಾರ ಸಂಸ್ಥೆಯವರು ಆಲ್ ಇಂಡಿಯಾ ಪ್ಯಾಟ್ರನ್ ಗಾಂಡೇಕರ್ 9ಸೈಜ್ ರೈಸ್‌ಮಿಲ್ ಹಾಕಿದ್ದಾರೆಯೇ? ಇಲ್ಲ. ಅವರು ಸ್ಟ್ಯಾಂಡರ್ಡ್ ದಾಂಡೇಕರ್ ಸೈಜ್ ಹಾಕಿಲ್ಲ. ಗೋಡಕೆ ನಂ 6 ಸೈಜ್ ಹಾಕಿದ್ದಾರೆ. ಅದರ ಬೆಲೆಗೂ ಇದಕ್ಕೂ ವ್ಯತ್ಯಾಸ ಇದೆ. ಏತಕ್ಕೋಸ್ಕರ ಹೀಗೆ ಮಾಡಿದ್ದಾರೆ? ಇದರಿಂದ ಹತ್ತಾರು ಸಾವಿರ ಪೋಲು ಆಗಿದೆ. ಗೋಡಕೆ ನಂ—6 ಗೆ ಎಷ್ಟು ಹಣ ಕೊಟ್ಟಿದ್ದೀರಿ ದಯವಿಟ್ಟು ಹೇಳಬೇಕು. ಮೋಸ ಮಾಡಿ ಜನಗಳನ್ನು ಬೆನ್ನು ಮೇಲೆ ಇಟ್ಟುಕೊಂಡು ಕಾಪಾಡಬೇಕು ಎಂದರೆ, ನಿಮ್ಮ ಬೆನ್ನು ಮೂಳೆಯೂ ಮುರಿದು ಹೋಗುತ್ತದೆ. ಸಮಾಜದ ಬೆನ್ನು ಮೂಳೆಯೂ ಮುರಿದು ಹೋಗುತ್ತದೆ. ಈ ಸಂಸ್ಥೆಗಳಿಂದ ಒಳ್ಳೆಯದಾಗುವುದಿಲ್ಲ.

ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ನಿರ್ದಿಷ್ಟವಾಗಿ ಯಾವಾಗ ಚುನಾವಣೆ ನಡೆಸುತ್ತೀರಿ ಎಂದು ಈ ಸಭೆಗೆ ತಿಳಿಸಬೇಕು ಎಂದು ಹೇಳಿ ನಾನು ಆಗ್ರಹಪೂರ್ವಕವಾಗಿ ನಿಮ್ಮನ್ನು ಒತ್ತಾಯ ಮಾಡುತ್ತೇನೆ.

†ಶ್ರೀ ಅಲ್ಲಂ ಕರಿಬಸಪ್ಪ (ಕುರುಗೋಡು).—ಮಾನ್ಯ ಸಭಾಪತಿಗಳೇ ಸಭೆಯ ಮುಂದೆ ಮಾನ್ಯ ಸಚಿವರು ಮಂಡಿಸಿರತಕ್ಕ ಸಹಕಾರ ಮತ್ತು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಇತ್ಯಾದಿ ಡಿಮ್ಯಾಂಡುಗಳಿಗೆ ನನ್ನ ಸಪೋರ್ಟನ್ನು ಕೊಡುತ್ತ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ.

ಈಗ ಸುಮಾರು ಒಂದು ಗಂಟೆಯ ಹಿಂದೆ ಇದೇ ಸಭೆಯಲ್ಲಿ ಮಾನ್ಯ ಸಿದ್ದವೀರಪ್ಪನವರು ಬಳ್ಳಾರಿ ಸೆಂಟ್ರಲ್ ಕೋ-ಆಪರೇಟೀವ್ ಬ್ಯಾಂಕಿನ ವಿಚಾರವಾಗಿ ಮತ್ತು ಬಳ್ಳಾರಿ ಜಿಲ್ಲೆಯ ಮೈನಿಂಗ್ ಓನರ್ಸ್ ಕೋ-ಆಪರೇಟೀವ್ ಸೊಸೈಟಿಯ ಬಗ್ಗೆ ಮಾತನಾಡಿದರೆಂದು ನನ್ನ ಸ್ನೇಹಿತರಿಂದ ನನಗೆ ತಿಳಿಯಿತು ಬಂದಿತು. ಆದರೆ ಅವರು ಮಾತನಾಡತಕ್ಕ ಕಾಲಕ್ಕೆ ನಾನು ಈ ಸಭೆಯಲ್ಲಿ ಇರಲಿಲ್ಲ. ಆದರೆ ಮಾನ್ಯ ಶ್ರೀ ಸಿದ್ದವೀರಪ್ಪನವರು ಈ ಸಭೆಯಲ್ಲಿ ಆ ವಿಚಾರವನ್ನು ಪ್ರಸ್ತಾಪ ಮಾಡಿದ್ದೂ ಕೂಡ ಬಹಳ ಒಳ್ಳೆಯದೇ ಆಯಿತು. ಹಾಗೆ ಅವರು ಅದನ್ನು ಇಲ್ಲಿ ಪ್ರಸ್ತಾಪ ಮಾಡದಿದ್ದರೆ ಅದರ ಸಂಪೂರ್ಣ ವಿವರಗಳು ಸಭೆಯವರಿಗೆ ಗೊತ್ತಾಗುತ್ತಿರಲಿಲ್ಲ. ಆದುದರಿಂದ ಇದರ ಬಗ್ಗೆ ಇಲ್ಲಿ ಒಂದು ಪೂರ್ಣ ಚಿತ್ರವನ್ನು ತಿಳಿಸುವುದಕ್ಕೆ ಅವರು ಅವಕಾಶ ಕಲ್ಪಿಸಿಕೊಟ್ಟಿದ್ದಾರೆ. ಅದರಿಂದ ಅವರು ಮಾತನಾಡಿದ್ದು ಬಹಳ ಒಳ್ಳೆಯದೇ ಆಯಿತು. ಇಲ್ಲಿಗೆ ಸುಮಾರು 10 ವರ್ಷಗಳ ಕೆಳಗೆ ಶ್ರೀ ಎಚ್. ಆರ್. ಗವಿಯಪ್ಪ ಎನ್ನತಕ್ಕ ಮೂಲಪುರುಷರೊಬ್ಬರು ಅಲ್ಲಿ ಇದನ್ನು ಸ್ಥಾಪನೆ

(ಶ್ರೀ ಅಲ್ಲಂ ಕರಿಬಸಪ್ಪ)

ಮಾಡಿದರು. ಆಗ ನಾನು ಅದಕ್ಕೆ ನಾನು ಸದಸ್ಯನೂ ಆಗಿರಲಿಲ್ಲ. ಆಗ ನಮ್ಮ ಮಾವನವರು ಇದರಲ್ಲಿ ಒಬ್ಬ ಸದಸ್ಯರಾಗಿದ್ದರು. ನಮ್ಮ ಮಾವನವರು ತೀರಿಕೊಂಡ ಮೇಲೆ ನಾನು ಅಲ್ಲಿ ಸದಸ್ಯನೂ ಆದೆ, ಅನಂತರ ಡೈರೆಕ್ಟರೂ ಆದೆ. ಅನಂತರ ಕೆಲವು ದಿನಗಳ ಮೇಲೆ ಆ ಸಂಸ್ಥೆಯ ವೆಲ್‌ವಿಷರ್ ಮತ್ತು ಫೌಂಡರೂ ಆದ ಶ್ರೀ ಗವಿಯಪ್ಪನವರೂ ಮತ್ತು ಇನ್ನೂ ಅನೇಕರು ನನ್ನಲ್ಲಿಗೆ ಬಂದು ಅಲ್ಲಿ ನಾನು ಅಧ್ಯಕ್ಷನಾಗಬೇಕೆಂದು ಒಂದು ಅಪರೋಕ್ಷವಾದ ಕೋರಿಕೆಯನ್ನು ಮಾಡಿಕೊಂಡರು. ಅದರಂತ ಇನ್ನುಳಿದ ಎಲ್ಲಾ ಸದಸ್ಯರೂ ಕೇಳಿಕೊಂಡರು. ಆಗ ನಾನು ಅವರ ಒತ್ತಾಯಕ್ಕೆ ಒಳಗಾಗಿ ಆ ಅಧ್ಯಕ್ಷಪೀಠವನ್ನು ಸ್ವೀಕರಿಸಲೇಬೇಕಾಯಿತು. ಅದರ ಹಣಕಾಸಿನ ವ್ಯವಹಾರದಲ್ಲಿ ಒಂದೆರಡು ಲಕ್ಷ ರೂಪಾಯಿಗಳ ಡಿಫಿಸಿಟ್ಟಿತ್ತು. ಆ ಮಾನ್ಯ ಸದಸ್ಯರು ಇದನ್ನು ದಯವಿಟ್ಟು ನೋಟ್ ಮಾಡಿಕೊಳ್ಳಬೇಕು......

ಶ್ರೀ ಎಚ್. ಸಿದ್ದವೀರಪ್ಪ.—ನಾನು ನೀವು ಹೇಳತಕ್ಕದ್ದನ್ನೆಲ್ಲಾ ಎಂದೋ ನನ್ನ ಬ್ರೈನಿನಲ್ಲಿ ನೋಟ್ ಮಾಡಿಕೊಂಡಿದ್ದೇನೆ. ಆದರೆ ನಾನು ಇಲ್ಲಿ ಮಾತನಾಡಿದ ವರದಿಯನ್ನು ತರಿಸಿ ಮಾನ್ಯ ಸದಸ್ಯರು ನೋಡಿ ಮಾತನಾಡಲಿ. ನಾನು ಆ ಬಳ್ಳಾರಿ ಮೈನಿಂಗ್ ಓನರ್ಸ್ ಕೋ-ಆಪರೇಟೀವ್ ಸೊಸೈಟಿಯ ವಿಚಾರದಲ್ಲಿ ಅಲ್ಲಂ ಕರಿಬಸಪ್ಪನವರು ಏನು ಮಾಡಿದ್ದಾರೆ ಎನ್ನತಕ್ಕ ವಿಚಾರವನ್ನೇ ನಾನು ಎತ್ತಿಲ್ಲ. ಅವರೆ ಬಳ್ಳಾರಿಯಲ್ಲಿ ತಕ್ಕ ಕೆಲವು ಗಣ್ಯ ವ್ಯಕ್ತಿಗಳು ಹೇಳಿದ ವಿಚಾರವನ್ನು ಮತ್ತು ಆ ಆಡಿಟ್ ವರದಿಯಲ್ಲಿ ಏನು ಹೇಳಿದೆಯೋ ಅದನ್ನು ನಾನು ಇಲ್ಲಿ ಹೇಳಿದ್ದೇನೇ ವಿನಃ ಅದರಲ್ಲಿ ಅಲ್ಲಂ ಕರಿಬಸಪ್ಪನವರು ದುಡ್ಡು ತಿಂದಿದ್ದಾರೆ ಎಂದು ನಾನು ಯಾವುದೊಂದು ವಿಚಾರವನ್ನೂ ಹೇಳಲಿಲ್ಲ. ಅಧ್ಯಕ್ಷರು ನನಗೆ ಅವಕಾಶ ಕೊಡುವುದಾದರೆ ನಾನು ಇದರ ಸಂಪೂರ್ಣ ಚರಿತ್ರೆಯನ್ನು ಸಭೆಯ ಮುಂದೆ ಇಡಬಲ್ಲೆ. ನನ್ನಲ್ಲಿ ಇದರ ಬಗ್ಗೆ ವಾಲ್ಯೂಂಗಟ್ಟಲೇ ದಾಖಲೆಗಳಿವೆ.

ಶ್ರೀ ಅಲ್ಲಂ ಕರಿಬಸಪ್ಪ.—ನಾನು ಆ ಸೊಸೈಟಿಗೆ ಪ್ರೆಸಿಡೆಂಟಾದ ಕೂಡಲೆ ಇದರ ವ್ಯವಹಾರದ ಬಗ್ಗೆ ಬಳ್ಳಾರಿ ಜಿಲ್ಲಾ ಕೇಂದ್ರ ಬ್ಯಾಂಕಿನಲ್ಲಿ ಅಕೌಂಟನ್ನು ಓಪನ್ ಮಾಡಿದೆ. ಆಗ ಅಲ್ಲಿ ಶ್ರೀ ಅಂದಾನಪ್ಪ ಎನ್ನತಕ್ಕವರು ಅಧ್ಯಕ್ಷರಾಗಿದ್ದರು. ಆಗ ಸೊಸೈಟಿಯವರು ಬಳ್ಳಾರಿಯಿಂದ ಕಾರವಾರಕ್ಕೆ ಮೈನಿಂಗ್ ಎಕ್ಸ್‌ಪೋರ್ಟ್ ಮಾಡಲು ಅಂದರೆ 2-3 ಲಕ್ಷ ಟನ್ ಅದಿರನ್ನು ಎಕ್ಸ್‌ಪೋರ್ಟ್ ಮಾಡಬೇಕೆಂದು ತೀರ್ಮಾನ ಮಾಡಿಕೊಂಡರು. ಆದರೆ ಅಲ್ಲಿ ಜೂನ್ ತಿಂಗಳಿಂದ ಪ್ರಾರಂಭವಾದ ಮಳೆ ಸೆಪ್ಟೆಂಬರ್‌ವರೆಗೂ ಜಾಸ್ತಿ ಇರುತ್ತದೆ. ಆಗ ಷಿಪ್ಪಿಂಗೆ ಬಹಳ ತೊಂದರೆಯಾಗುತ್ತದೆ. ಷಿಪ್ ಮಾಡುವುದಕ್ಕಾಗುವುದಿಲ್ಲ. ಆಗ ಆ ಅದಿರೆಲ್ಲಾ ಅಲ್ಲಿ ಸ್ಟಾಕ್ ನಿಂತುಹೋಯಿತು. ಆಗ ಆ ಸೊಸೈಟಿಯಲ್ಲಿ ಸುಮಾರು 20 ಸಾವಿರ ಸದಸ್ಯರಿದ್ದರು. ಅವರಿಂದ ವಸೂಲಾಗಿದ್ದ ಷೇರ್‌ಮೊಬಲಗು ಎರಡೂವರೆ ಲಕ್ಷ ರೂಪಾಯಿಗಳು ಮಾತ್ರ. ಆ ವೇಳೆಯಲ್ಲಿ ನಾವು ಈ ಬ.ಡಿ.ಸಿ.ಸಿ. ಇಂದ 26 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದೆವು. ಆದರೆ ಮಾನ್ಯ ಸದಸ್ಯರು ನಾವು ಹಣವನ್ನು ಡ್ರಾ ಮಾಡಿದ್ದನ್ನು ಮಾತ್ರ ಹೇಳುತ್ತಾರೇ ವಿನಾ ನಾವು ಎಷ್ಟು ಹಣವನ್ನು ವಾಪಸ್ ಕೊಟ್ಟಿದ್ದೇವೆಂಬುದನ್ನು ಅವರು ಗಮನಕ್ಕೇ ತೆಗೆದುಕೊಳ್ಳುವುದಿಲ್ಲ. ನಾನು ಎಂದಿಗೂ ಅಂಥ ಅಯೋಗ್ಯ ಕೆಲಸವನ್ನು ಮಾಡತಕ್ಕವನಲ್ಲ. ಯಾವತ್ತೂ ಅಂಥಾ ತಪ್ಪು ಕೆಲಸಗಳನ್ನು ಮಾಡತಕ್ಕದ್ದು ಕಂಡು ಬಂದಾಗ ಇಂಥ ಕೆಟ್ಟ ಬದುಕನ್ನು ಮಾಡಬೇಡಿ ಎಂದು ಹೇಳತಕ್ಕ ಮನುಷ್ಯ ನಾನು. 1952-53 ರಿಂದ ನಾನು ಶ್ರೀ ಸಿದ್ದವೀರಪ್ಪನವರನ್ನು ಚೆನ್ನಾಗಿ ಬಲ್ಲೆ. ಅವರು ಅಲ್ಲಂಕರಿಬಸಪ್ಪನನ್ನೂ ಚೆನ್ನಾಗಿ ಬಲ್ಲರು. ನಮ್ಮ ಇಬ್ಬರ ವಿಚಾರ ಇಡೀ ಮೈಸೂರಿಗೆಲ್ಲಾ ಚೆನ್ನಾಗಿ ಗೊತ್ತಿದೆ. ನಾವು ಆ ಬ್ಯಾಂಕಿನಿಂದ 25 ಲಕ್ಷ ರೂಪಾಯಿಗಳನ್ನು ಡ್ರಾ ಮಾಡಿದ್ದು ಖರೆ. ಆದರೆ ಆ ವರ್ಷದಾಖೈರಿನಲ್ಲಿ ಬಿ.ಡಿ.ಸಿ.ಸಿ.ಗೆ ಸೊಸೈಟಿಯವರು ಕೊಡಬೇಕಾದ ಬಡ್ಡಿ ಬಾಕಿ 2 ಲಕ್ಷ 50 ಸಾವಿರವೋ ಅಥವಾ 60 ಸಾವಿರವೋ ಬಾಕಿ ಇತ್ತು. ಅಲ್ಲಿಗೆ ಹಿಂದಕ್ಕೆ ಆಗಲೆ ಆ ಸೊಸೈಟಿ ಸುಮಾರು 4 ಲಕ್ಷಕ್ಕೂ ಮೇಲ್ಪಟ್ಟು ಬಡ್ಡಿಯನ್ನು ಕೊಟ್ಟಿತ್ತು. ಇನ್ನು ಕೊಡಬೇಕಾದ ಬಡ್ಡಿ ಬಾಕಿ 2 ಲಕ್ಷ ಚಿಲ್ಲರೆ ಇತ್ತು.

ಶ್ರೀ ಎಸ್. ಶಿವಪ್ಪ.—ಕಳೆದ ಚುನಾವಣೆಗಳ ಕಾಲದಲ್ಲಿ ನಿಮ್ಮ ಕಾಂಗ್ರೆಸ್ ಪಕ್ಷದ ಸದಸ್ಯರೇ ಅನೇಕರು ಆ ಸೊಸೈಟಿಯ ವಿಚಾರದಲ್ಲಿ ಅನೇಕ ಆಪಾದನೆಗಳನ್ನು ಮಾಡಿದ್ದಾರೆ.

ಶ್ರೀ ಅಲ್ಲಂ ಕರಿಬಸಪ್ಪ.—ಅಯೋಗ್ಯ ಕೆಲಸ ಮಾಡತಕ್ಕವರು ಎರಡೂ ಪಕ್ಷಗಳಲ್ಲಿದ್ದಾರೆ. ಆದರೆ ಈ ದಿವಸ ಅಲ್ಲಿ ಇರತಕ್ಕ ಅಸೆಟ್ಸ್ ಏನೆಂಬುದನ್ನೂ ತಿಳಿಸುತ್ತೇನೆ. ಆ ಸೊಸೈಟಿಯವರು ಕೊಡತಕ್ಕ ಬಾಕಿ ಮೊತ್ತ 2 ಲಕ್ಷ 60 ಸಾವಿರ ಇದ್ದರೆ ಅವರಿಗೆ ಇರತಕ್ಕ ಆಸ್ತಿ ಏನೇನು ಅಂದರೆ ಆ ಸೊಸೈಟಿಯ ಷೇರ್ ಕ್ಯಾಪಿಟಲ್ ಬಗ್ಗೆ ಇನ್ನೂ 50 ಸಾವಿರ ಬಾಕಿ ಬರಬೇಕಾದ್ದಿದೆ. ಅಲ್ಲಿ 30-35 ಸಾವಿರ ಅದರ ರಿಜರ್ವ್ ಫಂಡಿದೆ. 15 ಸಾವಿರ ನ್ಯಾಷನಲ್ ಲೋನ್‌ಬಾಂಡುಗಳಿವೆ.

ಬೊಂಬಾಯಿನಲ್ಲಿ ಸೇಲ್ಸ್ ಟ್ಯಾಕ್ಸ್‌ನಿಂದ ಇದಕ್ಕೆ ರೀಫಂಡಾಗಬೇಕಾದ ಹಣ ಒಂದು ಲಕ್ಷ 15 ಸಾವಿರ ನಿಂತಿದೆ. ಇನ್ನೂ ಬರಬೇಕಾದ ಇತರ ಬಾಕಿಗಳ ಹಣ 60-70 ಸಾವಿರ ಇದೆ. ಆದರೆ ಆ ಬಡ್ಡಿ ಬಾಕಿ ಒಂದನ್ನು ಬಿಟ್ಟರೆ ಇನ್ಯಾವ ಬಾಕಿಯನ್ನೂ ನಾವು ಕೊಡಬೇಕಾದದ್ದಿಲ್ಲ. ನಾನು ಇಲ್ಲಿಯವರೆಗೂ ಇಲ್ಲಿ ಹೇಳಿರತಕ್ಕ ಹೇಳಿಕೆ ಸುಳ್ಳೆಂದು ರುಜುವಾತಾದರೆ ನಾನು ನನ್ನ ಸದಸ್ಯತ್ವಕ್ಕೆ ರಾಜೀನಾಮೆ ಕೊಡುತ್ತೇನೆ. ಇಲ್ಲವಾದರೆ ಆ ಮಾನ್ಯ ಸದಸ್ಯರು ರಾಜೀನಾಮೆ ಕೊಡಬೇಕು......

ಶ್ರೀ ಎಚ್. ಸಿದ್ದವೀರಪ್ಪ.—ನನಗೇನ್ರಿ, ಅಂಥಾ ತೆವುಲು ರಾಜೀನಾಮೆ ಕೊಡುವುದಕ್ಕೆ? ಅವರು ಬೇಕಾದರೆ ರಾಜೀನಾಮೆ ಕೊಡಲಿ. ಕುಂಬಳಕಾಯಿ ಕಳ್ಳಾ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ ಹಾಗಾಯಿತು. ನಾನು ಶ್ರೀ ಅಲ್ಲಂ ಕರಿಬಸಪ್ಪನವರ ವಿಚಾರದಲ್ಲಿ ನನ್ನ ಭಾಷಣದಲ್ಲಿ ಒಂದು ಅಕಾರ ಚಕಾರವನ್ನೂ ಎತ್ತಿಲ್ಲ. ಅವರ ವಿಚಾರದಲ್ಲಿ ನಾನು ಒಂದು ಗೆರೆ ಕೂಡ ಎಳೆದಿಲ್ಲ. ಬಳ್ಳಾರಿಯಲ್ಲಿರತಕ್ಕ 16 ಜನ ದೊಡ್ಡ ಮಹನೀಯರು ಇದನ್ನು ತಿಳಿಸಿದರು. ಅವರು ಅಲ್ಲಿ ಇದರ ಬಗ್ಗೆ ಸಾಕಷ್ಟು ಪ್ರಯತ್ನ ಪಟ್ಟಾಗ್ಯೂ, ಅವರು ಎಷ್ಟೇ ತಿಪ್ಪೆರ್‌ಲಾಗ ಹಾಕಿದರೂ ಇದನ್ನು ವಿಚಾರ ಮಾಡತಕ್ಕವರೇ ಇಲ್ಲದಂತಾಗಿದೆ. ನೀವಾದರೂ ಇದನ್ನು ನಿಮ್ಮ ಅಸೆಂಬ್ಲಿಯಲ್ಲಿ ಚರ್ಚೆ ಮಾಡಿ ಎಂದು ಅವರೆಲ್ಲರೂ ಬಂದು ಒತ್ತಾಯ ಮಾಡಿದ್ದರಿಂದ ನಾನು ಅದನ್ನು ಇಲ್ಲಿ ಪ್ರಸ್ತಾಪಮಾಡಿದ್ದೇನೆ. ಇಂಥಾ ಒಂದು ದೊಡ್ಡ ಸೊಸೈಟಿಯೇ ಹೀಗಾದರೆ ಇಂಥಾ ದುಂದು ವೆಚ್ಚಗಳನ್ನು ವಿಚಾರ ಮಾಡತಕ್ಕವರು ಇಲ್ಲವೇ ಎಂದು ಅವರು ಪ್ರಶ್ನೆ ಮಾಡಿದ್ದರಿಂದ ನಾನು ಅದನ್ನು ಇಲ್ಲಿ ಎತ್ತಿದೆ. ಅಷ್ಟು ವಿನಾ ನಾನು ಅಲ್ಲಂ ಕರಿಬಸಪ್ಪನವರು ಇಂಥಾ ಒಂದು ನೀಚ ಕೆಲಸವನ್ನು ಮಾಡಿದ್ದಾರೆಂದು ನಾನೇನೂ ಹೇಳಲಿಲ್ಲ. ಆದ್ದರಿಂದ ಇಲ್ಲಿ ನಾನು ರಾಜೀನಾಮೆ ಕೊಡತಕ್ಕ ಪ್ರಸಂಗವೆಲ್ಲಿಂದ ಬಂತು? ನಾನು ಹಾಗೊಂದು ವೇಳೆ ರಾಜೀನಾಮೆ ಕೊಡುವುದಾದರೆ ನಾನು ಇಂಥಾ ಒಂದು ಸಣ್ಣ ಪುಟ್ಟ ಸೊಸೈಟಿ ವಿಚಾರಕ್ಕೆ ಕೊಡಲಾರೆ, ನಾನು ಇಂಥ ಯಾವುದಾದರೂ ಒಂದು ಸರ್ಕಾರದ ಮೇಲೆ ದೂರಿದ್ದರೆ ಅದರ ಬಗ್ಗೆ ಸವಾಲನ್ನು ಹಾಕಿ ರಾಜೀನಾಮೆಗೆ ತಯಾರಾಗುವೆನು. ಆದರೆ ನಾನು ಇಲ್ಲಿ ಮಾತನಾಡಿರತಕ್ಕದ್ದಾದರೂ ತಾ॥ 25-12-1963 ರ ಆಡಿಟ್ ವರದಿಯಲ್ಲಿ ಏನು ಹೇಳಿದ್ದಾರೋ ಅಷ್ಟನ್ನು ಮಾತ್ರ ಇಲ್ಲಿ ಹೇಳಿದ್ದೇನೆ. ಆ ಆಡಿಟ್ ವರದಿಯಲ್ಲಿ ಹೀಗೆ ಹೇಳಿದೆ:—

"1963 Audit Report—25th December 1963—Society Inspection—Auditor's report:

"*Conclusion*: The accounts are not accurately prepared and presented for audit from 1957-58 onwards. Stocks are not verified once a quarter as required under the bye-laws. Outstandings are not prepared and confirmations obtained from the debtors. Loan bonds are not executed by the members for the advances. Under these circumstances, the financial condition of the society cannot be gauged correctly. The management is earnestly requested to look into this immediately.

H. R. Sundararaja Iyengar,
Asst. Registrar."

ಈ ಆಡಿಟರ ಅಬ್‌ಜೆಕ್ಷನ್ ಬಗ್ಗೆ ನೀವೇನು ಆಕ್ಷನ್ ತೆಗೆದುಕೊಂಡಿದ್ದೀರಿ ಎಂಬುದನ್ನು ಇಲ್ಲಿ ತಿಳಿಸಿದರೆ ಸಾಕು.

I have not made any personal allegation against him. I do not know who is the gentleman. ಇದು ಒಂದು ದೊಡ್ಡ ಸಮುದ್ರ. ಇದರಲ್ಲಿ ಎಂಥೆಂತಾ ತಿಮಿಂಗಲಗಳು ಇವೆಯೋ? ದೊಡ್ಡ ಮೀನುಗಳು ಎಷ್ಟಿವೆಯೋ, ಸಣ್ಣ ಮೀನುಗಳು ಎಷ್ಟಿವೆಯೋ? ಆ ದೊಡ್ಡ ಮೀನುಗಳು ಸಣ್ಣ ಮೀನುಗಳನ್ನು ನುಂಗುತ್ತಿವೆ. ಆದರೆ ಯಾರೋ ಒಬ್ಬರು ಒಂದು ಸಾರ್ತಿ ಒಂದು ವಿಚಾರವನ್ನು ಹೇಳಿದ್ದರು—ನಮ್ಮ ದೇಶದಲ್ಲಿರತಕ್ಕ ಬೇವಿನ ಸೊಪ್ಪೆಲ್ಲಾ ಭಂಗೀ ಸೊಪ್ಪಾಗಿ, ಸಮುದ್ರದಲ್ಲಿರತಕ್ಕ ನೀರೆಲ್ಲಾ ಸಾರಾಯಿಯಾಗಿದ್ದರೆ ಯಾರು ಎಷ್ಟು ಬೇಕಾದರೂ ಕುಡಿಯಬಹುದಿತ್ತು ಎಂದು ಹೇಳುತ್ತಿದ್ದರು.

ಶ್ರೀ ಅಲ್ಲಂ ಕರಿಬಸಪ್ಪ.—ಮಾನ್ಯ ಸದಸ್ಯರು 1963ನೇ ಇಸವಿಯ ಆಡಿಟ್ ರಿಪೋರ್ಟನ್ನು ಓದಿದರು. ಆಗ ನಾನು ಆ ಸಂಘದಲ್ಲಿ ಪ್ರೆಸಿಡೆಂಟ್ ಆಗಿರಲಿಲ್ಲ. ಆ ಸಂಘಕ್ಕೆ ಪ್ರತಿವರ್ಷವೂ 10–12 ಲಕ್ಷ ರೂಪಾಯಿಗಳ ಕ್ರೆಡಿಟ್ ಬರುತ್ತದೆ. ಆದರೆ ಅದು ಕರೆಕ್ಟ್ ಟೈಮಿಗೆ ಬರುವುದಿಲ್ಲ. ಏತಕ್ಕೆಂದರೆ ಕೆಲವು ಕಾಲ ಷಿಪಿಂಗ್ ಇರುವುದಿಲ್ಲ. ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್ ತಿಂಗಳುಗಳಲ್ಲಿ ಕ್ರೆಡಿಟ್ ಬರುತ್ತದೆ. ನಮ್ಮ ಮೈನಿಂಗ್ ಓನರ್ಸ್ ಕೋಆಪರೇಟೀವ್ ಸೊಸೈಟಿ ಎಂ. ಎಂ. ಟಿ. ಸಿ. ಮತ್ತು ಎಸ್. ಟಿ. ಸಿ. ಕೋ-ಆಪರೇಟೀವ್ ಸೊಸೈಟಿಗಳು ಸೇರಿ ಒಂದು ಅಸೋಸಿಯೇಷನ್ ಫಾರಂ ಮಾಡಿದ್ದಾರೆ. ಅಲ್ಲಿಗೆ ಎಲ್ಲಾ ಡೈರೆಕ್ಟರುಗಳು ಬರುತ್ತಾರೆ. ನಾನೇನು ಆ ಸೊಸೈಟಿಯ ಫೌಂಡರೂ ಅಲ್ಲ. ಆ ಸೊಸೈಟಿಯನ್ನು ಸ್ಥಾಪನೆ ಮಾಡಿದ ಉದ್ದೇಶ ವ್ಯಾಪಾರ ಮಾಡಬೇಕು, ಕಬ್ಬಿಣದ ಅದುರನ್ನು ಬೇರೆ ಕಡೆಗೆ ಎಕ್ಸ್‌ಪೋರ್ಟ್ ಮಾಡಬೇಕು ಎಂದು. ಅದರಲ್ಲಿ ಸರ್ಕಾರದ ರೊಕ್ಕ ಒಂದು ನಯಾಪೈಸಾ ಕೂಡ ಇಲ್ಲ. ಬ್ಯಾಂಕಿನ ಡ್ರಾಫ್ಟಿಗೆ ಬ್ಯಾಂಕಿನಿಂದ ಸಾಲವಾಗಿ ಪಡೆದಿರತಕ್ಕ ಹಣಕ್ಕೆ ಪ್ರತಿಯೊಬ್ಬ ಡೈರೆಕ್ಟರು ಷ್ಯೂರಿಟಿ ಕೊಟ್ಟಿದ್ದಾರೆ. ನಾನೂ ಸಹ ಷ್ಯೂರಿಟಿ ಕೊಟ್ಟಿದ್ದೇನೆ. ಆ ಸೊಸೈಟಿಯಲ್ಲಿ ಅನ್ಯಾಯವೂ ನಡೆದಿಲ್ಲ. ಈಗ ನಾನು ಹೇಳಿರತಕ್ಕ ವಿಚಾರ ಸುಳ್ಳು ಆದರೆ ನಾನು ರಾಜೀನಾಮೆಯನ್ನು ಕೊಡುವುದಕ್ಕೆ ಸಿದ್ಧನಾಗಿದ್ದೇನೆ. ನಾನೇನು ಜೀವನ ಮಾಡಬೇಕೆಂದು ರಾಜಕೀಯ ರಂಗಕ್ಕೆ ಬಂದಿಲ್ಲ. ಜನತೆಯ ಸೇವೆ ಮಾಡಬೇಕೆಂದು ಬಂದಿದ್ದೇನೆ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದನೆಯನ್ನರ್ಪಿಸಿ, ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Sri B. B. SAYANAK (Belgaum).—I protest against the Whip and I do not want to speak.

ಶ್ರೀ ಎಚ್. ಡಿ. ದೇವೇಗೌಡ (ಹೊಳೇನರಸೀಪುರ).—ಮಾನ್ಯ ಸಭಾಪತಿಗಳೇ, ಈಗ ನಮ್ಮ ಮುಂದೆ ಇರತಕ್ಕಂಥ ಸಹಕಾರ ಇಲಾಖೆ ಮತ್ತು ಅಭಿವೃದ್ಧಿ ಇಲಾಖೆಗಳ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ಈಗಾಗಲೇ ಚರ್ಚೆ ನಡೆದು ಅನೇಕ ಮಾನ್ಯ ಸದಸ್ಯರು ತಮ್ಮ ತಮ್ಮ ಅನುಭವಗಳನ್ನು ಸರ್ಕಾರಕ್ಕೆ ಸಲಹೆಗಳ ಮುಖಾಂತರ ಕೊಟ್ಟಿದ್ದಾರೆ. ಇವೊತ್ತಿನ ದಿವಸ ರೈತನ ಏಳಿಗೆಗೆ ಸಂಬಂಧಪಟ್ಟ ಬೇಡಿಕೆಗಳು ಏನಿವೆ ಅವುಗಳ ಅವಶ್ಯಕತೆ ಎಷ್ಟು ಎನ್ನತಕ್ಕಂಥಾದ್ದನ್ನು ನಾವು ಯೋಚನೆ ಮಾಡಿ ಅವುಗಳನ್ನು ನಾವು ಒಪ್ಪುವುದಾದರೂ ಕೂಡ ಅದನ್ನು ಕಾರ್ಯಗತ ಮಾಡತಕ್ಕಂಥ ಕಾಲದಲ್ಲಿ ಸರ್ಕಾರ ಮತ್ತು ಅದರ ಸಿಬ್ಬಂದಿ ಎಷ್ಟರಮಟ್ಟಿಗೆ ಕೆಲಸ ಮಾಡುತ್ತದೆ ಎನ್ನತಕ್ಕಂಥಾದ್ದನ್ನು ಒಂದೊಂದನ್ನೂ ಕೂಡ ಲೆಕ್ಕಾಚಾರ ಹಾಕಿ ನೋಡುವುದಾದರೆ, ಬಹುಶಃ ಖರ್ಚು ಮಾಡತಕ್ಕ ಹಣ ಎಷ್ಟೋ ಕೋಟಿ ರೂಪಾಯಿಗಳು ಅಪವ್ಯಯವಾಗುತ್ತದೆ ಎಂದು ಗೊತ್ತಾಗುತ್ತದೆ. ಆ ಸಂದರ್ಭದಲ್ಲಿ ಸಂಬಂಧಪಟ್ಟ ಮಂತ್ರಿಗಳು ಬಹಳ ಎಚ್ಚರಿಕೆಯನ್ನು ವಹಿಸಿ ಕೆಲಸವಾಡಬೇಕು ಎಂದು ನಾನು ಪ್ರಪ್ರಥಮವಾಗಿ ತಿಳಿಸುವುದಕ್ಕೆ ಇಚ್ಛೆ ಪಡುತ್ತೇನೆ. ಈ ಕೋ-ಆಪರೇಟೀವ್ ಇಲಾಖೆ ಏನಿದೆ ಇದರ ಬಗ್ಗೆ ಎಷ್ಟು ಮಾತನಾಡಿದರೂ ಅಷ್ಟೂ ಕಡಿಮೆ, ಅಷ್ಟೂ ಗೌರವ ಎಂದು ನಾನು ತಿಳಿದುಕೊಂಡಿದ್ದೇನೆ. ಇಲ್ಲಿ ಈಗ ಶ್ರೀಮಾನ್ ಜಿ. ರಾಮೇಗೌಡರು ಇಲ್ಲ. ಅವರು ಸಹಕಾರ ಇಲಾಖೆಯ ಬಗ್ಗೆ ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಜಿಲ್ಲಾ ಬ್ಯಾಂಕಿನ ಪ್ರಗತಿಯ ಬಗ್ಗೆ ಬಹಳ ಮೆಚ್ಚಿಗೆಯ ಮಾತನ್ನು ಆಡಿದ್ದಾರೆ. ಸಹಕಾರ ಇಲಾಖೆ ಎಷ್ಟರಮಟ್ಟಿಗೆ ತನ್ನ ಕರ್ತವ್ಯವನ್ನು ಮಾಡುತ್ತಿದೆ ಎನ್ನುವ ವಿಷಯದಲ್ಲಿ ಬಹಳ ಬೆನ್ನು ತಟ್ಟಿ ಅವರು ಮಾತನಾಡುತ್ತಿದ್ದರು. ಅದನ್ನು ನಾನು ನೋಡಿದೆ. ಅವರು ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ಮಂತ್ರಿಗಳು ಉತ್ತರವನ್ನು ಕೊಟ್ಟರೆ ಅವರು ನಿಜವಾಗಿಯೂ ಸಹಕಾರ ಇಲಾಖೆಯಲ್ಲಿ ಇರತಕ್ಕ ಲೋಪದೋಷಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ, ಎನ್ನತಕ್ಕಂಥಾದ್ದು ನಮಗೆ ಅರ್ಥವಾಗುತ್ತದೆ. ಇವೊತ್ತಿನದಿವಸ ಮೈಸೂರು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಗಳು ಏನಿವೆ ಮಾರಾಟ ಸಹಕಾರ ಸಂಘಗಳು ಏನಿವೆ ಅದರ ಅಧ್ಯಕ್ಷರ ಆಯ್ಕೆಯಲ್ಲಿ ಮಂತ್ರಿಗಳು ಹಸ್ತಕ್ಷೇಪ ನಡೆಸುತ್ತಿದ್ದಾರೆ. ಮೈಸೂರು ಸ್ಟೇಟ್ ಕೋ-ಆಪರೇಟೀವ್ ಸಹಕಾರ ಸಂಘಗಳ ಆಡಳಿತದಲ್ಲ, ವ್ಯವಹಾರದಲ್ಲಿ ಯಾವ ಯಾವ ಮಂತ್ರಿಗಳು ಏನೇನು ಸಹಕಾರ ಮಾಡಬೇಕೋ ಅದನ್ನು ಮಾಡುತ್ತಾರೆ. ಅಂಥಾ ಮಂತ್ರಿಗಳು ನಮ್ಮ ರಾಜ್ಯದಲ್ಲಿ ಇದ್ದಾರೆ. ಈ ಸನ್ನಿವೇಶದಲ್ಲಿ ಮಂತ್ರಿಗಳ ವಿಚಾರದಲ್ಲಿ ಬಹಳ ಕಟುವಾದ ಪದಗಳನ್ನು ಉಪಯೋಗಿಸಬೇಕು ಎನ್ನುವ ಆಶೆ ನನಗೆ ಇಲ್ಲ. ಸರ್ಕಾರದವರು ಫರ್ಟಿಲೈಜರ್ಸ್ ವಿಚಾರದಲ್ಲಿ ಮಾಡಿರತಕ್ಕ ಒಂದೊಂದು ವಿಚಾರವನ್ನೂ ನೋಡಿದರೆ ತಮಗೆ ಅರ್ಥವಾಗುತ್ತದೆ. 1966ನೇ ಇಸವಿಯಲ್ಲಿ ಈ ಫರ್ಟಿಲೈಜರ್ಸ್ ವ್ಯವಹಾರಕ್ಕೆ ಸಂಬಂಧಪಟ್ಟಹಾಗೆ 14 ಲಕ್ಷ ರೂಪಾಯಿಗಳ ಲಾಸ್ ಅನ್ನು ತೋರಿಸಿದ್ದಾರೆ. ಫರ್ಟಿಲೈಜರ್ಸ್ ಅಕೌಂಟ್ಸ್

ಹೇಗಿದೆ ಎಂದರೆ ಡೈರೆಕ್ಟರ್ ಆಫ್ ಅಗ್ರಿಕಲ್ಚರ್, ಕೊಡತಕ್ಕಂಥ ಅಕೌಂಟಿಗೂ ಮಾರ್ಕೆಟಿಂಗ್ ಸೊಸೈಟಿಯು ಆಫೀಸಿನಲ್ಲಿ ಮೇಂಟೇನ್ ಮಾಡತಕ್ಕ ಅಕೌಂಟಿಗೂ ಒಂದಕ್ಕೊಂದಕ್ಕೆ ಟ್ಯಾಲಿ ಆಗುವುದಿಲ್ಲ. ಈಗ ಆಡಿಟ್ ರಿಪೋರ್ಟಿನಲ್ಲಿರತಕ್ಕ ಪ್ರತಿಯೊಂದು ವಿಷಯವನ್ನೂ ಚರ್ಚೆ ಮಾಡುವುದಕ್ಕೆ ಕಾಲಾವಕಾಶ ಇಲ್ಲ. ಏತಕ್ಕೆಂದರೆ ಸೊಸೈಟಿಯ ಜನರಲ್ ಬಾಡಿ ಮೀಟಿಂಗಿನ ಹಾಗೆ ಆಗಬಾರದು ಎಂದು ಕೆಲವು ವಿಷಯಗಳನ್ನು ಮಾತ್ರ ನಾನು ಹೇಳಿದೆ. ಕೋ-ಆಪರೇಟೀವ್ ಸೊಸೈಟಿಯು ರಿಜಿಸ್ಟ್ರಾರ್ ಅವರು ಸರ್ಕಾರದ ನಾಮಿನಿ ಆಗಿರುತ್ತಾರೆ. ಅವರು ಇರುವ ಇಂಥಾ ಮೇಲ್ಮಟ್ಟದ ಸಂಸ್ಥೆಗಳಲ್ಲಿ ಇಷ್ಟೊಂದು ಅನ್ಯಾಯಗಳು, ಅನಾಚಾರಗಳು ನಡೆಯುವುದಕ್ಕೆ ಅವಕಾಶವನ್ನು ಕೊಡುವುದಾದರೆ, ಅದಕ್ಕೆ ಮಂತ್ರಿಗಳ ಅನುಗ್ರಹ ದೊರೆಯುವುದಾದರೆ, ಇನ್ನು ಸಣ್ಣಪುಟ್ಟ ಚಿಲ್ಲರೆ ವ್ಯಾಪಾರವನ್ನು ಮಾಡುವುದಕ್ಕೆ ಈ ಸಂಸ್ಥೆಯಲ್ಲಿ ಅವಕಾಶವನ್ನು ಕೊಡುವುದಾದರೆ ಬಹುಶಃ ಇದು ಬಹಳ ಕೀಳು ಮಟ್ಟದ ಕೆಲಸ ಎಂದು ನಾನು ಹೇಳುತ್ತೇನೆ. ಆದ್ದರಿಂದ ಅದಕ್ಕೆ ಅವಕಾಶವನ್ನು ಕೊಡಬಾರದು ಎಂದು ನಾನು ಹೇಳುತ್ತೇನೆ. ತಪ್ಪು ಮಾಡತಕ್ಕವರು ಯಾವುದೇ ಪಕ್ಷದವರಾಗಿರಲಿ, ಯಾವ ದರ್ಜೆಯ ಮನುಷ್ಯನೇ ಆಗಿರಲಿ, ಅಪವ್ಯಯ ಮಾಡತಕ್ಕವರ ಮೇಲೆ ಸರ್ಕಾರದವರು ಉಗ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕು. ಇದು ಬಹಳ ಲಘುವಾಗಿ ಮಾತನಾಡತಕ್ಕ ವಿಚಾರವಲ್ಲ. ಇನ್ನು ಮೈಸೂರು ರಾಜ್ಯದ ಹತ್ತಿ ಅಪೆಕ್ಸ್ ಸೊಸೈಟಿಯಲ್ಲಿ ಸ್ಟಾಕ್ ವೆರಿಫಿಕೇಷನ್ ಮಾಡಿದರೆ ಸುಮಾರು 13 ಲಕ್ಷ ರೂಪಾಯಿಗಳ ಬೆಲೆಬಾಳುವ ಸ್ಟಾಕು ಕಡಿಮೆ ಬಂದಿದೆ ಎಂದು ಹೇಳಿದ್ದಾರೆ. ಒಂದು ಪಂಚೆಯನ್ನು ನಾಲ್ಕು ಪೀಸ್ ಮಾಡಿ ಅದಕ್ಕೆ ಒಂದೊಂದು ಲೇಬಲ್ ಹಚ್ಚಿ ಅಕೌಂಟ್ಸ್ ಡೀಲ್ ಮಾಡಿದ್ದಾರೆ. ಇದರ ಅಕೌಂಟಿನಲ್ಲಿ ಮೋಸ ನಡೆದಿದೆ ಎಂದು ನಾನು ಕೇಳಿದ್ದೇನೆ. ಇದಕ್ಕಿಂತ ಕೀಳು ಮಟ್ಟದ ವ್ಯವಹಾರ ಮತ್ತೊಂದಿಲ್ಲ. ರಾಜ್ಯ ಮಟ್ಟದ ಸಂಸ್ಥೆಯಲ್ಲಿ ಈ ಒಂದು ಕೀಳು ಮಟ್ಟದ ವ್ಯವಹಾರಕ್ಕೆ ಕೈಹಾಕಿದ್ದಾರೆ. ಇದರ ಅಧ್ಯಕ್ಷರ ಪಷ್ಠಬ್ಬಿಗೆ ಶ್ರೀ ನಿಜಲಿಂಗಪ್ಪನವರು ಹೋಗಿದ್ದರು. ಇದಕ್ಕೆ ರಾಮಕೃಷ್ಣ ಹೆಗಡೆಯವರು ತಮ್ಮ ಆಶೀರ್ವಾದ ಮತ್ತು ಅನುಗ್ರಹ ಮಾಡಿದ್ದಾರೆ. ಇಷ್ಟರಮಟ್ಟಿಗೆ ಇದರಲ್ಲಿ ವ್ಯವಹಾರ ಮಾಡಬೇಕಾಗಿದ್ದರೆ ಈ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ಅಧ್ಯಕ್ಷರ ಚುನಾವಣೆ ಎಷ್ಟರಮಟ್ಟಿಗೆ ಶುದ್ಧವಾಗಿ ನಡೆಸಿದ್ದೀರಿ ಎಂದು ನಾನು ತಮ್ಮನ್ನು ಪ್ರಶ್ನೆ ಮಾಡಬೇಕಾಗುತ್ತದೆ.

ಇನ್ನು ಲ್ಯಾಂಡ್ ಮಾರ್ಟಗೇಜ್ ಬ್ಯಾಂಕಿನ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಒಂದು ವಿಚಾರವನ್ನು ಹೇಳಿದರು. ರೈತ ಅಫಿಡವಿಟ್ ಕೊಟ್ಟ ಕೂಡಲೇ 20 ಪರ್ಸೆಂಟ್ ಸಾಲವನ್ನು ಮೊದಲನೆಯ ಕಂತನ್ನು ಕೊಡಬೇಕೆಂದು ಆರ್ಡರ್ ಹೊರಡಿಸಿದ್ದಾರೆಂದು ಹೇಳಿದರು. ಈ ಒಂದು ಆಜ್ಞೆಯನ್ನು ಎಲ್ಲಾ ಪ್ರೈಮರಿ ಸಹಕಾರ ಸಂಘಗಳಿಗೂ, ಕೇಂದ್ರ ಸಹಕಾರ ಸಂಘಗಳಿಗೂ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿಗೂ ಕೊಟ್ಟಿದ್ದಾರೆಂದು ತಿಳಿಸಿದ್ದಾರೆ. ಇದರ ಉದ್ದೇಶ ರೈತನಿಗೆ ಜಾಗ್ರತೆಯಾಗಿ ಸಾಲದ ಹಣ ಸಿಕ್ಕಲಿ, ಬಾವಿಯನ್ನು ತೆಗೆಯಲಿ, ಜಮೀನನ್ನು ಆಬಾದು ಮಾಡಲಿ, ಹಣವನ್ನು ತೆಗೆದುಕೊಳ್ಳಲಿ ಎನ್ನುವ ಆಶೆಯಿಂದ ಅದನ್ನು ಮಾಡಿದ್ದಾರೆ. ಒಂದು ವೇಳೆ ಯಾರಾದರೂ ಫಾಲ್ಸ್ ಅಫಿಡವಿಟ್ ಬ್ಯಾಂಕಿನಲ್ಲಿ ಹಣವನ್ನು ಡ್ರಾ ಮಾಡಿದರೆ ಅದನ್ನು ತಡೆಯುವುದಕ್ಕೆ ಏನು ಕಾನೂನು ವ್ಯವಸ್ಥೆ ಇದೆ. ನಾನು ಪ್ರಾಥಮಿಕ ಜಮೀನು ಅಭಿವೃದ್ಧಿ ಸಹಕಾರ ಸಂಘದಲ್ಲಿ ಕೆಲಸ ಮಾಡತಕ್ಕದ್ದನ್ನು ನೋಡಿ ಹೇಳುವುದಾದರೆ ಇದಕ್ಕೆ ಸಂಬಂಧಪಟ್ಟ ಹಾಗೆ ಹಿಂದೆ ಒಂದು ಆರ್ಡರನ್ನು ಮಾಡಿದ್ದಾರೆ. ಅನು ಏನೆಂದರೆ ಜಮೀನಿನ ಕಂದಾಯದ ಕಿಮ್ಮತ್ತಿನ 200 ಪರ್ಸೆಂಟಿನಿಂದ 500 ಪರ್ಸೆಂಟ್‌ವರೆಗೂ ಹಣವನ್ನು ಬಾವಿಗಳಿಗೆ ಸಾಲವಾಗಿ ಕೊಡಬಹುದು ಎಂದು ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ಇದರಲ್ಲಿ ಆಗತಕ್ಕ ಅನಾಹುತವನ್ನು ನಾನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ. ಈಗ ಕೆಲವು ದಿವಸಗಳ ಹಿಂದೆ ದರಕಾಸ್ತು ಜಮೀನು ಮಂಜೂರಾಗಿರುತ್ತದೆ. ಅದರಲ್ಲಿ ರತಕ್ಕ ಗಿಡ, ಮರ ಇತ್ಯಾದಿಗಳನ್ನು ತೆಗೆದಿರುವುದಿಲ್ಲ. ಅದನ್ನು ಉಳುಮೆ ಕೂಡ ಮಾಡಿರುವುದಿಲ್ಲ.

5-30 P.M.

ಕಂದಾಯದ ಒಂದು ಮೊತ್ತದ ಮೇಲೆ 200 ಪಟ್ಟು 500 ಪಟ್ಟು ಕೊಟ್ಟರೆ ಹಣ ವಸೂಲು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ, ಯಾರು ತಮ್ಮ ಜಮೀನನ್ನು ಆಬಾದು ಮಾಡಿರುತ್ತಾರೋ ಅಂತಹವರಿಗೆ ಬಾವಿ ತೆಗೆಸಲು ಸಾಲ ಕೊಟ್ಟರೆ ವಸೂಲು ಮಾಡುವುದು ಸುಲಭವಾಗುತ್ತದೆ. ಯಾರು ಆಬಾದು ಮಾಡಿರುವುದಿಲ್ಲವೋ ಅಂತಹವರಿಗೆ 5 ಸಾವಿರ ರೂಪಾಯಿಗಳವರೆಗೆ ಸಾಲವನ್ನು ಕೊಟ್ಟರೆ ಅವರು ನಿಜವಾಗಿ ಬಾವಿ ತೆಗೆಸುವುದಿಲ್ಲ. ಇದರಿಂದ ಹಣ ದುರುಪಯೋಗವಾಗುವುದಕ್ಕೆ ಅವಕಾಶವಾಗುತ್ತದೆ. ಕೆಲವರಿಗೆ ಬಾವಿ ತೋಡಿಸಲು ಹಣ ಕೊಡಿಸಲು ಸ್ಥಳೀಯ ಮುಖಂಡರು ಅಧಿಕಾರಿಗಳ ಮೇಲೆ ಮತ್ತು ಮಂತ್ರಿಗಳ ಮೇಲೆ ಒತ್ತಡ ತರುತ್ತಾರೆ. ಈ ರೀತಿಯ ರಾಜಕೀಯ

(ಶ್ರೀ ಹೆಚ್. ಡಿ. ದೇವೇಗೌಡ)

ಒತ್ತಡ ತರುವುದು ಸರಿಯಲ್ಲ. ಸಹಕಾರ ಇಲಾಖೆಯಲ್ಲಿ ಅನುಭವ ಇರತಕ್ಕಂಥ ಅಧಿಕಾರಿಗಳು ಇದ್ದಾರೆ. ಅವರಿಗೆ ಫ್ರೀಯಾಗಿ ಕೆಲಸ ಮಾಡಿಕೊಂಡು ಹೋಗುವುದಕ್ಕೆ ಒಂದು ಸ್ಕೋಪ್ ಕೊಟ್ಟು ಚೆನ್ನಾಗಿ ಕೆಲಸ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇವತ್ತಿನ ದಿವಸ ಅಧಿಕಾರಿಗಳು ನಿಷ್ಪಕ್ಷಪಾತವಾಗಿ ಕೆಲಸ ಮಾಡಲು ಮತ್ತು ಆರ್ಡರ್ ಮಾಡಲು ಕಷ್ಟವಾಗುತ್ತಿದೆ. ಸೊಸೈಟಿ ಯಲ್ಲಿರತಕ್ಕಂಥ ಸಾರ್ವಜನಿಕರ ಹಣ ಪೋಲಾಗದಂತೆ ನೋಡಿಕೊಳ್ಳಬೇಕಾದರೆ ಕೊಡತಕ್ಕಂಥ ಸಾಲದ ಹಣದಮೇಲೆ ಆಧಾರ ಮಾಡಿಸಬೇಕಾಗುತ್ತದೆ. ಕೆಲವರು ಫೋರ್ಜ್ಡ್ ಬಾಂಡನ್ನು ಕೊಟ್ಟು ಸಾಲ ತೆಗೆದುಕೊಂಡು, ನಂತರ ಗೊತ್ತಾದಮೇಲೆ ಅವರಿಗೆ ನೋಟೀಸ್ ಕೊಟ್ಟು ಕೋರ್ಟಿನಲ್ಲಿ ವ್ಯವ ಹಾರ ನಡೆಯುತ್ತಿದೆ. ಒಂದು ಸೊಸೈಟಿಯಲ್ಲಿ ಮೀಟಿಂಗ್ ಇಲ್ಲದೆ ಸರ್ಕ್ಯುಲೇಷನ್ ಮೂಲಕ ಹಣ ಮಂಜೂರು ಮಾಡಿದ್ದಾರೆ. ಇಂತಹ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧ್ಯಕ್ಷರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಿಂದೆ ಸಹಕಾರ ಸಚಿವರಾಗಿದ್ದ ಶ್ರೀಮಾನ್ ರಾಮಕೃಷ್ಣ ಹೆಗಡೆಯವರು ಅಧ್ಯಕ್ಷರೇ ಆಗಲೀ, ಕಾರ್ಯದರ್ಶಿಯವರೇ ಆಗಲಿ, ಎರಡು ಸಾರಿಗಿಂತ ಹೆಚ್ಚು ಸಮಯ ಆ ಸೊಸೈಟಿ ಯಲ್ಲಿ ಇರಬಾರದು, ಆ ಬಗ್ಗೆ ಶಾಸನ ಮಾಡುವುದು ಸರ್ಕಾರದ ಉದ್ದೇಶವಾಗಿದೆಯೆಂದು ತಿಳಿಸಿ ದ್ದರು. ಆ ಒಂದು ಕಾನೂನನ್ನು ಸರ್ಕಾರದವರು ಈ ಸಭೆಯ ಮುಂದೆ ತರುವುದಕ್ಕೆ ಯಾವುದೇ ಪ್ರಯತ್ನವನ್ನು ಮಾಡಿಲ್ಲ.

ಇನ್ನು ತಾಲ್ಲೂಕ್ ಬೋರ್ಡ್ ಬಗ್ಗೆ ಒಂದು ವಿಷಯ ಹೇಳುತ್ತೇನೆ. ಇವತ್ತು ತಾಲ್ಲೂಕ್ ಬೋರ್ಡ್‌ಗಳ ಚುನಾವಣೆಯಾಗಬೇಕೆನ್ನುವ ಕಾಲದಲ್ಲಿ ಯಾವಒಂದು ಆಕ್ಟ್ ಪ್ರಕಾರ ಮಾಡುತ್ತೀರಾ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕು. ಹಳೆಯ ಆಕ್ಟ್ ಪ್ರಕಾರ ಮಾಡು ತ್ತೀರೋ, ಅಥವಾ ಹೊಸ ಆಕ್ಟ್ ಪ್ರಕಾರ ಮಾಡುತ್ತೀರೋ ಎಂಬುದನ್ನು ತಿಳಿಸಬೇಕು. ಈ ಸಭೆ ಮುಗಿಯುವುದರೊಳಗೆ ಈ ತಾಲ್ಲೂಕ್ ಬೋರ್ಡಿನ ಚುನಾವಣೆಯ ಬಗ್ಗೆ ಹೊಸ ಆಕ್ಟನ್ನು ತರುತ್ತೀ ರೆಂದು ನಂಬಿದ್ದೇವೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ಸ್ಪಷ್ಟೀಕರಣಪಡಿಸಬೇಕು.

ಇನ್ನು ಡ್ಯೂಯಲ್ ಕಂಟ್ರೋಲ್ ಬಗ್ಗೆ ಹೇಳುವುದಾದರೆ ಬಿ. ಡಿ. ಒ. ಕೈಕೆಳಗೆ ವಿಲೇಜ್‌ಲೆವಲ್ ವರ್ಕರ್ಸ್ ಇರುತ್ತಾರೆ. ಇವರ ಡೈರೆಕ್ಟ್ ಕಂಟ್ರೋಲ್ ಅಥವಾ ಅಡ್ಮಿನಿಸ್ಟ್ರೇಟಿವ್ ಕಂಟ್ರೋಲ್ ಡೈರೆಕ್ಟರ್ ಆಫ್ ಅಗ್ರಿಕಲ್ಚರ್ ಕೈಲಿದೆ. ಇವರುಗಳು ಬಿ. ಡಿ. ಒ. ಕೈಕೆಳಗೆ ಕೆಲಸ ಮಾಡುತ್ತಿ ದ್ದರೂ ಸಹ, ಇವರನ್ನು ಚೆಕ್ ಮಾಡುವುದಕ್ಕೆ ಬಿ. ಡಿ. ಒ. ಅವರಿಗೆ ಸಾಧ್ಯವಾಗುತ್ತಿಲ್ಲ. ಮತ್ತು ಅಸಿಸ್ಟೆಂಟ್ ಕಮಿಷನರ್ ಅವರಿಗೂ ಸಹ ಸಾಧ್ಯವಾಗುತ್ತಿಲ್ಲ. ವ್ಯವಸಾಯದ ಇಲಾಖೆಯ ಡಿಮ್ಯಾಂಡ್ ಬಂದಾಗ ಈ ವಿಚಾರವನ್ನು ತಿಳಿಸಬೇಕೆಂದಿದ್ದೆ. ಆದರೆ ಸಮಯ ಸಿಗಲಿಲ್ಲ. ಆದ್ದರಿಂದ ನನ್ನ ಸಲಹೆಯೆಂದರೆ ಇವರನ್ನು ವ್ಯವಸಾಯ ಇಲಾಖೆಗೆ ವಾಪಸ್ ಕಳಿಸಿ ಕೊಡುವುದು ಒಳ್ಳೆಯದು. ಇಲ್ಲದಿದ್ದರೆ ಹಿಂದಿನ ಆರ್ಡರ್ ಪ್ರಕಾರ ಇವರನ್ನು ಚೆಕ್ ಮಾಡುವ ಅಧಿ ಕಾರವನ್ನು ಡಿವಿಜನಲ್ ಕಮೀಷನರ್ ಅವರಿಗಾಗಲೀ, ಜಿಲ್ಲಾಧಿಕಾರಿಯವರಿಗೆ ಆಗಲಿ ಕೊಡಬೇಕು.

ಇನ್ನು ರೂರಲ್ ಇರಿಗೇಷನ್ ವೆಲ್ಸ್ ಮತ್ತು ಕಮ್ಯೂನಿಟಿ ರೂರಲ್ ಇರಿಗೇಷನ ವೆಲ್ಸ್‌ಗಳನ್ನು ಜಾಸ್ತಿ ಮಾಡಿಸಬೇಕು. ಇದಕ್ಕಾಗಿ ಹೆಚ್ಚು ಹಣವನ್ನು ಒದಗಿಸಬೇಕು. ಏಕೆಂದರೆ ಈ ಒಂದು ಯೋಜನೆ ಬಹಳ ಚೆನ್ನಾಗಿ ನಡೆಯುತ್ತಿದೆ.

ಇನ್ನು ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಮ್ ಬಗ್ಗೆ ಹೇಳುವುದಾದರೆ ಕಳೆದ 6 ವರ್ಷ ಗಳಿಂದಲೂ ಸಹ ನನ್ನ ಏರಿಯಾದಲ್ಲಿ ಒಂದು ಯೋಜನೆಯನ್ನೂ ಸಹ ಮಂಜೂರು ಮಾಡಿಲ್ಲ. ನಾವು ಮಾಡಿರುವ ಪಾಪವಾದರೂ ಏನು ಎಂಬುದು ಅರ್ಥವಾಗುತ್ತಿಲ್ಲ. ಈ ವಿಚಾರದಲ್ಲಿ ಸರ್ಕಾರಕ್ಕೆ ಅನೇಕ ಕಾಗದಗಳನ್ನು ಬರೆದರೂ ಸಹ ಗಮನ ಕೊಟ್ಟಿಲ್ಲ. ಬೇರೆ ಕಡೆ ಆಗಿರುವಂತಹ ಕೆಲಸ ಗಳನ್ನು ನೋಡಿದರೆ ನಮ್ಮ ಹಾಸನ ಜಿಲ್ಲೆಯ ಜನರು ಏನು ಪಾಪ ಮಾಡಿದ್ದಾರೋ ಎಂಬುದು ಗೊತ್ತಾಗುತ್ತಿಲ್ಲ. ಈ ಬಗ್ಗೆ ನಮ್ಮ ಜಿಲ್ಲೆಗೆ ಆಗಿರತಕ್ಕಂಥ ಇಂಜ್ಯಾಸ್ಟೀಸನ್ನು ಸರಿಪಡಿಸಿಕೊಡ ಬೇಕು. ಮತ್ತೊಂದು ಮಹತ್ತರವಾದ ಬೇಡಿಕೆಯೆಂದರೆ ಹಳ್ಳಿ ಮೈಸೂರಿನ 3 ಸಾವಿರ ಜನರು ಕುಡಿಯುವುದಕ್ಕೆ ನೀರಿಲ್ಲದೆ ತೊಂದರೆಪಡುತ್ತಿದ್ದಾರೆ. ಅವರಿಗೆ ಕುಡಿಯುವ ನೀರನ್ನು ಸರಬರಾಜು ಮಾಡುವುದಕ್ಕಾಗಿ ಅಡ್‌ಹಾಕ್ ಗ್ರ್ಯಾಂಟ್ ಕೊಟ್ಟು ಪುಣ್ಯ ಕಟ್ಟಿಕೊಳ್ಳಿ. ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ರುದ್ರಪ್ಪ (ಚಿತಾಪುರ).—ಮಾನ್ಯ ಸಭಾಪತಿಗಳೇ, ಈ ದಿನ ಸಹಕಾರ ಸಚಿವರು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಈಗ ಸರ್ಕಾರದವರು ರೈತರಿಗೆ ನೀರಾವರಿ ಬಾವಿಗಳನ್ನು ತೋಡಲಿಕ್ಕೆ ಮತ್ತು ರಿಪೇರಿಮಾಡಿಸಲಿಕ್ಕೆ ಗ್ರಾಮಾಂತರ ಪ್ರದೇಶಗಳಲ್ಲಿ ಹಣವನ್ನು ಮಂಜೂರು ಮಾಡಿದ್ದಾರೆ. ಈ ಹಣವನ್ನು ರೈತರಿಗೆ ತಾಲ್ಲೂಕ್ ಡೆವಲಪ್‌ಮೆಂಟ್ ಬ್ಯಾಂಕ್ ಮೂಲಕ ಕೊಡಬೇಕೆಂದು ಸರ್ಕಾರದ ಆರ್ಡರ್ ಇದೆ. ಅಪೆಕ್ಸ್ ಬ್ಯಾಂಕ್ ಮೂಲಕ ತಾಲ್ಲೂಕ್ ಡೆವಲಪ್‌ಮೆಂಟ್ ಬ್ಯಾಂಕ್‌ಗಳಿಗೆ ಹಣ ಸೇರುತ್ತದೆ. ಈ ಹಣವನ್ನು ರೈತರಿಗೆ ಎಂಟೂವರೆಯಿಂದ 9 ಪರ್ಸೆಂಟ್ ವರೆಗೆ ಬಡ್ಡಿ ಹಾಕಿ ಬ್ಯಾಂಕಿನವರು ಕೊಡುತ್ತಿದ್ದಾರೆ. ಇಷ್ಟೊಂದು ಬಡ್ಡಿಯನ್ನು ರೈತರು ಕೊಡುವುದು ಬಹಳ ಕಷ್ಟವಾಗುತ್ತಿದೆ ಮತ್ತು ಅನಾನುಕೂಲವಾಗುತ್ತಿದೆ. ಆದ್ದರಿಂದ ಈ ವಿಚಾರದಲ್ಲಿ ಸರ್ಕಾರಕ್ಕೆ ಒಂದು ಸೂಚನೆ ಕೊಡುವುದೇನೆಂದರೆ, ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಸಹಕಾರ ಕ್ಷೇತ್ರದ ಆಂದೋಳನ ಬಹಳ ಬಲಿಷ್ಠವಾಗಿದೆ ಮತ್ತು ಭದ್ರವಾಗಿದೆ. ಅಲ್ಲಿ ಏನುಮಾಡಿದ್ದಾರೆಂದರೆ, ಸರ್ಕಾರದವರು ಸೊಸೈಟಿಗಳಿಗೆ ಕೊಡತಕ್ಕಂಥಹಣಕ್ಕೆ ನಾಲ್ಕೂವರೆ ಪರ್‌ಸೆಂಟಿನಂತೆ ಬಡ್ಡಿಯನ್ನು ಕೊಡಬೇಕೆಂದು ಒಂದು ನಿಯಮ ಮಾಡಿದ್ದಾರೆ. ಸಹಕಾರ ಸಂಘಗಳು ರೈತರಿಗೆ ಸಾಲ ಕೊಟ್ಟಾಗ ಇಕಾನಮಿಕ್ ಲೆಂಡಿಂಗ್ ರೇಟ್ ಆಫ್ ಇಂಟರೆಸ್ಟ್ ಸುಮಾರು ಎಂಟೂವರೆ ಪರ್ಸೆಂಟ್ ಹಾಕುತ್ತಾರೆ. ಈ ಒಂದು ವ್ಯತ್ಯಾಸವನ್ನು ಆ ಸಹಕಾರ ಸಂಘಗಳು ಸರಿಪಡಿಸಿಕೊಳ್ಳಲು ಸರ್ಕಾರದವರು ಸಬ್ಸಿಡಿ ಮೂಲಕವಾಗಿ ಕೊಡುತ್ತಿದ್ದಾರೆ. ಇದೇ ಪದ್ಧತಿಯನ್ನು ನಮ್ಮ ರಾಜ್ಯದಲ್ಲಿಯೂ ಸಹ ಜಾರಿಗೆ ತಂದರೆ ರೈತರಿಗೆ ತೆಗೆದುಕೊಂಡ ಸಾಲವನ್ನು ವಾಪಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಈ ಒಂದು ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಕಾರ್ಯರೂಪದಲ್ಲಿ ತರಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಸಹಕಾರದ ಆಂದೋಲನ ನಮ್ಮ ರಾಜ್ಯದ ಕೆಲವು ಭಾಗಗಳಲ್ಲಿ ತೃಪ್ತಿಕರವಾಗಿ ನಡೆದಿದ್ದರೆ ಮತ್ತು ಕೆಲವು ಭಾಗಗಳಲ್ಲಿ ತೃಪ್ತಿಕರವಾಗಿ ನಡೆದಿಲ್ಲವೆಂದು ಕೇಳುತ್ತಿದ್ದೇವೆ. ಮಾನ್ಯ ಸದಸ್ಯರುಗಳು ಈ ಬಗ್ಗೆ ಸಾಕಷ್ಟು ಸಲಹೆಗಳನ್ನು ಕೊಟ್ಟಿದ್ದಾರೆ. ಮತ್ತು ಕೆಲವು ಸೂಚನೆಗಳನ್ನು ಸಹ ಕೊಟ್ಟಿದ್ದಾರೆ. ಯಾವ ಯಾವ ಭಾಗಗಳಲ್ಲಿ ಅನಕ್ಷರತೆ, ಅಜ್ಞಾನ ಮತ್ತು ಉದಾಶೀನತೆ ಇದೆಯೋ ಆ ಭಾಗಗಳಲ್ಲಿ ಸಹಕಾರದ ಆಂದೋಳನ ಬಹಳ ತೃಪ್ತಿಯಾಗಿ ನಡೆದಿಲ್ಲವೆಂದು ನನಗನ್ನಿಸುತ್ತದೆ. ಇಂತಹ ಭಾಗಗಳಲ್ಲಿ ಬಹಳ ಭ್ರಷ್ಟಾಚಾರ ಮತ್ತು ಅವ್ಯವಹಾರಗಳು ನಡೆಯುತ್ತಿವೆ. ಈ ಭಾಗಗಳಲ್ಲಿ ಏನಾಗಿದೆಯೆಂದರೆ ಸೊಸೈಟಿಯ ಸಂಚಾಲಕರಾಗಲೀ, ಚೇರ್‌ಮನ್ ಅವರು ಆಗಲೀ, ಮೇನೇಜಿಂಗ್ ಕಮಿಟಿಯ ಸದಸ್ಯರಾಗಲೀ ಜನರಿಗೆ ಅನುಕೂಲ ಮಾಡಿಕೊಡಬೇಕೆಂಬ ದೃಷ್ಟಿಯಿಂದ ಚುನಾವಣೆಯಲ್ಲಿ ಆರಿಸಿ ಬಂದಿರುವುದಿಲ್ಲ. ಚುನಾವಣೆಯಲ್ಲಿ ಆರಿಸಿ ಬರುವವರು ಯಾರೆಂದರೆ ವೆಸ್ಟೆಡ್ ಇಂಟರಸ್ಟ್ ಇರುವವರು; ಸಾವುಕಾರರು ಮುಂತಾದವರು ಇರುತ್ತಾರೆ. ಇಂತಹ ಅನ್ಯಾಯಗಳನ್ನು ನಿರ್ಮೂಲ ಮಾಡಬೇಕಾದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜನರಿಗೆ ಸಹಕಾರ ಶಿಕ್ಷಣವನ್ನು ಸಿನಿಮಾ ಮತ್ತು ನಾಟಕಗಳ ಮೂಲಕ ಪ್ರಚಾರ ಮಾಡಬೇಕು. ಜನರಲ್ಲಿ ಸಹಕಾರದ ತತ್ವವನ್ನು, ಸಹಕಾರ ಎಂದರೆ ಏನು ಎಂಬುದನ್ನು ಅವರ ಕಲ್ಪನೆಗೆ ಬರುವಂತೆ ತಿಳಿಸಬೇಕು. ಈ ವಿಚಾರದಲ್ಲಿ ಈಗಾಗಲೇ ಸರ್ಕಾರದವರು ಗುಲ್ಬರ್ಗ, ಧಾರವಾಡ ಮುಂತಾದ ಕಡೆಗಳಲ್ಲಿ ಟ್ರೈನಿಂಗ್ ಸೆಂಟರ್‌ಗಳನ್ನು ತೆಗೆದಿದ್ದಾರೆ. ಈಗ ಸಹಕಾರ ಕ್ಷೇತ್ರದಲ್ಲಿ ಬರತಕ್ಕಂತಹ ಕಾರ್ಯದರ್ಶಿಗಳು ಏನಿದ್ದಾರೆ ಅವರೆಲ್ಲಾ ತರಬೇತಿ ಪಡೆದು ಸಹಕಾರ ಸಂಘಗಳ ಕಾರ್ಯದರ್ಶಿಗಳಿಗಾಗಿ ಕೆಲಸ ಮಾಡುತ್ತಿಲ್ಲ. ಆದುದರಿಂದ ಸಹಕಾರ ಸಂಘಗಳಲ್ಲಿ ಕೆಲಸ ಮಾಡತಕ್ಕ ಕಾರ್ಯದರ್ಶಿಗಳಾಗಲೀ ಅಥವಾ ಚೇರ್ಮನ್ನರವರಾಗಲಿ ಅಥವಾ ಮ್ಯಾನೇಜಿಂಗ್ ಕಮಿಟಿಯ ಸದಸ್ಯರಾಗಲೀ ಇವರುಗಳು ಸರಿಯಾದ ತರಬೇತಿ ಪಡೆದು ಬರುತ್ತಿಲ್ಲ. ಇವರುಗಳಿಗೆ ಸರಿಯಾದ ತರಬೇತಿ ಕೊಟ್ಟು ಕೆಲಸ ಮಾಡುವಂತೆ ಮಾಡಿದರೆ ಸಹಕಾರ ಸಂಘಗಳಲ್ಲಿ ಒಳ್ಳೆಯ ರೀತಿಯ ಕೆಲಸ ಕಾರ್ಯಗಳು ನಡೆಯಲು ಅನುಕೂಲವಾಗುತ್ತವೆ. ಆದುದರಿಂದ ಇಂತಹ ಅಧಿಕಾರಿಗಳಿಗೆ ಸಹಕಾರ ತತ್ವದ ಶಿಕ್ಷಣವನ್ನು ಕೊಡಬೇಕೆಂದು ಇಲ್ಲಿ ಸೂಚನೆ ಮಾಡಬಯಸುತ್ತೇನೆ. ಇಲ್ಲಿಯವರೆಗೂ ಸಹಕಾರಿ ಸಂಘಗಳ ಚೇರ್ಮನ್ನರು ಹಾಗೂ ಮ್ಯಾನೇಜಿಂಗ್ ಕಮಿಟಿ ಸದಸ್ಯರಾಗಲೀ ಸರಿಯಾಗಿ ತರಬೇತಿ ಹೊಂದುತ್ತಿಲ್ಲ. ಸರ್ಕಾರದವರು ಸೊಸೈಟಿಗಳಿಗೆ ತರಬೇತಾದ ಕಾರ್ಯದರ್ಶಿಗಳನ್ನು ನೇಮಕ ಮಾಡದೇ ಹೋದರೆ ಅಂತಹ ಸೊಸೈಟಿಗಳಿಗೆ ಸಬ್‌ಸಿಡಿ ಕೊಡುವುದಿಲ್ಲ ಎಂದು ಹೇಳಿದರೆ ಆಗ ಎಲ್ಲ ಸೊಸೈಟಿಗಳವರೂ ತರಬೇತಿ ಹೊಂದಿದವರನ್ನೇ ಕಾರ್ಯದರ್ಶಿಗಳಾಗಿ ನೇಮಕ ಮಾಡಿಕೊಳ್ಳುತ್ತಾರೆ ಮತ್ತು ಆದರಿಂದ ಸೊಸೈಟಿಗಳ ಕಾರ್ಯಗಳೂ ಚೆನ್ನಾಗಿ ನಡೆಯಲು ಅನುಕೂಲವಾಗುತ್ತದೆ. ಸರಕಾರ ಸಬ್‌ಸಿಡಿ ಕೊಡುವುದಿಲ್ಲ ಎಂದು ಒಂದು ಆರ್ಡರನ್ನು ಎಲ್ಲಾ ಸಹಕಾರ ಸಂಸ್ಥೆಗಳಿಗೂ ಕಳುಹಿಸಿದರೆ ಆಗ ಗ್ರಾಮಾಂತರಕ್ಷೇತ್ರದಲ್ಲಿ ಸಹಕಾರ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಒಳ್ಳೆಯ

(ಶ್ರೀ ಎಸ್. ರುದ್ರಪ್ಪ)

ಯೋಗ್ಯರಾದವರು ತರಬೇತಿ ಪಡೆದವರು ಬರಲು ಅನುಕೂಲವಾಗುತ್ತದೆ ಮತ್ತು ಇದರ ಜೊತೆಗೆ ಮ್ಯಾನೇಜಿಂಗು ಕಮಿಟಿಯ ಸದಸ್ಯರುಗಳೂ ಶಿಕ್ಷಕ ತರಬೇತಿ ಪಡೆಯಲು ಅನುಕೂಲವಾಗುತ್ತದೆ ಸಹಕಾರ ಸಂಘಗಳು ಒಳ್ಳೆಯ ಪುಷ್ಟಿಯಿಂದ ಬೆಳೆಯಲೂ ಅನುಕೂಲವಾಗುತ್ತದೆ. ಕೆಲವು ಕಡೆ ನಾವು ನೋಡಿರುವಂತೆ ಸಹಕಾರ ಸಂಘಗಳಲ್ಲಿ ವೆಸ್ಟಡ್ ಅಂಟರೆಸ್ಟ್ಸ್ ಎಂದು ಇರುವುದು ನಮಗೆ ಅಲ್ಲಲ್ಲಿ ಕಂಡು ಬರುತ್ತದೆ. ಡಿಸ್ಟ್ರಿಕ್ಟ್ ಬ್ಯಾಂಕಿನಲ್ಲಿ ಸಾಲ ಸುಮಾರು 40-50 ಸಾವಿರದಷ್ಟು ಹಣವನ್ನು ಕೊಡುತ್ತಾರೆ. ಕೆಳಗಿನ ಸೊಸೈಟಿಗಳವರು ಅದನ್ನು ತೆಗೆದುಕೊಂಡು ಇಲ್ಲಿ ಚೇರ್ಮನ್ನರಾಗಿರುವವರು ಅವರು ಮಾಡುವ ಕಾಂಟ್ರಾಕ್ಟ್ ಕೆಲಸಕ್ಕೆ ಇಲ್ಲವೇ ಅವರು ಮಾಡುತ್ತಿರುವ ಕಿರಾಣಿ, ದೂಕಾನಿಗೋ ಆ ಹಣವನ್ನುಪಯೋಗಿಸಿಕೊಂಡು ಇಲ್ಲಿ ಬೇಕಾಗಿರುವ ಜನಕ್ಕೆ ಸಾಲದ ಹಣವನ್ನು ಹಂಚುವುದಿಲ್ಲ ಮತ್ತು ಕೆಲವು ಕಾಲಾನಂತರ ಇಂತಹ ಸದಸ್ಯರುಗಳಿಗೆ ಸಾಲವನ್ನು ಕೊಡಬೇಡಿ ಎಂದೂ ಡೆಲಿಬರೇಟ್ ಆಗಿ ಮಾಡುವುದನ್ನು ನಾವು ನೋಡಿದ್ದೇವೆ. ಇದರಿಂದ ಏನಾಗುತ್ತದೆ ಇಂತಹ ಸೊಸೈಟಿಗಳು ಡಿಫಾಲ್ಟ್ ಆಗಿವೆ ಎಂದು ಹೇಳಲು ಒಂದು ಅವಕಾಶವಾಗುತ್ತದೆ, ಮತ್ತು ಕೊನೆಗೆ ಅವರಿಗೆ ಸಹಕಾರ ಸಂಘಗಳಿಂದ ಸಾಲವನ್ನು ಏನೂ ಕೊಡಬೇಡಿ ಎಂದು ಶಿಫಾರಸನ್ನೂ ಮಾಡುತ್ತಾರೆ. ಇರಿಂದಾಗಿ ಕೆಲವು ಕಡೆ ಸೊಸೈಟಿಗಳು ಡಿಫಾಲ್ಟ್ ಅಗುವ ಹಾಗೆ ಮಾಡುತ್ತಾರೆ ಮತ್ತು ಇದರಿಂದಾಗಿ ರೈತರು ಸಾಲಕ್ಕಾಗಿ ಇಂತಹ ಸೊಸೈಟಿಗಳಿಗೆ ಬಂದರೆ ಅವರಿಗೆ ಸಾಲ ಸಿಗುವುದಿಲ್ಲ. ಸಾಲಕ್ಕಾಗಿ ಡಿಸ್ಟ್ರಿಕ್ಟ್ ಬ್ಯಾಂಕಿನಿಂದ ಪಡೆದ ಹಣವನ್ನು ಕೆಲವು ಕಾಲದವರೆಗೆ ಬೇರೆಯವರಿಗೆ ಸಾಲವಾಗಿ ಕೊಟ್ಟು ಅವರಿಂದ ಶೇಕಡಾ ಎರಡು ಮೂರು ರೂಪಾಯಿಗಳ ಬಡ್ಡಿಯಂತೆ ದುಡ್ಡು ಸಂಪಾದನೆ ಮಾಡಲು ಹೊರಟಿದ್ದಾರೆ ಮತ್ತು ಇದರಿಂದ ಅವರ ಸಂಪತ್ತನ್ನು ಇನ್ನೂ ಹೆಚ್ಚು ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇಲ್ಲಿಯವರೆಗೆ ಡಿಫಾಲ್ಟ್ ಆದ ಸೊಸೈಟಿಗಳು ಆರ್‌ಬಿಟ್ರೇಷನ್‌ಗೆ ಹೋಗಬೇಕಾಗುತ್ತದೆ. ಆರ್‌ಬಿಟ್ರೇಷನ್‌ಗೆ ಕಳುಹಿಸಬೇಕಾಗಿದ್ದರೆ ಆಯಾ ಸೊಸೈಟಿಯಲ್ಲಿರುವ ಕಮಿಟಿ ಸದಸ್ಯರುಗಳು ಆ ಸೊಸೈಟಿಯಲ್ಲಿ ಒಂದು ರೆಸಲ್ಯೂಷನ್ ಮಾಡಿ ಅದನ್ನು ಪಾಸುಮಾಡಿದ ಮೇಲೆ ಡಿಫಾಲ್ಟ್ ಆಗಿರುವ ಸೊಸೈಟಿಗಳವರು ಆರ್‌ಬಿಟ್ರೇಷನ್‌ಗೆ ಹೋಗಬೇಕಾಗುತ್ತದೆ. ಇದರಲ್ಲಿ ಕೆಲವು ಕಡೆ ಇರುವ ಸೊಸೈಟಿಗಳವರು ವಿಲ್‌ಫುಲ್ ಆಗಿ ಡೆಲಿಬರೇಟ್ ಆಗಿ ತಾವು ಸ್ವತಃ ಚೇರ್ಮನ್ನರಾಗಿದ್ದೇವೆ ಎಂದು ಹೀಗೆ ಮಾಡುತ್ತಿದ್ದಾರೆ ಮತ್ತು ಇವರೇ ಮೇಲಿನ ಬ್ಯಾಂಕುಗಳಿಗೆ ಶಿಫಾರಸನ್ನು ಕಳುಹಿಸುವಾಗ ಸಾಲ ಕೊಡಬೇಡಿ ಎಂದೂ ಮಾಡುತ್ತಾರೆ. ಈಗ ಆರ್‌ಬಿಟ್ರೇಷನ್‌ಗೆ ಕಳುಹಿಸಬೇಕಾಗಿದ್ದರೆ ಆಯಾ ಸಂಘದವರು ರೆಸಲ್ಯೂಷನ್ ಪಾಸು ಮಾಡಿದ ಮೇಲೆ ಡಿಫಾಲ್ಟರ್ಸ್ ಲಿಸ್ಟ್ ಕಳುಹಿಸಬೇಕು ಮತ್ತು ಅದರ ಮೇಲೆ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಚೇರ್ಮನ್ನರು ಅಥವಾ ಮ್ಯಾನೇಜಿಂಗು ಕಮಿಟಿಯವರು ಡಿಫಾಲ್ಟರ್ಸ್ ಲಿಸ್ಟನ್ನು ತಯಾರು ಮಾಡಬೇಕಾದರೆ ರೆಸಲ್ಯೂಷನ್ ಪಾಸಾಗದೆ ಮಾಡುವಂತಿಲ್ಲ. ಇದಕ್ಕೆ ನಾನು ಸಲಹೆ ಮಾಡುವುದು ಇಂತಹ ಸಂದರ್ಭದಲ್ಲಿ ಈಗಿರುವ ಆಕ್ಟಿನಲ್ಲಿ ಏನಾದರೂ ಬದಲಾವಣೆ ಮಾಡಲು ಸಾಧ್ಯವಾದರೆ ಅವನ್ನು ಮಾಡಬೇಕು ಮತ್ತು ಇದರ ಬಗ್ಗೆ ಡಿಫಾಲ್ಟರ್ಸ್ ಲಿಸ್ಟನ್ನು ತಯಾರು ಮಾಡಿ ಕೊಡಬೇಕು ಎಂದು ಹೇಳುವ ಅಧಿಕಾರವನ್ನು ಆಯಾ ಕ್ಷೇತ್ರದಲ್ಲಿ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೇ ಕೊಡಬೇಕು. ಸೊಸೈಟಿಗಳ ಲೆಕ್ಕವೆಲ್ಲಾ ಆಡಿಟ್ ಆದ ಮೇಲೆ ಡಿಫಾಲ್ಟರ್ಸ್ ಲಿಸ್ಟು ತಯಾರಾಗಬೇಕು. ಈಗ ರೆಸಲ್ಯೂಷನ್ ಮಾಡದೇ ಡಿಫಾಲ್ಟರ್ಸ್ ಲಿಸ್ಟು ತಯಾರು ಮಾಡುವ ಹಾಗಿಲ್ಲ. ಅದಕ್ಕಾಗಿ ಇದರ ಅಧಿಕಾರವನ್ನು ಆಯಾ ಪ್ರದೇಶದಲ್ಲಿರುವ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೇ ಅಧಿಕಾರ ಇರಬೇಕು ಎಂದು ಈ ಸಂದರ್ಭದಲ್ಲಿ ಸರಕಾರಕ್ಕೆ ಸಲಹೆ ಮಾಡಲು ಇಚ್ಛಿಸುತ್ತೇನೆ. ಮತ್ತೆ ಆರ್‌ಬಿಟ್ರೇಷನ್‌ಗೆ ಹೋದ ಮೇಲೆ ಆರ್‌ಬಿಟ್ರೇಷನ್‌ನವರು ಅವಾರ್ಡ್ ಎಂದು ಕೊಡುತ್ತಾರೆ. ಇಂತಹ ಅವಾರ್ಡುಗಳನ್ನು ಕಾರ್ಯರೂಪದಲ್ಲಿ ಬರುವ ಹಾಗೆ ಅಧಿಕಾರವಿರಬೇಕು. ಇದರಿಂದ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡಲು ಅನುಕೂಲವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಮೂರನೇ ವಿಷಯ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೆಡಿಟ್ ಕೋ ಆಪರೇಟೀವ್ ಸೊಸೈಟಿಗಳು ಹಾಗೂ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳು ಎಂದು ಇರುತ್ತವೆ. ಇವುಗಳಿಗೆ ಒಂದಕ್ಕೊಂದಕ್ಕೂ ಸಂಬಂಧವಿಲ್ಲ. ಕೆಲವು ಭಾಗಗಳಲ್ಲಿ ಇರಬಹುದು. ಕೆಲವು ಭಾಗಗಳಲ್ಲಿ ಯಾವ ಸಂಬಂಧವೂ ಇಲ್ಲದೇ ಇರಬಹುದು ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಗಳವರು ರೈತರ ಅಭಿವೃದ್ಧಿಗಾಗಿ ಕೆಲಸ ಮಾಡಬೇಕು. ಕೆಲವು ಭಾಗಗಳಲ್ಲಿ ಈ ತತ್ವ ಕಾರ್ಯರೂಪಕ್ಕೆ ಬಂದಿಲ್ಲ. ಆ ತತ್ವವನ್ನು ಜಾರಿಗೆ ತರುವುದರಿಂದ ರಿಕವರಿ ಇತ್ಯಾದಿಗಳನ್ನು ಮಾಡಲು

ಅನುಕೂಲವಾಗುತ್ತದೆ. ಇದರಿಂದ ಸಾಲವಾಗಿ ರೈತರಿಗೆ ಏನು ಕೊಟ್ಟಿರುತ್ತಾರೋ ಅದನ್ನು ಮಾಲು ಮಾರಾಟವಾದ ಮೇಲೆ ಮುರಿದುಕೊಂಡು ಅವರಿಗೆ ಬಾಕಿ ಹಣ ಕೊಡಲು ಅನುಕೂಲವಾಗುತ್ತದೆ. ಮತ್ತೆ ಗ್ರಾಮಾಂತರ ಪ್ರದೇಶಗಳಲ್ಲಿ ಸೇವಿಂಗ್ಸ್ ಪ್ರೋಗ್ರಾಂ ಕಾರ್ಯರೂಪದಲ್ಲಿ ತರುವುದಕ್ಕೆ ಅನುಕೂಲ ಆಗುತ್ತದೆ. ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿಗಳಿಗೂ ಹಾಗೂ ಕ್ರೆಡಿಟ್ ಕೋಆಪರೇಟೀವ್ ಸೊಸೈಟಿಗಳಿಗೂ ಒಂದಕ್ಕೊಂದು ಸರಿಯಾದ ಲಿಂಕು ಇರಬೇಕು. ಉದಾಹರಣೆಯಾಗಿ ಹೇಳಬೇಕು ಎಂದರೆ ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಿಗೆ ಸುಮಾರು ಎರಡು ಸಾವಿರದಷ್ಟು ಮಾಲು ಬಂತು ಎಂದರೆ ಅದರಲ್ಲಿ ಸಾಲವಾಗಿ ರೈತರಿಗೆ ಕೊಟ್ಟಿರುವ ಹಣವನ್ನು ಮುರಿದುಕೊಂಡು ಉಳಿಕೆ ಹಣವನ್ನು ರೈತರಿಗೆ ಕೊಡಬಹುದು ಮತ್ತು ರೈತರು ಅವರಿಗೆ ಬಂದ ಲಾಭದ ಹಣವನ್ನು ಸೇವಿಂಗ್ಸ್ ಬ್ಯಾಂಕುಗಳಲ್ಲಿ ಇಡುವಂತೆ ಅನುಕೂಲ ಮಾಡಿಕೊಳ್ಳಬಹುದು. ಆದರೆ ಇಂದು ಗ್ರಾಮಾಂತರಗಳಲ್ಲಿರುವ ಕ್ರೆಡಿಟ್ ಸೊಸೈಟಿಗಳಿಗೂ ಹಾಗೂ ಮಾರ್ಕೆಟಿಂಗ್ ಕೋಆಪರೇಟೀವ್ ಸೊಸೈಟಿಗಳಿಗೂ ಯಾವ ಒಂದು ತರಹದ ಲಿಂಕು ಇಲ್ಲ. ಇದು ಇರುವಂತೆ ಸರಕಾರ ಪ್ರಯತ್ನ ಮಾಡಬೇಕು ಎಂದು ಇಲ್ಲಿ ಸೂಚಿಸಬಯಸುತ್ತೇನೆ.

ಮೂರನೇದು ಗುಲ್ಬರ್ಗಾದಲ್ಲಿ ಹಾಗೂ ರಾಯಚೂರು ಮತ್ತು ಬಿದರೆ ಜಿಲ್ಲೆಗಳಲ್ಲಿ ಗ್ರೇನ್ಸ್ ಬ್ಯಾಂಕುಗಳು ಇದ್ದವು. ಗುಲ್ಬರ್ಗಾ ಜಿಲ್ಲೆಯಲ್ಲಿಯೇ ಸುಮಾರು 300 ಗ್ರೇನ್ಸ್ ಬ್ಯಾಂಕುಗಳು ಇದ್ದುವು. ಇದರಿಂದ ರೈತರು ತಾವು ಬೆಳೆದ ಮಾಲನ್ನು ತಂದು ಮಾರಾಟ ಮಾಡಿ ಅನುಕೂಲ ಪಡೆಯುತ್ತಿದ್ದರು. ಬೆಳೆದ ಮಾಲನ್ನು ಸರಿಯಾದ ರೀತಿಯಲ್ಲಿ ಮಾರಲು ಮತ್ತು ತಮಗೆ ಬೇಕಾದ ಮಾಲನ್ನು ಕೊಂಡುಕೊಳ್ಳಲು ಇಂತಹ ಬ್ಯಾಂಕುಗಳಿಂದ ಬಹಳ ಅನುಕೂಲವಾಗುತ್ತಿತ್ತು. ವಕ್ಕಲು ಮಾಡುವ ಜನರಿಗೆ ತಮಗೆ ಕಷ್ಟ ಬಂದ ಕಾಲದಲ್ಲಿ ಎಂದರೆ ಸೆಪ್ಟಂಬರು ಹಾಗು ನವಂಬರು ತಿಂಗಳುಗಳಲ್ಲಿ ಆಹಾರಧಾನ್ಯಗಳು ಸಿಗದೇ ತೊಂದರೆಯಾಗುತ್ತಿದ್ದಾಗ ಗ್ರೇನ್ಸ್ ಬ್ಯಾಂಕುಗಳವರು ಇಂತಹ ಸಮಯದಲ್ಲಿ ರೈತರಿಗೆ ನೆರವಾಗುತ್ತಿದ್ದರು. ಇಂತಹ ಗ್ರೇನ್ಸ್ ಬ್ಯಾಂಕುಗಳು ಹೈದರಾಬಾದು ಕರ್ಣಾಟಕದ ಭಾಗಯಾದರಲ್ಲೆಲ್ಲಾ ಬಹಳ ತೃಪ್ತಿಕರವಾಗಿ ಕೆಲಸ ಮಾಡುತ್ತಿದ್ದವು. ಆದರೆ ಈಚೆಗೆ ಇದರ ಸುದ್ದಿಯೇ ಇಲ್ಲ. ಈಗಲಾದರೂ ಸರಕಾರ ಇದಕ್ಕೆ ಪುನರ್‌ಚೇತನ ಬರುವ ಹಾಗೆ ಮಾಡಿ ಇಂತಹ ಗ್ರೇನ್ಸ್ ಬ್ಯಾಂಕುಗಳು ಕೆಲಸ ಪ್ರಾರಂಭ ಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಇನ್ನೊಂದು ವಿಷಯ ಎಂದರೆ, ನ್ಯಾಷನಲ್ ರೂರಲ್ ವಾಟರ್ ಸಪ್ಲೈ ಸ್ಕೀಂನ ಬಗ್ಗೆ ಹೇಳಬೇಕೆಂದರೆ ನಮ್ಮಲ್ಲಿ ಕೆಲವು ಭಾಗಗಳಲ್ಲಿ ನೀರಿಗೆ ತೊಂದರೆ ಇರುವುದರಿಂದ ಈ ಸ್ಕೀಂನಿಂದ ಸ್ವಲ್ಪ ಮಟ್ಟಿಗೆ ಜನರಿಗೆ ಅನುಕೂಲವಾಗುತ್ತಿದೆ. ಎಷ್ಟೋ ಹಳ್ಳಿಗಳಲ್ಲಿ ಇಂದು ನೀರಿಗಾಗಿ ಬಹಳ ಕಷ್ಟ ಪಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಸುಮಾರು ನಾಲ್ಕೈದು ಮೈಲಿಗಳಷ್ಟು ದೂರ ಹೋಗಿ ನಡೆದುಕೊಂಡು ನೀರನ್ನು ತರುತ್ತಿದ್ದಾರೆ. ಇದರಿಂದ ಜನಕ್ಕೆ ಬಹಳ ಕಷ್ಟವಾಗುತ್ತಿದೆ. ಇದರ ಬಗ್ಗೆ ನೀರಿಗಾಗಿ ಎಲ್ಲೆಲ್ಲಿ ಕಷ್ಟಗಳಿವೆ ಎನ್ನುವುದನ್ನು ನೋಡಿ ಈಗಾಗಲೇ ಪ್ರತಿಯೊಂದು ಜಿಲ್ಲೆಯಲ್ಲೂ ಸರ್ವೇ ಮಾಡಿ ಈಗಾಗಲೇ ಸರಕಾರಕ್ಕೆ ಸುಮಾರು 200 ಎಸ್ಟಿಮೇಟುಗಳನ್ನು ಮಂಜೂರಾತಿಗಾಗಿ ಕಳುಹಿಸಲಾಗಿದೆ. ಅವು ಇನ್ನೂ ಮಂಜೂರು ಮಾಡಿಲ್ಲ. ಇದಕ್ಕಾಗಿ ಸೆಂಟ್ರಲ್ ಗವರ್ನಮೆಂಟಿಗೆ ಶಿಫಾರಸು ಮಾಡಬೇಕೋ ಏನೋ ನಮಗೆ ಗೊತ್ತಿಲ್ಲ. ಇದು ಹೇಗಾದರೂ ಇರಲಿ ನಮ್ಮ ಸರಕಾರದ ವತಿಯಿಂದಲೋ ಇಲ್ಲವೇ ಕೇಂದ್ರ ಸರಕಾರದ ವತಿಯಿಂದಲೋ ಈಗ ತಯಾರು ಮಾಡಿರುವ ಇನ್ನೂರು ಎಸ್ಟಿಮೇಟುಗಳನ್ನು ಸರಕಾರ ಬೇಗನೆ ಮಂಜೂರು ಮಾಡಿ ರೈತರಿಗೆ ಅನುಕೂಲವಾಗುವಂತೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಸರಕಾರದವರಲ್ಲಿ ಪ್ರಾರ್ಥನೆ ಮಾಡುತ್ತೇನೆ. ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ಅಧ್ಯಕ್ಷರನ್ನು ವಂದಿಸಿ, ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಎಂ. ತಮ್ಮಯ್ಯ (ಕಡೂರು).—ಸ್ವಾಮಿ, ಈಗಾಗಲೇ ಸಹಕಾರದ ವಿಚಾರದಲ್ಲಿ ಅನೇಕ ಮಹನೀಯರು ಅವರ ವಿಚಾರಗಳನ್ನು ತಿಳಿಸಿದ್ದಾರೆ. ಯಾರು ಯಾರು ಸೊಸೈಟಿಗಳ ಅಧ್ಯಕ್ಷರಾಗಿರುತ್ತಾರೋ ಅಂತಹವರ ಮೇಲೆ ಇನ್ನೊಬ್ಬರು ಹೊರಿಸಿದ ಅಪಾದನೆಗಳನ್ನೂ ನಾವು ಇಲ್ಲಿ ಕೇಳಿದ ಮೇಲೆ ನಮ್ಮ ದೇಶದಲ್ಲಿ ಇಂದು ಸಹಕಾರ ತತ್ವದ ಮೇಲೆ ನಂಬಿಕೆ ಇದೆಯೋ ಇಲ್ಲವೇ ಎನ್ನುವುದು ಇದರಿಂದ ಎದ್ದು ಕಾಣುತ್ತಿದೆ. ಈಗ ಕಾನೂನು ಪ್ರಕಾರ ಸಹಕಾರ ತತ್ವ ಬಂದಿಲ್ಲ. ಎಲ್ಲ ಹಣವಂತರ ಕೈಯಲ್ಲಿ ಸಹಕಾರ ಸಂಘಗಳು ಇವೆ ಮತ್ತು ಸರಕಾರದವರು ಜನಕ್ಕೆ ಅನುಕೂಲವಾಗಲಿ ಎಂದು ಈ ಇರಾದೆಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಕೊಡುತ್ತಿದ್ದಾರೆ. ಆದರೆ ಕೋಟ್ಯಾಂತರ ರೂಪಾಯಿ ಖರ್ಚಾಗುವುದು ನೇರವಾಗಿ ರೈತರಿಗೆ ಸಕಾಲದಲ್ಲಿ ದೊರೆಯದೆ ಇಂದು

(ಶ್ರೀ ಕೆ. ಎಂ. ತಮ್ಮಯ್ಯ)

ಸಮಾಜದಲ್ಲಿ ಗಣ್ಯ ವ್ಯಕ್ತಿಗಳೆನಿಸಿಕೊಂಡ ಸೇವಾ ಧುರಂಧರರಿಗೆ ಸಿಕ್ಕುತ್ತಿದೆ ಮತ್ತು ಇವು ಹಣ ಗಳಿಸುವ ಸಂಸ್ಥೆಯಾಗಿ ಉಳಿದಿವೆ. ರೈತರ ಏಳಿಗೆಯಾಗಬೇಕೆಂಬ ಧ್ಯೇಯವು ಸಫಲವಾಗಿಲ್ಲ. ಸೊಸೈಟಿಗಳಲ್ಲಿ ಇರತಕ್ಕ ನ್ಯೂನತೆಗಳನ್ನು ಸರಕಾರದ ಗಮನಕ್ಕೆ ತಂದಾಗಲೂ ಕೂಡ ತಕ್ಷಣ ಕ್ರಮ ತೆಗೆದುಕೊಳ್ಳದೇ ಇರುವುದು ಒಂದು ಕಾರಣವಾಗಿದೆ. ಹಣ ಪೋಲು ಆದಾಗ ಕ್ರಮ ತೆಗೆದು ಕೊಳ್ಳುವ ಕಾನೂನು ಮಾಡದೇ ಇರುವುದು ಶೋಚನೀಯವಾದ ಸಂಗತಿ. ಸರ್ಕಾರದ ಗಮನಕ್ಕೆ ಬಂದರೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಮೇಲಿನವರ ಗಮನಕ್ಕೆ ಬರುವಷ್ಟರೊಳಗೆ ರಿಕಾರ್ಡು ಕಾಣದಂತೆ ಆಗಿರುವ ಸೊಸೈಟಿಗಳು ಅನೇಕ ಇವೆ. ಆದುದರಿಂದ ಕಾನೂನು ಬದಲಾವಣೆ ಮಾಡಿ ಹಣ ದುರುಪಯೋಗವಾಗದಂತೆ ಕಾನೂನಿನ ಹೆದರಿಕೆ ಹುಟ್ಟಿಸುವಂಥಾದ್ದನ್ನು ಕಂಡುಹಿಡಿಯಬೇಕು ಎಂದು ಸೂಚಿಸುತ್ತೇನೆ.

ಅನೇಕ ಸೊಸೈಟಿಗಳು ಇವೆ. ಅವುಗಳಲ್ಲಿ ಎಲ್ಲ ಪಕ್ಷದವರೂ ಇದ್ದಾರೆ. ನಾವು ಆಳುವ ಪಕ್ಷಕ್ಕೆ ಸೇರಿದವರು ಆಗಿದ್ದೇವೆ. ನಾವು ಏನು ಮಾಡಿದರೂ ಬಚಾಯಿಸಿಕೊಳ್ಳುತ್ತೇವೆ ಎಂಬ ಭಾವನೆ ಇರಕೂಡದು. ಅದೇ ರೀತಿ ಇನ್ನು ಕೆಲವರು ನಮ್ಮ ಮೇಲೆ ಸರಕಾರ ಕ್ರಮ ತೆಗೆದುಕೊಳ್ಳುತ್ತದೆ ಎಂಬ ಸೋಗು ಹಾಕಿಕೊಂಡು ಅಂಥ ಭಾವನೆ ಬರುವಂತೆ ಮಾಡಿ ಏನು ಬೇಕಾದರೂ ಮಾಡು ತ್ತಿದ್ದಾರೆ. ಇದನ್ನು ತಪ್ಪಿಸಬೇಕು. ಕಾನೂನು ಅನುಸರಿಸಿ ನಡೆಯದೇ ಇರುವಾಗ ಕ್ರಮ ತೆಗೆದುಕೊಳ್ಳುವಂತೆ ಟೀಕೆ ಮಾಡಬೇಕಾಗುತ್ತದೆ, ಇಲ್ಲದಿದ್ದರೆ ಕೊಟ್ಟ ಹಣ ಸಾರ್ಥಕವಾಗುವುದಿಲ್ಲ. ಇದರಿಂದ ರೈತರಿಗೆ ಹೆಚ್ಚು ಅನುಕೂಲವಾಗುತ್ತಿದೆ. ಕೆಲವು ಸೊಸೈಟಿಗಳು ಸಾವಿರಾರು ಪಲ್ಲಾ ಧಾನ್ಯ ಬೇರೆ ರಾಜ್ಯಕ್ಕೆ ಕಳಿಸಿಕೊಟ್ಟಿದ್ದಾರೆ ಎಂದು ನಾನು ಹೇಳುತ್ತೇನೆ. ಸೊಸೈಟಿಗಳಿಗೆ ದೊರೆಯುವ ಗೊಬ್ಬರ ಮುಂತಾದ ಸಾಮಾನುಗಳು ಹೊರಗೆ ಹೋಗುತ್ತವೆ. ಇಂಥಾದ್ದನ್ನು ಸರಕಾರದ ಗಮನಕ್ಕೆ ತಂದಾಗ್ಗೆ ತಕ್ಷಣ ಕ್ರಮ ತೆಗೆದುಕೊಂಡರೆ ಇವನ್ನು ಹೇಳುವವರಿಗೂ ಉತ್ಸಾಹ ಇರುತ್ತದೆ. ಕ್ರಮ ತೆಗೆದುಕೊಳ್ಳದೇ ಇರುವುದರಿಂದ ನಮಗೆ ನಿರುತ್ಸಾಹ ಬಂದಿದೆ. ಯಾವ ಹೆದರಿಕೆ ಇಲ್ಲದೆ ಹಣ ಧಾನ್ಯ ಪೋಲು ಆಗಿರುವುದನ್ನು ಅನೇಕ ಸಂದರ್ಭದಲ್ಲಿ ನಾವು ನೋಡಿದ್ದೇವೆ. ಈ ರೀತಿ ಆಗಬಾರದು. ತಕ್ಷಣ ಇದಕ್ಕೆ ನಿಗಾ ಕೊಟ್ಟು ರೈತರಿಗೆ ಅನುಕೂಲವಾಗುವ ಹಾಗೆ ಮಾಡು ತ್ತಾರೆ ಎಂಬ ಭಾವನೆ ಬರಬೇಕು. ಮಾರವಾಡಿಯಿಂದ ಸಾಲ ತರಬಹುದು, ಸೊಸೈಟಿಯಲ್ಲಿ ಸಾಲ ಕೇಳಬಾರದು ಎನ್ನುವ ಪರಿಸ್ಥಿತಿ ಬಂದಿದೆ, ಯಾಕೆಂದರೆ ಸೊಸೈಟಿ ಸಾಲ ಪಡೆಯಲು ಅನೇಕ ಕಂಬ ಸುತ್ತು ಹಾಕಬೇಕಾಗುತ್ತದೆ. ಅನೇಕ ಜನರನ್ನು ನೋಡಿಕೊಳ್ಳಬೇಕಾಗುತ್ತದೆ ಇಲ್ಲದಿದ್ದರೆ ರಿಕಾರ್ಡ್ ಮುಂದೆ ಹೋಗುವುದಿಲ್ಲ. ದೊಡ್ಡ ದೊಡ್ಡ ಅಧಿಕಾರಿಗಳನ್ನು ಮಂತ್ರಿಗಳನ್ನು ನೋಡೋ ಶಕ್ತಿ ಸಾಮರ್ಥ್ಯ ವಿವೇಚನೆ ರೈತರಲ್ಲಿ ಕಡಿಮೆಯಾಗಿದೆ. ಆದುದರಿಂದ ಸೊಸೈಟಿ ಸಾಲ ಬೇಡ, ಸೊಸೈಟಿ ಮೆಂಬರ್ ಆಗುವುದು ಬೇಡ ಎಂದು ಅನೇಕ ರೈತರು ಹೇಳುತ್ತಿದ್ದಾರೆ. ಸರಕಾರ ಇದರ ಕಡೆ ಹೆಚ್ಚು ನಿಗಾ ಕೊಟ್ಟರೆ ಜನರಿಗೆ ಅನುಕೂಲವಾಗುತ್ತದೆ. ಈಗ ರೈತರಿಗೆ ಅನಾನುಕೂಲ ವಾಗಿದೆ. ಮಾರ್ವಾಡಿಗಳಿಗೆ ಶೇಕಡ 10–15 ರಷ್ಟು ಬಡ್ಡಿ ಕೊಟ್ಟು ನಿರ್ಗತಿಕರಾದಂಥ ರೈತರು ಅನೇಕರಿದ್ದಾರೆ, ಆದುದರಿಂದ ಇದನ್ನು ಕೂಡಲೇ ತಪ್ಪಿಸಬೇಕು ಎಂದು ಸರಕಾರದಲ್ಲಿ ಪ್ರಾರ್ಥಿ ಸುತ್ತೇನೆ.

ಕ್ಷಾಮ ಪ್ರದೇಶದಲ್ಲಿ ಅಲ್ಪಾವಧಿ ಸಾಲ ಕೊಟ್ಟಿದ್ದಾರೆ. ಬಡವರು ದುರ್ಬಲರಾಗಿರುವುದ ರಿಂದ ಅವರಿಗೆ ಸಾಲ ದೊರೆಯುತ್ತಿಲ್ಲ. ಅನುಕೂಲಸ್ಥರು ಸ್ಥಾನ ಮಾನ ಇರುವವರು ಬಡವರ ಹೆಸರಿನಲ್ಲಿ ಸಾಲ ಪಡೆದುಕೊಂಡು ಹಣ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅಂಥವರ ಸ್ಥಾನ ಮಾನ ಏನೇ ಇರಲಿ, ಅವರು ನಿಮ್ಮ ಪಕ್ಷದವರೇ ಇರಲಿ, ಅವರು ಎದುರು ಪಕ್ಷದವರೇ ಇರಲಿ ಧೈರ್ಯ ವಾಗಿ ಕ್ರಮ ಕೈಕೊಳ್ಳಲು ಆಗುತ್ತಿಲ್ಲ. ತಪ್ಪು ಮಾಡಿದವರಿಗೆ ಪ್ರೋತ್ಸಾಹ ಕೊಡುವುದು ಕಂಡು ಬರುತ್ತಿದೆ. ಇದನ್ನು ಕಾನೂನು ಪ್ರಕಾರ ಮಾಡುತ್ತಾರೆ ಎಂದು ಸಮಾಜಕ್ಕೆ ಅರ್ಥವಾಗಿದೆ. ಅಯೋಗ್ಯರ ಕೈಯಲ್ಲಿ ಸೊಸೈಟಿ ಇರಬಾರದು ಎಂಬ ಭಾವನೆ ಬಂದಿದೆ. ಒಂದೊಂದು ಸೊಸೈಟಿ ಯಲ್ಲಿ ಅಧ್ಯಕ್ಷರು ಕಾರ್ಯದರ್ಶಿಗಳು ಸೇರಿಕೊಂಡು ಜನರಿಗೆ ಕೊಡುವ ಹಣವನ್ನು ತಾವೇ ಹಂಚಿ ಕೊಂಡಿದ್ದಾರೆ. ಅಂಥವರ ಮೇಲೆ ಯಾವ ಕ್ರಮ ತೆಗೆದುಕೊಂಡಿಲ್ಲ. ಅವರ ಮೇಲೆ ನಿಗಾ ಇಲ್ಲ. ಏನು ಮಾಡಿದರೂ ತಾವು ಬಚಾವು ಆಗುತ್ತೇವೆ ಎಂಬ ಭಾವನೆ ಅವರಲ್ಲಿ ಬಂದಿದೆ. ಆದುದರಿಂದ ಕಾನೂನು ಬಿಗಿಗೊಳಿಸಿ, ತಕ್ಷಣ ನಿಗಾ ಕೊಟ್ಟು ಕ್ರಮ ತೆಗೆದುಕೊಂಡರೆ ಜನರಲ್ಲಿ ಒಳ್ಳೇ ಭಾವನೆ ಬರುತ್ತದೆ ಮತ್ತು ಸರಕಾರ ಕೊಡುವ ಹಣದ ಸಹಾಯ ಸಾರ್ಥಕವಾಗುತ್ತದೆ ಎಂದು ಈ ಸಂದರ್ಭ ದಲ್ಲಿ ಸರ್ಕಾರಕ್ಕೆ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಸಾಲ ಪಡೆಯುವ ವಿಚಾರ. ಇಂದು ರೈತರು ಸಹಕಾರ ಸಂಘಗಳಿಗೆ ಸಂಪೂರ್ಣವಾಗಿ ಸಾಲಗಾರರಾಗಿದ್ದಾರೆ. ಆದರೆ ರೈತರು ಸಾಲಗಾರರಾಗಬಾರದು ಎಂಬ ಭಾವನೆ ಮೊದಲು ಇತ್ತು. ಸಾಲ ತೆಗೆದುಕೊಳ್ಳುವುದರಲ್ಲಿ ಅನೇಕರು ಪ್ರಚಂಡರಾಗಿದ್ದಾರೆ. ನಮ್ಮ ಹೋಬಳಿಯಲ್ಲಿ 20 ಸಾವಿರ ರೂಪಾಯಿ ಹಣ ಅಲಾಟ್ ಆಗಿದೆ. ಆದರೆ ಇದಕ್ಕೆ ಅರ್ಜಿಗಳೇ ಬರಲಿಲ್ಲ ಎಂದು ಅಲ್ಲಿಯ ಬಿ.ಡಿ.ಒ. ಅವರು ಹೇಳಿದರು. ಅರ್ಜಿ ಯಾಕೆ ಬರಲಿಲ್ಲ ಅಂದರೆ ರೈತರು ಈಗಾಗಲೇ ಸಾಲ ಪಡೆಯಲು ತಮ್ಮ ಎಲ್ಲಾ ಆಸ್ತಿ ಬರೆದುಕೊಟ್ಟುಬಿಟ್ಟಿದ್ದಾರೆ. ಬರೆದುಕೊಡುವುದಕ್ಕೆ ಆಸ್ತಿ ಇಲ್ಲದ್ದರಿಂದ ಅರ್ಜಿಗಳೇ ಬಂದಿಲ್ಲ ಎಂದು ಹೇಳಿದರು. ರೈತರು ವ್ಯವಸಾಯಕ್ಕೆ ಭೂಮಿ ಪಡೆಯುತ್ತಾರೆ. ಇದಕ್ಕಾಗಿ ಸಾಲ ತೆಗೆದುಕೊಳ್ಳುತ್ತಾರೆ. ಕೃಷಿ ಮಾಡಲು ಹಣ ಉಪಯೋಗಿಸುವುದಿಲ್ಲ. ವ್ಯವಸಾಯವನ್ನು ಮುಂದುವರಿಸಬೇಕು, ದುಡಿಯಬೇಕು ಎಂದು ಅವರಲ್ಲಿ ಭಾವನೆ ಇಲ್ಲ. ಅವರಿಗೆ ಲಕ್ಷ ಎಕರೆ ಜಮೀನು ಸಾಗುವಳಿಗೆ ಕೊಟ್ಟರೂ ಇಂದು ದೇಶದಲ್ಲಿ ಅನ್ನದ ಅಭಾವ ತಪ್ಪಿರುವುದಿಲ್ಲ. ಆದುದರಿಂದ ಕಾನೂನು ಬಿಗಿಗೊಳಿಸಬೇಕು ಮತ್ತು ತಪ್ಪು ಮಾಡಿದವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಹಣ ದುರುಪಯೋಗ ಮಾಡುವುದನ್ನು ಪೋಲು ಮಾಡುವುದನ್ನು ತಪ್ಪಿಸಬೇಕು. ಇದಕ್ಕೆ ಅವಕಾಶ ಇದೆ. ಈ ಪ್ರಕಾರ ಮಾಡುವುದಕ್ಕೆ ಕಾನೂನು ಬಿಗಿ ಮಾಡಬೇಕು ಎಂದು ಹೇಳಿ ನನ್ನ ಮಾತು ಮುಗಿಸುತ್ತೇನೆ.

† ಶ್ರೀ ಎಂ. ಮಂಚೇಗೌಡ (ಮದ್ದೂರು).—ಸ್ವಾಮಿ, ಸಹಕಾರ ಶಾಖೆಗೆ ಸಂಬಂಧಪಟ್ಟ ಈ ಸಭೆಯ ಮುಂದೆ ಇರತಕ್ಕಂಥ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಸಲಹೆಗಳನ್ನು ಈ ಸಭೆಯ ಮುಂದೆ ಇಡಲು ಇಚ್ಛಿಸುತ್ತೇನೆ.

ಅನೇಕ ಸ್ನೇಹಿತರು ಮಾತನಾಡತಕ್ಕಂಥ ಸಂದರ್ಭದಲ್ಲಿ ಈ ಸಾಮುದಾಯಿಕ ಶಾಖೆಗೆ ಸಂಬಂಧಪಟ್ಟಂಥ ಆಡಳಿತ ವರ್ಗವನ್ನು ಬಹುವಾಗಿ ಟೀಕಿಸಿದ್ದಾರೆ. ಜೊತೆಗೆ ಅದನ್ನು ರದ್ದು ಮಾಡತಕ್ಕಂಥಾದ್ದು ಸೂಕ್ತ ಎಂದು ಸಹ ಹೇಳಿದ್ದಾರೆ. ಬಹುಶಃ ಈ ಟೀಕೆಯು ತಾಲ್ಲೂಕ್ ಅಭಿವೃದ್ಧಿ ಸಮಿತಿಯು ಅಸ್ತಿತ್ವಕ್ಕೆ ಬರುವುದಕ್ಕೆ ಮುಂಚೆ ಹೇಳಿದ್ದರೆ ಅದು ಸಹಜವಾದಂಥ ಟೀಕೆ ಆಗುತ್ತಿತ್ತು. ಸಾಮುದಾಯಿಕ ಯೋಜನೆ ಬೇರೆಯಲ್ಲ, ರಾಷ್ಟ್ರೀಯ ವಿಸ್ತರಣ ಯೋಜನೆ ಬೇರೆಯಲ್ಲ ಮತ್ತು ತಾಲ್ಲೂಕ್ ಅಭಿವೃದ್ಧಿ ಸಮಿತಿ ಬೇರೆಯಲ್ಲ.

[MR. CHAIRMAN (SRI R. NAGAN GOUDA) in the Chair.]

6-00 P.M.

ಈ ಎಲ್ಲ ಅಭಿವೃದ್ಧಿ ಯೋಜನೆಗಳೂ ಕೂಡ ಆಯಾ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ಅಭಿವೃದ್ಧಿ ಸಮಿತಿಯ ಆಡಳಿತಕ್ಕೆ ಒಳಪಟ್ಟಿರುವ ಪ್ರಯುಕ್ತ, ಮತ್ತು ಅದರಲ್ಲಿ ವಿಲೀನವಾಗಿರುವ ಪ್ರಯುಕ್ತ, ಕೇವಲ ಅಕೌಂಟ್ಸ್ ಮೇನಟೇನ್ ಮಾಡುವುದಕ್ಕೆ ಮಾತ್ರ ಕಮ್ಯೂನಿಟಿ ಡೆವಲಪ್‌ಮೆಂಟ್, ಮತ್ತು ಎನ್.ಇ.ಎಸ್. ಎಂದು ಇವೆಯೇ ವಿನಾ ಬೇರೆ ದೃಷ್ಟಿಯಿಂದ ಬೇರೆ ಬೇರೆಯಲ್ಲ. ಅದೂ ಅಲ್ಲದೆ ನಮ್ಮ ಜನತೆಗೆ ಪ್ರಜಾಪ್ರಭುತ್ವದ ಅರಿವು ಉಂಟಾಗಬೇಕಾಗಿದ್ದರೆ, ಸರ್ಕಾರದಿಂದ ಏನೇನು ಸೌಲಭ್ಯಗಳು ಜನತೆಗೆ ಸಲ್ಲಬೇಕಾಗಿವೆಯೋ ಆ ಸೌಲಭ್ಯಗಳು ನೇರವಾಗಿ ಜನಗಳಿಗೆ ಮುಟ್ಟಬೇಕಾಗಿದ್ದರೆ ಪ್ರತಿಯೊಂದು ಹಳ್ಳಿಗೂ ಕೂಡ ಏನೇನು ಸೌಲಭ್ಯಗಳು ಬೇಕೋ ಆ ಸೌಲಭ್ಯಗಳು ದೊರಕಬೇಕಾದರೆ, ಸ್ವಾತಂತ್ರ್ಯ ಬಂದು 20 ವರ್ಷಗಳಾಗಿದ್ದರೂ ಸಹ ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಅಸ್ತಿತ್ವಕ್ಕೆ ಬಂದ ನಂತರ ಈ ಅಭಿವೃದ್ಧಿ ಸಾಧನೆಯಾಗಿದೆಯೇ ವಿನಾ ಅದಕ್ಕೆ ಮುಂಚೆ ಆಗಿರಲಿಲ್ಲ. ಈ ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಪೂರ್ಣವಾಗಿ ಕಮ್ಯುನಿಟಿ ಡೆವಲಪ್‌ಮೆಂಟಿನ ಅಧಿಕಾರ ವರ್ಗವೇನಿದೆ ಅದನ್ನು ಉಪಯೋಗಿಸಿಕೊಂಡು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತ ಬಂದಿವೆ. ಆದುದರಿಂದ ಈಗ ಆ ಬಗ್ಗೆ ಖರ್ಚಿಗೆ ಏನು ಮನ್ನಣೆ ಕೊಡುತ್ತೇವೆ ಆ ಖರ್ಚಿನ ಆವಶ್ಯಕತೆ ಇದೆ. ಅದು ಸರಿಯಾಗಿ ಉಪಯೋಗವಾಗುತ್ತ ಇದೆ, ಎಂದರೆ ತಪ್ಪಾಗಲಾರದು. ಅದರಲ್ಲಿ ಕೆಲವು ಅನಾವಶ್ಯಕವಾದ ಹುದ್ದೆಗಳಿವೆ. ಇಂಡಸ್ಟ್ರಿಯಲ್ ಎಕ್ಸ್‌ಟೆನ್‌ಷನ್ ಆಫೀಸರ್, ಮುಖ್ಯ ಸೇವಕ, ಗ್ರಾಮ ಸೇವಿಕೆಯರು ಇಂಥ ಹುದ್ದೆಗಳು ಅನಾವಶ್ಯಕ. ಅವುಗಳನ್ನು ತೆಗೆದುಹಾಕಿ ಕೋ-ಆಪರೇಟಿವ್ ಎಕ್ಸ್‌ಟೆನ್ ಆಫೀಸರ್, ಅಗ್ರಿಕಲ್ಚರಲ್ ಎಕ್ಸ್‌ಟೆನ್‌ಷನ್ ಆಫೀಸರ್ ಮತ್ತು ಬಿ.ಡಿ.ಒ. ಈ ಹುದ್ದೆಗಳು ಬೇಕು. ಇದಕ್ಕೆ ಸಂಬಂಧಪಟ್ಟಂತೆ ಇರುವ ಮಿನಿಸ್ಟೀರಿಯಲ್ ಸಿಬ್ಬಂದಿ ಏನಿದೆ ಅದು ಇರುವ ಪ್ರಯುಕ್ತ ತಾಲ್ಲೂಕು ಅಭಿವೃದ್ಧಿ ಸಮಿತಿಗಳ ವೆಚ್ಚ ಕಡಿಮೆಯಾಗಿದೆ. ಆದ್ದರಿಂದ ಆ ಸಿಬ್ಬಂದಿ ಕೂಡ ಬೇಕು. ಎನ್.ಇ.ಎಸ್. ಕೆಲಸಗಳು, ತಾಲ್ಲೂಕು ಅಭಿವೃದ್ಧಿ ಸಮಿತಿಯ ಕೆಲಸಗಳು ಎಂದು

(ಶ್ರೀ ಎಂ. ಮಂಚೇಗೌಡ)

ಲೆಕ್ಕಾಚಾರಕ್ಕೋಸ್ಕರವಾಗಿ ಬೇರೆ ಬೇರೆ ಇವೆ. ಆ ಕೆಲಸಗಳನ್ನು ಸೂಪರ್‌ವೈಸ್ ಮಾಡತಕ್ಕ ಅಧಿಕಾರ ಏನು ಅಸಿಸ್ಟೆಂಟ್ ಕಮೀಷನರ್ ಮತ್ತು ಡೆಪ್ಯುಟಿ ಕಮಿಷನರುಗಳಿಗೆ ಇದೆ ಅದನ್ನು ತೆಗೆದುಹಾಕಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳಿಗೆ ಸಂಬಂಧಪಟ್ಟಂತೆ ಏನು ನಿಯಮಗಳು ಇವೆ. ಅದೇ ನಿಯಮಗಳನ್ನು ಇದಕ್ಕೂ ಅನ್ವಯಿಸುವಂತೆ ಮಾಡತಕ್ಕದು ಸೂಕ್ತ.

ತಾಲ್ಲೂಕು ಅಭಿವೃದ್ಧಿ ಮಂಡಲಿಗಳಿಗೆ ಸುಮಾರು 7 ವರ್ಷಗಳಿಂದ ಚುನಾವಣೆಗಳು ಆಗದೆ ಇರುವುದರಿಂದ ಅನೇಕ ಸದಸ್ಯರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ತತ್ವಶಃ ಚುನಾವಣೆಗಳು ಆಗಲೇಬೇಕು ಎನ್ನುವುದನ್ನು ಎಲ್ಲರೂ ಒಪ್ಪುವ ವಿಷಯ. ಈ ಸಲ ಚುನಾವಣೆಗಳು ನಡೆಯುತ್ತವೆ ಎನ್ನುವ ಭರವಸೆಯನ್ನು ಸರ್ಕಾರದವರು ಕೊಟ್ಟಿದ್ದಾರೆ. ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಎಲ್ಲೋ ಆಗಲೀ ಅಧಿಕಾರವನ್ನು ದುರುಪಯೋಗ ಪಡಿಸಿಕೊಂಡಂಥ ಪ್ರಸಂಗಗಳಿಲ್ಲ ಅಥವಾ ಜನತೆಯ ಏಳಿಗೆಗೆ ವಿರೋಧವಾಗಿ ತಮ್ಮ ಅಧಿಕಾರವನ್ನು ಚಲಾಯಿಸುತ್ತಿವೆ ಎನ್ನುವ ದೂರುಗಳು ಇದುವರೆಗೂ ಇಲ್ಲ. ರಾಜ್ಯ ಮಟ್ಟದ ಅಧಿಕಾರಿಗಳು ಎಷ್ಟು ದಕ್ಷತೆಯಿಂದ, ಪ್ರಾಮಾಣಿಕತೆಯಿಂದ ಕೆಲಸ ಮಾಡುತ್ತಾರೆ ಅದಕ್ಕಿಂತ ಮಿಗಿಲಾದ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ತಾಲ್ಲೂಕು ಅಭಿವೃದ್ಧಿ ಸಮಿತಿಗಳು ಕೆಲಸ ಮಾಡುತ್ತಿವೆ ಎಂದರೆ ಉತ್ಪ್ರೇಕ್ಷೆಯಾಗುವುದಿಲ್ಲ.

ಸಹಕಾರ ಸಂಘಗಳ ವಿಚಾರವಾಗಿ ಅನೇಕರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ರೈತಾಪಿ ಜನಗಳಿಗೆ ಅನುಕೂಲವಾಗುತ್ತಿರುವುದು ಸಹಕಾರ ಸಂಘಗಳಿಂದ ರೈತರು ವ್ಯವಸಾಯ ಕ್ಷೇತ್ರದಲ್ಲಿ ಮುನ್ನಡೆಯಲು ಏನು ಸಾಧ್ಯವಾಗಿದೆ ಅದು ಸಹಕಾರ ಕ್ಷೇತ್ರ ಬೆಳೆಯದೆ ಇದ್ದ ಪಕ್ಷದಲ್ಲಿ, ಸಹಕಾರ ಸಂಘಗಳಿಂದ ಸೌಲಭ್ಯಗಳನ್ನು ಕೊಡದೆ ಇದ್ದ ಪಕ್ಷದಲ್ಲಿ ರೈತಾಪಿ ಜನ ಏನು ಅಭಿವೃದ್ಧಿ ಸಾಧನೆ ಮಾಡಿದ್ದಾರೆ ಅಷ್ಟೊಂದು ಸಾಧನೆ ಮಾಡುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. ಸಾಧನೆಯಾಗಿರತಕ್ಕುದೂ ಉಂಟು, ಹೆಚ್ಚು ಅಭಿವೃದ್ಧಿಯಾಗಿರತಕ್ಕುದೂ ಉಂಟು. ಸರ್ಕಾರ ವಲಯದಲ್ಲಿ ನಡೆಯುತ್ತಿರುವ ಉದ್ಯಮಗಳಿಗೂ ಮತ್ತು ಸಹಕಾರಿ ಕ್ಷೇತ್ರದಲ್ಲಿ ನಡೆಯುವ ಉದ್ಯಮಗಳಿಗೂ ಹೋಲಿಸಿ ನೋಡಿದರೆ ಪ್ರಾಮಾಣಿಕತೆ ಮತ್ತು ದಕ್ಷತೆಯಲ್ಲಿ ಸರ್ಕಾರಿ ವಲಯದಲ್ಲಿ, ಸರ್ಕಾರದ ಆಶ್ರಯದಲ್ಲಿ ನಡೆಯತಕ್ಕ ಉದ್ಯಮಗಳಿಗಿಂತ ಅತ್ಯುತ್ತಮವಾದ ಮಟ್ಟದಲ್ಲಿ ಸಹಕಾರ ಕ್ಷೇತ್ರದಲ್ಲಿ ನಡೆಯುವ ಉದ್ಯಮಗಳಲ್ಲದೆ ಸರ್ಕಾರ ಅಧಿಕಾರವನ್ನು ಕೇಂದ್ರೀಕೃತ ಮಾಡುತ್ತ ಹೋಗುವುದರಿಂದ, ಅಧಿಕಾರಿಗಳಿಗೆ ಬಿಡುತ್ತ ಹೋಗುವುದರಿಂದ ಲೋಪ ಜಾಸ್ತಿಯಾಗಿದೆ. ಸಹಕಾರ ಸಂಘಗಳಲ್ಲಿ ಹಣ ದುರುಪಯೋಗವಾಗಿದ್ದರೆ ಅಥವಾ ದುರುಪಯೋಗವಾಗಿರುವ ಸಂದರ್ಭಗಳಲ್ಲಿ ಕ್ರಮ ತೆಗೆದುಕೊಳ್ಳದೆ ಇದ್ದರೆ ಅದು ಜನಗಳ ತಪ್ಪಲ್ಲ, ಸಹಕಾರ ಸಂಘಗಳನ್ನು ನಡೆಸುವವರ ತಪ್ಪೂ ಅಲ್ಲ; ಸಹಕಾರ ಇಲಾಖೆಗೆ ಸಂಬಂಧಪಟ್ಟ ಅಧಿಕಾರಿಗಳೇ ಅದರ ಪೂರ್ಣ ಜವಾಬ್ದಾರಿಯನ್ನು ಹೊರಲೇಬೇಕಾಗಿದೆ.

16 ಮಂದಿ ಜಾಯಿಂಟ್ ರಿಜಸ್ಟ್ರಾರ ಇದ್ದಾರೆ, ಪ್ರತಿಯೊಂದು ಜಿಲ್ಲೆಗೂ ಡೆಪ್ಯುಟಿ ರಿಜಸ್ಟ್ರಾರ್ ಇದ್ದಾರೆ ಎಂದು ಅನೇಕ ಸದಸ್ಯರು ಹೇಳಿದರು. ಮಂಡ್ಯ ಜಿಲ್ಲೆಯಲ್ಲಿ ಇಬ್ಬರು ಅಸಿಸ್ಟೆಂಟ್ ರಿಜಸ್ಟ್ರಾರ್ ಇದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಬ್ಯಾಂಕ್ ಸಿಬ್ಬಂದಿ ಇದೆ, ಎಕ್ಸ್‌ಟೆನ್‌ಷನ್ ಸಿಬ್ಬಂದಿ ಇದೆ. ಇಷ್ಟೆಲ್ಲ ಇದ್ದರೂ ಕೂಡ ಅನ್ಯಾಯವಾಗುತ್ತ ಇರಬೇಕಾದರೆ, ಅದಕ್ಕೆ ಕಾರಣವೇನು ಎಂದು ನೋಡಬೇಕು. ಯಾವುದೇ ಅಧಿಕಾರಿಯ ಪ್ರೋಗ್ರಾಂ ನೋಡಿದರೂ ಇಂಥಿಂಥ ಸೊಸೈಟಿಗೆ ಭೇಟಿ ಕೊಡುತ್ತೇವೆಂದು ಹಾಕಿರುತ್ತಾರೆ. ಅವರು ಭೇಟಿ ಕೊಟ್ಟದ್ದಕ್ಕೆ ಗುರುತು ಏನು? ಅವರು ಸೊಸೈಟಿಯನ್ನು ಇನ್‌ಸ್ಪೆಕ್ಟ್ ಮಾಡಿದ್ದಾರೆಯೇ ಸುಮ್ಮನೆ ಭೇಟಿ ಕೊಡುವುದರಿಂದ ಪ್ರಯೋಜನವೇನು? ಸೊಸೈಟಿಗಳಿಗೆ ಭೇಟಿ ಕೊಡುವುದಕ್ಕಾಗಿ ಅಧಿಕಾರಿಗಳನ್ನು ನೇಮಿಸಬೇಕಾಗಿಲ್ಲ, ಅದಕ್ಕಾಗಿ ಇಷ್ಟೊಂದು ಹಣವನ್ನು ಖರ್ಚು ಮಾಡಬೇಕಾಗಿಲ್ಲ. ಒಬ್ಬ ಅಧಿಕಾರಿ ಒಂದು ದಿವಸಕ್ಕೆ ಎರಡು ಸೊಸೈಟಿಗಳನ್ನು, ಅಥವಾ ಒಂದೇ ಸೊಸೈಟಿಯನ್ನು ನೋಡಲಿ. ಆಮೂಲಾಗ್ರವಾಗಿ ಪ್ರತಿಯೊಂದು ಲೆಕ್ಕಪತ್ರಗಳನ್ನೂ ಚೆಕ್ಕ ಮಾಡಬೇಕು, ಸ್ಟಾಕ ಚೆಕ್ ಮಾಡಬೇಕು. ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಎಲ್ಲಾ ವಿಶ್ವವಿದ್ಯಾನಿಲಯದ ಪದವೀಧರರು ಸೊಸೈಟಿಗಳನ್ನು ನಡೆಸುತ್ತಿದ್ದಾರೆ ಅಲ್ಲಿ ಅನ್ಯಾಯವಾಗುತ್ತಿರುವಷ್ಟು ರೈತಾಪಿ ಜನ ಸೊಸೈಟಿಗಳನ್ನು ನಡೆಸುತ್ತಿರುವ ಕಡೆ ಆಗುತ್ತಿಲ್ಲ. ಎಲ್ಲಿ ಅಧಿಕಾರಿಗಳು ಹೆಚ್ಚಿಗೆ ಸೊಸೈಟಿಗಳಿಗೆ ಭೇಟಿ ಕೊಡುತ್ತಿರುತ್ತಾರೆ ಅಲ್ಲಿ ಆಗುವಷ್ಟು ಅನ್ಯಾಯ ಅವರು ಭೇಟಿ ಕೊಡದೆ ಇರುವ ಕಡೆ ಆಗುವುದಿಲ್ಲ. ಎರಡೆರಡು ಕ್ಯಾಷ ಪುಸ್ತಕಗಳಿರುವ ಸೊಸೈಟಿಗಳು ನಮ್ಮಲ್ಲುಂಟು, ಎರಡೆರಡು ಸ್ಟಾಕ್ ಪುಸ್ತಕ

ಗಳಿರುವ ಸೊಸೈಟಿಗಳೂ ಇವೆ. ರಸೀತಿ ಪುಸ್ತಕಗಳನ್ನು ಕೂಡ ಹಾಗೆಯೇ ಇಟ್ಟಿದ್ದಾರೆ. ಕೆಲವು ಕಡೆ ಸೊಸೈಟಿಯ ರಿಕಾರ್ಡ್‌ಗಳನ್ನು ನೋಡಲು ಹೋದಾಗ ರಿಕಾರ್ಡ್‌ಗಳನ್ನು ತೋರಿಸುವುದಿಲ್ಲ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿರುವ ಸೊಸೈಟಿಗಳ ಮೇಲೆ ಕೂಡ ಕ್ರಮ ತೆಗೆದುಕೊಂಡಿಲ್ಲ. ಇಷ್ಟೆಲ್ಲ ಅನ್ಯಾಯವಾಗುತ್ತಿದ್ದರೂ ಕೂಡ ಸರ್ಕಾರಿ ಅಧಿಕಾರಿಗಳು ಏತಕ್ಕಾಗಿ ನಿಷ್ಪಕ್ಷಪಾತವಾಗಿ, ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಆಡಳಿತವನ್ನು ನಿರ್ವಹಿಸುತ್ತಿಲ್ಲ! ಇಂಥ ಅಧಿಕಾರಿಗಳಿಗೆ ಇಷ್ಟೊಂದು ಖರ್ಚನ್ನು ಏಕೆ ಮಾಡಬೇಕು ಎನ್ನುವ ಅನುಮಾನಕ್ಕೆ ಆಸ್ಪದವಾಗಿದೆ. ಇದನ್ನು ದೂರ ಮಾಡಬೇಕು. ಆದುದರಿಂದ ಸಹಕಾರ ಸಂಘಗಳು ಪೂರ್ಣವಾಗಿ, ಚೆನ್ನಾಗಿ ನಡೆಯ ಬೇಕಾದರೆ ಆಡಿಟ್ ವ್ಯವಸ್ಥೆ ಸರಿಯಾಗಿರಬೇಕು. ಈಗ ಮಾಡುವ ಆಡಿಟನಲ್ಲಿ ಲೋಪದೋಷಗಳಿವೆ. ಕೆಲವು ಕಡೆ ಆಡಿಟರುಗಳು ಸೊಸೈಟಿಗಳಲ್ಲಿ ಏನಾದರೂ ದುರುಪಯೋಗವಾಗಿದ್ದರೆ ಅದನ್ನು ಸರಿ ಮಾಡುವುದಕ್ಕೋಸ್ಕರ ಬೇರೆ ಸ್ಟಾಕ್ ಬರೆಸಿ ಜೂನ್ ಅಖೈರಿನಲ್ಲಿ 20 ಸಾವಿರ ರೂಪಾಯಿ ಸ್ಟಾಕ್ ಇದೆ ಎಂದು ತೋರಿಸಿ ಲೆಕ್ಕಪತ್ರ ಸರಿಪಡಿಸಿ, ಆಡಿಟನಲ್ಲಿ ಸರಿಯಾಗಿದೆ ಎಂದು ವರದಿ ಕೊಟ್ಟಿರುವುದೂ ಉಂಟು. ಕೆಲವು ಕಡೆ ಬಿ.ಡಿ.ಓ. ಸಬ್ ಅಸಿಸ್ಟೆಂಟ್ ರಿಜಿಸ್ಟ್ರಾರ ಆಗಿದ್ದಾರೆ ಅವರನ್ನು ತಕ್ಷಣ ಕಳುಹಿಸಿ ಜುಲೈ ಒಂದನೇ ತಾರೀಖು ಇನ್‌ಸ್ಪೆಕ್ಷ್ ಮಾಡಿಸಿ ನೋಡಿದಾಗ ಒಂದು ಕಾಸಿನ ಸ್ಟಾಕೂ ಇರಲಿಲ್ಲ. ಇಂಥಹ ಆಡಿಟರುಗಳ ಮೇಲೆ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ಹಿಗಾದರೆ ಆಡಿಟರು ಗಳು ಏಕೆ ಇರಬೇಕು ಎಂದು ಪ್ರಶ್ನೆ ಮಾಡಬೇಕಾಗಿದೆ. ನಾನು ಸರ್ಕಾರಕ್ಕೆ ಮತ್ತು ಇಲಾಖೆಯ ವರಿಗೆ ಬರವಣಿಗೆಯಲ್ಲಿ ಏನೇನು ಬರೆದಿದ್ದೇನೆ, ಯಾವುದರ ಬಗ್ಗೆ ಅವರು ಕ್ರಮ ತೆಗೆದುಕೊಂಡಿಲ್ಲ ಅಂಥ ವಿಚಾರಗಳನ್ನು ಮಾತ್ರ ಈ ಸಭೆಯಲ್ಲಿ ಹೇಳುತ್ತಿದ್ದೇನೆ.

ಪ್ರತಿ ವರ್ಷ ಸರ್ವ ಸದಸ್ಯರ ಸಭೆ ಮಾಡಬೇಕು. ಬರೀ ಡೈರೆಕ್ಟರುಗಳ ಚುನಾವಣೆ ಗೋಸ್ಕರ ಸಭೆಯನ್ನು ಕರೆಯಬೇಕೇ ಅಥವಾ ಆಡಳಿತಕ್ಕೆ ಸಂಬಂಧಪಟ್ಟ ಲೆಕಪತ್ರಗಳನ್ನು ವಿಮರ್ಶೆ ಮಾಡುವುದಕ್ಕೆ ಜನರಲ್ ಬಾಡಿ ಮೀಟಿಂಗ್ ಕರೆಯಬೇಕೇ! ಲೆಕ್ಕ ಪತ್ರಗಳ ಆಡಿಟ್ ಮಾಡದೆ ಇದ್ದರೂ ಚಿಂತೆ ಇಲ್ಲ, ಜನರಲ್ ಬಾಡಿ ಮೀಟಿಂಗ್ ಮಾಡುತ್ತೇವೆಂದು ಹೇಳುತ್ತಾರೆ. ಇದು ತಪ್ಪು. ಆಡಿಟ್ ಇಲಾಖೆಗೆ ಏನು ಖರ್ಚಾಗುತ್ತದೆ ಅದಕ್ಕೆ ಎರಡರಷ್ಟು ಬೇಕಾದರೆ ಖರ್ಚು ಮಾಡಿ. ಆಡಿಟ್ ಮಾಡುವುದಕ್ಕೆ ಒಂದಕ್ಕೆ ಎರಡರಷ್ಟು ಬೇಕಾದರೆ ತೆಗೆದುಕೊಳ್ಳಿ. ಆದರೆ ವರ್ಷಕ್ಕೆ ಒಮ್ಮೆ ಆಡಿಟ್ ಆಗಲೇಬೇಕು, ಆಡಿಟ್ ಆದ ನಂತರ ಉನ್ನತಾಧಿಕಾರಿಗಳು ಹೋಗಿ ಆಡಿಟ್ ಆಗಿರತಕ್ಕದ್ದು ಸರಿ ಯಾಗಿದೆಯೇ ಎನ್ನುವ ವಿಚಾರವನ್ನು ನೋಡುತ್ತ ಬಂದರೆ ನಮ್ಮ ಸಹಕಾರ ಸಂಘಗಳು ಚೆನ್ನಾಗಿ ಕೆಲಸ ಮಾಡುತ್ತವೆ, ರೈತರಿಗೂ ಅದರಿಂದ ಅನುಕೂಲವಾಗುತ್ತದೆಂದು ಹೇಳಿ, ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಬಿ. ದೊಡ್ಡಬೋರೇಗೌಡ (ಶ್ರೀರಂಗಪಟ್ಟಣ).—ಮಾನ್ಯ ಸಭಾಪತಿಗಳೇ, ಈ ದಿವಸ ಮಂಡಿಸಿರುವ ಸಹಕಾರ ಮತ್ತು ಅಭಿವೃದ್ಧಿ ಶಾಖೆಯ ಬೇಡಿಕೆಗಳನ್ನು ವಿರೋಧಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಮೂಲಕ ಸರಕಾರದ ಗಮನಕ್ಕೆ ತರುತ್ತೇನೆ. ಸಹಕಾರ ಸಂಘಗಳಿಂದ ದೇಶದ ಅಭ್ಯುದಯ ಸಾಧನೆಯಾಗುತ್ತದೆ ಎಂದು ತಿಳಿದು ಸರಕಾರದವರು ಇದಕ್ಕೆ ಮಾನ್ಯತೆಯನ್ನು ಕೊಟ್ಟರು. ಆದರೆ ಅದಕ್ಕೆ ತದ್ವಿರುದ್ಧವಾಗಿ ಈ ದಿವಸ ಆಗುತ್ತಿದೆ, ಈ ಸಂಘಗಳಲ್ಲಿ ಇಂದು ಭ್ರಷ್ಟಾ ಚಾರ ಹೆಚ್ಚಾಗಿದೆ. ಇದು ಅಸ್ತಮಾ ಕಾಯಿಲೆಯ ಹಾಗೆ ಬೇರೂರಿದೆ. ಅಸ್ತಮಾ ಕಾಯಿಲೆಗೆ ಯಾವ ಚಿಕಿತ್ಸೆ ಮಾಡಿದರೂ ಹೇಗೆ ಗುಣವಾಗುವುದಿಲ್ಲವೋ ಹಾಗೆ ಭ್ರಷ್ಟಾಚಾರವನ್ನು ಸಹಕಾರ ಸಂಘಗಳಿಂದ ತೊಲಗಿಸುವುದಕ್ಕಾಗುವುದಿಲ್ಲ ಶ್ರೀ ನಾಡಗೌಡರಂಥ ದಕ್ಷರಾದ ಮಂತ್ರಿಗಳಿಂದಲೂ ಕೂಡ ಅದನ್ನು ತೊಲಗಿಸಲು ಸಾಧ್ಯವಾಗುವಂತೆ ಕಾಣುವುದಿಲ್ಲ. ಇದರಿಂದ ದುಷ್ಪರಿಣಾಮ ವೇನಾಗಿದೆ ಎಂಬುದನ್ನು ಸರಕಾರದವರೂ ಮತ್ತು ಸದಸ್ಯರೂ ನೋಡಿರಬಹುದು. ಕೆಂಗೇರಿ ಕೆರೆಯಲ್ಲಿ ಒಂದು ತರಹ ಸೊಪ್ಪು ಬೆಳೆದಿದೆ. ಇದು ನೋಡುವುದಕ್ಕೆ ಪಾರ್ಕು ಇದ್ದಹಾಗೆ ಇದೆ. ಅದರಮೇಲೆ ಯಾರಾದರೂ ತಿಳಿಯದವರು ಕಾಲಿಟ್ಟರೆ ಮುಳುಗಿಹೋಗುತ್ತಾರೆ. ಸಹಕಾರ ಸಂಘಗಳೂ ಕೂಡ ಅದೇ ರೀತಿಯಲ್ಲಿವೆ. ಅವು ನೋಡುವುದಕ್ಕೇನೋ ಚೆನ್ನಾಗಿವೆ. ಆದರೆ ಒಳಗಡೆ ಆಡಳಿತ ಚೆನ್ನಾಗಿಲ್ಲ. ರೈತರ ಹೆಸರಿನಲ್ಲಿ ಸೇಕಡ 81 ಜನರ ಉದ್ಧಾರಕ್ಕಾಗಿ, ಶ್ರೇಯಸ್ಸಿ ಗಾಗಿ, ಅಭ್ಯುದಯಕ್ಕಾಗಿ ಸ್ಥಾಪಿಸಲ್ಪಟ್ಟ ಸಹಕಾರ ಸಂಘಗಳು ರೈತರ ಮಾರಣಹೋಮ ಮಾಡಿವೆ. ರಾಸಾಯನಿಕ ಗೊಬ್ಬರವಾಗಲೀ, ಆಹಾರಧಾನ್ಯ ಜಿಂಕ್‌ಶೀಟು, ಸಿಮೆಂಟು, ಸ್ಟೀಲ್ ಸಾಮಾನು ಮುಂತಾದುವು ಯಾವುದೇ ಆಗಲಿ ರೈತರಿಗೆ ನೇರವಾಗಿ ನಿಯಂತ್ರಿತ ದರದಲ್ಲಿ ಮಾರ ಲ್ಪಟ್ಟಿಲ್ಲ ಸರಕಾರದಿಂದ ನಿಯಂತ್ರಣವಾದ ಪದಾರ್ಥಗಳಲ್ಲಿ ಸೇಕಡ 25 ಭಾಗ ಮಾತ್ರ ಮಾರಾಟ ವಾಗುವುದು, ಉಳಿದ ಭಾಗ ಹಿಂದಿನ ಬಾಗಿಲಿನಿಂದ ಮಾರಾಟವಾಗಿ ಬೇಕಾದವರಿಗೆ ಸಂಪಾದನೆ ಯಾಗಿದೆ. ಈ ಎಲ್ಲಾ ಕಾರಣಗಳಿಂದ ಇಂದು ಸಹಕಾರ ಸಂಘಗಳಿಂದ ನಿಜವಾಗಿಯೂ ಜನರ

(ಶ್ರೀ ಬಿ. ದೊಡ್ಡಬೋರೇಗೌಡ)

ಅಭ್ಯುದಯ ಸಾಧನೆಯಾಗುತ್ತದೆಂಬುದು ಕನಸಾಗಿದೆ; ಗಾಳಿ ಗೋಪುರವಾಗಿದೆ. ಆದುದರಿಂದ ಸರಕಾರದವರು ಈಗಲೇ ಎಚ್ಚರಿಕೆ ವಹಿಸಿ ಸಹಕಾರ ಸಂಘಗಳಲ್ಲಿ ಅನ್ಯಾಯ ಬೆಳೆಯುತ್ತಿದೆಯೆಂಬುದನ್ನು ಮನಗಂಡು ದುರಾಡಳಿತ ನಡೆಸುತ್ತಿರುವ ಸಂಘಗಳನ್ನು ಕಡ್ಡಾಯವಾಗಿ ರದ್ದುಮಾಡಬೇಕು, ಇಲ್ಲದಿದ್ದರೆ ನೇರವಾಗಿ ಸರಕಾರದವರೇ ನಡೆಸುವುದು ಯೋಗ್ಯವಾದುದು. ಯಾವ ಜಿಲ್ಲೆಯಲ್ಲಿ ನೋಡಿದರೂ ಸಹಕಾರ ಸಂಘಗಳಲ್ಲಿ ಸೇಕಡ 75ರಷ್ಟು ಹಣವಿಲ್ಲ, ಆಡಿಟ್ ಮಾಡಿಲ್ಲ, ಮಾಡಿದ್ದರೆ ಪೂರ್ಣ ವರದಿ ಸರಕಾರಕ್ಕೆ ಕಳಿಸಿಲ್ಲ. ಸರಿಯಾಗಿ ವ್ಯವಹಾರ ನಡೆಯದಿರುವ ಸೊಸೈಟಿಗಳಲ್ಲಿ ತಮಗೆ ಬೇಕಾದವರು ಬರಲು ತೊಂದರೆಯಾದ ಕಾಲದಲ್ಲಿ ಚುನಾವಣೆಯನ್ನು ತಡೆಹಿಡಿಯಬೇಕೆಂದು ಮಂತ್ರಿಗಳಿಂದ ಆರ್ಡರು ಮಾಡಿಸುತ್ತಾರೆ. ಸಾಮಾನ್ಯ ಜನರ, ರೈತರ ಶ್ರೇಯಸ್ಸಿಗಾಗಿ ಸ್ಥಾಪಿಸಲ್ಪಟ್ಟ ಸೊಸೈಟಿಗಳು ಸರಿಯಾಗಿ ಕೆಲಸಮಾಡದಿದ್ದರೆ ಅವನ್ನು ಮುಚ್ಚುವುದು ಒಳ್ಳೆಯದು. ಕೆಲವಂತೂ ಮಹಾ ಪಾಪಕರವಾದ ಕೆಲಸ ಮಾಡುತ್ತಿವೆ ಎಂದು ವ್ಯಸನದಿಂದ ಹೇಳಬೇಕಾಗಿದೆ.

ಭೂ ಅಭಿವೃದ್ಧಿ ಬ್ಯಾಂಕುಗಳನ್ನು ಮಾಡಿದ್ದಾರೆ. ಅದಕ್ಕೆ ನನ್ನ ಕ್ಷೇತ್ರದಿಂದ 5 ವರ್ಷಗಳಿಂದ ರಿಕಾರ್ಡ್ ಆಗಿ ಬಿಲ್ಲಪ್ ಆಗಿದ್ದರೂ ಹಣ ಕೊಡಬೇಕಾದರೆ ಕಷ್ಟವಾಗಿದೆ, ಬೇಕಾದವರಿಗೆ ಬೇಗಕೊಡುತ್ತಾರೆ. ಈ ರೈತರು 7-8 ಸಾರಿ ಹೋಗಿ ನಾಲ್ಕೈದು ಜನರು ಹೇಳಿದಮೇಲೆ ಸುಮಾರು ಸಾವಿರಕ್ಕೆ 100 ರೂಪಾಯಿ ಕೊಟ್ಟರೆ 5 ಸಾವಿರ ರೂಪಾಯಿ ಸಾಲ ಸಿಕ್ಕುವುದೆಂದು ಹೇಳಿದರೆಂದು ಕೇಳಿದ್ದೇನೆ. ಶ್ರೀರಂಗಪಟ್ಟಣ ತಾಲ್ಲೂಕಿನಿಂದ ಸಣ್ಣಮ್ಮ ಎಂಬ ಹೆಂಗಸು 6 ಸಾವಿರ ರೂಪಾಯಿಗಳನ್ನು ಬಾವಿಗಾಗಿ ಖರ್ಚುಮಾಡಿರುವಾಗ ಕೇವಲ 1,100 ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ಅಷ್ಟು ಪಡೆಯಲು 500 ರೂಪಾಯಿ ಅಧಿಕಾರಿಗಳಿಗೆ ಕೊಟ್ಟಿದ್ದಾರೆ. ಈ ರೀತಿಯಾದರೆ ಯಾವುದೇ ಬ್ಯಾಂಕನ್ನು ಮಾಡಿದರೂ ರೈತರು ಉದ್ಧಾರವಾಗುವುದಿಲ್ಲ. ಈ ಬಾವಿಯನ್ನು ಸಚಿವರು ಹೋಗಿ ನೋಡಬಹುದು, ಅದಕ್ಕೆ 6 ಸಾವಿರ ರೂಪಾಯಿ ಅಂದಾಜಾಗಿದೆ, ಇಂಜನಿಯರು ನೋಡಬಹುದು, ಆದರೆ ಹೆಚ್ಚು ಹಣ ಕೊಟ್ಟಿಲ್ಲ. ಇದು ಹೇಯವಾದುದು, ಇದನ್ನು ನೋಡಿದರೆ ನಮ್ಮಲ್ಲಿ ಪ್ರಜಾಪ್ರಭುತ್ವವಿಲ್ಲ, ಸೋಷಿಯಲಿಸ್ಟ್ ಪ್ಯಾಟರ್ನ್ ಇಲ್ಲ ಎಂದು ಹೇಳಬಹುದು.

ತಾಲ್ಲೂಕು ಬೋರ್ಡು ಸ್ಥಾಪನೆಯಾಗಿ 9 ವರ್ಷವಾಯಿತು, ಅದು ಜನರ ಪ್ರೀತಿ ವಿಶ್ವಾಸವನ್ನು ಕಳೆದುಕೊಂಡಿದೆ. ಈ ತಾಲ್ಲೂಕು ಬೋರ್ಡುಗಳು ನಿಮಗೆ ಬೇಕಾದವರಿಗೆ ಅವಕಾಶ ಕೊಡಲು ರಚನೆಯಾಗಿದೆ. ಈಗಲಾದರೂ ದಿಟ್ಟ ಹೆಜ್ಜೆಯನ್ನಿಟ್ಟು ತಾಲ್ಲೂಕು ಬೋರ್ಡನ್ನು ರದ್ದುಮಾಡಿ.

ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಕಂಪೆನಿ ಸದಸ್ಯರಲ್ಲದ ರೈತರು ಕಬ್ಬು ಸರಬರಾಜು ಮಾಡಿದಾಗ 10 ಲಕ್ಷ ರೂಪಾಯಿಯನ್ನು ಎಫ್.ಆರ್.ಡಿ. ಫಂಡ್ ಎಂಬುದಾಗಿ ಹಿಡಿದಿದ್ದಾರೆ. ಆ 10 ಲಕ್ಷ ರೂಪಾಯಿಗಳನ್ನು ಷೇರುಗಳಾಗಿ ಪರಿವರ್ತನೆ ಮಾಡದಿರುವುದು ಸರಿಯಲ್ಲ ಎಂದು ಆಡಿಟರು ಅವರ ರಿಪೋರ್ಟಿನಲ್ಲಿ ಹೇಳಿದರೆ, ಆಡಿಟರಿಗೆ ತಲೆಯಿಲ್ಲ ಎಂದ ಛೇರ್ಮನ್ನರು ಬರೆದಿದ್ದಾರೆ. ಆಡಿಟರಿಗೆ ತಲೆಯಿಲ್ಲವೋ ಅಥವಾ ಛೇರ್ಮನ್ನರಿಗೆ ತಲೆಯಿಲ್ಲವೋ ವಿಚಾರಮಾಡಬೇಕು. 10 ಲಕ್ಷ ರೂಪಾಯಿಗಳನ್ನು ರೈತರಿಗಾದರೂ ವಾಪಸು ಕೊಡಬೇಕು. ಇಲ್ಲದಿದ್ದರೆ ಷೇರುಗಳಾಗಿ ಪರಿವರ್ತನೆ ಮಾಡಬೇಕು.

ಮಂಡ್ಯದ ಹೋಲ್‌ಸೇಲ್ ಸೊಸೈಟಿಯಲ್ಲಿ ಸುಮಾರು ಒಂದು ವರ್ಷದಿಂದ 1 ಲಕ್ಷ 70 ಸಾವಿರ ರೂಪಾಯಿ ನಷ್ಟವಾಗಿದೆ, ಅಧಿಕಾರಿಗಳು ಮಾಡುವ ಅಭಿವೃದ್ಧಿ ಕೆಲಸವಿದು. ಹೀಗಾದರೆ ಜನರಿಗೆ ನ್ಯಾಯ ಹೇಗೆ ಸಿಕ್ಕುವುದು ? ಇದರ ಬಗ್ಗೆ ಇನ್ನೂ ವರದಿ ತರಿಸುವುದಕ್ಕಾಗಿಲ್ಲ. 3 ತಿಂಗಳ ಹಿಂದೆ ಒಂದು ಪ್ರಶ್ನೆ ಕಳಿಸಿದರೆ ಇನ್ನೂ ಅದಕ್ಕೆ ಉತ್ತರ ಬಂದಿಲ್ಲ. ಸೆಕ್ರೆಟರಿಗಳಿಗೆ 4 ಕಾಗದ ಬರೆದೆ, ಲಾ ಸಚಿವರಿಗೆ ಕಾಗದ ಬರೆದೆ, 15-20 ಪ್ರಶ್ನೆ ಹಾಕಿದೆ, ಯಾವುದಕ್ಕೂ ಉತ್ತರವಿಲ್ಲ. ದೇಶದಲ್ಲಿರುವ ಸಹಕಾರ ಸಂಘಗಳು ಹೀಗೆ ಸಾಮಾನ್ಯ ಜನರಿಗೆ ಸಹಾಯಮಾಡುತ್ತಲಿವೆ. 2-3 ಲಕ್ಷ ಅನ್ಯಾಯವಾದರೆ ಜನರಿಗೇನು ಅನುಕೂಲವಾದೀತು ? ಈಗಲಾದರೂ ಈ ಸಂಬಂಧದಲ್ಲಿ ಸರಿಯಾದ ನಿಲುವು ತಾಳಿ, ಅಧಿಕಾರವು ಶಾಶ್ವತವಲ್ಲ. ನೀವು ಮಾಡಿರುವುದನ್ನು ಚರಿತ್ರೆಯಲ್ಲಿ ಬರೆಯುವರು, ಪ್ರತಿಯೊಬ್ಬ ಮನುಷ್ಯನ ನಾಲಿಗೆಯಲ್ಲೂ ಅದು ಕೆತ್ತಲ್ಪಟ್ಟಿರುತ್ತದೆ, ನೀವು ಆಡಳಿತ ನಡೆಸಿರುವ ರೀತಿ ಸಹಕಾರಿ ಸಂಘಗಳಲ್ಲಿ ಅನ್ಯಾಯವಾಗಿರುವುದು ಪ್ರತಿಯೊಬ್ಬ ಮಾನವನ ಹೃದಯದಲ್ಲೂ, ರಕ್ತನಾಳದಲ್ಲೂ ಬೆಳೆಯಲ್ಪಟ್ಟಿರುತ್ತದೆ. ಇನ್ನುಮುಂದಾದರೂ ಅನ್ಯಾಯವಾಗುವುದನ್ನು ತಡೆಗಟ್ಟಬೇಕು.

ಇನ್ನು ಸಹಕಾರ ಸಂಘಗಳಿಗೆ ಕೊಡುವ ಬಡ್ಡಿ. ರಿಸರ್ವ್ ಬ್ಯಾಂಕಿನಿಂದ ಸಾಲ ತರುವರು. ಆ ಬ್ಯಾಂಕಿನವರು ಸೇಕಡ ನಾಲ್ಕೂಕಾಲು ಬಡ್ಡಿ ವಿಧಿಸುವರು, ಹಾಗೆ ವಿಧಿಸಿ ಅವರು ಅಪೆಕ್ಸ್ ಬ್ಯಾಂಕಿಗೆ ಕೊಟ್ಟಮೇಲೆ ಅಪೆಕ್ಸ್ ಬ್ಯಾಂಕು ಅದರ ಮೇಲೆ ಸೇಕಡ 2 ಬಡ್ಡಿ ಹಾಕುವುದು, ನಂತರ ಡಿ.ಸಿ.ಸಿ. ಬ್ಯಾಂಕು ಸೇಕಡ 2 ರಂತೆ ಬಡ್ಡಿ ಹಾಕಿ ಗ್ರಾಮಾಂತರದ ಸೊಸೈಟಿಗಳಿಗೆ ಕೊಡುವುದು, ಆಮೇಲೆ ಸೊಸೈಟಿ ಸೇಕಡ ಮೂರೂಕಾಲು ಹಾಕುವುದು. ಈ ರೀತಿ ಇಷ್ಟು ಬಡ್ಡಿ ಹಾಕುವುದು ಸರಿಯಲ್ಲ. ಈಗ ಬಡ್ಡಿ ಬೆಳೆಸುತ್ತಿದ್ದಾರೆ. ಹೀಗಾದರೆ ಯಾವ ರೈತರು ತಾನೆ ಉದ್ಧಾರವಾದಾರು ? ಎಲ್ಲಾ ಬ್ಯಾಂಕುಗಳು ಸಹ ದಳ್ಳಾಳಿಗಳಾಗಿ ಎಲ್ಲಾ ಕಡೆಯೂ ಕಮಿಷನ್ ಪಡೆಯುತ್ತಿದೆ. ಈ ರೀತಿ ಆಡಳಿತ ನಡೆಯುತ್ತಿದೆ. ರೈತರಿಗೆ ಸಹಾಯವಾಗಬೇಕಾದರೆ ಅವರಿಗೆ ಕೊಡುವ ಸಾಲವನ್ನು ಕಡಮೆ ಬಡ್ಡಿ ದರದಲ್ಲಿ ಕೊಡಬೇಕು. ರೈತರಿಂದ ದೇಶ ಕಟ್ಟಬೇಕಾದರೆ ಕಡಮೆ ಬಡ್ಡಿ ದರದಲ್ಲಿ ಈಗಲಾದರೂ ಅವರಿಗೆ ಸಾಲ ಕೊಟ್ಟು ಅವರಿಗಾಗಿರುವ ಅನ್ಯಾಯವನ್ನು ತಡೆಗಟ್ಟಬೇಕು ಎಂದು ತಿಳಿಸಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ.

ಚೇರ್ಮನ್‌ರವರು.—ಮಾನ್ಯ ಮಂತ್ರಿಗಳು 7 ಗಂಟೆಗೆ ರಿಪ್ಲೈ ಕೊಡುವುದಕ್ಕೆ ಶುರು ಮಾಡುತ್ತಾರೆ. ಆದಕಾರಣ ಭಾಷಣಕಾರರು ಐದೈದು ನಿಮಿಷ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀಮತಿ ನಾಗಮ್ಮ (ಕಲ್ಮಲ).—ಮಾನ್ಯ ಅಧ್ಯಕ್ಷರೇ ಈ ಕೋ-ಅಪರೇಟೀವ್ ಮತ್ತು ಪಂಚಾಯ್ತಿ, ರಾಜ್ಯದ ಡಿಮ್ಯಾಂಡ್‌ಮೇಲೆ ಒಂದೆರಡು ಮಾತುಗಳನ್ನು ಆಡಬೇಕೆಂದು ಬಯಸುತ್ತೇನೆ. ಈಗಾಗಲೇ ಸಾಕಾದಷ್ಟು ಜನರು ಮಾತನಾಡಿದ್ದಾರೆ. ಕೆಲವು ಮಾನ್ಯ ಸದಸ್ಯರು ಈ ಸಹಕಾರ ಸಂಘಗಳನ್ನು ಮುಚ್ಚಬೇಕು, ಹಾಗೆ ಹೀಗೆ ಅಂತ ಹೇಳಿ ಮಾತನಾಡಿದ್ದಾರೆ. ನಮ್ಮ ಮೈಸೂರು ದೇಶ ಬಹಳ ಬಡತನದ ದೇಶ ಅಂತ ಹೇಳಿ ನಮ್ಮ ಸರ್ಕಾರದವರು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅದರ ಮೂಲಕ ಎಲ್ಲಾ ಸೌಲತ್ತು ಆಗಿ ನಮ್ಮ ದೇಶ ಚೆನ್ನಾಗಿ ಆಗಲಿ ಅಂತ ಹೇಳಿ ಬೇಕಾದಷ್ಟು ಹಣವನ್ನು ಖರ್ಚು ಮಾಡಿದ್ದಾರೆ. ಇಷ್ಟಾದರೂ ಕೂಡ ನಮ್ಮ ಜನರಲ್ಲಿ, ಸರ್ಕಾರವನ್ನು ಬೈಯುವುದು ಆಫೀಸರುಗಳನ್ನು ಬೈಯುವುದು ಇವೆಲ್ಲಾ ನಮ್ಮಲ್ಲಿ ಇದೆ. ಇದನ್ನು ನಾವು ಸರಿಯಾಗಿ ತಿಳಿದುಕೊಂಡು ಮಾತನಾಡಬೇಕು. ಈ ಸಹಕಾರ ಸಂಘಗಳಿಂದಲೇ ನಾವು ಉದ್ಧಾರವಾಗಬೇಕಾಗಿದೆ. ಇದರಿಂದಲೇ ನಮ್ಮ ದೇಶದ ಅಭಿವೃದ್ಧಿಯಾಗಬೇಕಾಗಿದೆ. ಅದರ ಸಲುವಾಗಿಯೇ ನಮ್ಮ ಸರ್ಕಾರದವರು ಎಲ್ಲಾ ಸೌಲಭ್ಯಗಳನ್ನೂ ಒದಗಿಸುತ್ತಾ ಇದ್ದಾರೆ. ಇದನ್ನು ನಾವು ಚೆನ್ನಾಗಿ ತಿಳಿದುಕೊಂಡು ಬುದ್ಧಿವಂತರಾಗಿ ಮಾತನಾಡಬೇಕು. ಇದನ್ನು ನಾವು ಮೊದಲು ತಿಳಿದುಕೊಂಡು ಮುಂದೆ ಹೋಗಬೇಕು. ಸಹಕಾರ ಸಂಘಗಳಿಗೆ ಸರ್ಕಾರದವರು ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ ಇದರಿಂದ ನಮ್ಮ ಸೌಲತ್ತು ಆಗಬೇಕು ನಮ್ಮ ಜನಗಳು ಮುಂದೆ ಬರಬೇಕೆಂದು ಕೊಟ್ಟಿದ್ದಾರೆ. ಇದನ್ನು ಹಿಂದಕ್ಕೆ ಹಾಕುವವರೆಲ್ಲಾ ನಾವೇ, ಭಾಷಣ ಮಾಡುವವರು, ಇದನ್ನು ಒಪ್ಪಿಕೊಂಡಿರುತ್ತೇವೆ. ಸಣ್ಣ ಸಣ್ಣ ಹಳ್ಳಿಗಳಲ್ಲಿ ಕೋ-ಅಪರೇಷನ್ ಆಗಬೇಕು, ಹಳ್ಳಿಗಳಿಗೆ ಹೋಗಿ ಅಧಿಕಾರಿಗಳು ತಿಳಿಸಬೇಕು ಎಂಬುದನ್ನು ನಾನು ಒಪ್ಪುತ್ತೇನೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ಇದ್ದಾರೆ, ಅವರಿಗೆ ಒಂದು ಜೀಪಾಗಲಿ, ಕಾರಾಗಲೀ, ಯಾವುದೂ ಇಲ್ಲ, ಅವರು ಯಾವುದಾದರೂ ಒಂದು ದಿಕ್ಕಿಗೆ ಹೋಗಬೇಕೆಂದರೆ ಬಸ್ಸುಗಳಿಗೆ ಕಾಯಬೇಕು. ಅವರು ಈ ರೀತಿ ಕೆಲಸ ಮಾಡಬೇಕೆಂದರೆ ಹಳ್ಳಿಗಳಲ್ಲಿ ಕೋ-ಆಪರೇಷನ್ ಆಗುವುದಿಲ್ಲ. ಆದ್ದರಿಂದ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಒಂದು ಜೀಪು ಕೊಟ್ಟು ಅವರು ಚೆನ್ನಾಗಿ ಕೆಲಸ ಮಾಡುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಆ ರೀತಿ ಮಾಡಿದರೆ ಹಳ್ಳಿಗಳ ಉದ್ಧಾರವಾಗುತ್ತದೆ. ದೊಡ್ಡ ದೊಡ್ಡ ಲೀಡರ್‌ಗಳು, ಮೆಂಬರುಗಳು ಮುಂದೆ ಬಂದು ಸೊಸೈಟಿಗಳಲ್ಲಿ ಹಣವನ್ನು ತಿಂದು ಹಾಕಿ ಅಲ್ಲಿ ಇಲ್ಲ, ಹೆಗ್ಗಣಗಳಾಗಿರುತ್ತಾರೆ, ಅಂತ ಹೇಳಿ ಏನು ಬುಸು ಬುಸು ಕೇಳಿಬರುತ್ತಾ ಇದೆ ಅದು ನಿಜವಾದ ಸಂಗತಿ. ಅಂತಹವರಿಂದ ನಿಜವಾಗಿಯೂ ಹಳ್ಳಿಗಳ ಉದ್ಧಾರವಾಗುವುದಿಲ್ಲ. ಅದನ್ನು ತಪ್ಪಿಸಬೇಕಾದರೆ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಜೀಪು ಕೊಟ್ಟರೆ ಅವರು ಎಲ್ಲಾ ಕಡೆಯಲ್ಲೂ ತಿರುಗಾಡಿ, ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡು ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಅದಕ್ಕೆ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬೇಕಾದಷ್ಟು ತಪ್ಪುಗಳು ಇರುತ್ತವೆ, ಇಲ್ಲ ಅಂತ ಅಲ್ಲ. ಬೇಕಾದಷ್ಟು ಸೊಸೈಟಿಗಳು ಇವೆ, ಕೈಗಾರಿಕೆಗಳು ಇವೆ. ಅವುಗಳೆಲ್ಲವೂ ಕೂಡ ಉದ್ಧಾರವಾಗಬೇಕಾಗಿದೆ.

ಹರಿಜನರ ವಿಷಯವಾಗಿ ಮಾತನಾಡುತ್ತಾ ಹರಿಜನರಿಗೆ ದುಡ್ಡು ಕೊಟ್ಟಿಲ್ಲ ಎಂದು ನಮ್ಮ ಸ್ನೇಹಿತರು ಹೇಳಿದರು. ಹೌಸಿಂಗ್ ಸೊಸೈಟಿಗಳಿಗೆ ಬೇಕಾದಷ್ಟು ದುಡ್ಡು ಕೊಟ್ಟಿದ್ದಾರೆ. ಅವರಿಗೆ ಮೊದಲು ಏನು ತೊಂದರೆ ಇತ್ತೋ ಅದು ಈಗ ಇಲ್ಲ. ಬೇಕಾದಷ್ಟು ಸೌಲತ್ತುಗಳನ್ನು ಕೊಟ್ಟಿದ್ದಾರೆ.

(ಶ್ರೀಮತಿ ನಾಗಮ್ಮ)

ಮೊದಲು ತಡವಾಗುತ್ತಾ ಇತ್ತು ಈಗ ಆಗುತ್ತಾ ಇಲ್ಲ. ಹೌಸಿಂಗ್ ಕಾರ್ಪೊರೇಷನ್‌ದಿಂದ ಬೇಕಾದಷ್ಟು ಕೊಟ್ಟಿದ್ದಾರೆ. ಕಾಗದ ಪತ್ರಗಳನ್ನು ಸಮಮಾಡಿ ಕೊಟ್ಟರೆ ಅವರು ಚೆನ್ನಾಗಿ ಆರ್ಡರ್ ಮಾಡುತ್ತಾರೆ. ಮೊನ್ನೆ ನಮ್ಮ ಡಿಸ್ಟ್ರಿಕ್ಟ್ ರಾಯಚೂರಿಗೆ 5 ಲಕ್ಷದ 4 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿಕೊಟ್ಟಿದ್ದಾರೆ. ಸುಮ್ಮನೆ ಏನಾದರೂ ಒಂದು ಹೇಳಿ ಬಿಡೋಣ, ಅಂತ ಹೇಳುತ್ತಾ ಇದ್ದಾರೆ ಅಷ್ಟೆ. ನಮ್ಮ ಅಧಿಕಾರಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ ಅಂತ ಹೇಳ ಬಯಸುತ್ತೇನೆ.

ಇನ್ನೊಂದು ವಿಷಯ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕ್ ಮತ್ತು ಬಾವಿಗಳ ವಿಷಯ ಹೇಳ ಬೇಕಾದರೆ ಸರ್ಕಾರದವರು ಬೇಕಾದಷ್ಟು ಮಾಡಿದ್ದಾರೆ, ಇನ್ನೂ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ. ಕುಡಿಯುವ ನೀರಿನ ಬಾವಿಗಳು ಸಾಕಾದಷ್ಟು ಆಗಿವೆ ಇನ್ನೂ ಆಗ ಬೇಕು, ವ್ಯವಸಾಯದ ಬಾವಿಗಳೂ ಕೂಡ ಬೇಕಾದಷ್ಟು ಆಗಿವೆ, ಆಗಬೇಕಾಗಿವೆ. ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಲ್ಲಿ ಎಂ.ಎಲ್.ಎ. ಗಳನ್ನೂ ಕೂಡ ಮೆಂಬರಾಗಿ ಹಾಕಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಏಕೆಂದರೆ ನಾವು ಅಲ್ಲಿದ್ದರೆ ಎಲ್ಲೆಲ್ಲಿ ಏನೇನು ಆಗಬೇಕೆಂದು ಹೇಳಿ ಪಾಸ್ ಮಾಡುತ್ತೇವೆ. ರೈತರಿಗೆ ಅದರಿಂದ ಅನುಕೂಲವಾಗುತ್ತದೆ, ಇಲ್ಲದೇ ಇದ್ದರೆ ರೈತರಿಗೆ ತೊಂದರೆ ಕೊಡುತ್ತಾರೆ. ಅವರ ಸಲುವಾಗಿ ಎಂ.ಎಲ್.ಎ. ಗಳನ್ನು ಅಲ್ಲಿ ಮೆಂಬರುಗಳಾಗಿ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡುತ್ತೇನೆ.

ರಾಯಚೂರು ಬಹಳ ಹಿಂದುಳಿದ ಪ್ರದೇಶ, ಅದು ಮಂತ್ರಿಗಳಿಗೂ ಗೊತ್ತಿದೆ. ಬಸವ ರಾಜೇಶ್ವರಿಯವರು ಇರುವ ಅರ್ಧಭಾಗ ಚೆನ್ನಾಗಿರಬಹುದು, ಅವರು ದೊಡ್ಡ ಜಮೀನ್ದಾರರು, ಬೇಕಾದರೆ ಇನ್ನು ಕೆಲವು ವರ್ಷಗಳಲ್ಲಿ ಅವರು ಬೇಕಾದರೆ ಸರ್ಕಾರದವರಿಗೆ ಬೇಕಾದಷ್ಟು ಸಾಲ ಕೊಡಬಹುದು ಅಂತಹ ಪರಿಸ್ಥಿತಿಯಲ್ಲಿ ಇದ್ದಾರೆ. ಬೇಕಾದಷ್ಟು ಜನ ಜಾಗೀರ್‌ದಾರರು ಇದ್ದಾರೆ, ಭೂಮಿ ಇದೆ, ಬಾವಿಗಳು ಬೇಕಾದಷ್ಟು ಆಗಿವೆ ಸಂಕ್ಷೇಪ. ಆದರೆ ಇನ್ನರ್ಧ ಭಾಗ ಬಹಳ ಹಿಂದುಳಿದಿದೆ. ಇದರ ಕಡೆಗೆ ಗಮನ ಕೊಡಬೇಕೆಂದು ಹೇಳುತ್ತೇನೆ. ಎಲ್ಲಾ ರೀತಿಯಿಂದಲೂ ಹಣ ಒದಗಿಸಬೇಕೆಂದು ಕೇಳಿಕೊಂಡು ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಜೀಪು ಕೊಡಲೇಬೇಕೆಂದು ಹೇಳು ವಾಗ ರಾಯಚೂರು ಒಂದೇ ಜಿಲ್ಲೆಗೆ ಕೊಡಬೇಕೆಂದು ಕೇಳುವುದಿಲ್ಲ 19 ಜಿಲ್ಲೆಗಳ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರಿಗೆ ಜೀಪುಗಳನ್ನು ಕೊಡಲೇಬೇಕೆಂದು ಪದೇ ಪದೇ ಮನವಿ ಮಾಡಿಕೊಂಡು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† **Sri DIGAMBARA RAO B. KALMANKAR** (Aland).—Mr. Speaker, Sir, while opposing the Demand on Co-operation and other Demands, I want to make some observations. No doubt, in the co-operative field there is progress as figures will show. The amount invested as Working capital is Rs. 19·939 lakhs as per the figures of 1965-66; number of members is more than 36 lakhs and the number of societies is 18,968, and thereafter there has been some more improvement in this behalf. But, what is lacking in the co-operative movement is lack of co-operation. In the book 'Mysore State in Maps', it is stated that "the co-operative movement started as a means of securing to the poorer classes advantages which better placed persons were able to command by their own individual resources. The principle of mutual aid which is the basis of co-operative endeavour and the practice of thrift and self-help which sustains it generate a sturdy feeling of self-reliance which is of fundamental significance in a democratic way of life." But, my observation is that most of the people that are benefited by these co-operative societies are all money-lenders; they are rich people, who come from a particular strata in society and they have been exploiting these institutions for their own self-agrandisement and the poor man for whom the co-operative institution is said to exist, is not benefited from Societies,—

the Housing Societies, Land Development Societies or some other societies. It is the richer section of the people who are benefited by these societies, and I think the Government is also aware of this. Being aware of this fact, the Government does not want to make any change in the policy as far as the benefits of the societies are concerned. The other day I had put a starred question before this House, and in that question I have said that one Executive Engineer by name Sri Chinnaswamy, paid a visit to Gulbarga, Raichur and Bidar to look into the working of the Rural Housing Schemes and he came to know certain facts.

For example, in regard to the working of the Rural Housing Scheme at the village Korali and some other places he had candidly said in his report that there was misuse of money. The money had not reached the common man. No houses have been constructed and the middle-men have made use of this money, *i.e.*, the money is used by those for whom it was not meant.

6-30 P.M.

ಶ್ರೀಮತಿ ಕೆ. ಐರಾವತಿ ರೈ (ಬಂಟವಾಳ).—ಮಾನ್ಯ ಸದಸ್ಯರು ಕನ್ನಡದಲ್ಲಿ ಮಾತನಾಡಿದ್ದರೆ ಬಹಳ ಚೆನ್ನಾಗಿತ್ತು.

ಶ್ರೀ ದಿಗಂಬರರಾವ್ ಬಿ. ಕಲಮಂಕರ್.—ನನಗೆ ಅಷ್ಟು ಚೆನ್ನಾಗಿ ಕನ್ನಡ ಬರುವುದಿಲ್ಲ. ಆದರೂ ಮಾತನಾಡುತ್ತೇನೆ.

ಅವರು ಏನು ವರದಿಯನ್ನು ಈಗ ಕೊಟ್ಟಿದ್ದಾರೆಯೋ ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ಮೊಟ್ಟ ಮೊದಲನೆಯದಾಗಿ ಇವರಿಂದ ಬೆನಿಫಿಟ್ ಹೇಗೆ ತೆಗೆದುಕೊಂಡಿದ್ದಾರೆ, ಯಾರಿಗೆ ಬಂದಿದೆ ಎಂಬುದು ಗೊತ್ತಿಲ್ಲ.

MR. CHAIRMAN.—The member started his speech in English and he must continue it in English.

SRI DIGAMBARA RAO B. KALMANKAR.—To the question which I had put, the Hon'ble Minister gave a straight answer saying that no such report is submitted. Later on, he added that no observation had been made in that report. So, my only submission is that the Hon'ble Minister, it appears, wants to screen such delinquent societies, forgetting that societies are meant for the people, thereby he does not want that this very important sector of our life should improve. I for one, as a socialist believe in the co-operative movement. But the way in which the co-operative societies are working makes me feel depressed. The Congress Government has all along been saying that it is keen on seeing that the co-operative movement becomes a success and the weaker and vulnerable sections of the society benefits thereby. In the Audit Report of 1966, on page 55, it is stated that:

> "In Aland Block: Against 272 houses for which loans totalling Rs. 2·66 lakhs had been advanced under Rural Housing Scheme up to the end of March 1964, only 40 houses have been completed (December 1965)."

That is the observation made. So, out of 272 houses only 40 houses have been constructed.

(SRI DIGAMBARA RAO B. KALMANKAR)

Then there is another village called Golapur, where lambanis live. These lambanis had applied for loans to construct houses. The amount was sanctioned and false signatures were obtained. It is said the amount was paid to them and spot inspection was also made. But as far as I know, not a single house has been constructed there and the whole amount meant for the construction of houses, has been taken away by the middle-men. The Government does not want to proceed against them. If the Government is sincere in this regard, they have to detect the erring Congressmen and bring them to book; otherwise it would mean that the Government does not want to do anything to improve the sorry state of affairs.

Now, I come to one another question which was put by Mr. Chandrakanth, an Hon'ble Member of this House, regarding the co-operative societies that are running in Hyderabad-Karnatak area. There, the total number of co-operative societies is said to be 3,022 but the number of co-operative societies that are functioning is only 1,875. This also is a glaring example of the fact that most of the societies are not functioning at all. Regarding such societies, I want to know, what measures Government have taken, and what about the money invested in these societies. There are many such things that can be said about the co-operatives.

Then even regarding Community Development and N.E.S., I think the same thing can be said. There are very laudable objectives also. It is said that there should be development of co-operatives, of cottage and small-scale industries and of panchayats, improvement of village and rural communications etc., etc. Regarding all these things, I have to submit that there is no noticeable improvement. If at all there are any people who are benefited by these developments, they are the rich people. They have not improved the lot of the common man or the small agriculturist. No doubt, there are some people who have improved but their improvement is due to their own initiative. There are some progressive farmers and they have really done something. But that cannot be said or attributed to the developmental activities of the Government. After all, these are rare cases. Generally in this also there has been the same complaint. The amounts are swallowed; they have not been utilised for the purpose it was meant, and none of the functions expected of them have been discharged by these community development blocks. Therefore, much remans to be done under the Community Development schemes.

Coming to the elections, I cannot understand this Government which has solemnly said that they are going to have elections to the Taluk Boards, because it has not kept up its promise. The Taluk Board elections are overdue. The elections to them must be conducted

expeditiously without extending their present term. If the elections are conducted, I think then some new people may come and they may start working properly. Then there may also be a change in the outlook of the new Taluk Boards and their activites may also improve. Otherwise, people are losing faith in all these slogans of decentralisation of power and this and that. When we ask for elections they say they are thinking of bringing in the Zilla Parishads, and when we ask for Zilla Parishads they say in the other way. But so far, neither Zilla Parishads have come in nor the Taluk Board elections are held. Therefore my only submission is that the Hon'ble Minister must make a promise while replying, that on a definite date elections, throughout the length and breadth of this State, will take place and very soon all the new Taluk Boards will start functioning.

Regarding Land Development Bank; there are Divisional offices now at Gulbarga and some other places. About 100 applications have been received. But none of these applications are sanctioned and no second instalment is given. The very purpose of having divisional branches has not been fulfilled and I would request the Hon'ble Minister to look into this matter and set right things. With these observations, I thank the Chair for the opportunity given to me to express my views.

† ಶ್ರೀಮತಿ ಬಸವರಾಜೇಶ್ವರಿ (ಮಾನ್ವಿ).—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮುಂದಿರತಕ್ಕಂಥ ಸಹಕಾರ, ಪಂಚಾಯಿತ್ ರಾಜ್ ಮತ್ತು ರೂರಲ್ ಡೆವಲಪ್‌ಮೆಂಟ್ ಬೇಡಿಕೆಗಳಿಗೆ ನಾನು ಸಂಪೂರ್ಣವಾಗಿ ಅನುಮೋದನೆಯನ್ನು ಕೊಡುತ್ತಾ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬೇಕೆಂದು ಅಪೇಕ್ಷೆಮಾಡಿದ್ದೇನೆ.

ಮೊದಲನೆಯದಾಗಿ ನಾನು ಹೇಳುವುದೇನೆಂದರೆ, ಬಳ್ಳಾರಿ ಜಿಲ್ಲೆಯ ಸಿರಗುಪ್ಪಾ ತಾಲ್ಲೂಕಿನಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ತೆಗೆದಿದ್ದಾರೆ. ಅದು ಸುಮಾರು 2—3 ವರ್ಷಗಳತನಕ ಕೆಲಸಮಾಡಿದ್ದು ತಮಗೆ ಗೊತ್ತಿರುತ್ತದೆ. ಬೆಲ್ಲದ ಧಾರಣೆ ಬಹಳ ಕಡಿಮೆ ಯಾದ್ದರಿಂದ ರೈತರು ಅನಿವಾರ್ಯವಾಗಿ ಅವರು ಬೆಳೆದಂಥ ಕಬ್ಬನ್ನು ಆ ಕಾರ್ಖಾನೆಗೆ ಕೊಟ್ಟರು. ಆದರೆ ಇವತ್ತಿನವರೆಗೂ ಕಬ್ಬು ಸಂಬರಾಜು ಮಾಡಿದಂಥ ರೈತರಿಗೆ ದುಡ್ಡು ಮುಟ್ಟಿಲ್ಲ. ಷೇರು ಕ್ಯಾಪಿಟಲ್ ಎಷ್ಟು ಎಂಬುದನ್ನೂ ಯಾವತ್ತೂ ಗೊತ್ತುಮಾಡಿಲ್ಲ. ಈಗ ಆ ಸಕ್ಕರೆ ಕಾರ್ಖಾನೆ ಮುಚ್ಚಿಹೋಗಿದೆ. ಎರಡುಮೂರು ಸಾರಿ ಸರ್ಕಾರದವರಲ್ಲಿ ಏನಾದರೂ ಮಾಡಿ ಮತ್ತೆ ಈ ಸಕ್ಕರೆ ಕಾರ್ಖಾನೆಯನ್ನು ತೆಗೆಸಬೇಕು ಎಂಬುದಾಗಿ ಪ್ರಯತ್ನಮಾಡಿದ್ದಾಯಿತು. ಆದರೂ ಇನ್ನೂ ತೆಗೆಯಲಿಲ್ಲ. ದೇಶದಲ್ಲಿ ಕಬ್ಬು ಬೆಳೆಯುವವರು ಬಹಳವಾಗಿ ಇದ್ದಾರೆ. ಅವರಿಂದ ಇಂತಹ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಆಗಬೇಕು. ಆ ರೀತಿ ಕಬ್ಬು ಸರಬರಾಜುಮಾಡಿ ದಂತಹವರಿಗೆ ದುಡ್ಡು ವಾಪಸ್ಸು ಕೊಡುವುದಕ್ಕೆ ಪ್ರಯತ್ನಮಾಡಬೇಕು. ಆದರೆ ಈ ಸಕ್ಕರೆ ಕಾರ್ಖಾನೆ ಗತಿ ಏನಾಯಿತು ಎಂದರೆ, ಈ ಬಗ್ಗೆ ಎರಡು ಮೂರುಸಾರಿ ವಿಚಾರಮಾಡಿದ್ದರೂ ಇವತ್ತಿನವರೆಗೂ ಅದರ ಬಗ್ಗೆ ಗಮನಕೊಟ್ಟಿಲ್ಲ. ಆದ್ದರಿಂದ ಸರ್ಕಾರದವರು ಕೂಡಲೇ ಅದನ್ನು ವಿಚಾರಮಾಡಿ ಆ ಸಕ್ಕರೆ ಕಾರ್ಖಾನೆಯನ್ನು ಕೆಲಸಕಾರ್ಯಗಳು ಪ್ರಾರಂಭವಾಗುವ ಹಾಗೆ ವ್ಯವಸ್ಥೆ ಮಾಡುವುದು ಉತ್ತಮವೆಂದು ನಾನು ಸಲಹೆಮಾಡುತ್ತೇನೆ. ಏಕೆಂದರೆ, ಅಲ್ಲಿ ಏನಾದರೂ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಮ್ಯಾನೇಜಿರಿಯಲ್ ಡಿಫೆಕ್ಟ್ಸ್ ಇದೆಯೆಂದು ಕಂಡು ಬಂದರೆ ಅಲ್ಲಿಗೆ ಯಾವುದೇ ರೀತಿಯಿಂದ ತಜ್ಞರನ್ನು ನೇಮಕಮಾಡಿ ಅವರಿಂದ ಪರಿಶೀಲನೆಮಾಡಿಸಿ ಕೂಡಲೇ ಆ ಸಕ್ಕರೆ ಕಾರ್ಖಾನೆಯನ್ನು ತೆರೆಯಲು ಪ್ರಯತ್ನಮಾಡಬೇಕೆಂದು ನಾನು ಸರ್ಕಾರದವರಲ್ಲಿ ಸಲಹೆಮಾಡುತ್ತೇನೆ.

ಈಗ ಕೆಲವು ಪ್ರೈಮರಿ ಸೊಸೈಟಿಗಳಿಗೆ ಟ್ರಾಕ್ಟರುಗಳನ್ನು ಕೊಳ್ಳುವುದಕ್ಕೆ ಪರ್ಮಿಷನ್ ಕೊಟ್ಟಿದ್ದಾರೆ. 2–3 ಸೊಸೈಟಿಗಳನ್ನು ನೋಡಿದ್ದೇನೆ. ಮಿಸ್‌ಯೂಸ್ ಆಗುತ್ತಾ ಇವೆ. ಹಗಲು

(ಶ್ರೀಮತಿ ಬಸವರಾಜೇಶ್ವರಿ)

ಹೊತ್ತು ಮಾಡತಕ್ಕ ಕೆಲಸಕ್ಕೆ ಲೆಕ್ಕ ತೋರಿಸುತ್ತಾರೆ. ಇಡೀ ರಾತ್ರಿಯೆಲ್ಲಾ ಟ್ರಾಕ್ಟರುಗಳಿಂದ ಕೆಲಸ ಮಾಡಿಸಿ ಲೆಕ್ಕಗಳನ್ನು ತೋರಿಸುತ್ತಾ ಇಲ್ಲ. ಟ್ರಾಕ್ಟರ್ ಯಾವರೀತಿ ಇಟ್ಟುಕೊಂಡಿದ್ದಾರೆ, ಯಾವ ತರಹ ಮೆಂಟೈನ್ ಮಾಡುತ್ತಾ ಇದ್ದಾರೆ, ರಿಪೇರಿಗೆ ಎಷ್ಟು ಖರ್ಚು ಮಾಡಿದ್ದಾರೆ, ಎಂಬುದನ್ನು ನೋಡಿದರೆ, ಈ ಸೊಸೈಟಿಗಳಿಂದ ಒಂದು ನಯಾ ಪೈಸಾ ಲಾಭ ಬಂದಿಲ್ಲ. ಆದುದರಿಂದ ಪ್ರೈಮರಿ ಸೊಸೈಟಿಗಳಿಗೆ ಟ್ರಾಕ್ಟರುಗಳನ್ನು ಕೊಡುವುದನ್ನು ಸಾಧ್ಯವಾದ ಮಟ್ಟಿಗೆ ನಿಲ್ಲಿಸಬೇಕು. ಇಂಡುವಿಜುಯಲ್ಸ್‌ಗೂ ಕೊಡುತ್ತಾ ಇದ್ದೀರಿ. ಸಿಂಧನೂರು, ಮಾನ್ವಿ ಪ್ರದೇಶದಲ್ಲಿ ಟ್ರಾಕ್ಟರ್ ಅಸೋಸಿಯೇಷನ್ ಮಾಡಿಕೊಂಡಿದ್ದಾರೆ. ಅವರಿಗೆ ಇನ್ನೂ ಸಹಾಯ ಮಾಡಿ ಅವರು ಚೆನ್ನಾಗಿ ಕೆಲಸ ಮಾಡುವಂತೆ ಸರ್ವಿಸ್ ಸ್ಟೇಷನ್ ಬಿಲ್ಡ್ ಅಪ್ ಮಾಡುವುದಕ್ಕೆ ಸ್ಪೇರ್ ಪಾರ್ಟ್ಸ್ ಕೊಟ್ಟು ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು.

(Mr. DEPUTY SPEAKER in the Chair)

ನಮ್ಮ ಪಂಚಾಯತ್ ಏರಿಯಾದಲ್ಲಿ ಒಂದು ಸೊಸೈಟಿಯನ್ನು ಮಾಡಬೇಕು ಎಂದರೆ ಒಂದು ರೆಸಿಲ್ಯೂಷನ್ ಮಾಡಬೇಕು ಎಂದು ಇದೆ. ಅವರು ಉದ್ದೇಶಪೂರ್ವಕವಾಗಿ ಮಾಡಲಾರದೇ ಇದ್ದಂಥ ಸಂದರ್ಭದಲ್ಲಿ, ಸೊಸೈಟಿಯ ರಿಜಿಸ್ಟ್ರಾರ್ ಮತ್ತು ಜಾಯಿಂಟ್ ರಿಜಿಸ್ಟ್ರಾರ್ ಅಗತ್ಯ ಇದ್ದಾಗ ಅಲ್ಲಿಗೆ ಹೋಗಿ ಅಂತಹ ಸಂದರ್ಭದಲ್ಲಿ ಆ ನಿಯಮವನ್ನು ವೇವ್ ಮಾಡಿ ಸೊಸೈಟಿ ರಿಜಿಸ್ಟರ್ ಮಾಡಿಕೊಳ್ಳುವುದಕ್ಕೆ ಏರ್ಪಾಡು ಮಾಡಬೇಕು. ಕೆಲವು ಸಂದರ್ಭದಲ್ಲಿ ಹೇಳಬೇಕು ಎಂದರೆ ಬೇರೆ ಗ್ರಾಮದಲ್ಲಿ ಜಮೀನು ಇರುತ್ತದೆ. ಜನರು ಮಾತ್ರ ಆ ಊರಿನಲ್ಲಿ ವಾಸ ಮಾಡುತ್ತಾರೆ ಅಂತಹ ಸಂದರ್ಭದಲ್ಲಿ ಜಮೀನು ಬೇರೆ ತಾಕಿನಲ್ಲಿ ಇದ್ದರೆ, ಆ ಊರಿನಲ್ಲಿರುವ ರೈತರಿಗೆ ಷೇರು ಕೊಡುವುದಕ್ಕಾಗುವುದಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಕೆಲವು ಹಳ್ಳಿಗಳಲ್ಲಿ ಇದುವರೆಗೂ ಸೊಸೈಟಿ ಪ್ರಾರಂಭ ಆಗುವುದಕ್ಕೆ ಅವಕಾಶ ಇಲ್ಲ. ಮಿನಿಮಮ್ ಮೆಂಬರ್ 50 ಇರಬೇಕು ಎಂದು ಹೇಳುತ್ತಾರೆ. ಅದೇ ಗ್ರಾಮದವರು ಸಿಕ್ಕುವುದಿಲ್ಲ. ಆದುದರಿಂದ ಅಡ್ಜಸೆಂಟ್ ಏರಿಯಾದಲ್ಲಿ ಭೂಮಿ ಇದ್ದರೆ, ಅಂತಹ ರೈತರನ್ನು ಮೆಂಬರುಗಳನ್ನಾಗಿ ತೆಗೆದುಕೊಂಡರೆ ಅನುಕೂಲವಾಗುತ್ತದೆ ಇಲ್ಲದಿದ್ದರೆ ತೊಂದರೆಯಾಗುತ್ತದೆ. ಆ ರೀತಿ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಹಳ್ಳಿ ಅಭಿವೃದ್ಧಿ ವಿಷಯದಲ್ಲಿ ಹೇಳಬೇಕಾದರೆ ಮಾನ್ಯ ಸದಸ್ಯರು ಅನೇಕ ಜನ ಎನ್. ಆರ್. ಡಬ್ಲ್ಯು. ಸ್ಕೀಮಿನ ವಿಚಾರವಾಗಿ ಮಾತನಾಡಿದ್ದಾರೆ. 5—6 ವರ್ಷದಿಂದ ನನ್ನ ತಾಲ್ಲೂಕಿನಲ್ಲಿ 10—20 ಗ್ರಾಮಗಳಲ್ಲಿ ಕುಡಿಯುವ ನೀರಿನ ಸ್ಕೀಮ್ ತಯಾರು ಮಾಡಿದ್ದಾರೆ. ಆದರೆ ಇವತ್ತಿನವರೆಗೂ ಗ್ರಾಂಟ್ ಕೇಂದ್ರ ಸರ್ಕಾರದಿಂದ ಬಂದಿಲ್ಲ. ಸಾಮಾನುಗಳನ್ನು ಪರ್ಚೇಸ್ ಮಾಡಿ ಹಾಗೆಯೇ ಇಟ್ಟಿದ್ದಾರೆ. ಡೀಟೇಲ್ ಎಸ್ಟಿಮೇಟ್ಸ್ ಮಾಡದೇ ಉಳಿದಿದೆ. ಎಷ್ಟು ಸಾರಿ ಟೆಂಡರ್ ಕರೆದರೂ ಕಂಟ್ರಾಕ್ಟರ್ಸ್ ಬರುತ್ತಾ ಇಲ್ಲ. ಸರಿಯಾದ ರೇಟ್ಸ್ ಕೊಡುತ್ತಾರೋ ಇಲ್ಲವೋ ಗೊತ್ತಾಗುವುದಿಲ್ಲ. ಆದ್ದರಿಂದ ಇದಕ್ಕೆ ತಕ್ಕ ಏರ್ಪಾಡು ಮಾಡಿ ಅತಿ ಶೀಘ್ರವಾಗಿ ಕೆಲಸ ಪ್ರಾರಂಭ ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಡ್ರಿಂಕಿಂಗ್ ವಾಟರ್ ವೆಲ್ಸ್‌ಗೆ ಸಹಾಯ ಮಾಡುತ್ತಿದ್ದಾರೆ. ಕೆಲವು ಕಡೆ ಬಾವಿಗಳಲ್ಲಿ ನೀರು ಬರುತ್ತಾ ಇಲ್ಲ. ಅಂತಹ ಕಡೆ ನೀರಿನ ಫೆಸಿಲಿಟಿ ಕೊಡದಿದ್ದರೆ ತುಂಬಾ ಅನ್ಯಾಯ ವಾಗುತ್ತದೆ. 10 ಮೈಲು ಹೋದರೂ, ನೀರು ಸಿಕ್ಕುತ್ತಾ ಇಲ್ಲ. ಅಂತಹ ಪ್ರದೇಶವನ್ನು ಎಕ್ಸೆಪ್ಷನಲ್ ಕೇಸ್ ಆಗಿ ಟ್ರೀಟ್ ಮಾಡಿ ಟ್ಯೂಬ್ ವೆಲ್ಸನ್ನು ಏರ್ಪಾಡು ಮಾಡದೇ ಇದ್ದರೆ ಜನರಿಗೆ ಕುಡಿಯುವ ನೀರು ಸಿಕ್ಕುವುದಿಲ್ಲ. ಜನರು ತುಂಬಾ ತೊಂದರೆಪಡುತ್ತಿದ್ದಾರೆ. ಅಂತಹ ಕಡೆ ಆದಷ್ಟು ತೀವ್ರವಾಗಿ ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಪ್ರೈಮರಿ ಹೆಲ್ತ್ ಯೂನಿಟ್ ಟೈಪ್ ಡಿಸ್ಪೆನ್ಸರಿ ವಿಷಯ. ಇವುಗಳಿಗೆ ಕೊಡತಕ್ಕ ಗ್ರಾಂಟ್ ಕೊಡದೆ ತಾಲ್ಲೂಕ್ ಬೋರ್ಡಿಗೆ ತೊಂದರೆಯಾಗುತ್ತಾ ಇದೆ. ಇನ್ನೊಂದು ಇನ್‌ಸ್ಟಿಟ್ಯೂಷನ್ ಓಪನ್ ಮಾಡಬೇಕಾದರೆ ಹಿಂದಿನ ಗ್ರಾಂಟ್ ಸಿಕ್ಕಲಿಲ್ಲ ಮುಂದೆ ಏನು ಮಾಡುವುದು ಎನ್ನುವ ಪರಿಸ್ಥಿತಿ ಕಂಡುಬರುತ್ತದೆ. ಆದುದರಿಂದ ತತ್‌ಕ್ಷಣ ಸರ್ಕಾರದ ಸಹಾಯ ಧನವನ್ನು ಪ್ರತಿವರ್ಷ ಸರಿಯಾಗಿ ಕೊಡುವುದಕ್ಕೆ ಏರ್ಪಾಡು ಮಾಡಬೇಕು ಎಂದು ಸಲಹೆ ಮಾಡುತ್ತೇನೆ.

ಇನ್ನು ರಾಯಚೂರು ಜಿಲ್ಲೆಯ ವಡ್ಡರಹಳ್ಳಿಯಲ್ಲಿ ಗ್ರಾಮ ಸೇವಿಕೆಯರ ತರಬೇತಿ ಕೇಂದ್ರ ಇದೆ. ಈ ಕೇಂದ್ರವನ್ನು ಮುಚ್ಚುತ್ತಾರೆಂದು ತಿಳಿದುಬಂದಿದೆ. ಸರ್ಕಾರದ ವಕ್ರ ದೃಷ್ಟಿ ಮಹಿಳೆಯರ ಮೇಲೆ ಏತಕ್ಕೆ ಬಿತ್ತೋ ಗೊತ್ತಿಲ್ಲ. ಗಂಗಾವತಿ ಕಡೆ ಹೋದರೆ ಒಬ್ಬ ಗ್ರಾಮಸೇವಿಕೆಯರೂ ಕೆಲಸ ಮಾಡುತ್ತಾ ಇಲ್ಲ. ಹೀಗಿರುವಾಗ ಇರುವ ಹೆಣ್ಣು ಮಕ್ಕಳ ತರಬೇತಿ ಕೇಂದ್ರವನ್ನು ಮುಚ್ಚಿದರೆ ಅದರಿಂದ ತುಂಬಾತೊಂದರೆಯಾಗುತ್ತದೆ. ಹಿಂದುಳಿದ ಪ್ರದೇಶದಲ್ಲಿ ಮಹಿಳೆಯರ ಕಾರ್ಯಕ್ರಮ ಏರ್ಪಾಡು ಮಾಡುವ ಸಲುವಾಗಿ ಗ್ರಾಮ ಸೇವಿಕೆಯರನ್ನು ಎಲ್ಲಾ ಬ್ಲಾಕ್‌ಗಳಿಗೂ ಪೋಸ್ಟ್ ಮಾಡುವ ವ್ಯವಸ್ಥೆಮಾಡಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಕೊನೆಯದಾಗಿ ಅತಿ ಮುಖ್ಯವಾದ ತುಂಗಭದ್ರ ಡೆವಲಪ್‌ಮೆಂಟ್ ವಿಷಯದಲ್ಲಿ ಒಂದೆರಡು ಮಾತನ್ನು ಹೇಳುತ್ತೇನೆ. ತುಂಗಭದ್ರ ಬೋರ್ಡ್ ಏನು ಇದೆ ಅದರ ಡೆವಲಪ್‌ಮೆಂಟ್ ಕಾರ್ಯಗಳು ಬೋರ್ಡಿನ ಮೂಲಕ ನಡೆಯುತ್ತಾ ಇದೆ. ನಮ್ಮಲ್ಲಿ ಯಾವ ಡೆವಲಪ್‌ಮೆಂಟ್ ಆಗಿದೆ ಎಂದು ದಯವಿಟ್ಟು ಹೇಳಿ. ಡೆವಲಪ್‌ಮೆಂಟ್ ಮಾಡುವ ಕಾಲಕ್ಕೆ ಸರ್ಕಾರದವರು ಒಂದೇ ಸಾರಿ 12 ಸಾವಿರ ಎಕರೆಯನ್ನು ಬೇರೆಯವರಿಗೆ ಕೊಡುತ್ತಾ ಇದ್ದಾರೆ. 5 ಸಾವಿರ ಎಕರೆಯನ್ನು ಪಾಕೀಸ್ತಾನದ ರೆಫ್ಯೂಜೀಸ್‌ಗೆ ಕೊಡುತ್ತಾ ಇದ್ದಾರೆ. ಕೇಂದ್ರ ಸರ್ಕಾರದ ಕೆಲವು ಆಫೀಸರು ಹೋಗಿ ಪಾಕೀಸ್ತಾನದ ರೆಫ್ಯೂಜೀಸ್‌ಗೋಸ್ಕರ ಅಲ್ಲಿರತಕ್ಕ ರೈತರಿಂದ 5 ಸಾವಿರ ಎಕರೆಯನ್ನು ತೆಗೆದು ಕೊಂಡು ಅವರನ್ನು ಲ್ಯಾಂಡ್‌ಲೆಸ್ ಮಾಡಿದ್ದಾರೆ. ಅದರ ಜೊತೆಗೆ ಮತ್ತೆ ಪಾಕಿಸ್ತಾನದ ರೆಫ್ಯೂಜೀಸ್‌ಗೆ ಸ್ಟೇಟ್ ಫಾರಂ ಮಾಡಬೇಕೆಂದು 7 ಸಾವಿರ ಎಕರೆ ಅಕ್ವೈರ್ ಮಾಡಿಕೊಂಡಿದ್ದಾರೆ. ಅವರು ಹೀಗೆ ಒಂದೇ ಸಲ ಇಷ್ಟು ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತಿದ್ದಾರೆ. ಒಂದು ಸಾವಿರ, ಎರಡು ಸಾವಿರ ಎಕರೆ ಎಕ್ಸ್‌ಪೆರಿಮೆಂಟ್ ಮಾಡುವುದಕ್ಕೆ ಸಾಲುವುದಿಲ್ಲವೇ ? ಈಗ ಇರತಕ್ಕ ಸ್ಟೇಟ್ ಫಾರಂನಲ್ಲಿ ಎಷ್ಟು ಜಾಗ್ರತೆ ಕೆಲಸ ಆಗುತ್ತಿದೆ ಎನ್ನುವುದು ರೈತಾಪಿ ಜನರಿಗೆ ಗೊತ್ತಿದೆ. ಎಷ್ಟೇ ಸಿಬ್ಬಂದಿ ಮತ್ತು ಮೆಷಿನರಿ ತಂದರೂ ಅಷ್ಟು ಎಕರೆ ಜಮೀನನ್ನು ಅಭಿವೃದ್ಧಿ ಮಾಡಬೇಕಾದರೆ 100 200 ವರ್ಷಗಳು ಬೇಕಾಗುತ್ತದೆ. ಅಲ್ಲಿರತಕ್ಕ ರೈತರನ್ನು ಲ್ಯಾಂಡ್‌ಲೆಸ್ ಮಾಡಿ ದುಡ್ಡು ಕೊಟ್ಟು ಜಮೀನನ್ನು ಅಕ್ವೈರ್ ಮಾಡಿಕೊಂಡು, ರಷ್ಯಾದವರು ಮೆಷಿನರಿ ಕೊಡುತ್ತಾರೆ; ನಾವು ಸ್ಟೇಟ್ ಫಾರಂ ಮಾಡುತ್ತೇವೆ ಎಂದು ಹೇಳಿದರೆ ರೈತರಿಗೆ ಏನು ಅನುಕೂಲ ಮಾಡಿದಂತಾಯಿತು ? ಈ ರೀತಿ ಜನರ ಒಪ್ಪಿಗೆ ಇಲ್ಲದ ಸ್ಕೀಮನ್ನು ಹಾಕಿಕೊಂಡು ಅವರಮೇಲೆ ಹೇರಿ ಅವರ ಜಮೀನನ್ನು ಅಕ್ವೈರ್‌ಮಾಡಿ ಕೊಂಡರೆ ಹೇಗೆ ? ಹೀಗೆ 12 ಸಾವಿರ ಎಕರೆಯನ್ನು ಒಂದೇ ಗ್ರಾಮದಲ್ಲಿ ಜನರಿಂದ ತೆಗೆದುಕೊಂಡರೆ ಅದರಿಂದ ಪ್ರಯೋಜನ ಏನು ? ಹಾಗೆ ಡೆವಲಪ್‌ಮೆಂಟ್ ಮಾಡುವ ಕಾಲಕ್ಕೆ ಸದಸ್ಯರಾಗಿದ್ದಂತಹ ನಮ್ಮಂತಹವರಿಗೆ ತಿಳಿಸಿ, ಇದು ಸೂಕ್ತವೇ, ಮಾಡೋಣವೇ, ಬಿಡೋಣವೇ ಎಂದು ನಮ್ಮನ್ನು ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಮಾಡಿ. ಅದು ಬಿಟ್ಟು ನೀವು ನಿಮ್ಮಿಷ್ಟಕ್ಕೆ ಮಾಡಬಾರದು ಎಂದು ಹೇಳುತ್ತೇನೆ. ಇಷ್ಟೊಂದು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿ. ಎಸ್. ನಾಡಕರ್ಣಿ (ಅಂಕೋಲ).—ಅಧ್ಯಕ್ಷರೇ, ವೇಳೆ ಬಹಳ ಕಡಿಮೆಯಾದುದರಿಂದ ಸ್ವಲ್ಪ ವಿಷಯಗಳನ್ನು ಮಾತ್ರ ಹೇಳುತ್ತೇನೆ. ನಾವು ತಾಲ್ಲೂಕ ಬೋರ್ಡ್ ಅಧ್ಯಕ್ಷನಾಗಿದ್ದೇನೆ, 5-7 ವರ್ಷದಿಂದ ಮೆಂಬರೂ ಆಗಿದ್ದೇನೆ. ನಿಜವಾಗಿ ತಾಲ್ಲೂಕುಬೋರ್ಡ್‌ಗಳು ಸರಿಯಾಗಿ ನಡೆದರೆ ಜನಗಳಿಗೆ ಅನುಕೂಲವಾಗುತ್ತದೆ. ದುರ್ದೈವದಿಂದ ತಾಲ್ಲೂಕ್‌ಬೋರ್ಡ್ ಮತ್ತು ಡೆವಲಪ್‌ಮೆಂಟ್ ಖಾತೆಗಳಿಗೆ ಯಾರು ಬೇಡವಾಗಿದ್ದಾರೋ, ಯಾರು ಸಸ್ಪೆಂಡ್ ಆಗಿದ್ದಾರೋ, ಯಾರು ಹಣ ದುರ್ವ್ಯಯ ಮಾಡಿದ್ದಾರೋ ಅಂತಹವರನ್ನು ಪೋಸ್ಟ್ ಮಾಡಿದ್ದಾರೆ. ಅಲ್ಲಿ 3 ವರ್ಷದಿಂದ ಕೆಲಸ ನಡೆಯದೆ ಇದೆ. ಇದನ್ನು ಡೆಪ್ಯೂಟಿ ಕಮೀಷನರ್ ಮತ್ತು ಮಂತ್ರಿಗಳ ಗಮನಕ್ಕೆ ತಂದಿದ್ದೇನೆ ಮತ್ತು ತಾಲ್ಲೂಕ್‌ಬೋರ್ಡ್‌ಗೆ ಸರಿಯಾದವರನ್ನು ಹಾಕಿ ಎಂದು ಕೇಳಿಕೊಂಡಿದ್ದೇನೆ. ತಾಲ್ಲೂಕು ಬೋರ್ಡ್‌ಗೆ ಈ ತರಹ ಸಿಬ್ಬಂದಿ ಕೊಡುವುದರಿಂದ ತೊಂದರೆಯಾಗಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ನಮ್ಮ ತಾಲ್ಲೂಕುಮಟ್ಟಿಗೆ ಹೇಳುವುದಾದರೆ ಅವರು ಕೊಟ್ಟಿರುವ ಸಿಬ್ಬಂದಿ ಬೇಡ ಎಂದು ನಮ್ಮ ತಾಲ್ಲೂಕು ಬೋರ್ಡಿನಲ್ಲಿರುವ ಸಮ ಸಮ ಇರುವ ಕಾಂಗ್ರೆಸ್ ಮತ್ತು ಪಿ.ಎಸ್.ಪಿ. ಸದಸ್ಯರು ಸರ್ವಾನುಮತದಿಂದ ಎಷ್ಟು ನಿರ್ಣಯ ಮಾಡಿ ಕೇಳಿಕೊಂಡರೂ ಅದಕ್ಕೆ ಮೇಲಾಧಿಕಾರಿಗಳು ಲಕ್ಷ್ಯ ಕೊಡುತ್ತಾ ಇಲ್ಲ. ಬಿ.ಡಿ.ಓ. ಇದ್ದಾರೆ ಅವರು ಯಾವ ಸಹಾಯವನ್ನೂ ಮಾಡುವುದಿಲ್ಲ. ಕ್ಯಾಜುಯಲ್ ಲೀವ್ ಸ್ಯಾಂಕ್ಷನ್ ಮಾಡುವುದೂ ಕಷ್ಟವಾಗಿದೆ. ತಿಂಗಳಲ್ಲಿ ಏಳು ದಿವಸ ಫಿಟ್ಸ್ (fits) ಬಂದು ಬೀಳುತ್ತಾರೆ. ಇದರ ಬಗ್ಗೆ ನಾನು ಕಾಗದ ಹಾಕಿದ್ದೇನೆ. ಮೇಲಿಂದ ಮೇಲೆ ಮನವಿಗಳನ್ನು ಮಾಡಿಕೊಂಡಿದ್ದೇನೆ. ಆದರೇನೂ ಪರಿಣಾಮವಾಗಲಿಲ್ಲ. ಆದ್ದರಿಂದ ನಾನು ಇದನ್ನು ಇಲ್ಲಿ ಹೇಳಬೇಕಾದ ಒಂದು ದುರದೃಷ್ಟ ಪ್ರಸಂಗ ಉಂಟಾಯಿತು.

(ಶ್ರೀ ಡಿ. ಎಸ್. ನಾಡಕರ್ಣಿ)

ಇನ್ನು ಅಲ್ಲಿ ಒಬ್ಬರಿಗೆ ಒಂದು ಸರ್ಕಾರದಿಂದ ಜೀಪನ್ನು ಕೊಟ್ಟಿದ್ದಾರೆ. ಅದನ್ನು ಯಾರು ಯಾರೋ ಸಾಮಾನುಗಳನ್ನು ಸಾಗಿಸುವುದಕ್ಕೆ ಉಪಯೋಗ ಮಾಡುತ್ತಿದ್ದಾರೆ. ಆ ಜೀಪನ್ನು ಕೊಟ್ಟಿರತಕ್ಕದ್ದು ಯಾರಿಗೆಂದರೆ ಅಲ್ಲಿನ ಆಸಿಸ್ಟೆಂಟ್ ಕಮಿಷನರಿಗೆ ಇವರು ತಮಗೆ ಕೆಲಸವಿರಲಿ ಇಲ್ಲದಿರಲಿ ಮೇಲಿಂದ ಮೇಲೆ ತಾಶೀಲ್ದಾರರ ಹತ್ತಿರ ಬರುವುದು ಅಲ್ಲಿಗೆ ಬಂದ ಕೂಡಲೆ ಜೀಪನ್ನು ಚಹಾ ಮತ್ತು ಸೋಡ ತರಲಿಕ್ಕೆ ಜೀಪನ್ನು ಓಡಿಸಿದ್ದೇ ಓಡಿಸಿದ್ದು ಅಲ್ಲ ಇಂಥವರೇ ಒಬ್ಬರು ಬಿ.ಡಿ.ಓ. ಬೇರೆ ಇದ್ದಾರೆ ಅಂತೂ ಸರ್ಕಾರದವರು ಅಲ್ಲಿಗೆ ನೋಡಿ ಈ ನಾಲಾಯಖ್ ಅಧಿಕಾರಿಗಳನ್ನೇ ಆರಿಸಿ ಹಾಕುತ್ತಿದ್ದಾರೆ. ಇಂಥಾ ಜನರನ್ನು ಅಲ್ಲಿಗೆ ಹಾಕಿದ ಮೇಲೇ ಅಲ್ಲಿನ ಕೆಲಸಗಳನ್ನೇಕೆ ಕೇಳಬೇಕು! ಆದರೆ ಸರ್ಕಾರದವರು ಈ ಪ್ರಾಂತೀಯ ಅಧಿಕಾರಿಗಳಿಗೆ ಜೀಪನ್ನು ಉಪಯೋಗಿಸಲು ಕೊಟ್ಟಿರ ತಕ್ಕದ್ದು ಸರಿಯಲ್ಲ. ಅವರು ಅವನ್ನು ದುರುಪಯೋಗ ಮಾಡುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಆ ಜೀಪಗಳನ್ನು ಅವರಿಗೆ ಕೊಡಬಾರದೆಂದು ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತಾಲ್ಲೂಕ್ ಬೋರ್ಡುಗಳ ವಿಚಾರಕ್ಕೆ ಬಂದರೆ ಅವುಗಳಿಗೆ ಬೇಕಾಗತಕ್ಕ ಶಿಬ್ಬಂದಿಯನ್ನು ಅವರೇ ನೇಮಕ ಮಾಡಿಕೊಳ್ಳುವುದಕ್ಕೆ ಅವಕಾಶವಿದ್ದಿದ್ದರೆ ಆ ಮಂಡಳಿಗಳ ಕೆಲಸ ಸ್ವಲ್ಪ ಪ್ರಾಮಾಣಿಕತೆಯಿಂದ ನಡೆಯುವುದಕ್ಕೆ ಒಂದು ಅವಕಾಶ ಇರುತ್ತಿತ್ತು. ಆದುದರಿಂದ ಸರ್ಕಾರದವರು ಈಗ ಒದಗಿಸುತ್ತಿರುವ ಶಿಬ್ಬಂದಿಯೇನಿದೆ ಅದನ್ನು ಅವರು ನಿಲ್ಲಿಸಬೇಕು. ಕಾರಣ ಏನೆಂದರೆ ಅವರಿಗೆ ಯೋಗ್ಯ ಶಿಬ್ಬಂದಿಯನ್ನು ಕೊಡುವುದಕ್ಕೆ ಸಾಧ್ಯವಿಲ್ಲ ಎನ್ನುವುದೇ ಆಗಿದೆ. ಆದುದರಿಂದ ಸರ್ಕಾರ ದವರು ಶಿಬ್ಬಂದಿವರ್ಗವನ್ನು ಕೊಡತಕ್ಕ ಪದ್ಧತಿಯನ್ನು ಕಿತ್ತುಹಾಕಿ ಆ ಅಧಿಕಾರವನ್ನು ಆಯಾಯ ತಾಲ್ಲೂಕ್ ಬೋರ್ಡುಗಳಿಗೆ ಕೊಡಬೇಕೆಂದು ತಮ್ಮಲ್ಲಿ ನಾನು ನಮ್ರತೆಯಿಂದ ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಈ ತಾಲ್ಲೂಕ್ ಬೋರ್ಡುಗಳಿಗೆ ಕೊಡುತ್ತಿರುವ ಹಣ ಏನೇನೂ ಸಾಲದು. ಸರ್ಕಾರದವರು ಈ ದಿವಸ ಒದಗಿಸುತ್ತಿರುವ ಅಂಕೆ ಸಂಖ್ಯೆಗಳೇನಿವೆ ಅವು ಪ್ರಾಮಾಣಿಕವಾದವುಗಳಲ್ಲ ಅದರಲ್ಲಿ ನೂರಕ್ಕೆ 25 ಅಂಶಗಳಲ್ಲಿ ಕೂಡ ಸತ್ಯಾಂಶವಿರುವುದಿಲ್ಲ. ಅಲ್ಲಿ ಕೆಲಸ ಮಾಡುವುದಕ್ಕೆ ಅಂಥಾ ನಾಲಾಯಕ್ ಅಧಿಕಾರಿಗಳನ್ನು ಕೊಡುತ್ತಿದ್ದಾರೆ. ಅವರು ಸ್ಪಾಟಿಗೆ ಹೋಗಿ ಎಂದೂ ಅಂಕೆ ಸಂಖ್ಯೆಗಳನ್ನು ಶೇಖರಣೆ ಮಾಡುತ್ತಿಲ್ಲ. ಅವರು ತಾಲ್ಲೂಕ್ ಕಛೇರಿಗೊ ಇನ್ನೂ ಎಲ್ಲೆಲ್ಲಿಗೋ ಕಳುಹಿಸಿ ಯಾವುವೋ ಅಂಕೆ ಸಂಖ್ಯೆಗಳನ್ನು ತರಿಸಿ ಸರ್ಕಾರಕ್ಕೆ ಕಳುಹಿಸುತ್ತಿದ್ದಾರೆ. ಅವು ಸತ್ಯಕ್ಕೆ ಬಹಳ ದೂರವಾದವುಗಳು. ಅವರು ಅಲ್ಲಿ ಯಾರೂ ಸರಿಯಾಗಿ ಕೆಲಸ ಮಾಡುವುದಿಲ್ಲ. ಇನ್ನು ನಾಡಿನ ಜನರೆಲ್ಲಾ ಆ ಕೊಂಡಜ್ಜಿ ಬಸಪ್ಪ ವರದಿಯೇನಾಯಿತು ಎಂದು ಕೇಳುತ್ತಿದ್ದಾರೆ. ತಾಲ್ಲೂಕ್ ಬೋರ್ಡುಗಳ ಚುನಾವಣೆಯನ್ನು ಯಾವಾಗ ಮಾಡುತ್ತೀರಿ ಎಂದು ಕೇಳುತ್ತಿದ್ದಾರೆ. ಆದರೆ ಆ ವರದಿ ಸರ್ಕಾರಕ್ಕೆ ಬಂದು ಎಷ್ಟೋ ದಿನಗಳಾಗಿದ್ದರೂ ಅದನ್ನು ಕಾರ್ಯ ರೂಪಕ್ಕೆ ತರ ಬೇಕೆಂಬ ಮನಸ್ಸು ಅವರಿಗಿಲ್ಲ. ಆ ರಿಪೋರ್ಟ ಈ ಅಧಿವೇಶನದಲ್ಲೇ ಚರ್ಚೆಗೆ ಬರುತ್ತದೆಂದು ನಾವು ಭಾವಿಸಿದ್ದೆವು. ಆದರೆ ಅದು ಬರುವ ಸೂಚನೆಗಳು ಕಾಣುತ್ತಿಲ್ಲ. ಅದನ್ನು ತಪ್ಪದೆ ಬರುವ ಜುಲೈ ಸೆಷನ್ನಿನಲ್ಲಾದರೂ ಚರ್ಚೆಗಿಡಬೇಕೆಂದು ಹೇಳುತ್ತೇನೆ. ಇಷ್ಟು ಮಾತುಗಳನ್ನು ಹೇಳಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸೋಲೂರು ಸಿದ್ದಪ್ಪ (ಕುದೂರು).—ಸನ್ಮಾನ್ಯ ಸಭಾಪತಿಗಳೇ: ಈ ದಿವಸ ನಮ್ಮ ಮುಂದೆ ಇಟ್ಟಿರತಕ್ಕ ಡಿಮ್ಯಾಂಡುಗಳನ್ನು ನಾನು ಸ್ವಾಗತಿಸುತ್ತಾ ಸರ್ಕಾರಕ್ಕೆ ಅಧ್ಯಕ್ಷರ ಮೂಲಕ ಕೆಲವು ಸಲಹೆಗಳನ್ನು ಮಾಡಬೇಕೆಂದು ನಾನು ತಮ್ಮ ಮುಂದೆ ನಿಂತಿದ್ದೇನೆ. ನಾವು ಈ ದಿವಸ ಇಲ್ಲಿ ಕೊಡತಕ್ಕ ಸಲಹೆಗಳನ್ನು ಸರ್ಕಾರದವರು ಕಾರ್ಯರೂಪಕ್ಕೆ ತರದಿದ್ದರೆ ಆ ಸಲಹೆಗಳನ್ನು ಕೊಟ್ಟವರಿಗೆ ಬಹಳ ನೋವಾಗುತ್ತದೆ, ವ್ಯಸನವಾಗುತ್ತದೆ. ಈಗಾಗಲೇ ಸರ್ಕಾರದವರು ಆ ತಾಲ್ಲೂಕ್ ಬೋರ್ಡುಗಳಿಗೆ ಎರಡಾವರ್ತಿ ಪ್ರಮೋಷನ್ ಕೊಟ್ಟಾಯಿತು. ಇನ್ನು ಹಾಗೆ ಪ್ರಮೋಷನ್ ಕೊಡುವುದಕ್ಕೆ ಕಾಲಾವಕಾಶವಿಲ್ಲ. ನಾವು ಇದೇ ಅಧಿವೇಶನದಲ್ಲಿ ಕೊಂಡಜ್ಜಿ ಬಸಪ್ಪನವರ ರಿಪೋರ್ಟ್ ಚರ್ಚೆಗೆ ಬರುತ್ತದೆಂದು ನಿರೀಕ್ಷಣೆ ಮಾಡಿಕೊಂಡಿದ್ದೆವು. ಆದರೆ ಆ ರಿಪೋರ್ಟ್ ನಮ್ಮ ಮುಂದೆ ಚರ್ಚೆಗೆ ಬರುತ್ತದೆಯೋ ಇಲ್ಲವೋ ಎನ್ನತಕ್ಕ ಒಂದು ಸಂದೇಹ ಉಂಟಾಗಿದೆ. ಆದುದರಿಂದ ಸರ್ಕಾರದವರು ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿವಹಿಸಿ ಇದನ್ನು ಕಾರ್ಯರೂಪಕ್ಕೆ ತರಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಈ ತಾಲ್ಲೂಕ್ ಬೋರ್ಡುಗಳ ರಚನೆಯ ಬಗ್ಗೆ ಈಗಾಗಲೆ ಸಾಕಷ್ಟು ಕಾಲ ವಿಳಂಬವಾಗಿದೆ. ನಾವು ಸಮುದ್ರದಲ್ಲಿರತಕ್ಕ ನೀರಿನಷ್ಟು ಹಣವನ್ನು ಖರ್ಚು ಮಾಡಿದಾಗ್ಯೂ ಪ್ರಯೋಜನವೇನೂ ಕಂಡುಬರುವುದಿಲ್ಲ. ಆದರೆ

ಅಲ್ಲಿಯ ಕೆಲಸ ಕಾರ್ಯಗಳನ್ನು ಮಾಡುವಾಗ ಕೆಲವು ಅನಿವಾರ್ಯಗಳು ಉಂಟಾಗಿರಬಹುದು. ಆದರೆ ಮಾನ್ಯ ಮಂತ್ರಿಗಳು ಉತ್ತರ ಕೊಡತಕ್ಕ ಕಾಲದಲ್ಲಿ ಈ ಚುನಾವಣೆಗಳು ಏಕೆ ವಿಳಂಬವಾಗಿವೆ ಎನ್ನುವುದರ ಬಗ್ಗೆ ವಿವರಣೆ ಕೊಡುತ್ತಾರೆಂದು ನಂಬಿದ್ದೇನೆ. ಇನ್ನು ಗ್ರಾಮ ಪಂಚಾಯಿತಿಗಳು ಕಾರ್ಯರೂಪಕ್ಕೆ ಬಂದು 6—7 ವರ್ಷಗಳಾಯಿತು. ಅವುಗಳಿಗೆ ಸೆಕ್ರೆಟರಿಗಳನ್ನು ನೇಮಕ ಮಾಡುವ ಕೆಲಸ ಇನ್ನೂ ಆಗಿಲ್ಲ. ಹಿಂದೆ ಶ್ರೀ ಎಂ. ವಿ. ಕೃಷ್ಣಪ್ಪನವರು ಇದ್ದಾಗಲೇ ಆದನ್ನು ಅನೌನ್ಸ್ ಮಾಡುತ್ತೇವೆಂದು ಹೇಳಿದ್ದರು. ಆದರೆ ಅದಿನ್ನೂ ಆಗಲಿಲ್ಲ. ಇದರಿಂದ ಈ ದಿವಸ ಸರ್ಕಾರಕ್ಕೇ ಕಂದಾಯದ ರೂಪದಲ್ಲಿ ಬರಬೇಕಾದ ಕೋಟ್ಯಾಂತರ ರೂಪಾಯಿಗಳು ಬಾಕಿ ಬಿದ್ದಿವೆ. ಹಣ ವಸೂಲಾಗಿಲ್ಲ. ಸರ್ಕಾರದವರು ಹೀಗೆ ಅಲಕ್ಷ್ಯ ಮಾಡುತ್ತಾ ಹೋದರೆ ಮುಂದೆ ಬಹಳ ಕಷ್ಟವಾಗುತ್ತೆ. ಆ ಹಣ ಈ ದಿವಸ ಸರ್ಕಾರದವರಲ್ಲಿ ಇದ್ದಿದ್ದರೆ ಅದನ್ನು ಸಹಕಾರ ಸಂಸ್ಥೆಗಳಿಗೆ ಸಾಲ ಕೊಡಬಹುದಾಗಿತ್ತು. ಇಲ್ಲವೇ ರಾಜ್ಯದಲ್ಲಿ ನೀರಾವರಿ ಇತ್ಯಾದಿ ಅಭಿವೃದ್ಧಿಯ ಕಾಂಗಾರಿಗಳನ್ನು ನಡೆಸಬಹುದಾಗಿತ್ತು. ಸರ್ಕಾರ ಈ ವಿಚಾರಕ್ಕೆ ಗಮನ ಕೊಡದಿರುವುದು ಬಹಳ ಶೋಚನೀಯ. ನನ್ನ ಅಭಿಪ್ರಾಯದಲ್ಲಿ ಈ ಒಂದು ತೊಂದರೆಯುಂಟಾಗುವುದಕ್ಕೆ ಕಾರಣ ಏನಿರಬಹುದು ಎಂಬುದನ್ನು ನೋಡಿದ್ದಾರಲ್ಲಿ ಈ ದಿವಸ ಪಂಚಾಯಿತಿ ರಾಜ್ಯ ಮತ್ತು ಸಹಕಾರ ಈ ಎರಡು ಶಾಖೆಗಳಿಗೂ ಒಬ್ಬರೇ ಸಚಿವರು ಇರುವುದರಿಂದ ಹೀಗಾಗಿರಬಹುದು ಅನಿಸುತ್ತದೆ. ಆದ್ದರಿಂದ ಸರ್ಕಾರದವರು ಈ ವಿಚಾರವನ್ನು ತೀವ್ರವಾಗಿ ಆಲೋಚನೆ ಮಾಡಿ ಇವುಗಳಿಗೆ ಪ್ರತ್ಯೇಕ ಮಂತ್ರಿಗಳು ಇರುವಂತೆ ಒಂದು ವ್ಯವಸ್ಥೆ ಮಾಡಬೇಕೆಂದು ಸಲಹೆ ಮಾಡುತ್ತೇನೆ. ದೇಶದಲ್ಲಿ ಈ ತಾಲ್ಲೂಕ್ ಬೋರ್ಡುಗಳು ಮತ್ತು ಪಂಚಾಯಿತಿಗಳು ರಚನೆಯಾದ ಮೇಲೆ ಇವುಗಳಿಗೆ ಸರ್ಕಾರದವರು ಕೊಡುತ್ತಿರುವ ಹಣ ಸಾಲದು. ಇದರಿಂದ ಅನೇಕ ಕೆಲಸಗಳು ಹಾಗೆ ಉಳಿದಿವೆ. ಅಲ್ಲಿಗೆ ಹೆಚ್ಚಿನ ಹಣವನ್ನು ಕೊಟ್ಟರೆ ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚಿನ ಕೆಲಸಗಳಿಗಾಗಿ ಜನಕ್ಕೆ ಹೆಚ್ಚಿನ ಅನುಕೂಲತೆಗಳೊದಗುವುದೇ ಅಲ್ಲದೆ ಅವರಿಂದ ಸರ್ಕಾರಕ್ಕೂ ಲಾಭವಾಗುವುದು. ದೇಶವು ಅಭ್ಯುದಯವಾಗುವುದು ಆದುದರಿಂದ ಆ ಸಂಸ್ಥೆಗಳಿಗೆ ಹೆಚ್ಚಿನ ಗ್ರಾಂಟನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದಕ್ಕೆ ಒಂದು ಸಣ್ಣ ಉದಾಹರಣೆಯಾಗಿ ಹೇಳುವುದಾದರೆ ಈ ದಿವಸ ರಾಜ್ಯದಲ್ಲಿರತಕ್ಕ ಅನೇಕ ಸಣ್ಣ ಸಣ್ಣ ಕೆರೆಗಳ ಜೀರ್ಣೋದ್ಧಾರ ಕೆಲಸವನ್ನು ಈ ತಾಲ್ಲೂಕ್ ಬೋರ್ಡುಗಳಿಗೆ ವಹಿಸಿದ್ದಾರೆ. ಅವರಿಗೆ ಅದಕ್ಕಾಗಿ ಬೇಕಾಗುವ ಹಣವನ್ನು ಒದಗಿಸಿಲ್ಲ. ಇವರು ಪ್ರತಿಯೊಂದು ತಾಲ್ಲೂಕಿಗೂ 2—3 ಸಾವಿರ ರೂಪಾಯಿಗಳನ್ನು ಕೊಟ್ಟರೆ ಅದರಿಂದ ಯಾವ ಕೆರೆಯನ್ನು ಜೀರ್ಣೋದ್ಧಾರ ಮಾಡುವುದಕ್ಕೆ ಸಾಧ್ಯವಿದೆ ! ಈ ಅಂಶವನ್ನು ಸರ್ಕಾರದವರು ಮುಖ್ಯವಾಗಿ ಆಲೋಚನೆ ಮಾಡಬೇಕು. ಈ ಹಿಂದೆ ಈ ಎಲ್ಲಾ ಕೆರೆಗಳೂ ಪಿ.ಡಬ್ಲ್ಯು.ಡಿ. ಛಾರ್ಜಿನಲ್ಲಿದ್ದುವು. ಅವುಗಳನ್ನು ಇತ್ತೀಚೆಗೆ ತಾಲ್ಲೂಕ್ ಬೋರ್ಡುಗಳಿಗೆ ವರ್ಗ ಮಾಡಿದರು. ಅವರಿಗೆ ವರ್ಗಾಯಿಸಿದ ಮೇಲೆ ಅವುಗಳಿಗೆ ಅಗತ್ಯವಾದ ಹಣವನ್ನು ಒದಗಿಸಬೇಕು ಇಲ್ಲವೇ ಅವನ್ನು ಮತ್ತೆ ಪಿ.ಡಬ್ಲ್ಯು.ಡಿ. ಹಿಂದಕ್ಕೆ ಕೊಟ್ಟು ಅವುಗಳನ್ನು ಜೀರ್ಣೋದ್ಧಾರ ಮಾಡುವಂತೆ ಮಾಡಿ ತನ್ಮೂಲಕ ದೇಶದಲ್ಲಿ ಹೆಚ್ಚು ಆಹಾರವನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

7-00 P.M.

ರಾಷ್ಟ್ರೀಯ ವಿಸ್ತರಣಾ ಯೋಜನೆಗೆ ಸಂಬಂಧಪಟ್ಟ ಹಾಗೆ ಮೊದಲನೆಯ ಪಂಚವಾರ್ಷಿಕ ಯೋಜನೆ, ಎರಡನೇ, ಪಂಚವಾರ್ಷಿಕಯೋಜನೆ, ಮೂರನೆಯ ಪಂಚವಾರ್ಷಿಕಯೋಜನೆಗಳು ಮುಗಿದು ನಾಲ್ಕನೆಯ ಪಂಚವಾರ್ಷಿಕಯೋಜನೆಯು ಮುಂದುವರಿಯುತ್ತಾ ಇದೆ. ಆದರೆ ಸರ್ಕಾರದವರು ನಿರೀಕ್ಷಣೆ ಮಾಡಿದ ರೀತಿಯಲ್ಲಿ ರಾಷ್ಟ್ರೀಯ ವಿಸ್ತರಣಾ ಕಾರ್ಯಕ್ರಮದಿಂದ ಸಾಕಷ್ಟು ಅನುಕೂಲವನ್ನು ಹೊಂದಿಲ್ಲ. ಪ್ರಜೆಗಳಿಗೆ ಒದಗಿಸಬೇಕಾದ ಸೌಕರ್ಯಗಳನ್ನು ಒದಗಿಸಿಲ್ಲ. ಗ್ರಾಮ ಸೇವಕರು, ಗ್ರಾಮ ಸೇವಕಿಯರು ಮಾಡತಕ್ಕ ಕೆಲಸಗಳು ಕಾರ್ಯಕ್ರಮಗಳು ವ್ಯವಸ್ಥಿತವಾದ ಮಾರ್ಗಗಳಲ್ಲಿ ನಡೆಯುವುದಕ್ಕೆ ಭದ್ರವಾದ ಒಂದು ವ್ಯವಸ್ಥೆ ಇರಬೇಕಾಗಿತ್ತು, ಅದು ಇಲ್ಲ. ಈಗ ಉದಾಹರಣೆ ಹೇಳುವುದಾದರೆ ನನ್ನ ತಾಲ್ಲೂಕಿನ ವಿಷಯವನ್ನೇ ಹೇಳುವುದಾದರೆ ರಾಷ್ಟ್ರೀಯ ವಿಸ್ತರಣಾ ಯೋಜನೆ ನನ್ನ ತಾಲ್ಲೂಕಿಗೆ 1955 ರಲ್ಲಿ ಬಂತು. ಎಂದರೆ ಇಲ್ಲಿಗೆ 13 ವರ್ಷಗಳಾದುವು. ಈ ರಾಷ್ಟ್ರೀಯ ವಿಸ್ತರಣಾ ಯೋಜನೆಯಲ್ಲಿ ಏನೇನು ಕಾರ್ಯಕ್ರಮಗಳು ನಡೆದಿವೆ ಅವು ನಾವು ನಿರೀಕ್ಷಿಸಿದ ಮಟ್ಟದಲ್ಲಿ ನಡೆದಿಲ್ಲ. ನಾನು 1927 ನೇ ಇಸವಿಯಿಂದ ಇಲ್ಲಿಯವರೆಗೂ ಶಾಸನ ಸಭೆಯ ಸದಸ್ಯನಾಗಿ ಡಿಸ್ಟ್ರಿಕ್ಟ್ ಬೋರ್ಡು ಸದಸ್ಯನಾಗಿ ನೋಡಿದ್ದೇನೆ. ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಕಾರ್ಯಗಳಿಗೆ ಸರ್ಕಾರದವರು ಒದಗಿಸತಕ್ಕಂಥ ಹಣ ಏನಿದೆ ಅದನ್ನು ಸಮಷ್ಟಿಯ ಮಾಡಿ ಸಂಸ್ಥಾನದ ಎಲ್ಲಾ ಜಿಲ್ಲೆಗಳಿಗೂ, ಎಲ್ಲಾ ತಾಲ್ಲೂಕುಗಳಿಗೂ

(ಶ್ರೀ ಸೋಲೂರು ಸಿದ್ದಪ್ಪ)

ಸಮಾನ್ವಯವಾಗುವ ರೀತಿಯಲ್ಲಿ ಹಣವನ್ನು ಖರ್ಚು ಮಾಡಿದ್ದಾರೆ. ಆದ್ದರಿಂದ ಆ ರೀತಿಯಲ್ಲಿ ಸರ್ಕಾರದವರು ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿಕಾರ್ಯಗಳಿಗೆ ಹಣವನ್ನು ಒದಗಿಸಿ ಎಲ್ಲಾ ತಾಲ್ಲೂಕು ಮತ್ತು ಜಿಲ್ಲೆಗಳಿಗೂ ಸಮನ್ವಯವಾಗುವ ರೀತಿಯಲ್ಲಿ ಹಣವನ್ನು ಖರ್ಚು ಮಾಡಬೇಕು. ಮತ್ತು ಅಲ್ಲಿ ನಡೆಯಬೇಕಾಗಿರತಕ್ಕ ಕೆಲಸಕಾರ್ಯಗಳನ್ನು ಮಾಡಿಕೊಡಬೇಕು ಎಂದು ನಾನು ಹೇಳುತ್ತೇನೆ. ಅಮೇಲೆ ಶ್ರೀ ಕೊಂಡಜ್ಜಿ ಬಸಪ್ಪನವರ ವರದಿಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಸಾಧ್ಯವಿದೆಯೋ ಅಥವಾ ಸಾಧ್ಯವಿಲ್ಲವೇ ಎಂಬುದನ್ನು ಹೇಳಬೇಕು. ಸಹಕಾರ ಸಂಘಗಳ ಟ್ರಿಬ್ಯುನಲ್, ರೆವಿನ್ಯೂ ಟ್ರಿಬ್ಯುನಲ್ ಇವುಗಳನ್ನು ವಿಸ್ತರಿಸಬೇಕಾದ್ದು ಅವಶ್ಯಕ. ಟ್ರಿಬ್ಯುನಲ್ಲಿಗೆ ಹೆಚ್ಚಿನ ಕೇಸುಗಳು ಬಂದರೆ ಕಾರ್ಯಗಳು ನಿಧಾನವಾಗಿ ಆದರೆ, ಆಗ ಸಹಕಾರ ಸಂಘಗಳಿಗೆ ಅದರಿಂದ ತೀವ್ರಾಸಕ್ತಿ ಕಡಿಮೆಯಾಗುತ್ತದೆ. ಆದ್ದರಿಂದ ಸಹಕಾರಸಂಘಗಳಿಗೆ ಒಂದು ಟ್ರಿಬ್ಯುನಲ್ ಕೋರ್ಟ್ ಮಾಡಿ ಅದನ್ನು ರೆವಿನ್ಯೂ ಟ್ರಿಬ್ಯುನಲ್ ಬೋರ್ಡಿಗೆ ಸೇರಿಸಿ ಆ ಕಾರ್ಯ ಮುಂದುವರಿಯುವ ಹಾಗೆ ಮಾಡಬೇಕು. ಹಾದ ವೆಚ್ಚವನ್ನು ಕಡಿಮೆ ಮಾಡುವುದರ ಮೂಲಕ ಜಾಗ್ರತೆಯಾಗಿ ಕಾರ್ಯವನ್ನು ಮುಗಿಸುವುದಕ್ಕೆ ಸಾಧ್ಯವಿಲ್ಲ ಎಂದು ನಾನು ಹೇಳುತ್ತೇನೆ.

ಇನ್ನು ನಮ್ಮ ಸಂಸ್ಥಾನದಲ್ಲಿ ಪ್ರತಿಯೊಂದು ಡಿಸ್ಟ್ರಿಕ್ಟಿಗೂ ಒಂದೊಂದು ಡೆವಲಪ್‌ಮೆಂಟ್ ಬ್ಯಾಂಕನ್ನು ಸ್ಥಾಪನೆ ಮಾಡಬೇಕು. ಈಗ ಡಿ.ಸಿ.ಸಿ. ಬ್ಯಾಂಕ್ ಇರುವ ರೀತಿಯಲ್ಲಿ ಮಾಡಬೇಕು. ಸರ್ಕಾರದವರು ರೈತರಿಗೆ ಕೊಡತಕ್ಕಂಥ ಹಣ ಜಾಗ್ರತೆಯಾಗಿ ಅವರಿಗೆ ಮುಟ್ಟಿ ಅವರು ಬಾವಿಯನ್ನು ತೆಗೆದು ಜಮೀನ ಆಬಾದು ಮಾಡುವುದಕ್ಕೆ ಈಗ ತೊಂದರೆಯಾಗುತ್ತಿದೆ. ಆದ್ದರಿಂದ ಈ ಅಭಿವೃದ್ಧಿ ಬ್ಯಾಂಕುಗಳನ್ನು ಪ್ರತಿಯೊಂದು ಜಿಲ್ಲೆಗೂ ಸ್ಥಾಪನೆ ಮಾಡಿ ಅವುಗಳ ಮುಖಾಂತರ ರೈತರಿಗೆ ಹಣವನ್ನು ಕೊಡುವುದಾದರೆ ಅವರು ಜಾಗ್ರತೆಯಾಗಿ ಸರ್ಕಾರದಿಂದ ಬರತಕ್ಕಂಥ ಸಹಾಯವನ್ನು, ಸಾಲವನ್ನು ಪಡೆದುಕೊಂಡು ರೈತರು ಆಯಾ ಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಅನುಕೂಲವಾಗುತ್ತದೆ. ಇಷ್ಟೊಂದು ಹಣವನ್ನು ಸಹಕಾರ ಸಂಘಗಳು ಕಷ್ಟಪಟ್ಟು ರೈತರ ಏಳಿಗೆಗೋಸ್ಕರ ಖರ್ಚು ಮಾಡಬೇಕಾದರೆ ಆ ಕೆಲಸಗಳು ಕಾರ್ಯಗತವಾಗಬೇಕಾಗಿದ್ದರೆ, ಒಂದು ಸರಿಯಾದಂತಹ ವ್ಯವಸ್ಥೆ ಇರಬೇಕಾದ್ದು ಅವಶ್ಯಕ.

ಇನ್ನು ಗ್ರಾಮಪಂಚಾಯಿತಿಗಳಿಗೆ ಸೆಕ್ರೆಟರಿಗಳನ್ನು ನೇಮಿಸತಕ್ಕದ್ದು ಜಾಗ್ರತೆಯಾಗಿ ಆಗಬೇಕು. ಶ್ಯಾನುಭೋಗರು ಮತ್ತು ಪಟೇಲರುಗಳಿಗೆ ನಿವೃತ್ತಿವೇತನವನ್ನು ಜಾಗ್ರತೆಯಾಗಿ ಕೊಡಬೇಕು. ಕಾರಣ ಇಷ್ಟೆ, ವಿಲೇಜ್ ಆಫೀಸರುಗಳನ್ನು ತೆಗೆಯುಕ್ಕ ಬಗ್ಗೆ ಸರ್ಕಾರದ ಆರ್ಡರ್ ಆದಮೇಲೆ ಅವರು ಕೆಲಸದಲ್ಲಿ ಇರತಕ್ಕದ್ದು ಕಷ್ಟಸಾಧ್ಯ. ಆದ್ದರಿಂದ ಗ್ರಾಮಪಂಚಾಯಿತಿಗಳಲ್ಲಿ ಕೆಲಸಗಳು ಸುಲಲಿತವಾಗಿ ಆಗಬೇಕಾಗಿದ್ದ ಪಕ್ಷದಲ್ಲಿ ಸರ್ಕಾರದ ನಿಯಮಕ್ಕನುಗುಣವಾಗಿ ಗ್ರಾಮ ಪಂಚಾಯಿತಿಯ ಸೆಕ್ರೆಟರಿಗಳನ್ನು ಜಾಗ್ರತೆಯಾಗಿ ನೇಮಿಸಬೇಕು. ಇಷ್ಟು ಹೇಳಿ ಕೆಲವು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಮಾನ್ಯ ಅಧ್ಯಕ್ಷರು ನನಗೆ ಕಾಲಾವಕಾಶವನ್ನು ಕೊಟ್ಟದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ (ಹುಲಿಯೂರುದುರ್ಗ).—ಮಾನ್ಯ ಅಧ್ಯಕ್ಷರೇ, ಸಹಕಾರ ಸಂಘಗಳ ಸ್ಥಾಪನೆಯಿಂದ ಶೋಷಣೆ ರಹಿತವಾದ ಸಮಾಜವನ್ನು ಸ್ಥಾಪನೆ ಮಾಡುವುದಕ್ಕೆ ಸಹಾಯ ಆಗಬಹುದು, ಅದರ ಜೊತೆಗೆ ಸಂಪೂರ್ಣವಾದ ಸ್ವಾತಂತ್ರ್ಯ ಇರತಕ್ಕಂಥ ಆರ್ಥಿಕ ವ್ಯವಸ್ಥೆ ಅಥವಾ ಪೂರ್ಣವಾದ ಹತೋಟಿ ಇರತಕ್ಕ ಆರ್ಥಿಕ ವ್ಯವಸ್ಥೆ ಈ ಮಧ್ಯದಲ್ಲಿ ಎಲ್ಲರಿಗೂ ಸಮಂಜಸವಾದ ರೀತಿಯಲ್ಲಿ ನಡೆದುಕೊಂಡು ಹೋಗುವುದಕ್ಕ ಗೋಲ್ಡನ್ ಮೀನ್ ರೀತಿ ನಡೆದುಕೊಂಡು ಹೋಗುವುದಕ್ಕೆ ಸಹಾಯವಾಗತಕ್ಕಂಥಾ ರೀತಿಯಲ್ಲಿ ಸ್ಥಾಪನೆಯಾಗಿದೆ. ಅದರ ಸ್ಥಾಪನೆಯ ಉದ್ದೇಶವೇನೋ ಬಹಳ ಘನವಾದದ್ದು. ಆದರೆ—ಈಗ ಈ ಸಂಸ್ಥೆಗಳನ್ನು ಸರ್ಕಾರದವರು ಏತಕ್ಕೋಸ್ಕರ ಉಪಯೋಗಿಸುತ್ತಿದ್ದಾರೆ ಎಂದು ಹೇಳಿದರೆ ರಾಜ್ಯದ ಮಟ್ಟದಲ್ಲಿ ಯಾವ ವಿಧವಾದ ಒಂದು ರಾಜಕೀಯ ವ್ಯವಸ್ಥೆ ಇದೆ ಅದರಂತೆ ಎಲ್ಲಾ ಮಟ್ಟದಲ್ಲಿಯೂ ಗುಂಪಿನ ರಾಜಕೀಯವಾಗಲೀ, ಪಕ್ಷದ ರಾಜಕೀಯವಾಗಲೀ ಅವುಗಳನ್ನು ಪೋಷಿಸಿಕೊಂಡು ಬರಲು ಸಹಕಾರ ಸಂಘಗಳು ಸಹಕಾರಿಯಾಗಿವೆ. ಎಲ್ಲಾ ಹಂತಗಳಲ್ಲಿಯೂ ಈ ಸಹಕಾರ ಸಂಘಗಳನ್ನು ರಾಜಕೀಯಕ್ಕೋಸ್ಕರ ಉಪಯೋಗಿಸುತ್ತಿದ್ದಾರೆ. ಇದಕ್ಕೆ ಹಲವಾರು ನಿದರ್ಶನಗಳನ್ನು ನಾವು ನೋಡಬಹುದು. ಅಧಿಕಾರಿಗಳು ಎಷ್ಟೋ ಸ್ವತಂತ್ರವಾಗಿ ನ್ಯಾಯವಾಗಿ

ಅಧಿಕಾರ ನಡೆಸಬೇಕು ಎಂದರೂ ಕೂಡ ಅವರಿಗೆ ಅವಕಾಶವನ್ನು ಕೊಡದೆ ಅವರ ಸೇವೆಯನ್ನೂ ಕೂಡ ರಾಜಕೀಯಕ್ಕೋಸ್ಕರ ಉಪಯೋಗಿಸಿಕೊಳ್ಳತಕ್ಕಂಥ ಅನೇಕ ನಿದರ್ಶನಗಳನ್ನು ನಾವು ನೋಡಬಹುದು. ಇನ್ನು ಕೆಲವು ಸಹಕಾರ ಸಂಘಗಳ ವಿಷಯದಲ್ಲಿ ಆಳವಾಗಿ ನಾವು ಯೋಚನೆ ಮಾಡಿದರೆ ಇವೊತ್ತು ಸಹಕಾರ ಸಂಘಗಳಿಂದ ಬಹಳ ಒಳ್ಳೆಯ ಪ್ರಯೋಜನವಾಗುವುದಕ್ಕೆ ಬದಲಾಗಿ ಎಲ್ಲೆಲ್ಲಿ ದುರಾಡಳಿತ, ಭ್ರಷ್ಟಾಚಾರ, ಎಲ್ಲೆಲ್ಲಿ ಲಂಚಕೋರತನ ಇವುಗಳನ್ನು ಉರುಳಿಸುವುದಕ್ಕೆ ಹೋಗಲಾಡಿಸುವುದಕ್ಕೆ ಪ್ರಯತ್ನ ಮಾಡಬೇಕೋ ಅಂಥಾ ಸ್ಥಳಗಳಲ್ಲಿ, ಕ್ಷೇತ್ರಗಳಲ್ಲಿ ಅವುಗಳನ್ನು ಬೆಳೆಸುವುದಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಡುತ್ತಿರುವುದು ನಮ್ಮ ಅನುಭವಕ್ಕೆ ಕಂಡು ಬರುತ್ತಿದೆ.

ಗೊಬ್ಬರದ ಹಂಚಿಕೆಯ ವಿಷಯವನ್ನೇ ಹೇಳುವುದಾದರೆ ವ್ಯವಸಾಯ ಇಲಾಖೆಯವರು ಗೊಬ್ಬರವನ್ನು ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಂಚತಕ್ಕ ವ್ಯವಸ್ಥೆ ಇತ್ತು. ಈಗ ಅದಕ್ಕೆ ಬದಲಾಗಿ ಕೇಂದ್ರದಿಂದ ಬರತಕ್ಕ ಗೊಬ್ಬರವನ್ನು ಸಹಕಾರ ಸಂಘಗಳವರೇ ತೆಗೆದುಕೊಂಡು ಹೋಗಿ ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಹಂಚತಕ್ಕ ವ್ಯವಸ್ಥೆ ಇದೆ. ಇವೊತ್ತು ಅಲ್ಲಿಯೂ ಕೂಡ ಯಾವ ಒಂದು ಅವ್ಯವಸ್ಥೆ ಇದೆ, ಯಾವರೀತಿಯಲ್ಲಿ ಗೊಬ್ಬರ ದುರುಪಯೋಗವಾಗುತ್ತದೆ ಎಂಬುದು ಇವೊತ್ತು ನಮಗೆ ಕಂಡುಬರುತ್ತದೆ. ಜಿಲ್ಲಾ ಮಟ್ಟದಲ್ಲಿ, ತಾಲ್ಲೂಕು ಮಟ್ಟದಲ್ಲಿ ವ್ಯವಸಾಯ ಇಲಾಖೆಯ ಅಧಿಕಾರಿಗಳು ಮತ್ತು ಸಹಕಾರ ಸಂಘಗಳ ಅಧಿಕಾರಿಗಳು ಒಂದು ಕಡೆ ಸೇರಿ ವ್ಯವಸಾಯಕ್ಕೆ ರೈತರಿಗೆ ಎಷ್ಟೆಷ್ಟು ಗೊಬ್ಬರವನ್ನು ಕೊಡಬೇಕು ಎಂಬುದನ್ನು ನೋಡಿಕೊಂಡು ಸೊಸೈಟಿಗಳಿಗೆ ಗೊಬ್ಬರವನ್ನು ಹಂಚಿಕೆ ಮಾಡುವುದನ್ನು ತೀರ್ಮಾನ ಮಾಡುತ್ತಾರೆ. ಯಾವ ಸೊಸೈಟಿಯಲ್ಲೇ ಆಗಲೀ ಎಲ್ಲಿ ಹೆಚ್ಚು ನೀರಾವರಿ ಇಲ್ಲವೋ ಅಂಥಾ ಕಡೆ ಹೆಚ್ಚು ಗೊಬ್ಬರವನ್ನೂ ಕೊಡುವುದು, ಎಲ್ಲಿ ಹೆಚ್ಚು ನೀರಾವರಿ ಇದ್ದು, ಎಲ್ಲಿ ಹೆಚ್ಚು ಗೊಬ್ಬರದ ಅವಶ್ಯಕತೆ ಇದೆಯೋ ಅಂಥಾ ಕಡೆ ಗೊಬ್ಬರವನ್ನು ಕೊಡದೇ ಇರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರಿಂದಾಗಿ ಅಮೋನಿಯಂ ಸಲ್ಫೇಟಾಗಲೀ, ಫರ್ಟಿಲೈಜರ್ ಆಗಲೀ, ಗೊಬ್ಬರವಾಗಲೀ ಅದನ್ನು ದುರುಪಯೋಗ ಮಾಡಿ ಅಧಿಕಾರಿಗಳು ಮತ್ತು ಖಾಸಗೀಯವರು ಒಟ್ಟಿಗೆ ಸೇರಿಕೊಂಡು ಅದನ್ನು ಹೊರಗಡೆ ಕಳುಹಿಸಿ ಲಾಭ ಸಂಪಾದನೆ ಮಾಡುವುದಕ್ಕೆ ಸರ್ಕಾರದವರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ ಎಂಬುದು ಕಣ್ಣಾರೆ ಕಂಡುಬರುತ್ತಿದೆ. ಅದನ್ನು ನಾನು ಈ ಸಭೆಯ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಸೊಸೈಟಿಗಳ ಆಡಿಟ್ ವಿಷಯದಲ್ಲಿ ಶ್ರೀಮಾನ್ ಮಂಚೇಗೌಡರು ಬಹಳ ಚೆನ್ನಾಗಿ ಹೇಳಿದ್ದಾರೆ. ಆಡಿಟರುಗಳು ಸೊಸೈಟಿಯಲ್ಲಿ ಆಡಿಟ್ ಮಾಡತಕ್ಕ ಕಾಲದಲ್ಲಿ ಅಲ್ಲಿ ಏನು ದೋಷಗಳು ಇವೆ ಅವುಗಳನ್ನು ಆ ಸೊಸೈಟಿಗಳಲ್ಲಿರತಕ್ಕ ಖಾಸಗಿಯವರು ಆಡಿಟರುಗಳ ಜೊತೆಯಲ್ಲಿ ಸೇರಿಕೊಂಡು ಆ ದೋಷಗಳನ್ನು ಮುಚ್ಚಿ ಬಹಳ ಕಾಲ ಸೊಸೈಟಿಗಳನ್ನು ನಡೆಸಿಕೊಂಡು ಬರುತ್ತಾರೆ. ಒಂದು ವೇಳೆ ಅಲ್ಲಿಗೆ ಮೇಲ್ಮಟ್ಟದ ಅಧಿಕಾರಿಗಳು ಬಂದರೂ ಕೂಡ ಅವರೂ ಈ ಕುಹಕದಲ್ಲಿ ಸೇರಿಕೊಳ್ಳುತ್ತಾರೆ. ಅಲ್ಲಿ ಕುತಂತ್ರ ನಡೆಯುತ್ತದೆ. ಇದರಿಂದಾಗಿ ಆ ಸೊಸೈಟಿಗಳಲ್ಲಿರತಕ್ಕ ದೋಷಗಳನ್ನು ಹೊರಗೆಡಹದೆ ಅವುಗಳನ್ನು ಮುಚ್ಚಿ, ಎಲ್ಲರೂ ಸಹಕರಿಸಿ ಸಹಕಾರ ಸಂಘಗಳು ತೀರಾ ಅವ್ಯವಸ್ಥೆಗೆ ಬರುವುದಕ್ಕೆ ಅವರೂ ಕೂಡ ಕಾರಣರಾಗಿದ್ದಾರೆ ಎನ್ನುವುದನ್ನು ನಾವು ನೋಡಬಹುದು. ಆದ್ದರಿಂದ ಆಡಿಟ್ ವ್ಯವಸ್ಥೆ ಬಹಳ ಭದ್ರವಾಗಿ ನಡೆಯಬೇಕು. ನ್ಯಾಯವಾಗಿ ನಡೆಯಬೇಕು. ಅಲ್ಲಿಗೆ ಯೋಗ್ಯ ಅಧಿಕಾರಿಗಳನ್ನು ನೇಮಿಸಿ ಅವು ಸರಿಯಾಗಿ ನಡೆಯುವಂತೆ ವ್ಯವಸ್ಥೆ ಮಾಡಬೇಕು.

ಇನ್ನು ಕೂಡೊಕ್ಕಲು ಸಹಕಾರ ಸಂಘಗಳು ಏನಿವೆ ಅವುಗಳ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳಬೇಕಾಗಿದೆ. ಈಗ ನಮ್ಮ ರಾಜ್ಯದಲ್ಲಿ 524 ಕೂಡೊಕ್ಕಲು ಸಹಕಾರ ಸಂಘಗಳು ಇವೆ ಎನ್ನತಕ್ಕ ಸಮಾಚಾರವನ್ನು ಈಗತಾನೆ ನಾನು ಮಾನ್ಯ ಮಂತ್ರಿಗಳಿಂದ ತರಿಸಿಕೊಂಡೆ. ಅದಕ್ಕೆ ಸುಮಾರು ಒಂದು ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಿದ್ದಾರೆ. ನಾನು ಮಾನ್ಯ ಮಂತ್ರಿಗಳಿಗೆ ಮತ್ತು ಈ ಮನೆಯ ಮಾನ್ಯ ಸದಸ್ಯರುಗಳಿಗೆ ಒಂದು ವಿಚಾರವನ್ನು ತಮ್ಮ ಮೂಲಕ ಹೇಳುವುದಕ್ಕೆ ಇಷ್ಟಪಡುತ್ತೇನೆ, ಏನೆಂದರೆ ಈಗಿರತಕ್ಕಂಥ ಒಟ್ಟು 524 ಸೊಸೈಟಿಗಳ ಪೈಕಿ ಎಷ್ಟು ಕೂಡು ಒಕ್ಕಲು ಸಂಘಗಳು ಕೆಲಸ ಮಾಡುತ್ತಿವೆ, ಎಷ್ಟು ಉತ್ಪತ್ತಿ ಜಾಸ್ತಿಯಾಗಿದೆ, ಹಣ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ ಎಂಬುದನ್ನು ಪರಿಶೀಲನೆ ಮಾಡುವುದು ಅವಶ್ಯಕವಾಗಿದೆ ಈಗ ಕೊಟ್ಟಿರತಕ್ಕಂಥ ಒಂದು ಕೋಟಿ ರೂಪಾಯಿಗಳಲ್ಲಿ ಮುಕ್ಕಾಲು

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಭಾಗದಷ್ಟು ದುರುಪಯೋಗವಾಗಿದೆಯೆಂದು ಧಾರಾಳವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ಈ ಬಗ್ಗೆ ತನಿಖೆ ಮಾಡಲು ಒಂದು ಉಪಸಮಿತಿಯನ್ನು ಈ ಸಭೆಯ ಸದಸ್ಯರುಗಳು ಒಳಗೊಂಡಂತೆ ಏರ್ಪಾಡು ಮಾಡಿದರೆ, ಎಷ್ಟು ಕೂಡು ಒಕ್ಕಲುಗಳು ಎಲ್ಲೆಲ್ಲಿ ಕೆಲಸ ಮಾಡುತ್ತಿವೆ, ಎಷ್ಟರಮಟ್ಟಿಗೆ ಹಣದ ಉಪಯೋಗ ಮಾಡಿಕೊಂಡಿದ್ದಾರೆ, ಎಷ್ಟರಮಟ್ಟಿಗೆ ಆಹಾರದ ಉತ್ಪಾದನೆಯಾಗಿದೆ ಎಂಬುದನ್ನೆಲ್ಲಾ ಪರಿಶೀಲನೆ ಮಾಡುವುದಕ್ಕೆ ಅವಕಾಶವಾಗುತ್ತದೆ. ಈ ರೀತಿ ತನಿಖೆ ಮಾಡಿ, ಏನಾದರು ದೋಷ ಕಂಡುಬಂದರೆ ಈ ಸಂಘಗಳನ್ನು ಮುಚ್ಚಿ ಬಿಡುವುದು ಒಳ್ಳೆಯದು. ಮತ್ತು ಕೊಟ್ಟಿರುವ ಹಣವನ್ನು ಯಾರು ಯಾರು ದುರುಪಯೋಗಪಡಿಸಿಕೊಂಡಿದ್ದಾರೆ, ಅಂತಹವರಿಂದ ವಸೂಲು ಮಾಡಬೇಕು. ಈ ವಿಚಾರದಲ್ಲಿ ಪತ್ರಿಕೆಗಳಲ್ಲಿ ಒಂದು ಹೇಳಿಕೆ ಬಂದಿರುವುದನ್ನು ನೋಡಿದೆ: ಅದರಲ್ಲಿ ಕೇಂದ್ರಸರ್ಕಾರದವರು ಇಂತಹ ಸಂಘಗಳನ್ನು ಇನ್ನೂ ಹೆಚ್ಚಾಗಿ ಬೆಳೆಸಲಿಕ್ಕೆ ಮತ್ತು ಈ ಮೂಲಕ ವ್ಯವಸಾಯದ ಅಭಿವೃದ್ಧಿಯಾಗುವಂತೆ ಮಾಡಲು ಒಂದೊಂದು ಸೊಸೈಟಿಗೂ 39 ಸಾವಿರ ರೂಪಾಯಿಗಳನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆಂದು ತಿಳಿಸಿತ್ತು. ಈ ರೀತಿ ಕೊಡುವುದಾದರೆ ಈಗ ಆಗಿರತಕ್ಕಂಥ ಒಂದು ಕೋಟಿ ರೂಪಾಯಿಗಳ ಜೊತೆಗೆ ಇನ್ನೂ 3—4 ಕೋಟಿ ರೂಪಾಯಿಗಳು ನಷ್ಟವಾಗುವುದಕ್ಕೆ, ಆಹಾರದ ಉತ್ಪತ್ತಿಯಾಗುವುದನ್ನು ತಪ್ಪಿಸುವುದಕ್ಕೆ ಅವಕಾಶವಾಗುತ್ತದೆ. ಯಾರೋ ಕೆಲವರು ಹಣವನ್ನು ತಿನ್ನುವುದಕ್ಕೆ ಕೊಟ್ಟಂತಾಗುತ್ತದೆಂದು ಹೇಳುತ್ತೇನೆ. ಮಾನ್ಯ ಮಂತ್ರಿಗಳು ಈ ಸಭೆಯ ಸದಸ್ಯರುಗಳು ಇರುವಂಥ ಒಂದು ಸಮಿತಿಯನ್ನು ರಚನೆ ಮಾಡಲಿ ಅವರು ಎಲ್ಲಾ ಕಡೆ ಹೋಗಿ ನೋಡಲಿ. ಆ ರೀತಿ ರಚನೆ ಮಾಡುವುದಕ್ಕೆ ಆಗದಿದ್ದರೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ಎಂಬುದು ಇದೆ. ಆ ಕಮಿಟಿಯ ಸದಸ್ಯರು ಬೇಕಾದರೆ ಹೋಗಿ ನೋಡಲಿ. ಆ ರೀತಿ ಹೋಗಿ ಪರಿಶೀಲನೆ ಮಾಡದೆ ಇನ್ನೂ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸರ್ಕಾರದವರು ಮನಸ್ಸು ಮಾಡಬಾರದು ಎಂದು ಸಲಹೆ ಮಾಡುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ತಾಲ್ಲೂಕ್ ಅಭಿವೃದ್ಧಿ ಸಮಿತಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ತಾಲ್ಲೂಕ್ ಅಭಿವೃದ್ಧಿ ಸಮಿತಿಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಗ್ರಾಮ ಮಟ್ಟದಲ್ಲಿ, ತಾಲ್ಲೂಕ್ ಮಟ್ಟದಲ್ಲಿ ಇಂತಹ ಸಂಸ್ಥೆಗಳು ಬೆಳೆದು ಪ್ರಜಾಪ್ರಭುತ್ವವನ್ನು ರಕ್ಷಣೆ ಮಾಡಬೇಕು, ಸ್ವರಾಜ್ಯವನ್ನು ರಕ್ಷಣೆ ಮಾಡಬೇಕು ಎನ್ನುವ ಉದ್ದೇಶದಿಂದ ಈ ಸಂಸ್ಥೆಗಳು ಸ್ಥಾಪನೆಯಾದವು. ಇವತ್ತಿನದಿವಸ ಬಿ. ಡಿ. ಓ. ಗಳು ಯಾವ ಅಧಿಕಾರಿಗಳ ಭಯವೂ ಇಲ್ಲದೆ, ತಮ್ಮ ಮನಸೋ ಇಚ್ಛೆ ಕೆಲಸ ಮಾಡುತ್ತಿದ್ದಾರೆ. ಕ್ಷಾಮ ನಿವಾರಣೆಗಾಗಿ ಸರ್ಕಾರದವರು ಒದಗಿಸಿದ ಹಣವನ್ನು ಇವರು ಇಷ್ಟಬಂದಂತೆ ಖರ್ಚುಮಾಡುತ್ತಿದ್ದಾರೆ. ಕ್ಷಾಮ ಪರಿಹಾರಕ್ಕಾಗಿ ಸರ್ಕಾರದವರು ಒದಗಿಸಿದಂಥ ಹಣ ಸರಿಯಾಗಿ ಖರ್ಚಾಗುತ್ತಿದೆಯೋ ಎನ್ನುವುದನ್ನು ಯಾವ ಮೇಲಧಿಕಾರಿಗಳು ಸಹ ಬಂದು ನೋಡುತ್ತಿಲ್ಲ. ಎಷ್ಟೋ ಸಲ ನೂರು ರೂಪಾಯಿಗಳು ಖರ್ಚಾಗಿದ್ದರೆ 1000 ರೂಪಾಯಿಗಳಿಗೆ ಬಿಲ್ ಕೊಟ್ಟಿರುವುದು ಉಂಟು. ಇಂತಹ ಕೇಸಸ್‌ಗಳನ್ನು ಹಿಡಿದು ವಿಜಿಲೆನ್ಸ್ ಕಮಿಷನ್ ಅವರಿಗೆ ವಿಚಾರಣೆ ಮಾಡುವುದಕ್ಕೆ ಏರ್ಪಾಡು ಮಾಡಬೇಕು. ಇವರ ಕೈಕೆಳಗೆ ಕೆಲಸ ಮಾಡತಕ್ಕಂಥ ಸೂಪರ್‌ವೈಸರ್‌ಗಳು, ಚೀಫ್-ಇಂಜನಿಯರುಗಳಾಗಿದ್ದಾರೆ. ಇವರನ್ನು ತನಿಖೆ ಮಾಡುವವರೇ ಇಲ್ಲ. ಈ ಕಾರಣದಿಂದ ಹಿಂದೆ ಬಿದ್ದಿರತಕ್ಕಂಥ ಸ್ಥಳಗಳು ಅಭಿವೃದ್ಧಿಯಾಗುವುದಕ್ಕೆ ಅವಕಾಶವಾಗುತ್ತಿಲ್ಲ. ಕೇವಲ ಹಣದ ದುರುಪಯೋಗವಾಗುತ್ತಿದೆಯೆಂದು ಹೇಳಬಹುದು. ಸರ್ಕಾರದವರು ಕ್ಷಾಮ ನಿವಾರಣೆಗಾಗಿ ಒದಗಿಸಿರುವ ಹಣದ ಮುಕ್ಕಾಲು ಭಾಗ ಈ ಕಾರಣದಿಂದ ದುರ್ವಿನಿಯೋಗವಾಗುವುದಕ್ಕೆ ಅವಕಾಶವಾಗಿದೆಯೆಂದು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಒಂದು ಮುಖ್ಯವಾದ ವಿಷಯವನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಶಕ್ತಿಮಾನ್ ಜೋಳ, ಮುಸಿಕಿನ ಜೋಳವನ್ನು ಎಲ್ಲಾ ಕಡೆಗೂ ಹಂಚುವುದಕ್ಕೆ ಏರ್ಪಾಡು ಮಾಡಿದ್ದೀರಿ. ಈ ರೀತಿ ಹಂಚುವಾಗ, ಯಾವ ಭಾಗದಲ್ಲಿ ಬೆಳೆಯುವುದಕ್ಕೆ ಯೋಗ್ಯವಾದ ಭೂಮಿ ಇದೆ, ಸಾಕಷ್ಟು ನೀರು ಸಿಗುತ್ತದೆ ಎಂಬುದನ್ನು ನೋಡಿಕೊಂಡು ಹಂಚಬೇಕು. ಮನಸ್ಸಿಗೆ ಬಂದಂತೆ ಎಲ್ಲಾ ಕಡೆಗೂ ಹಂಚಿಕೆ ಮಾಡಿರುವುದರಿಂದ ಎಷ್ಟು ಬೆಳೆಯಾಗುತ್ತದೆಂದು ಒಂದು ಗುರಿ ಇತ್ತೋ ಅದರ ಕಾಲು ಭಾಗವನ್ನೂ ಸಹ ಬೆಳೆಯುವುದಕ್ಕೆ ಸಾಧ್ಯವಾಗಿಲ್ಲ. ಹಂಚಿಕೆ ಮಾಡಿರುವ ಮುಸಿಕಿನ ಜೋಳ ಎಷ್ಟರಮಟ್ಟಿಗೆ ಉಪಯೋಗವಾಗಿದೆ ಎಂಬುದನ್ನು ತನಿಖೆ ಮಾಡುವವರು ಇಲ್ಲವಾಗಿದೆ. ಇದನ್ನೆಲ್ಲಾ ಇನ್ನು ಮುಂದೆ ಸರಿಪಡಿಸಬೇಕೆಂದು ಹೇಳಿ ಇನ್ನು ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಏನು ಒಂದು ಹಣ ಖರ್ಚಾಗುತ್ತಿದೆ, ಆ ಹಣದ ಮುಕ್ಕಾಲು ಭಾಗ ಕೇವಲ ಸಿಬ್ಬಂದಿಗಾಗಿ ಖರ್ಚಾಗುತ್ತಿದೆಯೆಂದು ಕಂಡು ಬರುತ್ತದೆ. ಅಗತ್ಯಕ್ಕಿಂತ ಹೆಚ್ಚು ಮಂದಿ ಸಿಬ್ಬಂದಿಗಳು ಇದ್ದಾರೆ. ಶೇಕಡ 75 ಭಾಗವನ್ನು ಸಿಬ್ಬಂದಿಗಳಿಗಾಗಿ ಖರ್ಚು ಮಾಡಿದರೆ ಉಳಿದ 25 ಭಾಗವನ್ನು ಅಭಿವೃದ್ಧಿ ಕಾರ್ಯಗಳಿಗೆ ಖರ್ಚು ಮಾಡುವುದಾದರೆ ಈ ಒಂದು ಸಂಸ್ಥೆಯಾದರೂ ಸಹ ಏತಕ್ಕೋಸ್ಕರ ಇರಬೇಕೆಂದು ಕೇಳುತ್ತೇನೆ. ಈ ಒಂದು ಸಂಸ್ಥೆಗೆ ಹಣ ಒದಗಿಸಿ ಖರ್ಚು ಮಾಡಿಸುವ ಬದಲು ಖಾಯಂ ಆಗಿರುವ ಆಡಳಿತವರ್ಗಕ್ಕೆ ಈ ಹಣವನ್ನು ಒದಗಿಸಿ ಆ ಮೂಲಕ ಖರ್ಚು ಮಾಡಿಸುವುದು ಒಳ್ಳೆಯದು. ಈ ಸಮಿತಿ ಮೂಲಕ ಹಣ ಖರ್ಚು ಮಾಡಿಸುವುದು ಸರಿಯಲ್ಲವೆಂದು ನನ್ನ ಭಾವನೆ. ಇದೇ ರೀತಿ ಈ ಸಂಸ್ಥೆಗೆ ಕೊಟ್ಟಿರುವ ಜೀಪ್‌ಗಳನ್ನು ಸಹ ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ. ಹಿಂದಿನ ಪ್ರಧಾನಮಂತ್ರಿಗಳಾಗಿದ್ದ ಶ್ರೀ ಶಾಸ್ತ್ರಿಯವರು ಈ ಸಂಸ್ಥೆಗೆ ಕೊಟ್ಟಿರುವ ಜೀಪ್‌ಗಳನ್ನು ವಾಪಸ್ ಪಡೆಯಬೇಕೆಂದು ಆಜ್ಞೆ ಮಾಡಿದ್ದರು. ಆದರೆ ಅವರು ಗತಿಸಿದ ನಂತರ ಪುನಃ ಈ ಸಂಸ್ಥೆಯವರು ಜೀಪ್‌ಗಳನ್ನು ಉಪಯೋಗಿಸುವುದಕ್ಕೆ ಸರ್ಕಾರದವರು ಅವಕಾಶ ಮಾಡಿಕೊಟ್ಟಿದ್ದಾರೆ. ಇದರ ಕಡೆ ಸರ್ಕಾರದವರು ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ತಾಲ್ಲೂಕ್ ಅಭಿವೃದ್ಧಿ ಸಂಸ್ಥೆಗಳ ಚುನಾವಣೆಗಳಾಗಿ 7—8 ವರ್ಷಗಳಾಯಿತು. ಆಗಬಾರದ ಅನಾಹುತಗಳು ಆಗಿವೆ. ಇದುವರೆಗೆ ಕೊಟ್ಟಿರುವ ಆಯುಷ್ಯ ಬಹಳ ಜಾಸ್ತಿಯಾಗಿದೆ. ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳಿಗೆ ಒಂದು ಸಲಹೆ ಮಾಡುತ್ತೇನೆ, ಏನೆಂದರೆ ನಮ್ಮ ಮುಂದೆ ಈ ವಿಚಾರದಲ್ಲಿ ಬರಬೇಕೆಂದಿರುವ ಹೊಸ ಮಸೂದಾ ಕಾನೂನಿನ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಬೇಕು ಎಂಬುದಾಗಿ ನಿಮ್ಮ ಮನಸ್ಸಿನಲ್ಲಿ ಇದ್ದರೆ ಅದನ್ನು ಮರೆತುಬಿಡಬೇಕು. ಈಗ ಇರತಕ್ಕಂಥ ಕಾನೂನಿನ ಆಧಾರದ ಮೇಲೆ ಚುನಾವಣೆಗಳನ್ನು ನಡೆಸಿದರೆ ಮಾತ್ರ ಪ್ರಜಾಪ್ರಭುತ್ವ ಉಳಿಯುವುದಕ್ಕೆ ಸಾಧ್ಯವಾಗುತ್ತದೆ. ಈ ರೀತಿ ಚುನಾವಣೆ ಮಾಡಿ ಹೊಸದಾಗಿ ಅಧಿಕಾರ ಜಾರಿಗೆ ಬರುವಂತೆ ಮಾಡಬೇಕು. ಈ ರೀತಿ ಚುನಾವಣೆ ಮಾಡುವುದಕ್ಕೆ ಅವಕಾಶ ಕೊಡದಿದ್ದರೆ ಪ್ರಜಾಪ್ರಭುತ್ವಕ್ಕೆ ಕೊಡಲಿ ಏಟು ಹಾಕಿದಂತಾಗುತ್ತದೆ. ಮಾನ್ಯ ಸಹಕಾರ ಸಚಿವರು ನನ್ನ ಸ್ನೇಹಿತರಾಗಿದ್ದಾರೆ. ಅವರು ಜಾಗ್ರತೆ ಈ ಸಂಸ್ಥೆಗಳಿಗೆ ಚುನಾವಣೆ ನಡೆಸಿ ಹೊಸ ಚೈತನ್ಯ ಮೂಡುವಂತೆ ಮಾಡಬೇಕೆಂದು ಸೂಚನೆ ಮಾಡುತ್ತೇನೆ. ಜಾಗ್ರತೆ ಚುನಾವಣೆ ನಡೆಸದಿದ್ದರೆ ಇಡೀ ರಾಜ್ಯದಲ್ಲಿ ಆಂದೋಳನ ನಡೆಸಿಯಾದರೂ ಸಹ ಚುನಾವಣೆ ನಡೆಯುವುದಕ್ಕೆ ಪ್ರಯತ್ನ ಮಾಡಬೇಕಾಗುತ್ತದೆ. ಇಷ್ಟು ಮಾತ್ರ ಮಾನ್ಯ ಮಂತ್ರಿಗಳಿಗೆ ತಿಳಿಸಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ನಾಗಪ್ಪ (ಮಂಡ್ಯ).—ಮಾನ್ಯ ಸಭಾಪತಿಗಳೇ, ಸಹಕಾರ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕಂಥ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಪ್ರಸ್ತಾಪ ಮಾಡಲು ಇಚ್ಛಿಸುತ್ತೇನೆ. ಸಹಕಾರ ಸಂಘಗಳು ಸರಿಯಾಗಿ ಕೆಲಸ ಮಾಡಬೇಕಾದರೆ ಅಲ್ಲಿ ಆಡಳಿತವನ್ನು ನಡೆಸತಕ್ಕಂಥ ಅಧ್ಯಕ್ಷರಾಗಲೀ, ಗೌರವ ಕಾರ್ಯದರ್ಶಿಗಳಾಗಲೀ ಅಥವಾ ಡೈರೆಕ್ಟರ್ ಆಗಲೀ, ಇವರೆಲ್ಲರಿಗಿಂತ ಹೆಚ್ಚಾಗಿ ಸಹಕಾರ ಇಲಾಖೆಯ ಅಧಿಕಾರಿಗಳ ಜವಾಬ್ದಾರಿ ಬಹಳ ಹೆಚ್ಚು ಇದೆ. ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡಬೇಕಾದರೆ ಆಡಿಟರ್ ಜನರಲ್ ಹುದ್ದೆ ಎಂಬುದು ಬೇರೆ ಇರುವಂತೆ ಸಹಕಾರ ಇಲಾಖೆಗೆ ಸಂಬಂಧಪಟ್ಟಂತೆ ಇರುವ ಆಡಿಟಿಂಗ್ ವಿಭಾಗ ಬೇರೆ ಇರಬೇಕು. ಆಡಿಟಿಂಗ್ ವಿಭಾಗದವರು ನಿಷ್ಪಕ್ಷಪಾತವಾಗಿ ದಿನಚರಿ ಆಡಳಿತದಲ್ಲಿ ಹೆಚ್ಚು ಆಸಕ್ತಿ ವಹಿಸಿ ಕೆಲಸ ಮಾಡಿದರೆ ಸಹಕಾರ ಸಂಘಗಳ ಮೇಲೆ ಏನು ಒಂದು ಕೆಟ್ಟ ಅಪಾದನೆ ಬಂದಿದೆ ಅದು ನಿಲ್ಲುತ್ತದೆ. ಸೊಸೈಟಿಗಳಲ್ಲಿರತಕ್ಕಂಥ ಸ್ಟಾಕನ್ನು ಪ್ರತಿ ತಿಂಗಳೂ ಸಹ ಚೆಕ್ ಮಾಡುವುದು ಒಳ್ಳೆಯದು. ದಿನವೂ ಸಹ ಸೊಸೈಟಿಗಳಲ್ಲಿ ಕ್ಯಾಷ್ ಬುಕ್ ಬರೆಯುತ್ತಾರೆ. ಇದರಿಂದ ಎಷ್ಟು ವ್ಯಾಪಾರವಾಗುತ್ತದೆ ಎಂಬುದು ಗೊತ್ತಾಗುತ್ತದೆ. ಈ ಹಣವನ್ನು ಗೌರವ ಕಾರ್ಯದರ್ಶಿಯವರೇ ಇಟ್ಟುಕೊಂಡಿದ್ದಾರೋ ಅಥವಾ ಬ್ಯಾಂಕಿಗೆ ಕಟ್ಟಿದ್ದಾರೋ ಎಂಬುದನ್ನು ತನಿಖೆ ಮಾಡಬೇಕು. ಇವೆರಡನ್ನೂ ಸಹ ಸರಿಯಾಗಿ ಚೆಕ್ ಮಾಡಿದರೆ ಸೊಸೈಟಿ ಚೆನ್ನಾಗಿ ನಡೆಯುವುದಕ್ಕೆ ಅವಕಾಶವಾಗುತ್ತದೆ. ಈ ವಿಚಾರದಲ್ಲಿ ಯಾರಾದರೂ ತಪ್ಪು ಮಾಡಿದ್ದರೆ ಇಲಾಖೆಯವರು ಉಗ್ರವಾದಂಥ ಶಿಕ್ಷೆ ವಿಧಿಸಿದರೆ ಯಾವ ರೀತಿಯ ಅನಾಹುತವಾಗುವುದಕ್ಕೂ ಸಹ ಅವಕಾಶವಾಗುವುದಿಲ್ಲ. ಆದ್ದರಿಂದ ಕ್ಯಾಷ್ ಮತ್ತು ಸ್ಟಾಕ್ ಬಗ್ಗೆ ಗಮನ ಕೊಡಬೇಕೆಂಬುದು ನನ್ನ ಅಭಿಪ್ರಾಯ.

ಇನ್ನು ತಾಲ್ಲೂಕು ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳ ವಿಚಾರವಾಗಿ ಹೇಳುವುದಾದರೆ ಪ್ರತಿಯೊಂದು ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳಲ್ಲಿಯೂ ಒಂದೊಂದು ಪ್ರೊಸೆ

(ಶ್ರೀ ನಾಗಪ್ಪ)

ಸಿಂಗು ಯೂನಿಟ್ ಎಂದು ಇಟ್ಟುಕೊಳ್ಳಬೇಕು. ಇದರಿಂದ ಸಂಘದ ಸದಸ್ಯರುಗಳಾದ ರೈತರಿಗೆ ಬಹಳ ಮಟ್ಟಿನ ಸಹಾಯ ಸಿಗುತ್ತದೆ. ರೈತರು ಉತ್ಪಾದನೆ ಮಾಡಿದ ಮಾಲುಗಳಿಗೆ ಸರಿಯಾದ ಬೆಲೆ ಸಿಗಬೇಕಾದರೆ ಪ್ರತಿಯೊಂದು ತಾಲ್ಲೂಕಾ ಮಾರ್ಕೆಟಿಂಗು ಕೊ-ಆಪರೇಟೀವ್ ಸಂಸ್ಥೆಗಳಲ್ಲಿ ಒಂದೊಂದು ಪ್ರೊಸೆಸಿಂಗು ಯೂನಿಟ್ ಇರುವಂತೆ ವ್ಯವಸ್ಥೆ ಮಾಡಬೇಕು. ಇಂತಹ ಒಂದು ಯೂನಿಟ್ ಇವರುವಂತೆ ವ್ಯವಸ್ಥೆ ಮಾಡಿದರೆ ರೈತರಿಗೂ ಕೂಡ ಅವರು ಬೆಳೆದಂತಹ ಬೆಳೆಗೆ ಸರಿಯಾದ ಬೆಲೆ ಸಿಗುತ್ತದೆ ಎನ್ನುವ ನಂಬಿಕೆ ಬರುತ್ತದೆ ಮತ್ತು ಸರಿಯಾದ ಬೆಲೆಯಲ್ಲಿ ಪದಾರ್ಥಗಳು ಮಾರಾಟವಾಗುತ್ತದೆ ಎನ್ನುವುದೂ ಗೊತ್ತಾಗುತ್ತದೆ. ಇವೆರಡೂ ಸುಗಮವಾಗಿ ಆಗಲು ಎಲ್ಲ ತಾಲ್ಲೂಕು ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳಲ್ಲಿ ಆಯಾಯಾ ಏರಿಯಾದಲ್ಲಿ ಒಂದೊಂದು ಪ್ರೊಸೆಸಿಂಗು ಯೂನಿಟ್ ಇರುವಂತೆ ವ್ಯವಸ್ಥೆ ಮಾಡಬೇಕು. ಈಗ ಹೈಬ್ರಿಡ್ಡು ಜೋಳದ ಬೀಜವನ್ನು ಹಂಚಬೇಕು ಎಂದು ಪ್ರಯತ್ನ ಮಾಡುತ್ತಿದ್ದಾರೆ. ಯಾವ ಯಾವ ಏರಿಯಾದಲ್ಲಿ ಎಷ್ಟು ಮಟ್ಟಿಗೆ ಬೀಜಗಳನ್ನು ಹಂಚಬೇಕು, ಮತ್ತು ಯಾವ ಯಾವ ಸಂಘದ ಸದಸ್ಯರುಗಳಿಗೆ ಏನೇನು ಸಹಾಯ ಸೌಕರ್ಯಗಳನ್ನು ಕೊಡಬೇಕು ಮತ್ತು ರೈತ ಬೆಳೆಯುವ ಬೆಳೆಗೆ ಸರಿಯಾದ ಬೆಲೆ ಕೊಡುವಂತೆ ಮತ್ತು ಅವನು ಮಾರುವ ಪದಾರ್ಥಗಳಿಗೆ ಸರಿಯಾದ ಬೆಲೆ ಸಿಗುವಂತೆ ವ್ಯವಸ್ಥೆ ಮಾಡಬೇಕಾದರೆ, ಎಲ್ಲ ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳಲ್ಲಿಯೂ ಇಂತಹ ಪ್ರೋಸೆಸಿಂಗು ಯೂನಿಟ್‌ನ್ನು ಏರ್ಪಾಡು ಮಾಡಬೇಕು.

ಇನ್ನು ಕನ್‌ಸ್ಯೂಮರ್ ಕೋ-ಆಪರೇಟೀವ್ ಸೊಸೈಟಿಗಳು ಎಂದು ಒಂದು ಸ್ಕೀಂ ಹಾಕಿಕೊಂಡು ಸರಕಾರದವರು ಅವುಗಳನ್ನು ಏರ್ಪಾಡು ಮಾಡುತ್ತಿದ್ದಾರೆ. ಮಾರ್ಕೆಟ್ಟಿಗೆ ಬರುವ ಅನೇಕ ಪದಾರ್ಥಗಳ ಬೆಲೆಗಳ ಏರಿಳಿತಗಳಾಗುತ್ತಿರುವುದರಿಂದ, ಜನತೆಗೆ ಸುಲಭ ಬೆಲೆಯಲ್ಲಿ ಎಲ್ಲ ಪದಾರ್ಥಗಳನ್ನೂ ಇದರ ಮೂಲಕ ಮಾರಾಟ ಮಾಡಬೇಕೆಂದು ಎಲ್ಲ ಕಡೆಗಳಲ್ಲಿಯೂ ಕನ್‌ಸ್ಯೂಮರ್ ಕೋ-ಆಪರೇಟೀವ್ ಸೊಸೈಟಿಗಳೆಂದು ಅಲ್ಲಲ್ಲಿ ಏರ್ಪಾಡು ಮಾಡಿದ್ದಾರೆ. ಕೆಲವು ಕಡೆಗಳಲ್ಲಿ ಇಂತಹ ಸೊಸೈಟಿಗಳಲ್ಲಿರುವ ಅನಾಯಕತ್ವದಿಂದಾಗಿ ಅಲ್ಲಿ ಮಿಸ್‌ಅಪ್ರೊಪ್ರಿಯೇಷನ್‌ಗಳು ಅಲ್ಲಲ್ಲಿ ಆಗುತ್ತಿವೆ. ಇಂತಹ ದುರುಪಯೋಗಗಳು ಆಗದಂತೆ ಮಾಡಬೇಕಾದರೆ ಇಲ್ಲಿ ಡಬ್ಬಲ್ ಕಂಪಾರ್ಟ್‌ಮೆಂಟು ಸಿಸ್ಟಂ ಎನ್ನುವುದನ್ನು ಇಲ್ಲಿ ಜಾರಿಗೆ ತರಬೇಕು. ಇಂತಹ ಡಬ್ಬಲ್ ಕಂಪಾರ್ಟ್‌ಮೆಂಟು ಸಿಸ್ಟಂ ತರುವುದರಿಂದ ಯಾವುದೇ ಪದಾರ್ಥಗಳನ್ನು ಇಲ್ಲಿ ಮಾರಾಟ ಮಾಡುವುದಕ್ಕೆ ತಂದರೂ ಅದರ ಜವಾಬುದಾರಿಯೆಲ್ಲಾ ಇಲ್ಲಿರುವ ಒಬ್ಬ ಅಧಿಕಾರಿಯ ಮೇಲೆ ಇರುತ್ತದೆ. ಇವರನ್ನು ಇಲ್ಲಿ ಸೇಲ್ಸ್‌ಮನ್ ಎಂದು ಹೇಳುತ್ತಾರೆ. ಈ ಸೇಲ್ಸ್‌ಮನ್‌ನ ಮೇಲೆಯೇ ಎಲ್ಲ ಜವಾಬುದಾರಿಗಳೂ ಇರುತ್ತವೆ. ಹಣದ ಹಾಗೂ ಮಾಲುಗಳ ಜವಾಬುದಾರಿ ಎಲ್ಲವೂ ಇವನ ಮೇಲೆ ಇರುತ್ತದೆ ಮತ್ತು ಇದರಲ್ಲಿ ಏನಾದರೂ ಷಾರ್ಟೇಜುಗಳು ಬಂದರೆ, ಅದಕ್ಕೆಲ್ಲಾ ಅವನೇ ಜವಾಬುದಾರನು ಎಂದು ಮಾಡಬೇಕು. ಹಾಗೇ ಮಾಲನ್ನು ಕೊಂಡುಕೊಳ್ಳುವವರು ಯಾರು ಇರುತ್ತಾರೋ ಅವರ ಮೇಲೆಯೇ ತೆಗೆದುಕೊಂಡ ಮಾಲಿನ ಜವಾಬುದಾರಿ ಇರುವಂತೆ ವ್ಯವಸ್ಥೆ ಮಾಡಬೇಕು. ಇದಕ್ಕಾಗಿ ಇಲ್ಲಿ ಡಬ್ಬಲ್ ಕಂಪಾರ್ಟ್‌ಮೆಂಟು ಸಿಸ್ಟಂ ಎಂದು ಮಾಡಿದರೆ ಇಲ್ಲಿ ಹೆಚ್ಚು ಹೆಚ್ಚಾಗಿ ಕೆಲಸ ಮಾಡಲು ಮತ್ತು ಕೆಲಸಗಳು ಚೆನ್ನಾಗಿ ಆಗಲು ಅನುಕೂಲವಾಗುತ್ತದೆ. ಹೀಗೆ ಮಾಡದೇ ಹೋದರೆ ಕನ್‌ಸ್ಯೂಮರ್ ಸೊಸೈಟಿಗಳು ಹಾಳಾಗುತ್ತವೆ. ಇದಕ್ಕಾಗಿ ಕನ್‌ಸ್ಯೂಮರ್ ಕೋ-ಆಪರೇಟೀವ್ ಸೊಸೈಟಿಗಳ ಕಡೆಗೆ ಹೆಚ್ಚು ಗಮನ ಕೊಡಬೇಕೆಂದು ಇಲ್ಲಿ ಸೂಚಿಸಲು ಇಷ್ಟಪಡುತ್ತೇನೆ.

ಇನ್ನು ಸ್ಥಳೀಯ ಸಂಸ್ಥೆಗಳು, ಎಂದರೆ ತಾಲ್ಲೂಕು ಬೋರ್ಡುಗಳಲ್ಲಿ ಬಹಳ ಅನಾಹುತಗಳಾಗುತ್ತಿವೆ ಎಂದು ಕಾಂಗ್ರೆಸ್ಸಿನ ಸದಸ್ಯರುಗಳು ಹಾಗೂ ಇನ್ನಿತರ ಸದಸ್ಯರುಗಳೂ ಇಲ್ಲಿ ಹೇಳಿದರು. ಇದರ ಬಗ್ಗೆ ನಾನು ಹೇಳುವುದು ಇಂತಹ ಸಂಸ್ಥೆಗಳನ್ನು ಸರಕಾರದವರು ಅಬಾಲಿಷ್ ಮಾಡುವುದು ಒಳ್ಳೆಯದು. ಸುಮಾರು ನಾಲ್ಕು ವರ್ಷಗಳಿಂದ ಇಲ್ಲಿ ಏನೇನು ನಡೆಯುತ್ತಿದೆ ಎನ್ನುವುದನ್ನು ನಾವು ನೋಡುತ್ತಿದ್ದೇವೆ. ತಾಲ್ಲೂಕು ಅಭಿವೃದ್ಧಿ ಮಂಡಲಿಗಳು ಆಗಿ ಎಂಟು ವರ್ಷಗಳಾದರೂ ಕೂಡ ಇಲ್ಲಿ ಸರಿಯಾದ ಕೆಲಸಗಳು ನಡೆಯುತ್ತಿಲ್ಲ. ಇದನ್ನು ಸೂಕ್ತವಾಗಿ ಬದಲಾವಣೆ ಮಾಡದೇ ಇದ್ದರೆ ಇದರಿಂದೇನೂ ಜನತೆಗೆ ಪ್ರಯೋಜನವಾಗುವುದಿಲ್ಲ. ಆದುದರಿಂದ ಇದನ್ನು ತೆಗೆಯುವುದು ಉತ್ತಮ. ಇಲ್ಲಿ ಎಲೆಕ್ಷನ್‌ಗಳನ್ನು ಮಾಡಬೇಕೆಂದರೆ ಇದರಲ್ಲಿ ಏನೇನೋ ನ್ಯೂನತೆಗಳು ಬರುತ್ತಿವೆ. ಆದುದರಿಂದ ಇಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಲಿಗಳಂತಹ ಸಂಸ್ಥೆಗಳನ್ನು ಮಾಡಿರುವುದರಿಂದ ಜನತೆಗೆ ಅನುಕೂಲವಾಗುತ್ತಿಲ್ಲ. ಇದನ್ನು ಪೂರ್ಣವಾಗಿ ಅಬಾಲಿಷ್ ಮಾಡಿ ಹಿಂದೆ ತಾಲ್ಲೂಕು ಡೆವಲಪ್‌ಮೆಂಟು ಕೌನ್ಸಿಲ್ ಹಾಗೂ ಜಿಲ್ಲಾ ಡೆವಲಪ್‌ಮೆಂಟು ಕೌನ್ಸಿಲ್ ಎಂದು ಏನು ಮಾಡಿದ್ದರು

ಅವನ್ನು ಪುನಃ ಇಲ್ಲಿ ಜಾರಿಗೆ ತರುವುದು ಒಳ್ಳೆಯದು. ಇದನ್ನು ಪೂರ್ಣವಾಗಿ ಅಬಾಲಿಷ್ ಮಾಡಿ ಎಂದು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಮಾನ್ಯ ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಂ. ದೊಡ್ಡನ ಗೌಡ (ಸಿರಗುಪ್ಪಾ).—ಸ್ವಾಮೀ, ಇಲ್ಲಿ ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಕೆಲವು ವಿಷಯಗಳನ್ನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ.

ಸ್ವಾಮೀ, ವಿರೋಧ ಪಕ್ಷದವರು ಹಾಗೂ ಆಡಳಿತ ಪಕ್ಷದವರು ಸಹಕಾರ ಸಂಘಗಳ ಬಗ್ಗೆ ಮತ್ತು ಪಂಚಾಯಿತಿಗಳ ಬಗ್ಗೆ ಇಲ್ಲಿ ಸಾಕಷ್ಟು ವಿಮರ್ಶೆ ಮಾಡಿರುತ್ತಾರೆ. ಇಂದು ದೇಶ ಉಳಿಯ ಬೇಕಾದರೆ ಹಳ್ಳಿಗರ ಜೀವನ ಉತ್ತಮವಾಗಬೇಕಾದರೆ ಮತ್ತು ದೇಶ ಉಳಿಯಬೇಕಾದರೆ ಹೆಚ್ಚು ಹೆಚ್ಚಾಗಿ ಎಲ್ಲ ಕಡೆಗಳಲ್ಲಿಯೂ ಹಳ್ಳಿ ಹಳ್ಳಿಗಳಲ್ಲಿಯೂ ಸೊಸೈಟಿಗಳು ಇರುವುದು ಅವಶ್ಯಕ, ಇವು ಯೋಗ್ಯ ರೀತಿಯಿಂದ ಮತ್ತು ಸ್ವಯಂ ಪರಿಪೂರ್ಣತೆಯಿಂದ ನಡೆಯಬೇಕು ಎನ್ನುವ ಉದ್ದೇಶದಿಂದ ಸರಕಾರದವರು ಎಲ್ಲ ಕಡೆಗಳಲ್ಲಿಯೂ ಸೊಸೈಟಿಗಳನ್ನು ಮಾಡಿದ್ದಾರೆ. ಆದರೆ ಕೆಲವು ಕಡೆಗಳಲ್ಲಿ ಇರುವ ಸೊಸೈಟಿಗಳು ಸ್ವಲ್ಪ ಕೆಟ್ಟ ರೀತಿಯಿಂದ ಕೆಲಸ ಮಾಡಿರಬಹುದು, ಕೆಲವು ಕಡೆಗಳಲ್ಲಿ ದುರಾಡಳಿತಗಳು ನಡೆದು ಇರಬಹುದು. ಇಂತಹ ದುರಾಡಳಿತಗಳು ಆಗಲು ಇದಕ್ಕೆ ಬೇರೆ ಕಾರಣಗಳು ಇರಬಹುದು. ಆದರೆ ಇಂದು ದೇಶದ ಅಭಿವೃದ್ಧಿಯಾಗಬೇಕಾದರೆ ಹಳ್ಳಿಗಳ ಜನರ ಸ್ಥಿತಿ ಸರಿಯಾಗಿರ ಬೇಕಾದರೆ ಇಂತಹ ಸಹಕಾರ ಸಂಘಗಳು ಸ್ವಯಂಆಗಿ ಇಲ್ಲಿನ ಜನ ಅವರವರ ಮಟ್ಟದಲ್ಲಿ ಯೋಗ್ಯ ವಾಗಿ ನಡೆಸಿಕೊಳ್ಳಲಿ ಎಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ ಮತ್ತು ಸಕ್ರಮ ವಾಗಿ ಇಂತಹ ಸಂಘಗಳು ಸರಿಯಾಗಿ ನಡೆಯಲು ಅವಕಾಶ ಮಾಡಿಕೊಡಬೇಕು. ಸರಕಾರವು ಇಂತಹ ಸಂಘಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿವೆಯೋ ಇಲ್ಲವೇ ಎನ್ನುವುದನ್ನು ಸೂಪರ್ ವೈಸು ಮಾಡಿ ಸರಿಯಾದ ರೀತಿಯಲ್ಲಿ ನೋಡಿಕೊಳ್ಳುವ ವ್ಯವಸ್ಥೆ ಮಾಡಬೇಕು. ನಮ್ಮ ಬಳ್ಳಾರಿ ಜಿಲ್ಲೆ ಹಾಗೂ ರಾಯಚೂರು ಜಿಲ್ಲೆಯ ಈ ಭಾಗದಲ್ಲಿ ತುಂಗಭದ್ರಾ ನೀರಾವರಿ ಯೋಜನೆ ಇದೆ. ಒಂದನೇ ಏಪ್ರಿಲ್‌ನಲ್ಲಿ ಐ.ಎ.ಡಿ.ಪಿ. ಪ್ರೋಗ್ರಾಂ ಪ್ರಕಾರ ಇವೆರಡು ಜಿಲ್ಲೆಗಳಲ್ಲಿ ನೀರಾವರಿ ಕೆಲಸ ಗಳ ಉಪಯೋಗಕ್ಕಾಗಿ ಹಣ ಕೊಡುತ್ತೇವೆ ಎಂದು ಮಾಡಿದ್ದರು. ಈ ಸಂದರ್ಭದಲ್ಲಿ ಸರಕಾರ ಒಂದು ಕಾರ್ಪೊರೇಷನ್ ಮಾಡಬೇಕು ಎನ್ನುವ ಒಂದು ಉದ್ದೇಶವೂ ಇದೆ. ಇದರ ಬಗ್ಗೆ ಜನರಲ್ಲಿ ಒಂದು ಸಂಶಯ ಇದೆ. ಕೋ-ಆಪರೇಟಿವ್ ಸಂಘಗಳ ಮುಖೇನ 28 ಕೋಟಿಯಷ್ಟು ಹಣವನ್ನೂ ಹಂಚುತ್ತಾರೋ ಇಲ್ಲವೋ ಗೊತ್ತಿಲ್ಲ. ಆದುದರಿಂದ ನನ್ನ ಸಲಹೆ ಸರಕಾರಕ್ಕೆ ಮಾಡುವುದು ಇಲ್ಲಿ ನಿಗದಿಯಾಗಿರುವ 28 ಕೋಟಿಯಷ್ಟು ಹಣವನ್ನೂ ಕೋ-ಆಪರೇಟಿವ್ ಸೊಸೈಟಿಗಳ ಮೂಲಕವೇ ಹಂಚುವ ವ್ಯವಸ್ಥೆ ಮಾಡಬೇಕು ಎಂದು ಅವರ ಗಮನಕ್ಕೆ ಇಲ್ಲಿ ತರಬಯಸುತ್ತೇನೆ.

ಅನೇಕ ಸದಸ್ಯರು ಇಲ್ಲಿ ಸಹಕಾರ ಸಂಸ್ಥೆಗಳ ಆಡಳಿತದ ಬಗ್ಗೆ ಸಾಕಷ್ಟು ಟೀಕೆ ಮಾಡಿದ್ದಾರೆ ಮತ್ತು ಸಾಕಷ್ಟು ದುರುಪಯೋಗಗಳು ಆಗಿರುವ ಬಗ್ಗೆ ಬಹಳ ಹೆಚ್ಚಾಗಿಯೂ ಟೀಕಿಸಿದ್ದಾರೆ. ಆದರೆ ಈ ಇಲಾಖೆಯಲ್ಲಿ ಇಂದು ಬಹಳ ಒಳ್ಳೆಯ ಅಧಿಕಾರಿಗಳು ಹಾಗೂ ದಕ್ಷರಾಗಿ ಕೆಲಸ ಮಾಡುವವರೂ ಇದ್ದಾರೆ ಮತ್ತು ಸಹಕಾರದ ಅಭಿವೃದ್ಧಿಯಲ್ಲಿ ಹೆಚ್ಚು ಆಸ್ಥೆಯಿಂದ ಕೆಲಸ ಮಾಡು ವಂತಹ ಅಧಿಕಾರಿಗಳೂ ಇದ್ದಾರೆ. ಇಂತಹವರುಗಳ ದಕ್ಷತೆಯಿಂದ ಇಂದು ಸಹಕಾರ ಸಂಘಗಳು ದಕ್ಷತೆಯಿಂದ ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಿವೆ ಎಂದು ಹೇಳಿದರೆ ಅದು ತಪ್ಪಾಗಲಾ ರದು. ಆದರೆ ಸರ್ಕಾರ ಈ ಇಲಾಖೆ ಇನ್ನಷ್ಟು ದಕ್ಷತೆಯಿಂದ ಕೆಲಸ ಮಾಡಲು ಇಲ್ಲಿ ಎಫಿಷಿಯನ್ಸಿ ಕ್ರಿಯೇಟು ಮಾಡುವುದು ಈಗಿನ ದೃಷ್ಟಿಯಲ್ಲಿ ಉತ್ತಮ. ಮತ್ತು ಇಲ್ಲಿಗೆ ಗೆಜೆಟೆಡ್ ಪ್ರೊಬೇಷ ನರ್ಸ್‌ಗಳನ್ನು ನೇಮಕ ಮಾಡುವಾಗ ಕೇಡರು ರೆಕ್ರೂಟುಮೆಂಟು ರೂಲ್ಸ್‌ಗಳನ್ನು ಅನುಸರಿಸಿ ಅದರ ಪ್ರಕಾರ ಇಲ್ಲಿ ಅಪಾಯಿಂಟುಮೆಂಟ್ಸ್‌ಗಳನ್ನು ಮಾಡಬೇಕೆಂದು ಸರಕಾರಕ್ಕೆ ಹೇಳಬಯಸು ತ್ತೇನೆ. ಆ ರೀತಿ ಒಳ್ಳೆಯ ದಕ್ಷತೆಯಿಂದ ಕೆಲಸ ಮಾಡುವಂತಹ ಅಧಿಕಾರಿಗಳನ್ನು ಇಲ್ಲಿ ನೇಮಕ ಮಾಡುವ ಏರ್ಪಾಡು ಮಾಡಬೇಕೆಂದು ಸರಕಾರದ ಗಮನಕ್ಕೆ ತರಬಯಸುತ್ತೇನೆ.

ಇನ್ನು ಸುಗ್ಗಿಯ ಕಾಲದಲ್ಲಿ ಸಾಧಾರಣವಾಗಿ ಬೆಲೆಗಳು ಇಳಿಯುತ್ತವೆ. ಆಗ ಬೆಳೆಯುವ ವರು ತಮ್ಮ ಮಾಲುಗಳನ್ನು ಮಾರಾಟ ಮಾಡುವುದಕ್ಕೆ ಪೇಟೆಗಳಿಗೆ ಬರುತ್ತಾರೆ. ಆದರೆ ಬೆಳೆ ಯುವವರಿಗೆ ತಮ್ಮ ಮಾಲುಗಳಿಗೆ ಸರಿಯಾದ ರೊಕ್ಕ ಸಿಗದೆ, ಅವರು ದಳ್ಳಾಳಿಗಳ ಕೈವಾಡಕ್ಕೆ ಸಿಕ್ಕಿ ಹಾಳಾಗುತ್ತಿದ್ದಾರೆ. ಆದುದರಿಂದ ದಳ್ಳಾಳಿಗಳ ಕಾಟವನ್ನು ತಪ್ಪಿಸುವುದಕ್ಕಾಗಿ ಪ್ರತಿಯೊಂದು ಕಡೆ ಇರುವ ತಾಲ್ಲೂಕು ಮಾರ್ಕೆಟಿಂಗು ಕೋ-ಆಪರೇಟೀವ್ ಸೊಸೈಟಿಗಳ

(ಶ್ರೀ ಎಂ. ದೊಡ್ಡನಗೌಡ)

ಮುಖಾಂತರವೇ ರೈತರಿಂದ ಬಂದ ದವಸವನ್ನು ಪೂರ್ತಿಯಾಗಿ ಖರೀದಿ ಮಾಡುವ ವ್ಯವಸ್ಥೆ ಮಾಡಬೇಕು. ಇಲ್ಲವಿದ್ದರೆ ರೈತರು ದಳ್ಳಾಳಿಗಳ ಕೈಗೆ ಸಿಕ್ಕಿ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ ಮತ್ತು ಇದರಿಂದ ರೈತರು ನಾಶವಾಗುತ್ತಾರೆ.

ಇನ್ನು ನಮ್ಮ ರಾಯಚೂರು ಹಾಗೂ ಬಳ್ಳಾರಿ ಜಿಲ್ಲೆಯಲ್ಲಿ ಬಹಳ ಹೆಚ್ಚು ಜಮೀನುಗಳು ನೀರಾವರಿ ಪ್ರದೇಶದಲ್ಲಿವೆ. ಇವಕ್ಕೆ ಟ್ರಾಕ್ಟರುಗಳ ಹಾಗೂ ಬುಲ್‌ಡೋಜರುಗಳ ಅವಶ್ಯಕತೆ ಬಹಳ ಹೆಚ್ಚಾಗಿದೆ. ಆದುದರಿಂದ ಪ್ರತಿಯೊಂದು ತಾಲ್ಲೂಕಾ ಮಾರ್ಕೆಟಿಂಗು ಕೋ ಆಪರೇಟೀವ್ ಸೊಸೈಟಿಗಳಲ್ಲಿ ಒಂದೊಂದು ಟ್ರಾಕ್ಟರು ಸಿಗುವಂತೆ ವ್ಯವಸ್ಥೆ ಮಾಡಬೇಕು ಮತ್ತು ತಾಲ್ಲೂಕಾ ಮಟ್ಟದಲ್ಲಿ ಪ್ರತಿಯೊಂದು ಕಡೆಯಲ್ಲಿಯೂ ಒಂದೊಂದು ಟ್ರಾಕ್ಟರ್ ವರ್ಕ್‌ಷಾಪ್ ಇರಬೇಕೆಂದು ಏರ್ಪಾಡು ಮಾಡಬೇಕು. ಇದನ್ನು ಸೊಸೈಟಿಗಳ ಮೂಲಕ ಮಾಡಿದರೆ ಅಲ್ಲಿರುವ ರೈತಾಪಿ ಜನರಿಗೆ ಬಹಳ ಅನುಕೂಲವಾಗುತ್ತದೆ.

ಸ್ವಾಮಿ ಪಂಚಾಯತಿ ಸಂಸ್ಥೆಗಳು ಬಹಳ ಮುಖ್ಯವಾದವು. ಇದರ ಬಗ್ಗೆ ಹೇಳುವುದಾದರೆ ಸುಮಾರು ಏಳು ವರ್ಷಗಳಿಂದಲೂ ಸಾಕಷ್ಟು ಫಲ ನಿರೀಕ್ಷಿಸಿದಷ್ಟು ಇದರಿಂದ ಬರುತ್ತಿಲ್ಲ ಮತ್ತು ಹಳ್ಳಿಗಳು ಕೂಡ ಅಭಿವೃದ್ಧಿಯಾಗಿಲ್ಲ. ಸತ್ಯದಿಂದ ನ್ಯಾಯವಾಗಿ ಆಡಳಿತವನ್ನು ನಡೆಸುವಂತಹ ಅಧಿಕಾರಿಗಳು ಇದರ ಮೇಲ್ವಿಚಾರಣೆ ಮಾಡುತ್ತಿಲ್ಲ. ಇವು ಸರಿಯಾಗಿ ನಡೆಯುತ್ತಿವೆಯೋ ಇಲ್ಲವೋ ಎನ್ನುವುದನ್ನೂ ಯಾರೂ ಹೋಗಿ ಸೂಪರವೈಸು ಮಾಡುತ್ತಿಲ್ಲ. ನಮಗೆ ಸಿರಗುಪ್ಪ ಟೌನು ಪಂಚಾಯತಿಗಳ ಬಗ್ಗೆ ಹೇಳಬೇಕಾದರೆ ಇಲ್ಲಿರುವ ರೆವಿನ್ಯೂ ಅಧಿಕಾರಿಗಳ ಕಾಟ ಎಂದರೆ ಅಷ್ಟಿಷ್ಟಲ್ಲ. ಇಲ್ಲಿನ ಅಧಿಕಾರಿಗಳು ಮೇರೆ ಮೀರಿ ವರ್ತಿಸುತ್ತಿದ್ದಾರೆ. ಇದರ ಬಗ್ಗೆ ಸರಕಾರದ ಗಮನವನ್ನು ಸೆಳೆದರೂ ಇದುವರೆಗೂ ಇಂತಹ ಅಧಿಕಾರಿಗಳ ಮೇಲೆ ಯಾವ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಇಲ್ಲಿರುವ ಎಲೆಕ್ಷನ್ ರೂಲ್ಸು ಪ್ರಕಾರ ಡಿ ಫಾರಂ ನಂಬರು 5 ರಂತೆ 18 ದಿನದೊಳಗೆ ಸಿಂಬಲ್ಸ್ ಚೇಂಜು ಮಾಡಬೇಕೆಂದು ಇದೆ. ಇದರ ಬಗ್ಗೆ ಜಿಲ್ಲಾಧಿಕಾರಿಗಳು ತಕ್ಕ ಕ್ರಮ ತೆಗೆದುಕೊಂಡಿಲ್ಲ. ಸರಕಾರದವರೂ ಕೂಡ ಸರಿಯಾದ ರೂಲ್ಸುಗಳನ್ನು ಮಾಡಿ ಅದರಂತೆ ಸೂಕ್ತವಾದ ಕ್ರಮ ಇಲ್ಲಿಯವರೆಗೂ ತೆಗೆದುಕೊಳ್ಳಲಿಲ್ಲ. ಇದನ್ನು ಸರಕಾರ ತೀವ್ರವಾಗಿ ಪರಿಶೀಲನೆ ಮಾಡಬೇಕೆಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

7-30 P.M.

† ಶ್ರೀ ಪಿ. ಎಂ. ನಾಡಗೌಡ (ಅಭಿವೃದ್ಧಿ ಮತ್ತು ಸಹಕಾರ ಶಾಖೆಗಳ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಇದುವರೆಗೆ ಒಂದೂವರೆ ದಿವಸ ನಡೆದ ಈ ಬೇಡಿಕೆಯ ಚರ್ಚೆಯಲ್ಲಿ ಒಟ್ಟು 33 ಮಂದಿ ಸದಸ್ಯರು ಭಾಗವಹಿಸಿ ಮಾತನಾಡಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸರಕಾರ ಬಹಳ ಗೌರವದಿಂದಲೂ ಸಮಾಧಾನದಿಂದಲೂ ಕೇಳಿ ಅವರ ಸೂಚನೆಗಳನ್ನು ಅರ್ಥ ಮಾಡಿಕೊಂಡಿದೆ. ಅವರು ಮುಖ್ಯವಾಗಿ ಹೇಳಿರುವುದು ಸಹಕಾರ ಕ್ಷೇತ್ರದಲ್ಲಿ ನ್ಯೂನತೆಗಳು ಕಂಡು ಬರುತ್ತಿವೆ ಎಂದು. ತಮ್ಮ ಪ್ರದೇಶದಲ್ಲಿಯ ನ್ಯೂನತೆಗಳನ್ನು ಮಾನ್ಯ ಸದಸ್ಯರು ಸರಕಾರದ ಮುಂದೆ ಒಳ್ಳೇ ಗೌರವದಿಂದ ತಿಳಿಸಿದ್ದಾರೆ. ಸರಕಾರ ಅವರ ಅಭಿಪ್ರಾಯ ತೆಗೆದುಕೊಂಡು ಯಾವ ರೀತಿ ಅದಕ್ಕೆ ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಮಾನ್ಯ ಸದಸ್ಯರು ಬಹಳ ಮಹತ್ವದ ವಿಚಾರ ಹೇಳಿದ್ದಾರೆ. ಅದಕ್ಕಾಗಿ ಈ ಚರ್ಚೆಯಲ್ಲಿ ಭಾಗ ವಹಿಸಿದ ಎಲ್ಲ ಸದಸ್ಯರಿಗೆ ಸರಕಾರದ ವತಿಯಿಂದ ನಾನು ಅಭಿನಂದನೆಗಳನ್ನು ಅರ್ಪಿಸುತ್ತೇನೆ.

ಒಂದು ವಿಷಯ. ಸಹಕಾರ ಕ್ಷೇತ್ರದ ವಿಚಾರ ಯಾವ ರೀತಿ ನಡೆಯಬೇಕು, ಯಾವ ಹಿನ್ನೆಲೆ ಇಟ್ಟುಕೊಂಡು ಹೋಗಬೇಕು ಎನ್ನುವುದನ್ನು ನಾನು ನಮ್ರತೆಯಿಂದ ಈ ಮಾನ್ಯ ಸಭೆಯ ಮುಂದೆ ಇಡುತ್ತೇನೆ. ಸಹಕಾರ ಸಂಸ್ಥೆಗಳ ಬೆಳವಣಿಗೆ ನಮ್ಮ ರಾಷ್ಟ್ರದಲ್ಲಿ ಕಳೆದ 55-60 ವರ್ಷಗಳಿಂದ ಬೆಳೆದುಕೊಂಡು ಬಂದಿದೆ. ಇದರ ಆಗುಹೋಗುಗಳು, ಏರುಪೇರುಗಳು ಸಮಾಜದ ಆಶೆ ಆಕಾಂಕ್ಷೆ ನೋಡಿಕೊಂಡು, ನಮ್ಮ ರಾಷ್ಟ್ರದ ಉದ್ದೇಶ ನೋಡಿಕೊಂಡು ಬೆಳವಣಿಗೆಯಾಗುತ್ತಾ ಬಂದಿದೆ. ಮಾನ್ಯ ಸದಸ್ಯರು ಇದನ್ನು ಚೆನ್ನಾಗಿ ಅರಿತುಕೊಂಡು ಈಗಿನ ಸಮಾಜದ ದೃಷ್ಟಿಯಲ್ಲಿ ಯಾವ ರೀತಿಯಿಂದ ಇದನ್ನು ಮುಂದುವರಿಸಿಕೊಂಡು ಹೋಗಬೇಕು ಎಂಬುದಕ್ಕೆ ಮಾನ್ಯ ಸದಸ್ಯರು ಮಾರ್ಗದರ್ಶನ ಮಾಡಿದ್ದಾರೆ. ಸಹಕಾರ ಕ್ಷೇತ್ರದಲ್ಲಿ ಅಭಿವೃದ್ಧಿ ಕಡಿಮೆ ಇದೆ ಎಂದು ಕೆಲವರು ಹೇಳಿದರು.

ಆದರೆ ನಾನು ಒಂದು ಮಾತು ಹೇಳುವುದನ್ನು ಹಿರಿಯರಾದ ಸದಸ್ಯರು ಒಪ್ಪುತ್ತಾರೆ ಎಂದು ನಾನು ಭಾವನೆ ಮಾಡಿಕೊಂಡಿದ್ದೇನೆ. ಈ ಸಹಕಾರ ಕ್ಷೇತ್ರವು ಇವತ್ತಿನ ದಿವಸ ಸರಕಾರಿ ಕ್ಷೇತ್ರವಾಗಿ ಅದು ಪರಿಣಾಮಕಾರಿಯಾಗಿದೆ, ಈ ಹಿನ್ನೆಲೆ ಇಟ್ಟುಕೊಂಡು ನೋಡಬೇಕು ಎಂದು ಹೇಳುತ್ತೇನೆ. ನಮ್ಮ ಹಿಂದೂಸ್ಥಾನದ ಸಮಾಜದ ಹಿನ್ನೆಲೆ ಇಟ್ಟುಕೊಂಡು ನೋಡಿದರೆ ಸಾಮಾಜಿಕ ಅಭಿವೃದ್ಧಿಗೆ ಎಷ್ಟು ಉಪಯೋಗವಾಗಬೇಕೋ ಅಷ್ಟು ಬೆಳವಣಿಗೆಯಾಗಿದೆ ಎಂದು ಎಲ್ಲರ ಅಭಿಪ್ರಾಯ ಇದೆ ಎಂದು ನಾನು ಭಾವನೆ ಮಾಡಿಕೊಳ್ಳುತ್ತೇನೆ. ಈ ಹಿನ್ನೆಲೆಯಲ್ಲಿ ಈಗಿನ ಸಹಕಾರ ಕ್ಷೇತ್ರದ ಕಾಯಿದೆ ಕ್ರಮಬದ್ಧವಾಗಿ ಬಂದಿದೆ. ಸಮಾಜ ಮತ್ತು ಸರಕಾರ ಇವುಗಳ ನಡುವೆ ಯಾವ ರೀತಿ ಋಣಾನುಬಂಧ ಇರಬೇಕು ಎನ್ನುವುದಕ್ಕೆ ಮಾನ್ಯ ಸದಸ್ಯರ ಸರಕಾರಕ್ಕೆ ಮಾರ್ಗದರ್ಶನ ಮಾಡಿದ್ದಾರೆ. ನಾನು ಖಯೋಲಾಗಿ ಹೇಳಬೇಕಾದರೆ ನಾನು ಗ್ರಾಮೀಣ ಜನತೆಯ ಪ್ರತಿನಿಧಿಯಾಗಿರುವುದರಿಂದ, ಗ್ರಾಮೀಣ ಮಂತ್ರಿಯಾಗಿರುವುದರಿಂದ ಅದಷ್ಟು ಮಟ್ಟಿಗೆ ಗ್ರಾಮೀಣ ಶಬ್ದ ಉಪಯೋಗ ಮಾಡಿದರೆ ಗ್ರಾಮೀಣ ಭಾಷೆಯಲ್ಲಿ ಮಾತನಾಡಿದರೆ ಗ್ರಾಮೀಣ ಜನರಿಗೆ ಅಭಿಮಾನ ಬರುತ್ತದೆ ಗೌರವ ಬರುತ್ತದೆ ಎಂದು ಎಲ್ಲರೂ ಒಪ್ಪಿಕೊಳ್ಳುತ್ತಾರೆ ಎಂದು ಹೇಳುತ್ತೇನೆ. ಇಂದು ಚರ್ಚೆಗೆ ಉತ್ತರ ಹೇಳಲು ಅಂಕಿಅಂಶಗಳ ವಿವರ ತೆಗೆದುಕೊಂಡು ಬಂದಿದ್ದೆ. ಆದರೆ ಆ ವಿವರ ಹೇಳುವುದಕ್ಕೆ ಹೋಗುವುದಿಲ್ಲ. ಅದನ್ನು ಹೇಳುವ ಅವಶ್ಯಕತೆ ಇಲ್ಲ. ಇದು ಕ್ಯಾರಿಂಗ ಕೋಲ್ ಟು ನ್ಯೂ ಕ್ಯಾಸಲ್ ಎಂದು ಹೇಳುವ ಹಾಗೆ ಆಗುತ್ತದೆ.

ಸಹಕಾರ ಕ್ಷೇತ್ರದಲ್ಲಿ ಮಾಡಿದ ಬದಲಾವಣೆ ಪ್ರಾಮುಖ್ಯವಾಗಿ ಬೇಸಾಯದ ಉತ್ಕರ್ಷವಾಗಬೇಕು, ಬೇಸಾಯಗಾರರಿಗೆ ನೆಮ್ಮದಿ ಉಂಟಾಗಬೇಕು ಅವರಿಗೆ ಸಹಾಯ ಮಾಡಬೇಕು ಎಂಬ ದೃಷ್ಟಿಯನ್ನು ಇಟ್ಟುಕೊಂಡು ಮಾಡಿದ್ದಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ರಿಜರ್ವ್ ಬ್ಯಾಂಕ್ ದಿಂದ ಬರುವ ಸಹಾಯ ಅಗ್ರಿಕಲ್ಚರಲ್ ಫೈನಾನ್ಸ್ ಕಾರ್ಪೋರೇಷನ್ನಿಂದ ಬರುವ ಸಹಾಯ ತೆಗೆದುಕೊಂಡು ರೈತ ಬೇಸಾಯಗಾರರ ಉತ್ಕರ್ಷಕ್ಕಾಗಿ ಸರಕಾರ ಹೋರಾಡುತ್ತಿದೆ. ಅವರಿಗೆ ಸಹಕಾರದಿಂದ ಸಹಾಯವಾಗಬೇಕು ಎಂಬುದು ಮುಖ್ಯ ಉದ್ದೇಶ. ಈ ಉದ್ದೇಶ ಸಫಲವಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ಇಂದು ನಾಲ್ಕು ಕೋಟಿ ರೂಪಾಯಿ ಶಾರ್ಟ ಟರ್ಮ ಲೋನ್, ಮೀಡಿಯಂ ಟರ್ಮ ಲೋನ್, ಲಾಂಗ ಟರ್ಮ ಲೋನ್ ಇವತ್ತಿನ ದಿವಸ ಸರಕಾರ ಕೊಡುತ್ತದೆ. ಇದಕ್ಕೆ ಬಡ್ಡಿಯ ದರ ಶೇಕಡ 9 ರಷ್ಟು ಬೀಳಬಹುದು. ಇತರ ನೀರಾವರಿ ಬಾವಿಗಳಿಗೆ ಕೊಡುವ ಸಾಲಕ್ಕೆ ಶೇಕಡ 3 ರಷ್ಟು ಬಡ್ಡಿ ಬೀಳುತ್ತದೆ. 12,000 ನೀರಾವರಿ ಬಾವಿಗಳಿಗೆ ಸರಕಾರ 8 ಕೋಟಿ ರೂಪಾಯಿ ಸಾಲ ಕೊಟ್ಟಿದೆ. ಇದರಲ್ಲಿ ಸರಕಾರ ಸಬ್‌ಸಿಡಿ ಕೂಡ ಕೊಡುತ್ತದೆ. ಇದಕ್ಕಾಗಿ ರಿಜರ್ವ ಬ್ಯಾಂಕ ಹಣ ಕೊಡುತ್ತದೆ. ರೈತರಿಗೆ ಶೇಕಡ 3 ರಷ್ಟು ಬಡ್ಡಿ ಬೀಳುತ್ತದೆ.

ಶಾರ್ಟ ಟರ್ಮ ಮತ್ತು ಮೀಡಿಯಂ ಟರ್ಮ ಸಾಲಗಳಿಗೆ 9 ಪರ್ಸೆಂಟ್ ಬಡ್ಡಿ ಬಹಳ ಜಾಸ್ತಿ ಆಗುತ್ತದೆ ಎಂದು ಮಾನ್ಯ ಸದಸ್ಯರು ಸೂಚನೆ ಕೊಟ್ಟಿದ್ದಾರೆ. ಮಾನ್ಯ ಸದಸ್ಯರಾದ ಶ್ರೀಮಾನ್ ನಂಜೇಗೌಡರು ಒಂದು ಮಾತು ಹೇಳಿದರು. ಸಹಕಾರ ಸಂಸ್ಥೆಗಳನ್ನು ಪೂರ್ಣವಾಗಿ ಲಿಕ್ವಿಡೇಟ್ ಮಾಡಬೇಕು ಎಂದು ಅವರು ಹೇಳಿದ್ದಾರೆ. ಈ ಮಾತು ಸಮಾಜ ಒಪ್ಪಿಕೊಳ್ಳುತ್ತದೆಯೋ ? ಇದನ್ನು ಯಾವ ಹಿನ್ನೆಲೆ ಇಟ್ಟುಕೊಂಡು ಹೇಳಿದ್ದಾರೋ ಗೊತ್ತಿಲ್ಲ. ಮಾನ್ಯ ಸದಸ್ಯರಾದ ಶ್ರೀಮಾನ್ ಸಿದ್ದವೀರಪ್ಪನವರು ಮಂತ್ರಿಗಳಾಗಿದ್ದಾಗ್ಗೆ ಎಷ್ಟೋ ಅಡಚಣೆಗಳು ನ್ಯೂನ್ಯತೆಗಳು ಇದ್ದರೂ ಕೂಡ ಸಹಕಾರ ಸಂಸ್ಥೆಗಳು ಮುಂದೆ ಬಂದಿವೆ. ಈಗ ಒಂದು ಸೂಚನೆ ಹೇಳುವುದು ಅಂದರೆ 100ಕ್ಕೆ 9 ಪರ್ಸೆಂಟ್ ಬಡ್ಡಿ ದರ ಇರುವುದನ್ನು 1 ಪರ್ಸೆಂಟ್ ಬಡ್ಡೀ ದರ ಕಡಿಮೆ ಮಾಡಿ ಅದನ್ನು 8 ಪರ್ಸೆಂಟ್ ಮಾಡುತ್ತೇವೆ. ಇದನ್ನು ಸರಕಾರ ಒಪ್ಪಿಕೊಂಡಿದೆ ಎಂದು ಹೇಳುತ್ತೇನೆ. ಇವತ್ತಿನ ದಿವಸ ಸಹಕಾರ ಸಂಸ್ಥೆಗಳನ್ನು ಲಿಕ್ವಿಡೇಟ್ ಮಾಡುವುದಕ್ಕೆ ಸರಕಾರ ಒಪ್ಪುವುದಿಲ್ಲ. ಲಿಕ್ವಿಡೇಟ್ ಮಾಡುವ ಪರಿಸ್ಥಿತಿ ಇಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ನಾಗಪ್ಪ.—ಮನೀ ಲೆಂಡರ್ಸ್ ಆಕ್ಟ ಪ್ರಕಾರ ಬಡ್ಡಿ 6 ಪರ್ಸೆಂಟ್‌ಕ್ಕಿಂತ ಹೆಚ್ಚಿಗೆ ಕೂಡದು ಎಂದು ಇದೆ. ಸರಕಾರ 9 ಪರ್ಸೆಂಟ್ ಬಡ್ಡಿ ಚಾರ್ಜ ಮಾಡುವುದು ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.– 9 ಪರ್ಸೆಂಟ್ ಬಡ್ಡಿ ತೆಗೆದುಕೊಂಡು ನಾಲ್ಕು ಹಂತದಲ್ಲಿ ಕೊಡುವುದರಿಂದ ಏನೂ ಪ್ರಯೋಜನವಿಲ್ಲ. ಈ ಹಂತಗಳನ್ನು ತೆಗೆದು ಹಾಕಿ ರೈತರಿಗೆ ನೇರವಾಗಿ ಬಾವಿಗಳಿಗೆ ಸಾಲ ಕೊಟ್ಟು, ಬಡ್ಡಿ ದರ ಕಡಿಮೆ ಮಾಡಿ ಎಂದು ಹೇಳುತ್ತೇನೆ.

ಶ್ರೀ ಪಿ. ಎಂ. ನಾಡಗೌಡ.—ಏನಾದರೂ ಕೇಳುವುದು ಇದ್ದರೆ ಕೊನೆಗೆ ಕೇಳಿ ಉತ್ತರ ಹೇಳುತ್ತೇನೆ.

(ಶ್ರೀ ಪಿ. ಎಂ. ನಾಡಗೌಡ)

ಒಂದು ಸೂಚನೆ ಏನು ಅಂದರೆ ಸಹಕಾರ ತತ್ವದ ಪ್ರಣಾಳಿಕೆಯಲ್ಲಿ ನಾವು ಎಲ್ಲರೂ ನಡೆದು ಕೊಂಡು ಹೋಗಬೇಕಾಗಿದೆ. ಇನ್‌ಸ್ಟಿಟ್ಯೂಷನ್ನಿಗೆ ಠಾಯಲ್ಟೀ ಇರಬೇಕಾದುದು ಮುಖ್ಯ. ಇನ್‌ಸ್ಟಿಟ್ಯೂಷನ್ನಿಗೆ ಠಾಯಲ್ಟಿ ಇಟ್ಟುಕೊಂಡು ಹಣವನ್ನು ನೇರವಾಗಿ ಅವುಗಳ ಮುಖಾಂತರ ಸಂಬಂಧಪಟ್ಟ ಬೇಸಾಯಗಾರರಿಗೆ ಕೊಡುವ ಹಾಗೆ ಇರಬೇಕು, ಇದು ಮಹತ್ವದ ವಿಚಾರ ಇನ್‌ಸ್ಟಿಟ್ಯೂಷನ್ ಮಹತ್ವವುದ್ದು. ಈ ವಿಚಾರ ಇರಬೇಕು ಎಂದು ನಮ್ರತೆಯಿಂದ ಸೂಚಿಸುತ್ತೇನೆ.

ಇಷ್ಟು ವಿಚಾರ ಸಹಕಾರ ಕ್ಷೇತ್ರದ ಬಗ್ಗೆ ಹೇಳಿ ಇನ್ನು ಮಾನ್ಯ ಸದಸ್ಯರು ಪ್ರಾಮುಖ್ಯವಾಗಿ ಸೂಚಿಸಿರುವ ವಿಷಯಗಳ ಬಗ್ಗೆ ಹೇಳುತ್ತೇನೆ. ಬಹು ಪ್ರಾಮುಖ್ಯವಾದ ವಿಷಯ ಸದಸ್ಯರು ಸಭೆಯಲ್ಲಿ ಹೇಳಿದ್ದಾರೆ.

ನಮ್ಮ ರಾಜ್ಯದಲ್ಲಿ 15 ಸಾವಿರ ಸೊಸೈಟಿಗಳಿವೆ. ಮಾನ್ಯ ಸದಸ್ಯರು ಅದರೊಳಗೆ ಎಷ್ಟೋ ಸಹಕಾರ ಸಂಘಗಳಲ್ಲಿ ನಡೆಯುವ ದುರಾಡಳಿತೆಯ ಬಗ್ಗೆ, ನ್ಯೂನತೆಗಳ ಬಗ್ಗೆ ಹೇಳಿದ್ದಾರೆ. ಅವೆಲ್ಲವುಗಳ ಬಗ್ಗೆ ಸರ್ಕಾರ ಒಂದು ಮಾತನ್ನು ಕೊಡುತ್ತದೆ. ಯಾವ ಸಹಕಾರ ಸಂಘಗಳು ದುರಾಡಳಿತ ಮಾಡುತ್ತಿರುತ್ತವೆ ಅವುಗಳನ್ನು ದಯಾದಾಕ್ಷಿಣ್ಯವಿಲ್ಲದೆ ಯಾವ ಬಗೆಯ ಪಂಥ, ಪಕ್ಷ, ಪಂಗಡಗಳನ್ನು ನೋಡದೆ ಕ್ರಮ ತೆಗೆದುಕೊಳ್ಳುತ್ತೇವೆ ಎಂಬುದಾಗಿ ನಾನು ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ. ಈ ಮಾತನ್ನು ನಾನು ಕೆಲವು ಅಂಕಿ ಅಂಶಗಳನ್ನು ಕೊಟ್ಟು ಹೇಳುತ್ತೇನೆ. ಮಾನ್ಯ ಸದಸ್ಯರು ಕೆಲವರು ಬಹಳ 'ಅನ್‌ಚಾರಿಟಬಲ್' ರಿಮಾರ್ಕ್ಸ್ ಮಾಡಿದ್ದಾರೆ ಎಂದರೆ ತಪ್ಪಾಗಲಾರದು. ಮಾನ್ಯ ಸದಸ್ಯರು ಒಂದು ವರ್ಷದ ಹಿಂದಿನ ಮಾತನ್ನು ನೋಡುವಾಗ, ಈ ಒಂದು ವರ್ಷದ ಕಾರ್ಯಕ್ರಮವೇನಿದೆ ಎಂದು ತಮ್ಮ ಮುಂದೆ ಇಟ್ಟಿದ್ದೇನೆ. ಯಾವತ್ತೂ ಜಾತಿ, ಮತ, ಪಕ್ಷ, ಪಂಗಡ, ಗುಂಪು ಇವುಗಳನ್ನು ಗಣನೆಗೆ ತೆಗೆದುಕೊಳ್ಳದೆ, ಆರ್ಥಿಕವಾಗಿ, ಸಾಮೂಹಿಕವಾಗಿ ಸಹಕಾರ ಸಂಘಗಳ ಅಭಿವೃದ್ಧಿಯಾಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರ ನೋಡುತ್ತದೆ ಎನ್ನುವ ಮಾತನ್ನು ಸರ್ಕಾರ ಕಾರ್ಯಗತ ಮಾಡಿದೆ ಎನ್ನುವ ಮಾತನ್ನು ವಿಶ್ವಾಸಪೂರ್ವಕವಾಗಿ ಅಂಕಿ ಅಂಶಗಳಿಂದ ಹೇಳುತ್ತಿದ್ದೇನೆ. ಈ ಒಂದು ವರ್ಷದ ಅವಧಿಯೊಳಗೆ ಈ ಸರ್ಕಾರ ಸಹಕಾರಿ ಕ್ಷೇತ್ರದಲ್ಲಿ ಏಳೆಂಟು ಮಹತ್ವದ ಸಂಸ್ಥೆಗಳನ್ನು ದುರಾಡಳಿತೆಯ ಬಗ್ಗೆ ತನ್ನ ಆಡಳಿತಕ್ಕೆ ತೆಗೆದುಕೊಂಡಿದೆ. ಒಂದು ಸ್ಟೇಟ್ ಕಾಟನ್ ಅಪೆಕ್ಸ್ ಸೊಸೈಟಿ. ಅದರಲ್ಲಿ ದುರಾಡಳಿತೆ ಬಂದು ಸಹಕಾರಿ ಕಾಯದೆ 54ನೇ ಕಲಮು ಹಚ್ಚಿ, ಅದನ್ನು ತೆಗೆದುಕೊಂಡು ಒಬ್ಬ ಸಮರ್ಥ ಆಡಳಿತಗಾರರನ್ನು ಹಾಕಿದೆ. ಅಲ್ಲಿಯ ಲೋಪದೋಷಗಳನ್ನು, ಅಲ್ಲಿಯ ದುರಾಡಳಿತೆಯನ್ನು ತೆಗೆದು ಈಗಾಗಲೇ ಅದನ್ನು ಸರ್ಕಾರ ತೆಗೆದುಕೊಂಡದ್ದು ಮಾನ್ಯ ಸದಸ್ಯರಿಗೆ ಗೊತ್ತಿದೆ ಎಂದು ನಾನು ನಂಬಿದ್ದೇನೆ. ಅಲ್ಲಿ ಕಾಂಗ್ರೆಸ್‌ನವರು ಇದ್ದರು ಅಥವಾ ಕಾಂಗ್ರೆಸ್ಸೇತರರು ಇದ್ದರು ಎನ್ನುವುದನ್ನು ಸರ್ಕಾರ ನೋಡಲಿಲ್ಲ. ಯಾರಾದರೂ ಇದನ್ನು ದಯವಿಟ್ಟು ಗಮನಿಸಬಹುದು. ಗುಂಪು, ಪಕ್ಷ, ಪಂಗಡಗಳು ಸರ್ಕಾರದ ಮುಂದೆ ಇಲ್ಲ ಎಂದು ಧಾರಾಳವಾಗಿ ನಾನು ಕೈ ಎತ್ತಿ ಇವೊತ್ತಿನ ದಿವಸ ಹೇಳುತ್ತಿದ್ದೇನೆ. ಮಾನ್ಯ ಸದಸ್ಯರು, ನಮ್ಮ ಪಕ್ಷದವರು, ವಿರೋಧಪಕ್ಷದವರೂ ಇದರಿಂದ ಪೂರ್ತಿಯಾಗಿ ಸಮಾಧಾನ ಹೊಂದಿದ್ದಾರೆಂದು ನಾನು ನಂಬಿದ್ದೇನೆ.

ಶ್ರೀ ಎಚ್. ಎನ್. ನಂಜೇಗೌಡ (ಅರಕಲಗೂಡು).—ನಮಗೆ ಸಮಾಧಾನವಾಗಿಲ್ಲ ಸ್ವಾಮಿ.

ಶ್ರೀ ಎಸ್. ವಿ. ಅಗ್ನಿಹೋತ್ರಿ (ಧಾರವಾಡ-ಗ್ರಾಮಾಂತರ).—ನಿಮಗೆ ಸಮಾಧಾನ ಹೇಳುವುದಕ್ಕೆ ನಮ್ಮಿಂದ ಆಗುವುದಿಲ್ಲ.

ಶ್ರೀ ಪಿ. ಎಂ. ನಾಡಗೌಡ.—ಎರಡನೆಯ ಸಂಸ್ಥೆ ಎಂದರೆ ಮೈಸೂರು ಜಿಲ್ಲೆ ಸಹಕಾರ ಬ್ಯಾಂಕನ್ನು ತೆಗೆದುಕೊಂಡದ್ದು ತಮಗೆಲ್ಲರಿಗೂ ಗೊತ್ತಾಗಿದೆ. ಸಹಕಾರಿ ಕ್ಷೇತ್ರದೊಳಗೆ ಇಂಥ ಒಂದು ಘಟನೆ, ಯಾವುದಾದರೂ ರಾಜ್ಯ ಸರ್ಕಾರ ಅಖಂಡ ಹಿಂದೂಸ್ಥಾನದೊಳಗೆ, ಇಂಥ ದೊಡ್ಡ ಸಂಸ್ಥೆ, ಸಹಕಾರಿ ಕ್ಷೇತ್ರದ ಸಂಸ್ಥೆಯನ್ನು which is an eye and ear of the co-operative movement ತೆಗೆದುಕೊಂಡಂಥ ಘಟನೆ ಎಲ್ಲಿಯೂ ನಡೆದಿಲ್ಲ. ಇಲ್ಲಿಯೂ ಪಕ್ಷ, ಪಂಗಡಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇಲ್ಲಿ ನಡೆಯುತ್ತಿದ್ದ ಕಾರ್ಯಗಳನ್ನು ನೋಡಿ, ರಿಸರ್ವ್ ಬ್ಯಾಂಕಿನಿಂದ ಮತ್ತು ಅಗ್ರಿಕಲ್ಚರಲ್ ರೀಫೈನಾನ್ಸಿಂಗ್ ಕಾರ್ಪೋರೇಷನ್‌ನಿಂದ ಸರ್ಕಾರದವರು ಯಾವ ಧೋರಣೆ

ಯನ್ನು ಇಟ್ಟುಕೊಂಡು ರೈತನಿಗೆ ಸಹಾಯ ಮಾಡಬೇಕು ಎನ್ನುವ ದೃಷ್ಟಿಯಿಂದ ಕೆಲಸ ಮಾಡುತ್ತಿದ್ದಾರೆ, ಅದಕ್ಕೆ ಅಪಚಾರವಾಗುತ್ತಿದೆ ಎನ್ನುವ ದೃಷ್ಟಿಯಿಂದ ಈ ಸಹಕಾರ ಬ್ಯಾಂಕನ್ನು ಸರ್ಕಾರದ ಅಧೀನಕ್ಕೆ ತೆಗೆದುಕೊಂಡಿದೆ. ಇನ್ನೂ ಇಂಥ ಮೂರು ನಾಲ್ಕು ಸಂಸ್ಥೆಗಳನ್ನು ಸರ್ಕಾರ ತೆಗೆದುಕೊಂಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ಟೇಟ್ ಕಾಟನ್ ಅಪೆಕ್ಸ್ ಸೊಸೈಟಿ ತೆಗೆದುಕೊಂಡಿದ್ದೀರಿ. 15 ಲಕ್ಷ ರೂಪಾಯಿವರೆಗೆ ಕಾಟನ್ ಸ್ಟಾಕ್ ವೆರಿಫಿಕೇಷನ್ ಆಗಬೇಕಾಗಿದೆ, ಅದನ್ನು ಮಾಡಿಸಿ ಎಂದು ಹೇಳಿದೆ. ಇನ್ನು ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿ ವಿಚಾರ ಕೇಳಿದೆ.

ಶ್ರೀ ಪಿ. ಎಂ. ನಾಡಗೌಡ.—ಕಾಟನ್ ಅಪೆಕ್ಸ್ ಸೊಸೈಟಿಯಲ್ಲಿ ಎಷ್ಟು ಅಪವ್ಯಯವಾಗಿದೆ ಎಂದು ನೋಡುತ್ತಿದ್ದೇವೆ. ಸಿವಿಲ್ ಮತ್ತು ಕ್ರಿಮಿನಲ್ ಕೇಸುಗಳನ್ನು ಹಾಕುತ್ತೇವೆ.

ನಾನು ಮಾನ್ಯ ಸದಸ್ಯರಿಗೆ ವಿಶ್ವಾಸಪೂರ್ವಕವಾಗಿ ಹೇಳುತ್ತೇನೆ, ಇನ್ನು 8 ದಿವಸಗಳಲ್ಲಿ ಸ್ಟೇಟ್ ಮಾರ್ಕೆಟಿಂಗ್ ಸೊಸೈಟಿಯ ವಿಚಾರವನ್ನು ತಿಳಿಸಿ, ಮಾನ್ಯ ಸದಸ್ಯರನ್ನು ನನ್ನ ಹೊರಗೆ ಬರಮಾಡಿಕೊಂಡು ಕಾಫಿ ಕೊಟ್ಟು ಏನು ಕ್ರಮವನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳುತ್ತೇನೆ.

ಶ್ರೀ ಎಸ್. ಶಿವಪ್ಪ.—ಖಾದಿ ಬೋರ್ಡ್ ಅಧ್ಯಕ್ಷರ ಮೇಲೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂದು ಹೇಳುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಆ ವಿಚಾರ ನನ್ನ ಎದುರಿಗೆ ಬಂದರೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಧಾರವಾಡ ಇಂಡಸ್ಟ್ರಿಯಲ್ ಕೋ ಆಪರೇಟಿವ್ ಬ್ಯಾಂಕ್ ತೆಗೆದುಕೊಂಡಿದ್ದೇವೆ. ಅಲ್ಲಿ ಕಾಂಗ್ರೆಸ್ಸಿಗರೇ ಇದ್ದರು.

ಗೌರಿಬಿದನೂರು ಸಹಕಾರ ಸಕ್ಕರೆ ಕಾರ್ಖಾನೆಯನ್ನು ತೆಗೆದುಕೊಂಡು ಅಲ್ಲಿಗೆ ಒಬ್ಬ ಸಮರ್ಥ ಆಡಳಿತಗಾರರನ್ನು ಹಾಕಿ ಈಗಾಗಲೇ ಅಲ್ಲಿ ಕ್ರಷಿಂಗ್ ಶುರುವಾಗಿದೆ.

ಆಡಿಟ್ ವಿಷಯವಾಗಿ ಅನೇಕ ಮಾನ್ಯ ಸದಸ್ಯರು ಹೇಳಿದ್ದಾರೆ. ಆಡಿಟ್ ಬಗ್ಗೆ ಏನು ತಕರಾರು ಬಂದಿದೆ, ಅದರಿಂದ ನಮಗೂ ಸ್ವಲ್ಪ ಸಂಶಯ ಬರಲಿಕ್ಕೆ ಹತ್ತಿದೆ. ಮಾನ್ಯ ಸದಸ್ಯರೊಬ್ಬರು ಹೇಳಿದಂತೆ ಆಡಿಟ್ ಇಲಾಖೆಯಲ್ಲಿ ಮೆಟ್ರಿಕ್ಯುಲೇಟ್ಸ್ ಇದ್ದದ್ದು ಖರೆ. ಇವರಿಗೆ ನೌಕರಿ ಕೊಡಿಸ ಬೇಕಾದರೆ ನಿಮ್ಮಂಥ ಮಾನ್ಯ ಸದಸ್ಯರು ಬಂದು ನೌಕರಿ ಕೊಡಿಸಿದ್ದಾರೆ. ಇದು ದುರ್ದೈವದ ಸಂಗತಿ. ಆಡಿಟ್ ಸರಿಯಾಗಿ ನಡೆದರೆ ಸಹಕಾರ ಸಂಘಗಳ ಆಡಳಿತ ಉತ್ತಮವಾಗುತ್ತದೆ ಎಂದು ಮಾನ್ಯ ಸದಸ್ಯರು ಹೇಳಿದುದನ್ನು ನಾನು ತಲೆಬಾಗಿಸಿ ಒಪ್ಪಿಕೊಳ್ಳುತ್ತೇನೆ. ಈ ಆಡಿಟ್ ಮಾಡಿಸುವ ವಿಷಯದಲ್ಲಿ ಅದನ್ನು ಅಕೌಂಟೆಂಟ್ ಜನರಲ್ ಕಡೆಗೆ ಕೊಡಬೇಕೋ, ಇಂಡಿಪೆಂಡೆಂಟ್ ಮಾಡ ಬೇಕೋ ಅಥವಾ ವಿಜಿಲೆನ್ಸ್ ಸೆಲ್ ಮಾಡಬೇಕೋ ಅಥವಾ ಎಲ್ಲ ಆಡಿಟರುಗಳನ್ನೂ ನಮ್ಮ ರೆಗ್ಯುಲರ್ ಡಿಪಾರ್ಟ್‌ಮೆಂಟಿಗೆ ತೆಗೆದುಕೊಂಡು ಬಿ.ಕಾಂ ಅಥವಾ ಬಿ. ಎ. ಪದವೀಧರರನ್ನು ಮಾತ್ರ ಈ ಕೆಲಸಕ್ಕೆ ತೆಗೆದುಕೊಳ್ಳಬೇಕೋ ಎನ್ನುವುದರ ಬಗ್ಗೆ ವಿಚಾರ ಮಾಡಿ ಕ್ರಮ ತೆಗೆದು ಕೊಳ್ಳುತ್ತೇವೆಂದೂ ಹೇಳಿ ಆಡಿಟ್ ಎಫೆಕ್ಟಿವ್ ಆಗಿ ಇದ್ದರೆ ಎಲ್ಲ ಸೊಸೈಟಿಗಳೂ ಕುಣಿಯಲಿಕ್ಕೆ ಹತ್ತುತ್ತವೆ ಎಂದು ಹೇಳಬಹುದು.

ಶ್ರೀ ಎಚ್. ಸಿದ್ದವೀರಪ್ಪ.—ಜನರಲ್ ಬಾಡಿ ಮೀಟಿಂಗ್ ಆಗುವುದಕ್ಕೆ ಮುಂಚೆ ಆಡಿಟ್ ಆಗದೆ ಜನರಲ್ ಬಾಡಿ ಮೀಟಿಂಗ್ ಮಾಡಕೂಡದು ಎಂದು ಇದ್ದುದಕ್ಕೆ ವಿನಾಯಿತಿ ಕೊಟ್ಟಿದ್ದೀರಿ. ಪ್ರತಿ ವರ್ಷ ಜನರಲ್ ಬಾಡಿ ಮೀಟಿಂಗ್ ಆಗುವುದಕ್ಕೆ ಮುಂಚೆ ಆಡಿಟ್ ಮಾಡಿಸಿದರೆ ನೂರಕ್ಕೆ 75 ರಷ್ಟು ದೂರುಗಳು ಕಡಮೆಯಾಗುತ್ತವೆ

ಶ್ರೀ ಪಿ. ಎಂ. ನಾಡಗೌಡ.—ಈಗಿರುವ ಕಾಯಿದೆ ಪ್ರಕಾರ ಜನರಲ್ ಬಾಡಿ ಮೀಟಿಂಗಿಗೆ ಮುಂಚೆ ಆಡಿಟ್ ಆಗಬೇಕೆಂದಿಲ್ಲ. ಆದರೆ ಆಡಿಟ್ ಆಗುತ್ತಲೇ ಇದೆ. ಆಡಿಟ್ ಆಗಿರುವ ಅಂಕಿ ಅಂಶಗಳನ್ನು ನೋಡಿದರೆ ನೂರಕ್ಕೆ 80 ರಷ್ಟು ಆಡಿಟ್ ಆಗಿದೆ. ಈ ಮಾತನ್ನು ಹೇಳಿ ಕೇಂದ್ರ ಸರ್ಕಾರದವರು ನಮ್ಮ ಮೈಸೂರು ಸರ್ಕಾರಕ್ಕೆ ಶಹಬಾಸ್‌ಕೊಟ್ಟಿದ್ದಾರೆ.

ಶ್ರೀ ಕೆ. ಎಂ. ತಮ್ಮಯ್ಯ.—ಆಡಿಟ್ ಆಗಿದ್ದರೂ ವರದಿಯಿಲ್ಲದೆ ಜನರಲ್ ಬಾಡಿ ಮೀಟಿಂಗ್ ಮಾಡುತ್ತಾ ಇದ್ದಾರೆ.

ಶ್ರೀ ಪಿ. ಎಂ. ನಾಡಗೌಡ.—ಕಾನೂನು ಪ್ರಕಾರ ಅವರು ಮಾಡುತ್ತಿದ್ದಾರೆ. ನೂರಕ್ಕೆ 80ರಷ್ಟು ಮತ್ತು ಅದಕ್ಕಿಂತ ಹೆಚ್ಚಾಗಿ ಆಡಿಟ್ ಮಾಡಿದ್ದಾರೆ. ಆದರೆ ಆಡಿಟ್ ಎಫೆಕ್ಟಿವ್ ಇಲ್ಲ ಎಂದು ಹೇಳುವುದನ್ನು ಒಪ್ಪಿಕೊಳ್ಳುತ್ತೇನೆ. ಅದಕ್ಕೆ ಕ್ರಮ ಕೈಕೊಂಡಿದ್ದೇವೆ. ದೊಡ್ಡ ದೊಡ್ಡ ನಾಲ್ಕಾರು ಸೊಸೈಟಿಗಳನ್ನು ಬಲಿಹಾಕಿದ್ದೇವೆ.

ಶ್ರೀ ಎಚ್. ಸಿದ್ಧವೀರಪ್ಪ.—1963 ನೆಯ ಇಸವಿಯ ಆಡಿಟ್ ವಿಚಾರ ಹೇಳಿದೆ, ಅದರ ಬಗ್ಗೆ ಕ್ರಮ ತೆಗೆದುಕೊಂಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ನನ್ನ ಯಾವುದಾದರೂ ಸೊಸೈಟಿಯಲ್ಲಿ ದುರ್ವ್ಯವಹಾರ ನಡೆಸಿದ್ದರೆ ದಯಾದಾಕ್ಷಿಣ್ಯವಿಲ್ಲದೆ ಕಾರ್ಯಕ್ರಮ ಕೈಕೊಳ್ಳುತ್ತೇನೆ ಎಂದು ಕಳಕಳಿಯಿಂದ ಹೇಳುತ್ತೇನೆ. ಮಾನ್ಯ ಸದಸ್ಯರು ಅನ್‌ಚಾರಿಟಬಲ್ ರಿಮಾರ್ಕ್ಸ್ ಮಾಡಿರುವುದಕ್ಕೆ ನಾನು ಬದ್ಧನಲ್ಲ. ಮಾನ್ಯ ಸಿದ್ಧವೀರಪ್ಪನವರು, ಶಿವಪ್ಪನವರು ಮತ್ತು 33 ಮಂದಿ ಸದಸ್ಯರು ಕಳಕಳಿಯಿಂದ ಕೆಲವು ವಿಷಯಗಳನ್ನು ಸರಕಾರದ ಮುಂದೆ ಇಟ್ಟಿದ್ದಾರೆ. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯ ವಿಚಾರ ಹೇಳಿದರು, ಅದು ರೈತರ ಸಲುವಾಗಿ ಆದ ಕಮಿಟಿ. ವ್ಯಾಪಾರಸ್ಥರ ಕೈವಾಡ ಇದರಲ್ಲಿರಲು ಅವಕಾಶಮಾಡಿ ಅವರಿಗೆ ಸಹಾಯಮಾಡುತ್ತಿದ್ದಾರೆ ಎಂದು ಹೇಳಿದರು. ಈ ಹವ್ಯಾಸ ಮಾಡಬಾರದಾಗಿತ್ತು. ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿ ರೂಲ್ಸ್ ಆಗಿರಲಿ, ಬಿಡಲಿ, ಬೈಲಾಸ್ ಆಗಿರಲಿ, ಬಿಡಲಿ, ರೈತರ ಅಭಿವೃದ್ಧಿಯ ಸಲುವಾಗಿರುವ ಈ ಕಾಯಿದೆಯನ್ನು ಮೇ ಒಂದನೆಯ ತಾರೀಖಿನಿಂದ ಅಮಲು ಬಜಾವಣೆ ಮಾಡಬೇಕೆಂದಿದ್ದೇವೆ. ಅದು ಒಂದನೆಯ ತಾರೀಖಿನಿಂದ ಜಾರಿಗೆ ಬರುವುದು. ಶ್ರೀ ಶಿವಪ್ಪನವರು ಅಭಿವೃದ್ಧಿ ಮಂಡಲ ಚುನಾವಣೆ ಸಲುವಾಗಿ ಬಹಳಷ್ಟು ಆಗ್ರಹದಿಂದ ಹೇಳಿದರು. ಹಿಂದೆ ಎಮರ್ಜನ್ಸಿ ಇತ್ತು ಎಂದು ಚುನಾವಣೆಯನ್ನು ಮುಂದುವರೆಸಲಾಗಿತ್ತು. ಈಗ ಒಂದು ವರ್ಷದೊಳಗಾಗಿ ಚುನಾವಣೆ ನಡೆಸಬೇಕೆಂದು ಒಪ್ಪಲಾಗಿದೆ. ಅದು ಸರಕಾರಕ್ಕೆ ಗೊತ್ತಿದೆ, ಅದರಂತೆ ಮಾಡಲಾಗುತ್ತದೆ. ಒಂದು ವರ್ಷದಲ್ಲಿ ಒಂದು ದಿವಸ ತಡವಾದರೂ ಸರಕಾರದ ಜವಾಬ್ದಾರಿ ಇದೆ. ಜನರ ಪ್ರತಿನಿಧಿಗಳು ಆಗ್ರಹಮಾಡುತ್ತಿದ್ದಾರೆ, ತ್ರೀ ಟೈರ್ ಸಿಸ್ಟಂ ತರಬೇಕು, ಮೈಸೂರು, ಬೆಂಗಳೂರು ಮುಂತಾದ ಕಡೆಗಳಿಂದ ಕೆಲವು ಜನರು ಬರುವುದನ್ನು ತಪ್ಪಿಸಬೇಕು, ಅಧಿಕಾರ ವಿಕೇಂದ್ರೀಕರಣ ಮಾಡಬೇಕು ಎಂದು ಹೇಳುವುದನ್ನು ಒಪ್ಪಿಕೊಂಡು ಹೆಚ್ಚು ಹೆಚ್ಚು ಅಧಿಕಾರ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತಿಗೆ ಕೊಡಬೇಕು ಎಂದು ಕೊಂಡಜ್ಜಿ ಬಸಪ್ಪ ಕಮಿಟಿ ವರದಿಯ ಪ್ರಕಾರ ಕಾಯಿದೆಯಾಗಿ ಸರಕಾರದ ಮುಂದೆ ಇದೆ. ಅದನ್ನು ಶೀಘ್ರದಲ್ಲಿ ತಂದು ಮಾನ್ಯ ಸದನದ ಮುಂದೆ ವೇಳೆ ಸಿಕ್ಕಿದಾಗ ಮಂಡಿಸಲಾಗುವುದು. ಆದಾಗದಿದ್ದರೆ ಈಗಿರುವ ಕಾಯಿದೆಯ ಪ್ರಕಾರ ಡಿಸೆಂಬರಿನಲ್ಲಿ ಚುನಾವಣೆ ನಡೆಸಲಾಗುವುದು. ಕಾಯಿದೆ ಪ್ರಕಾರ ಮಾಡಬೇಕಾದರೆ ನಾಲ್ಕಾರು ತಿಂಗಳು ಬೇಕು, ನೋಟಿಫಿಕೇಷನ್ ಮಾಡಬೇಕು.

ಶ್ರೀ ಎಸ್. ಶಿವಪ್ಪ.—ತಾಲ್ಲೂಕು ಬೋರ್ಡಿಗೆ ಶೀಘ್ರದಲ್ಲಿ ಚುನಾವಣೆ ಮಾಡಲು ಕಷ್ಟವಾದರೆ ಈಗಿರುವ ತಾಲ್ಲೂಕು ಬೋರ್ಡುಗಳನ್ನು ರದ್ದುಮಾಡಿ ಮುಂದೆ ಚುನಾವಣೆ ಮಾಡುವವರೆಗೆ ಸ್ಪೆಷಲ್ ಆಫೀಸರನ್ನು ನೇಮಕಮಾಡಿದರೆ ಒಳ್ಳೆಯದು.

ಶ್ರೀ ಪಿ. ಎಂ. ನಾಡಗೌಡ.—ಸರಕಾರದ ಅಭಿಪ್ರಾಯ ಹಾಗಿಲ್ಲ. ಯಾವಾಗ ಕಾಯಿದೆ ಬದ್ಧವಾದ ಸಂಸ್ಥೆಗಳನ್ನು ರಚನೆಮಾಡಿದೆವೋ ಆಗ ಮೇಲಿಂದಮೇಲೆ ಮಾನ್ಯ ಸದಸ್ಯರು ಹೇಳಿದಂತೆ ಮಾಡುವುದು ಸರಿಯಲ್ಲ. ಆ ಅಭಿಪ್ರಾಯಕ್ಕೆ ಸರಕಾರ ಒಪ್ಪುವುದಿಲ್ಲ. ಶೀಘ್ರವಾಗಿ ಚುನಾವಣೆ ಮಾಡುತ್ತೇವೆ. ಇನ್ನು ಸಹಕಾರ ಸಂಸ್ಥೆಗಳಲ್ಲಿ ಸರಕಾರದ ಪಾತ್ರ ಯಾವರೀತಿ ಇರಬೇಕೆಂಬುದನ್ನು ಹೇಳುತ್ತೇನೆ. ಸಹಕಾರಿ ಕ್ಷೇತ್ರದಲ್ಲಿ ಯೋಗ್ಯರಿದ್ದರೆ ಸರಕಾರದ ಪಾತ್ರ ಬಹಳ ಕಡಮೆಯಿದ್ದರೆ ಒಳ್ಳೆಯದು. ಈ ಕ್ಷೇತ್ರದಲ್ಲಿ ಸರಕಾರ ರೊಕ್ಕ ಕೊಟ್ಟು ಬಯ್ಯಿಸಿಕೊಳ್ಳಬೇಕಾಗಿದೆ. ಇದು ದುರ್ದೈವದ ಸಂಗತಿ. ಸರಕಾರ ರೊಕ್ಕ ಕೊಡುತ್ತದೆ, ಜನರಿಗೆ ಅಧಿಕಾರ ಕೊಡುತ್ತದೆ ಇಷ್ಟರ ಮೇಲೆ ಜನರ ಅಪೇಕ್ಷೆಯಂತೆ ಆಪರೇಷನ್ ಮಾಡುವುದಕ್ಕೆ ಹಿಂದೆ ಬನ್ನಿ ಎಂದು ಹೇಳಿದರೆ ಸರಿಯಾಗುವುದಿಲ್ಲ. ಸರಕಾರದ ನೀತಿ ದೈನಂದಿನ ವ್ಯವಹಾರದಲ್ಲಿ ಕೈಹಾಕಬಾರದು, ಒಂದು ಕ್ಷೇತ್ರಕ್ಕೆ ಇರುವ ಸ್ವಾತಂತ್ರದಲ್ಲಿ ಕೈಹಾಕಬಾರದು, ನ್ಯೂನತೆಯಿದ್ದರೆ ಕಾರ್ಯಕ್ರಮ

ಕೈಕೊಳ್ಳಬೇಕು ಎಂಬುದೇ ಆಗಿದೆ. ಯಾವರೀತಿ ಮಾರ್ಗದರ್ಶನ ಮಾಡಿದ್ದಾರೆಂದು ಕೇಳಿದ್ದಾರೆ. ಮಾನ್ಯ ಸದಸ್ಯರ ಅಭಿಪ್ರಾಯ ತೆಗೆದುಕೊಂಡು ಅದಕ್ಕೆ ಮನ್ನಣೆ ಕೊಟ್ಟು ಅದಕ್ಕನುಗುಣವಾಗಿ ಸರ್ಕಾರ ಕ್ರಮ ಕೈಗೊಳ್ಳುವುದು ಎಂದು ಹೇಳುತ್ತೇನೆ.

ಇನ್ನು ಸಹಕಾರಿ ಸಂಸ್ಥೆಗಳನ್ನು ಪುನರುಜ್ಜೀವನ ಮಾಡುವ ವಿಚಾರವಿದೆ. ಸೇಕಡ ನಾಲ್ಕರಷ್ಟು ಸಂಸ್ಥೆಗಳು ಚೆನ್ನಾಗಿ ಕೆಲಸಮಾಡುತ್ತಿವೆ. ಎಲ್ಲ ಸಹಕಾರ ಸಂಘಗಳೂ ಚೆನ್ನಾಗಿ ಕೆಲಸಮಾಡುತ್ತಿಲ್ಲವೆಂದು ಹೇಳಬಾರದು.

8–00 P.M.

ಸರ್ಕಾರದ ಧೋರಣೆ ಪ್ರಕಾರ ಈ ಸಹಕಾರ ಸಂಘಗಳನ್ನು ಹೇಗೆ ಪುನರುಜ್ಜೀವನ ಮಾಡಬೇಕು, ಯಾವ ರೀತಿಯಿಂದ ವೈಯಬಲ್ ಯೂನಿಟ್ಸ್ ಆಗಿ ಅಮಾಲ್ಗಮೇಟ್ ಮಾಡಬೇಕು ಮತ್ತು ಯಾವ ಸಹಕಾರ ಸಂಘಗಳು ಗ್ರಾಮೀಣ ಅಭಿವೃದ್ಧಿಯಾಗುವುದಕ್ಕೆ, ಗ್ರಾಮೀಣ ಜನತೆಗೆ ಅಸಹಕಾರಿಯಾಗುತ್ತವೆ ಅಂತಹವುಗಳನ್ನು ಲಿಕ್ವಿಡೇಟ್ ಮಾಡುವುದಕ್ಕೆ ಡಿಪಾರ್ಟ್‌ಮೆಂಟಿನವರು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂಬ ಮಾತನ್ನು ಮಾನ್ಯ ಸದಸ್ಯರ ಮುಂದೆ ಆಗಾಗ್ಗೆ ಇಟ್ಟಿದ್ದೇನೆ. ಸರ್ಕಾರದ ಧೋರಣೆ ಪ್ರಕಾರ ಪ್ರಾರಂಭಕ್ಕೆ ಅನೇಕ ಸಹಕಾರಿ ಸಂಘಗಳ ಸ್ಥಾಪನೆ ಯಾಗಿವೆ. ಆ ಸಂಘಗಳಿಗೆ ಇವತ್ತಿನದಿವಸ ಒಂದು ಜೀವ ಕಳೆ ತುಂಬಬೇಕಾಗಿದೆ. ಜೀವ ಕಳೆ ತುಂಬಿ ಸಾಮೂಹಿಕ ಆರ್ಥಿಕ ಜೀವನ, ಗ್ರಾಮೀಣದ ಅಭಿವೃದ್ಧಿಯಾದರೆ ಈ ಸಹಕಾರೀ ಸಂಘ ದಿಂದಲೇ ಆಗಬೇಕೆಂಬ ತತ್ವ ಸರ್ಕಾರದ್ದು ಆಗಿದೆ. ಇದು ಚೆನ್ನಾಗಿ ಇಲ್ಲದೇ ಇದ್ದರೆ ಗ್ರಾಮೀಣದ ಜನತೆಗೆ ನೆರವು ಕೊಡುತ್ತ ಇರುವಂತಹ ರಿಸರ್ವ ಬ್ಯಾಂಕ್, ಅಗ್ರಿಕಲ್ಚರಲ್ ರೀ ಫೈನಾನ್ಸ್ ಕಾರ್ಪೋರೇಷನ್‌ಗಳಿಂದ ಹಣ ಸಿಕ್ಕಲಿಕ್ಕೆ ಇಲ್ಲ. ಅವುಗಳಿಂದ ಹಣ ಒದಗಿಸಿ ಕೆಲಸ ಕಾರ್ಯಗಳನ್ನು ಮಾಡಬೇಕೆಂದು ಅನ್ನತಕ್ಕ ಡೈನಾಮಿಕ್ ಪಾಲಿಸಿಯನ್ನು ಸರ್ಕಾರದವರು ಇಟ್ಟುಕೊಂಡಿದ್ದಾರೆ. ಆದ್ದರಿಂದ ಇವನ್ನು ಯಾವ ರೀತಿಯಿಂದ ಪುನರುಜೀವನ ಮಾಡಬೇಕೆಂಬ ಮಾತನ್ನು ಸದಸ್ಯರು ಏನು ಹೇಳುತ್ತಾ ಇದ್ದಾರೆ ಅದನ್ನು ಸರ್ಕಾರ ಒಪ್ಪುತ್ತದೆ. ಇನ್ನೊಂದು ಮಾತನ್ನು ಇವತ್ತಿನ ದಿವಸ ಹೇಳಬೇಕಾಗಿದೆ. ಇವತ್ತು ಮಾನ್ಯ ಸದಸ್ಯರು ಬಹಳಷ್ಟು ಮಂದಿ ಗ್ರಾಮೀಣದವರೇ ಇದ್ದಾರೆ. ಗ್ರಾಮೀಣದವರ ಅಭಿವೃದ್ಧಿ, ಸಂಸ್ಕೃತಿ ಪುನರುಜೀವನ ಆಗಬೇಕೆಂಬ ತತ್ವವನ್ನು ಒಪ್ಪಿಕೊಂಡ ಮೇಲೆ, ಇವತ್ತು ಎರಡು ತರಹದ ಸಂಸ್ಕೃತಿ ನಮ್ಮ ರಾಜ್ಯದಲ್ಲಿ ಇದೆ. ಒಂದು ಗ್ರಾಮೀಣದ ಸಂಸ್ಕೃತಿ ಇನ್ನೊಂದು ದೊಡ್ಡ ದೊಡ್ಡ ಪಟ್ಟಣದ ಸಂಸ್ಕೃತಿ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ, ಮಾನವನಿಗೆ ಬೇಕಾಗುವಂತಹ ಎಲ್ಲಾ ಸೌಕರ್ಯಗಳೂ ಇರುತ್ತವೆ. ಅವು ಗ್ರಾಮೀಣದ ಜನತೆಗೂ ಏಕೆ ಸಿಕ್ಕಬಾರದು ಎಂಬ ಮಾತು ಇದೆ. ಇವತ್ತು ನಮ್ಮ ರಾಷ್ಟ್ರದ ಗ್ರಾಮೀಣ ಜೀವನದಲ್ಲಿ ಕಳೆ ತುಂಬದಿದ್ದರೆ ಗ್ರಾಮೀಣ ಜೀವನವೇ ಹಾಳಾಗಿ ಹೋಗುತ್ತದೆ. ಜೀವನ ಕಳೆ ತುಂಬಬೇಕಾದರೆ ಅವಶ್ಯಕವಾಗಿ 3 ಕೆಲಸ ಮಾಡುವಂತಹ ಸಂಸ್ಥೆಗಳು ಇರಬೇಕಾಗುತ್ತದೆ. ಒಂದು ಸಹಕಾರಿ ಸಂಸ್ಥೆಗಳು, ಇದು ಸಾಮೂಹಿಕ ಆರ್ಥಿಕ ಜೀವನವನ್ನು ಪರಿಪಾಲನೆ ಮಾಡುವಂತಹ ಸಂಸ್ಥೆ. ಎರಡನೆಯದು ಸಮಾಜದ ರಾಜಕೀಯ ಜೀವನವನ್ನು ಪರಿಷ್ಕೃತ ಮಾಡುವಂತಹ ಸಂಸ್ಥೆ. ಮೂರನೆಯದು ನಮ್ಮ ಸಂಸ್ಕೃತಿಯನ್ನು ಪುನರುಜ್ಜೀವನ ಮಾಡುವುದಕ್ಕೆ ಸ್ಥಾಪನೆಯಾಗಿರತಕ್ಕ ಶಾಲೆಗಳು. ಈ ಮೂರು ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡದೇ ಇದ್ದರೆ ಅನ್ಯಾಯಮಾಡಿದಂತಾಗುತ್ತದೆ ಎಂಬುದನ್ನು ಎಲ್ಲರೂ ಒಪ್ಪಿಕೊಳ್ಳಬೇಕಾದ ವಿಚಾರ. ಅದಕ್ಕಾಗಿಯೇ ಸರ್ಕಾರದವರು ತಾಲ್ಲೂಕು ಬೋರ್ಡ್, ಪಂಚಾಯ್ತು, ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಮತ್ತು ಇತರ ಸಾಮೂಹಿಕ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. 1958ರಿಂದ ಕೇಂದ್ರಸರ್ಕಾರದ ನೆರವಿನಿಂದ ರಾಜ್ಯ ಸರ್ಕಾರದವರು ಈ ಯೋಜನೆಗಳನ್ನು ಯಾಶಸ್ವಿಯಾಗಿ ಮಾಡಿ ಇವತ್ತಿನ ದಿವಸ ಅವು ಆಧುನಿಕ ಪರಿಸ್ಥಿತಿಗೆ ಬಂದಿವೆ. ಈಗ ಈ ಯೋಜನೆಗಳನ್ನು ಕಡಿಮೆ ಮಾಡಬೇಕು, ಅಷ್ಟೇ ಅಲ್ಲ ಇವನ್ನು ತೆಗೆದು ಹಾಕಬೇಕೆಂಬ ಕೂಗು ಏನಿದೆ ಇದನ್ನು ವಿಚಾರ ಮಾಡಬೇಕಾಗಿದೆ. ಈ ಎನ್. ಇ. ಎಸ್ ಮತ್ತು ಸಿ. ಡಿ. ಯೋಜನೆಗಳನ್ನು ತೆಗೆದು ಹಾಕಿದರೆ ಗ್ರಾಮೀಣ ಅಭಿವೃದ್ಧಿ ಮಾಡುವಂತಹ ಮತ್ತೊಂದು ಡಿಪಾರ್ಟ್‌ಮೆಂಟ್ ಯಾವುದು ಇದೆ ಎಂಬ ಪ್ರಶ್ನೆ ಬರುತ್ತದೆ. ಆದ್ದರಿಂದ ಇದು ಅವಶ್ಯಕ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಇದರ ಬಗ್ಗೆ ರೊಕ್ಕ ಬರುತ್ತದೆ. ತಾಲ್ಲೂಕು ಅಭಿವೃದ್ಧಿ ಮಂಡಲಿ ಇರುವಾಗ ಎನ್. ಇ. ಎಸ್. ಯೋಜನೆಗಳು ಅನಾವಶ್ಯಕ ಎಂಬ ವಿಚಾರವನ್ನು

(ಶ್ರೀ ಪಿ. ಎಂ. ನಾಡಗೌಡ)

ತಾವು ಹೇಳಿದ್ದೀರಿ! ಅನೇಕ ಅಧಿಕಾರಿಗಳನ್ನು ತೆಗೆದು ಹಾಕಿದ್ದು ತಮಗೆ ಗೊತ್ತಿದೆ. ತಾಲ್ಲೂಕು ಬೋರ್ಡು ಅಭಿವೃದ್ಧಿ ಮಂಡಲಿಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಎಷ್ಟು ಜನ ಅಧಿಕಾರಿಗಳ ಅವಶ್ಯಕತೆ ಇದೆಯೋ ಅಷ್ಟೇ ಜನ ಇದ್ದಾರೆ ಅಂತ ಹೇಳಿ ಬಹಳ ವಿನಯಪೂರ್ವಕವಾಗಿ ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ನಾನು ಸತ್ಯವಲ್ಲದ್ದನ್ನು ಆಡುತ್ತಿಲ್ಲ, ತಾವು ಹಿಂದೆಮುಂದೆ ನೋಡಬಾರದು, ಅಡ್ಮಿನಿಸ್ಟ್ರೇಟೀವ್ ರಿಫಾರಂಸ್ ಕಮಿಷನ್‌ನವರು ಇದನ್ನು ತೆಗೆಯದಿದ್ದರೆ ನಿಮ್ಮ ಗ್ರಾಮಗಳು ಉಳಿಯುವುದಿಲ್ಲ ಎಂದು ಹೇಳಿದ್ದಾರೆ, ಇನ್ನೂ ನೀವು ಅದಕ್ಕೆ ಅಂಟಿಕೊಂಡಿದ್ದೀರಲ್ಲಾ, ಏನು ಹೇಳಲಿ ?

ಶ್ರೀ ಪಿ. ಎಂ. ನಾಡಗೌಡ.—ಅಲ್ಲಿ ಯಾವ ಅಧಿಕಾರಿಗಳು ಇದ್ದಾರೆ ಎಂಬುದನ್ನು ತಾವು ವಿಚಾರ ಮಾಡಬೇಕು. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ಒಬ್ಬ ಬಿ.ಡಿ.ಒ. ಇದ್ದಾರೆ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಅವರೇ ಚೀಫ್ ಎಕ್ಸಿಕ್ಯೂಟೀವ್ ಆಫೀಸರು, ಇನ್ನು ಪಂಚಾಯಿತಿ ಸೂಪರ್‌ವಿಷನ್ ಸಲುವಾಗಿ ಒಬ್ಬ ಆಫೀಸರು ಇದ್ದಾರೆ. ಇನ್ನು ಸಹಕಾರಿ ಕ್ಷೇತ್ರದಲ್ಲಿ ಒಬ್ಬ ಇನ್‌ಸ್ಪೆಕ್ಟರು ತಾಲ್ಲೂಕು ಮಟ್ಟದಲ್ಲಿ ಇರುತ್ತಾರೆ ಎಂಬ ಭಾವನೆ ತಪ್ಪು. ಎನ್.ಇ.ಎಸ್. ದೊಳಗೆ ಇರತಕ್ಕ ಅಧಿಕಾರಿಯೇ ಇರುತ್ತಾನೆ, ಇಡೀ ತಾಲ್ಲೂಕಿಗೆ ಒಬ್ಬನೇ ಒಬ್ಬ ಅಧಿಕಾರಿ ಇರುತ್ತಾನೆ ಎಂದು ಹೇಳುತ್ತೇನೆ. ಈ ರೀತಿ 4-5 ಮಂದಿ ಅಧಿಕಾರಿಗಳು ಯಾವ ಮಾರ್ಪಾಡನ್ನು ಮಾಡಿದರೂ ಕೂಡ ತಾಲ್ಲೂಕಿನ ಮಟ್ಟದಲ್ಲಿ ಇರಬೇಕಾಗುತ್ತದೆ ಎಂಬುದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಾ ಇದ್ದೇನೆ.

ಇನ್ನು ಅಭಿವೃದ್ಧಿ ಯೋಜನೆಗಳ ಬಗ್ಗೆ ಒಂದು ವಿಚಾರ ತಿಳಿಸಬೇಕಾಗಿದೆ, ಮುಂದಿನ ತಿಂಗಳು ಕೇಂದ್ರಸರ್ಕಾರದವರು ಎಲ್ಲಾ ಅಭಿವೃದ್ಧಿ ಮಂತ್ರಿಗಳು ಒಂದು ಸಮ್ಮೇಳನವನ್ನು ದೆಹಲಿಯಲ್ಲಿ ಕರೆದಿದ್ದಾರೆ, ಯಾವ ರೀತಿಯಿಂದ ಇದನ್ನು ಸ್ಟ್ರೀಮ್‌ಲೈನ್ ಮಾಡಬೇಕು ಎಂಬ ವಿಷಯಗಳೆಲ್ಲಾ ಅಲ್ಲಿ ಪುನರ್ವಿಮರ್ಶೆಯಾಗುತ್ತದೆ. ಇದು ಕೇಂದ್ರಸರ್ಕಾರದ ಆಶೀರ್ವಾದದಿಂದ ಆದಂತಹ ಯೋಜನೆ, ಆದ್ದರಿಂದ ರಾಜ್ಯಸರ್ಕಾರದವರೇ ಏನೇ ಆದರೂ ಮಾಡಲಿಕ್ಕೆ ಬರಲಿಕ್ಕಿಲ್ಲ. ಆದರೆ ತಮ್ಮೆಲ್ಲರ ಅಭಿಪ್ರಾಯವನ್ನು ಮುಖ್ಯ ಮಂತ್ರಿಗಳ ಮತ್ತು ಅಭಿವೃದ್ಧಿ ಮಂತ್ರಿಗಳ ಸಮ್ಮೇಳನದಲ್ಲಿ ನಿಮ್ಮ ಪ್ರತಿನಿಧಿಗಳಾಗಿ ನಿಮ್ಮ ಅಭಿಪ್ರಾಯ ಹೇಗೆ ಇದೆ ಎಂಬುದನ್ನು, ನಿಮ್ಮ ಸಂದೇಶವನ್ನು ಮಾನದಿಂದ, ಗೌರವದಿಂದ ಆ ಸಮ್ಮೇಳನಕ್ಕೆ ತಿಳಿಸುತ್ತೇನೆ ಎಂದು ವಿಶ್ವಾಸಪೂರ್ವಕವಾಗಿ ಹೇಳುತ್ತಾ ಇದ್ದೇನೆ.

ಇನ್ನು ಮಾನ್ಯ ಸದಸ್ಯರು ಹೇಳಿರತಕ್ಕ ಎಲ್ಲ ಅಂಶಗಳಿಗೂ ಕೂಡ ಉತ್ತರ ಕೊಡಲಿಕ್ಕೆ ಆಗುತ್ತದೆ ಅಂತ ಹೇಳಿ ನನಗೆ ಅನಿಸುವುದಿಲ್ಲ. ಆದರೆ ಈ ಒಂದು ಚರ್ಚೆಯಾದ ಮೇಲೆ ಮಾನ್ಯ ಸದಸ್ಯರು ಸಹಕಾರ ಸಂಘಗಳ ಬಗ್ಗೆ ಕೊಟ್ಟಿರತಕ್ಕ ಎಲ್ಲಾ ಸಲಹೆಗಳನ್ನೂ ಕ್ರೋಢೀಕರಿಸಿ ಯಾವ ಯಾವ ರೀತಿಯಿಂದ ಕಾರ್ಯಗತಮಾಡಲಿಕ್ಕೆ ಸಾಧ್ಯವಾಗುತ್ತದೆಯೋ ಅವನ್ನು ಕಾರ್ಯಗತ ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ ಎಂಬ ಮಾತನ್ನು ತಿಳಿಸುತ್ತೇನೆ. ಈ ಒಂದು ಮಾತನ್ನು ಹೇಳಿದರೆ ತಾವು ಒಪ್ಪಿಕೊಳ್ಳುತ್ತೀರಿ ಎಂದು ನನಗೆ ಅನಿಸುತ್ತದೆ. 19 ಸಾವಿರದೊಳಗೆ 100ಕ್ಕೆ 60ರಷ್ಟು ಸಹಕಾರ ಸಂಘಗಳ ಬಗ್ಗೆ ಹೇಳಿದ್ದೇನೆ. ಹೆಚ್ಚಿಗೆ ಹೇಳಲು ಬಹಳ ವೇಳೆ ಆಗುತ್ತದೆ. ಮುಖ್ಯವಾದ 3-4 ಮಾತುಗಳನ್ನು ಹೇಳಿ ಮುಗಿಸುತ್ತೇನೆ. ಮುಖ್ಯವಾಗಿ ರಾಷ್ಟ್ರೀಯ ನೀರಿನ ಪುರವಟೆ ಬಗ್ಗೆ ಮಾನ್ಯ ಸದಸ್ಯರು ತೀಕ್ಷ್ಣವಾದ ಅಭಿಪ್ರಾಯ ಹೇಳಿದ್ದಾರೆ. ಯಾವರೀತಿಯ ಅಭಿಪ್ರಾಯದಿಂದ ಮಾನ್ಯ ಸದಸ್ಯರು ಹೇಳುತ್ತಾರೋ ಅಷ್ಟೇ ತೀಕ್ಷ್ಣವಾದ ಅಭಿಪ್ರಾಯಗಳನ್ನು ಮಂತ್ರಿಗಳು ಇಟ್ಟುಕೊಂಡಿದ್ದಾರೆ ಎಂದು ಹೇಳುತ್ತೇನೆ. ರಾಜ್ಯ ಸರ್ಕಾರದವರು 2 ಕೋಟಿ ರೂಪಾಯಿಗಳ ಯೋಜನೆಯನ್ನು ಕಾರ್ಯಗತ ಮಾಡಲಿಕ್ಕೆ ಬಜೆಟ್ಟಿನಲ್ಲಿ ಇಟ್ಟಿರುವುದು ತಾವೆಲ್ಲಾ ನೋಡಿರಬಹುದು. ಒಬ್ಬರಾದರೂ ರೊಕ್ಕ ಕಡಿಮೆ ಇಟ್ಟಿದ್ದೀರಿ ಹೆಚ್ಚು ಇಡಿರಿ ಎಂದು ಕಳಕಳಿಯಿಂದ ಯಾವ ಒಬ್ಬ ಸದಸ್ಯರೂ ಹೇಳಲಿಲ್ಲ ನನ್ನ ಕ್ಷೇತ್ರ ತೆಗೆದುಕೊಳ್ಳಿ ನನ್ನ ಕ್ಷೇತ್ರ ತೆಗೆದುಕೊಳ್ಳಿ ಎಂದು ಹೇಳಿದರೇ ಹೊರತು ಈ ಒಂದು ಮಾತನ್ನು ಯಾರೂ ಹೇಳಲಿಲ್ಲ.

ಶ್ರೀ ಎಸ್. ಶಿವಪ್ಪ.—ನೀವು ಒಪ್ಪಿದರೆ ನಾವೇ ಒಂದು ರೆಸೆಲ್ಯೂಷನ್ ತರುತ್ತೇವೆ.

ಶ್ರೀ ಪಿ. ಎಂ. ನಾಡಗೌಡ.—ಎಲ್ಲಿ ಸ್ಕೇರ್ಸಿಟಿ ಇರುತ್ತದೆ, ಎಲ್ಲಿ ಡ್ರಾಟ್ ಕಂಡೀಷನ್ ಇರುತ್ತದೆ, ಎಲ್ಲಿ ಗ್ರಾಮದ ಜನರು 4-6 ಮೈಲಗಳಿಂದ ನೀರನ್ನು ತಂದು ಉಪಯೋಗ ಮಾಡುತ್ತಿದ್ದಾರೆ ಅಂಥ

ಗ್ರಾಮಗಳಿಗೆ ಪ್ರಾಶಸ್ತ್ಯ ಕೊಡುವುದಕ್ಕೆ ಸರ್ಕಾರ ತಯಾರು ಇದೆ. ಅಂತಹ ಯೋಜನೆಗಳನ್ನು ಮಂಜೂರು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ ಎಂದು ಹೇಳುತ್ತೇನೆ. 2 ಕೋಟಿ 75 ಲಕ್ಷ ರೂಪಾಯಿಯ ಯೋಜನೆಗಳು ಈಗಾಗಲೇ ತಯಾರು ಆಗಿವೆ. ಕೇಂದ್ರ ಸರ್ಕಾರದ ಆದೇಶ ಪ್ರಕಾರ 20 ಸಾವಿರ ಜನಸಂಖ್ಯೆ ಇರುವ ದೊಡ್ಡ ದೊಡ್ಡ ಪಟ್ಟಣಗಳಿಗೆ ಈ ಯೋಜನೆಯನ್ನು ಅನುಸರಿಸಿದ್ದೇವೆ. ಆ ಯೋಜನಗನುಗುಣವಾಗಿ ಕೇಂದ್ರ ಸರ್ಕಾರದವರು 50, ರಾಜ್ಯ ಸರ್ಕಾರದವರು 40 ಕಾನ್‌ಸ್ಟಿಟ್ಯುಯಂಟ್ ಯೂನಿಟ್ ಪಂಚಾಯತಿಯಾಗಲಿ, ಮುನಿಸಿಪಾಲಿಟಿ ಆಗಲಿ, ಯಾವುದೇ ಟೌನ್ ಆಗಲಿ, 10 ಕೊಡಬೇಕು. ರಾಜ್ಯ ಸರ್ಕಾರದ ರಿಸೋರ್ಸಸ್ ಹೆಚ್ಚಿಗೆ ಇಲ್ಲದೆ ಇರುವುದರಿಂದ ಎಲ್ಲವನ್ನೂ ತಾನೇ ತೆಗೆದುಕೊಳ್ಳುವುದಕ್ಕೆ ಕಷ್ಟ ಎನ್ನುವುದಕ್ಕೆ ಈ ಮಾತನ್ನು ಹೇಳುತ್ತೇನೆ. ಯಾವುದೇ ಭಾಗದಲ್ಲಿ ಅನ್ಯಾಯವಾಗಿದೆ ಎಂದು ನಮ್ಮ ಗಮನಕ್ಕೆ ತಂದರೆ ಸ್ವಲ್ಪ ಅದನ್ನು ಯೋಚನೆ ಮಾಡಿ ತೆಗೆದುಕೊಳ್ಳಬಹುದು. ಎಲ್ಲಿ ಏನು ಡೌಟ್ ಇದೆಯೋ, ಎಲ್ಲಿ ಅವಶ್ಯಕವಾಗಿ ಬೇಕು ಎನ್ನುವುದನ್ನು ನೋಡಿ ಸರ್ಕಾರ ಮಂಜೂರು ಮಾಡಲಿಕ್ಕೆ ಪ್ರಯತ್ನ ಮಾಡುತ್ತಾರೆ.

ಎರಡನೆಯ ವಿಚಾರ. ನಮ್ಮ ರಾಜ್ಯದಲ್ಲಿ ಪ್ರಾಮುಖ್ಯವಾಗಿ ಎಲ್ಲಾ ಗ್ರಾಮಗಳಿಗೂ ಒಂದು ಕುಡಿಯುವ ನೀರಿನ ಬಾವಿ ಕೊಡಬೇಕು ಎನ್ನುವ ತತ್ವ ಸರ್ಕಾರ ಒಪ್ಪಿಕೊಂಡಿದೆ. ಅದಕ್ಕನುಗುಣವಾಗಿ ಹೋದ ವರ್ಷ 67 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿದೆ. 66 ಲಕ್ಷ ರೂಪಾಯಿ ಖರ್ಚು ಮಾಡಿವೆ. ಅದರೊಳಗೆ ಒಂದು ನ್ಯೂನತೆ ಕಂಡು ಬರುತ್ತದೆ. ಸರ್ಕಾರ ಡಿವಿಷನಲ್ ಕಮೀಷನರಿಗೆ ರೊಕ್ಕ ಹಂಚಿಕೊಡುತ್ತಾರೆ. ಡಿವಿಷನಲ್ ಕಮಿಷನರ ಡೆಪ್ಯೂಟಿ ಕಮೀಷನರಿಗೆ ಕೊಡುವುದಕ್ಕೆ ಮೂರು ತಿಂಗಳು ಮಾಡುತ್ತಾರೆ. ಹಾಗೆ ಏನೋ ಅಡಚಣೆ ಬಂದಿದೆ. ಎಲ್ಲಿ ಕುಡಿಯುವ ನೀರಿನ ಬಾವಿ ಇಲ್ಲ ಅಲ್ಲಿ ಶೀಘ್ರವಾಗಿ ಕ್ರಮ ತೆಗೆಗೆದುಕೊಳ್ಳಬೇಕು ಎಂದು ಸರ್ಕಾರ ಆದೇಶ ಕೊಟ್ಟಿದೆ. ಅದಕ್ಕನುಗುಣವಾಗಿ ಹೋದ ವರ್ಷ 66 ಲಕ್ಷ ರೂಪಾಯಿ ಖರ್ಚು ಮಾಡಿದ್ದಾರೆ. ಇನ್ನೂ ಕೊಡಲಿಕ್ಕೆ ಸರ್ಕಾರದವರು ತಯಾರು ಇದ್ದಾರೆ. ಈ ನ್ಯೂತೆಯನ್ನು ತೆಗೆದುಹಾಕಿ ಮಾನ್ಯ ಸದಸ್ಯರುಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ನೇರವಾಗಿ ಡೆಪ್ಯೂಟಿ ಕಮೀಷನರಿಗೆ ಕೊಡಬೇಕೋ ಅವರ ಕೆಳಗೆ ಇರುವ ತಾಲ್ಲೂಕು ಅಧಿಕಾರಿಗಳಿಗೆ ಕೊಡಬೊಕೋ ಎನ್ನುವ ವಿಚಾರ ಮಾಡಿ ಇದರೊಳಗೆ ಇರುವ ಬಾಟಲ್‌ನೆಕ್‌ನ್ನು ದೂರ ಮಾಡುತ್ತೇವೆ ಎಂದು ಆಶ್ವಾಸನೆ ಕೊಡುತ್ತೇನೆ. ಈ ಕೆಲಸ ಆಗಲೇ ಬೇಕು. 2 ಸಾವಿರ ಗ್ರಾಮಗಳಿಗೆ ನೀರಿನ ಬಾವಿಗಳನ್ನು ಮಂಜೂರು ಮಾಡಿದ್ದೇವೆ. ಅಸಲ ಗ್ರಾಮದ ಹ್ಯಾಮ್ಲೆಟ್‌ಗಳು ಏನು ಇವೆ, ಅಲ್ಲಿ ಸರ್ಕಾರ ಕೊಡಬೇಕು ಎಂದು ಒಪ್ಪಿಕೊಂಡಿದೆ. ಮಲೆನಾಡಿನೊಳಗೆ ಹ್ಯಾಮಲೆಟ್ಸ್ ಇದ್ದರೆ ಅಲ್ಲಿ ಕೊಡಬೇಕು ಎಂದು ಸರ್ಕಾರ ಒಪ್ಪಿಕೊಂಡ ಮೇಲೆ ಹಿಂದುಮುಂದು ನೋಡುವುದಿಲ್ಲ. ಈ ಅಭಿವೃದ್ಧಿ ಖಾತೆ ಬಹಳ ಮಹತ್ವವಾದ ಪಾತ್ರ ಮೈಸೂರು ರಾಜ್ಯದೊಳಗೆ ವಹಿಸಿದೆ ಎಂದು ಹೇಳುತ್ತೇನೆ.

ಇನ್ನು ಕಮ್ಯುನಿಟಿ ಡೆವಲಪ್ ಮತ್ತು ಎನ್. ಇ. ಎಸ್. ಕೆಲಸಕಾರ್ಯಗಳ ವಿಚಾರವಾಗಿ ಹೇಳುವುದಾದರೆ ಎಲ್ಲಾ ಕೇಂದ್ರದಿಂದಲೇ ರೊಕ್ಕ ಬರುತ್ತದೆ, ಅಧಿಕಾರಿಗಳಿಗೆ ಹೋಗುತ್ತದೆ ಎನ್ನುವ ವಿಚಾರ ಇದೆ. ಅಷ್ಟು ಬರಬಾರಿ ಆಗಲಿಕ್ಕಿಲ್ಲ. ಒಂದೊಂದು ತಾಲ್ಲೂಕಿಗೆ ಒಂದು ಲಕ್ಷ 33 ಸಾವಿರ ರೂಪಾಯಿಗಳನ್ನು ಖರ್ಚುಮಾಡುತ್ತಾರೆ. ಐದು ವರ್ಷದ ಯೋಜನೆಯಲ್ಲಿ ಕೇಂದ್ರ ಸರ್ಕಾರದವರು ಮೈಸೂರು ರಾಜ್ಯಕ್ಕೆ ಬಹಳಷ್ಟು ಗಮನಕೊಟ್ಟು ಪ್ರಾಶಸ್ತ್ಯ ಕೊಟ್ಟು 45 ಎ.ಎನ್.ಪಿ. ಬ್ಲಾಕುಗಳು ಈ ವರ್ಷ ಕೊಟ್ಟರೆ ಎಲ್ಲಾ ಗ್ರಾಮಗಳಿಗೂ ಎಲ್ಲಾ ತಾಲ್ಲೂಕುಗಳಿಗೂ ಈ ಯೋಜನ ಬರುತ್ತದೆ. ಬಂದ ಮೇಲೆ ಸ್ಟಾಫ್ ಅವಶ್ಯ ಎನ್ನುವ ಮಾತನ್ನು ಹೇಳುತ್ತೇನೆ. ಗ್ರಾಮಾಂತರ ಅಭಿವೃದ್ಧಿ ಸಲುವಾಗಿ ಇವೊತ್ತು ನಾವೆಲ್ಲರೂ ಪ್ರಾಶಸ್ತ್ಯ ಕೊಡಬೇಕು. ಗ್ರಾಮಾಂತರದ ಅಭಿವೃದ್ಧಿ ಸಲುವಾಗಿ ಏನೇ ಬರಲಿ ಗ್ರಾಮಗಳಿಗೆ ಈವೊತ್ತಿನ ದಿವಸ ಬೇಕಾಗಿರುವ ಮಾಡ್ರನ್ ಎಮಿನಿಟೀಸ್ ಕೊಡಬೇಕು. ಇದನ್ನು ಶೀಘ್ರವಾಗಿ ಎಲ್ಲರೂ ವಿಚಾರ ಮಾಡಬೇಕಾಗಿದೆ. ಮಾನ್ಯ ಶಿವಪ್ಪನವರು ಮಾನ್ಯ ಹಿರಿಯ ಸಿದ್ಧವೀರಪ್ಪನವರು ರಾಜಕೀಯದಲ್ಲಿ ಇದ್ದವರು ಡೈನಾಮಿಕ್ ಪಾಲಿಸಿ ಸರ್ಕಾರದ ಮುಂದೆ ಇಡುತ್ತಾರೆ ಎಂದು ತಿಳಿದುಕೊಂಡಿದ್ದೆ. ಸರ್ಕಾರದವರು ಈ ಬಡ್ಜೆಟಿನಲ್ಲಿ ದೊಡ್ಡ ಪಟ್ಟಣಗಳಿಗೆ ಏನು ಖರ್ಚು ಮಾಡುತ್ತಿದ್ದಾರೋ ಗ್ರಾಮಾಂತರ ಅಭಿವೃದ್ಧಿಗೂ ಖರ್ಚುಮಾಡಬೇಕು. ಅವರಿಗೆ ಮಾಡ್ರನ್ ಎಮಿನಿಟೀಸ್ ಕೊಡಬೇಕು ಎಂದರೆ ಒಪ್ಪಿಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ರೂರಲ್ ಕಮ್ಯೂನಿಕೇಷನ್ಸ್, ವಿಲೇಜ್ ರೋಡ್ಸ್, ತಾಲ್ಲೂಕ್ ರೋಡ್ಸ್ ಬಗ್ಗೆ ಹೇಳಿದರು ನನಗೆ ಅನಿಸುತ್ತದೆ, ಈ ಪ್ರಶ್ನೆ ಯಾವ ಸರ್ಕಾರ ಬಂದರೂ ಬಿಡಿಸಲಿಕ್ಕೆ ಆಗುವುದಿಲ್ಲ. ಈ ಮೂಲಭೂತವಾದ ಪ್ರಶ್ನೆಯನ್ನು ಬಿಡಿಸಬೇಕು. ಆ ಗ್ರಾಮಾಂತರ ಅಭಿವೃದ್ಧಿ ಆಗಬೇಕು ಎನ್ನುವ ದೃಷ್ಟಿಯಿಂದ ಸರ್ಕಾರದವರು ವಿಶಿಷ್ಟವಾಗಿ ಖರ್ಚುಮಾಡಬೇಕು.

(ಶ್ರೀ ಪಿ. ಎಂ. ನಾಡಗೌಡ)

ಇಲ್ಲದಿದ್ದರೆ ಗ್ರಾಮ ಸಂಸ್ಕೃತಿ ಮತ್ತು ಗ್ರಾಮ ಜೀವನ ಬೆಳೆಯುವುದಿಲ್ಲ. ಜನರಿಗೆ ತಿನ್ನಲಿಕ್ಕೆ ಬೇಕಾದ ಆಹಾರ ಸಿಗುವುದಿಲ್ಲ. ಆ ರೀತಿ ಗ್ರಾಮದ ಜನತೆ ಏನು ಇದ್ದಾರೆ ಅವರನ್ನು ಇವೊತ್ತು ನಿರಾಶೆ ಪಡದಂತೆ ನೋಡಬೇಕು, ಎಂದು ಹೇಳುತ್ತೇನೆ. ಮಾನ್ಯ ಸದಸ್ಯರು ಗೌರವವಾದ ಸೂಚನೆಗಳನ್ನು ಗ್ರಾಮಾಂತರದ ಅಭಿವೃದ್ಧಿಗೆ ಹೇಳಿದ್ದಾರೆ. ವ್ಯವಹಾರಿಕ ದೃಷ್ಟಿಯಿಂದ ಸರ್ಕಾರದ ನೀತಿಯಲ್ಲಿ ಬದಲಾವಣೆ ಮಾಡಿ ಕೊಳ್ಳಬೇಕಾದರೆ ಅದನ್ನು ಒಪ್ಪಿಕೊಳ್ಳುತ್ತೇವೆ ಎನ್ನುವ ಮಾತನ್ನು ಹೇಳಿ ಈ ಒಂದು ಮಾತನ್ನು ಮುಗಿಸುತ್ತೇನೆ.

ಇನ್ನು ಶ್ರೀಮಾನ್ ಶಿವಪ್ಪನವರು ಚನ್ನರಾಯಪಟ್ಟಣದ ಸೊಸೈಟಿ ಬಗ್ಗೆ ಹೇಳಿದರು. ದಾಂಡೇಕೆರೆ ಇರಲಿ ಗ್ರಾಂಟ್‌ಗೆ ಇರಲಿ ಯಾವುದೇ ಇರಲಿ, ಯಾವ ಯೋಜನೆ ಇದೆಯೋ ಅಷ್ಟು ರೊಕ್ಕ ಕೊಡಬೇಕು. ಒಂದು ಲಕ್ಷದಷ್ಟು ಮೆಷಿನರಿಗೆ ಕೊಡಬೇಕು, ಅಷ್ಟು ಕೊಟ್ಟಿದ್ದಾರೆ, ಉಳಿದ ರೊಕ್ಕ ಕೇಳಿದರು, ಕೊಡಲಿಲ್ಲ. ರಿಜಿಸ್ಟ್ರಾರ್ ವಿಚಾರಮಾಡಿ ಯೋಗ್ಯ ಇದ್ದರೆ ಕೊಡಬಹುದು. ಈ ಮಾತು ಸರ್ಕಾರದ ಮುಂದೆ ಎಂದೂ ಬರಲಿಲ್ಲ. ಒಮ್ಮೆ ಯಾವುದೇ ನನ್ನ ಎದುರಿಗೆ ಬಂದರೆ ಅದನ್ನು ಕೂಡಲೇ ವಿಚಾರಮಾಡುತ್ತೇನೆ. ಅದರಲ್ಲಿ ನಾವು ಕೈಹಾಕಿ ತಡಮಾಡುತ್ತೇವೆಂದು ಕೆಲವರು ಅಪಾದನೆ ಮಾಡಿದರು. ಆ ರೀತಿ ಮಾನ್ಯ ಸದಸ್ಯರು ಹೇಳುವುದು ತಪ್ಪಾಗುತ್ತದೆ. ಮಾನ್ಯ ಸದಸ್ಯರು ಇಷ್ಟು ಅನ್‌ಚಾರಿಟಬಲ್ ರೀತಿ ಮಾತನಾಡುತ್ತಾರೆಂದು ನಾನು ತಿಳಿದಿರಲಿಲ್ಲ. ಅದೇನೇ ಇರಲಿ, ಅದು ಯಾವುದೇ ಸಂಸ್ಥೆ ಆಗಿರಲಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ. ಮುಖ್ಯವಾಗಿ ಸಾರ್ವಜನಿಕ ಹಣ ದುರುಪಯೋಗವಾಗಬಾರದು. ಅದಕ್ಕೆ ಸಂಬಂಧಪಟ್ಟವರು ಯಾರೇ ಆಗಿರಲಿ, ಅವರು ಯಾವ ಕ್ಷೇತ್ರದಲ್ಲಿಯೇ ಇರಲಿ, ಅವರು ತಪ್ಪಿತಸ್ಥರು ಎಂದು ತಿಳಿದರೆ ಅವರ ಮೇಲೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೇವೆ. ಇಂತಹ ದೊಡ್ಡ ದೊಡ್ಡ ಘಟನೆಗಳು ಅನೇಕ ಇವೆ. ಅವನ್ನು ಇಲ್ಲಿ ಹೇಳಬೇಕಾದರೆ, ಬೇಕಾದಷ್ಟು ಇವೆ. ನಾನು ಯಾವುದನ್ನೂ ವ್ಯತ್ಯಾಸಮಾಡಿ ಹೇಳುವುದಿಲ್ಲ. ಯಾವ್ಯಾವ ಸಂಸ್ಥೆಗಳಿಂದ ಸಾರ್ವಜನಿಕ ಹಿತದೃಷ್ಟಿಯಿಂದ ಜನಗಳಿಗೆ ಉಪಯೋಗವಿದೆಯೋ ಅಂತಹ ಸಂಸ್ಥೆಗಳಿಗೆ ಹೆಚ್ಚು ಸಹಾಯ ಮಾಡಿ ಜನತೆಯ ಸಲುವಾಗಿ ತಕ್ಕ ಕ್ರಮ ತೆಗೆದ ಕೊಳ್ಳುತ್ತೇವೆ. ಆದರೆ ಯಾವ್ಯಾವ ಸಂಸ್ಥೆಗಳಿಂದ ಜನರಿಗೆ ಅನಾನುಕೂಲವುಂಟಾಗಿದೆಯೋ ಅಂತಹ ಸಂಸ್ಥೆಗಳ ಬಗ್ಗೆ ಉಗ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ. ತಾಲ್ಲೂಕು ಮಾರ್ಕೆಟಿಂಗ್ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಈಗ ಆಡಿಟ್ ಸೆಲ್‌ಗಳನ್ನು ಹೆಚ್ಚು ಮಾಡುತ್ತಿದ್ದೇವೆ. ಒಟ್ಟಿನಲ್ಲಿ ಸಹಕಾರ ಸಂಘಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿರತಕ್ಕ ಸಲಹೆಗಳನ್ನೂ ಮತ್ತು ಸೂಚನೆಗಳನ್ನು ಸರ್ಕಾರ ಗಮನಿಸಿ ಅವುಗಳ ಬಗ್ಗೆ ಮುಂದಿನವರ್ಷ ಉಗ್ರವಾದ ಕ್ರಮಗಳನ್ನು ಸರ್ಕಾರದವರು ತೆಗೆದುಕೊಳ್ಳುತ್ತಾರೆಂಬುದಾಗಿ ಆಶಾಪೂರ್ವಕವಾಗಿ ಹೇಳಿ ಈ ಬೇಡಿಕೆಗೆ ತಮ್ಮೆಲ್ಲರ ಒಪ್ಪಿಗೆ ಕೊಡಲು ತಮ್ಮ ಅಪ್ಪಣೆಯನ್ನು ಪಡೆಯುತ್ತಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳ ವಿಷಯ. ಅವುಗಳಲ್ಲಿ ಒಂದೂ ಉಪಯೋಗವಾಗಿಲ್ಲ. ಏನೊಂದು ಉದ್ದೇಶ ಇಟ್ಟುಕೊಂಡು ಅವನ್ನು ಮಾಡಿದರೋ, ಅದಕ್ಕಾಗಿ ಖರ್ಚುಮಾಡುವ ಹಣವೆಲ್ಲಾ ವ್ಯರ್ಥವಾಗಿದೆ.

ಶ್ರೀ ಪಿ. ಎಂ. ನಾಡಗೌಡ.—ಏನು ಅಂತಹ ಸೊಸೈಟಿಗಳು ಇವೆಯೋ ಅವುಗಳಿಂದ ಏನೂ ಉಪಯೋಗವಾಗಲಿಲ್ಲವೆಂಬುದಾಗಿ ಮಾನ್ಯ ಸದಸ್ಯರು ಹೇಳಿದರು. ಈ ವಿಚಾರವಾಗಿ ಕೇಂದ್ರ ಸರ್ಕಾರದ ವರದಿಯನ್ನು ನೋಡಿದಮೇಲೆ ಮೈಸೂರಿನ ಜನತೆ ಅಭಿಮಾನ ಪಡಬೇಕು. ಇಡೀ ಹಿಂದೂಸ್ಥಾನದಲ್ಲಿ ಮೈಸೂರಿನ ಜಾಯಿಂಟ್ ಫಾರ್ಮಿಂಗ್ ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ ಎಂಬುದಾಗಿ ಶಿಫಾರಸು ಕೊಟ್ಟಿದ್ದಾರೆ. ಮಾನ್ಯ ಸದಸ್ಯರಿಗೆ ಒದಗಿಸಿರತಕ್ಕಂಥ ಮಾಹಿತಿಯನ್ನು ಓದಿದರೆ ಎಲ್ಲವೂ ಅರ್ಥವಾಗುತ್ತದೆ. ನಮ್ಮ ರಾಜ್ಯದೊಳಗೆ ಹೋದ ವರ್ಷ 36 ಸೊಸೈಟಿಗಳನ್ನು ಮಾಡಿದ್ದೇವೆ. ಇನ್ನೂ 524 ಸೊಸೈಟಿಗಳು ಫಾರಂ ಆಗುತ್ತಾ ಇವೆ. 56,237 ಎಕರೆಗಳಲ್ಲಿ ಸೊಸೈಟಿಯವರು ವ್ಯವಸಾಯ ಮಾಡುತ್ತಿದ್ದಾರೆ. ಅದರೊಳಗೆ 38,499 ಎಕರೆಗಳಷ್ಟು ಕಲ್ಟಿವೇಷನ್ ಒಳಗೆ ಬಂದಿರತಕ್ಕದ್ದು. ಇದರೊಳಗೆ ಪ್ರಾಮುಖ್ಯವಾದಂಥಾದ್ದು ಒಂದು ವಿಷಯ ಅಂದರೆ, ಈ ವರ್ಷದಲ್ಲಿ ಕೋ-ಆಪರೇಟಿವ್ ಫಾರಂಗಳಲ್ಲಿ ಒಂದು ಲಕ್ಷ 15 ಸಾವಿರದ 500 ಕ್ವಿಂಟಾಲುಗಳಷ್ಟು ಬೆಳೆಯಾಗಿದೆ. ಅದರ ಅಂದಾಜು ಉತ್ಪನ್ನ 60·39 ಲಕ್ಷ ರೂಪಾಯಿಗಳು.

ಶ್ರೀ ಎಸ್. ಸಿದ್ಧವೀರಪ್ಪ.—ಯಾರು ಇದನ್ನು ಎಪ್ರಿಷೇಟ್ ಮಾಡಿದ್ದು ?

ಶ್ರೀ ಪಿ. ಎಂ. ನಾಡಗೌಡ.—ಸರ್ಕಾರದವರು ಮಾಡಿದ್ದು ಅದಕ್ಕಾಗಿ ಕೇಂದ್ರ ಸರ್ಕಾರದ ವರು ಶಾಬಾಸ್ ಎಂಬುದಾಗಿ ಹೇಳಿದ್ದಾರೆಂಬ ಮಾತನ್ನು ಇಲ್ಲ ಹೇಳುತ್ತೇನೆ.

ಶ್ರೀ ಎಚ್. ಸಿದ್ಧವೀರಪ್ಪ.—ಈಗ ಒಂದು ಟೆಲಿಗ್ರಾಂ ಬಂದಿದೆ. ನಾಲ್ಕುವರೆ ಗಂಟೆಯಲ್ಲಿ. ಅದನ್ನು ಓದುತ್ತೇನೆ. ನಿಮ್ಮ ಸರ್ಕಾರದ ಹಸ್ತಕ್ಷೇಪ ಗೊತ್ತಾಗುತ್ತದೆ. ನೀವು ಹೇಳುವುದು ಒಂದು, ಮಾಡುವುದು ಒಂದು, ನಡೆಯುವುದು ಒಂದು, ನುಡಿಯುವುದು ಒಂದು ಆ ಟೆಲಿಗ್ರಾಂನ್ನು ರಾಣೆಬೆನ್ನೂರ್‌ನಿಂದ ಕೊಟ್ಟಿದ್ದಾರೆ. *Telegram from Ranebennur* : "Revenue Deputy Minister Shankar Rao–Haveri Assistant Commissioner, Hirekerur, have instigated the Muslims to form their own Party. Try to hold an Enquiry against these persons "BASAVALINGAPPA". ತಮ್ಮ ಕಡೆ ಇದನ್ನು ಮುಡುಪಾಗಿ ಕೊಡುತ್ತೇನೆ. ಇಂಥಾದ್ದು ಸಾವಿರಾರು ಕೊಡಬಲ್ಲೆ. ನಾನೇನು ಅವರಿಗೆ ಹೇಳಿ ಟೆಲಿಗ್ರಾಂ ತರಿಸಿಕೊಂಡಿಲ್ಲ. ನಿಮ್ಮ ಪಾರ್ಟಿಯವರು ಯಾವ ರೀತಿ ಹಸ್ತಕ್ಷೇಪ ಮಾಡುತ್ತಾರೆ, ಗ್ರಾಮಗಳಲ್ಲಿ ಎಷ್ಟು ಅನ್ಯಾಯಮಾಡುತ್ತಾರೆಂಬುದನ್ನು ನೋಡಿ. ನಿಮಗೆ ಏನು ಮಾಡಿದರೂ ತೀರದು. ಗ್ರಾಮಾಂತರ ಪ್ರದೇಶಗಳಲ್ಲಿ ನಿಮಗೆ ಅಭಿಮಾನವಿದೆ ಎಂದು ಅನೇಕರು ಬಹಳ ಕಳಕಳಿಯಿಂದ ಹೇಳಿದ್ದಾರೆ. ಆದರೂ ನೀವು ಏನು ಕೆಲಸ ಮಾಡುತ್ತಿದ್ದೀರಿ ಎಂದು ನಾನು ಪ್ರಶ್ನೆಮಾಡುತ್ತೇನೆ.

ಶ್ರೀ ಜಿ. ಬಿ. ಶಂಕರರಾವ್.—ಮಾನ್ಯ ಶ್ರೀ ಸಿದ್ಧವೀರಪ್ಪನವರು ಒಂದು ಮಾತನ್ನು ಹೇಳ ಬೇಕು. ಸ್ವತಃ ಅವರು ಟೆಲಿಗ್ರಾಂ ತರಿಸಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಆ ಟೆಲಿಗ್ರಾಂನ್ನು ಇಲ್ಲಿ ಓದುತ್ತಿದ್ದಾರೆ. ಅವರ ಪಕ್ಷದ ಮನುಷ್ಯ ವಿರೋಧವಾಗಿ ಓಟುಮಾಡಿದ್ದಾನೆ. ನನಗೆ ಈ ಮನುಷ್ಯ ಯಾರೆಂಬುದು ಗೊತ್ತಿಲ್ಲ. ಆ ಮನುಷ್ಯನನ್ನು ನೋಡಲಿಲ್ಲ ಅವನ ಊರು ನೋಡಲಿಲ್ಲ. ಟೆಲಿಗ್ರಾಂ ಬಂದುದನ್ನು ನಮ್ಮ ಮುಂದೆ ಇಡಿ. ನೀವು ಕೆಲವು ಮಂತ್ರಿಗಳು ತಪ್ಪುಮಾಡಿದ್ದಾರೆ ಎಂಬುದಾಗಿ ಹೇಳಬಹುದು ನೀವು ಹಸ್ತಕ್ಷೇಪ ಎಷ್ಟೆಷ್ಟು ಮಾಡಲಿಲ್ಲ? ಒಂದೊಂದು ಕ್ಷೇತ್ರದಲ್ಲಿ ಏನೇನು ಮಾಡುತ್ತಿದ್ದೀರಿ ಎಂಬುದು ಗೊತ್ತು. ಅಷ್ಟೇ ಅಲ್ಲ, ಪಂಚಾಯಿತಿ ನಾಮಿನೇಷನ್ ಮಾಡಿಸುತ್ತಿದ್ದೀರಿ. ಲೋಕಲ್ ಬಾಡಿ ಎಲೆಕ್ಷನ್ನಿಗೋಸ್ಕರ ಓಡಾಡುತ್ತಿದ್ದೀರಿ. ಓಟು ಕೊಡಿಸುತ್ತೀರಿ. ಅಲ್ಲಿ ಒಬ್ಬ ಜೀ, ಹುಕುಂ ಎಂದು ಹೇಳುವ ಡೆಪ್ಯುಟಿ ಕಮಿಷನರನ್ನು ಇಡಿಸುತ್ತೀರಿ. ಮಾನ್ಯ ಶ್ರೀ ನಾಡಗೌಡರು ಇನ್ನೂ ಹಲವಾರು ವಿಷಯಗಳನ್ನು ಹೇಳಿದರು. ಅವನ್ನು ಮಾನ್ಯ ಸದಸ್ಯರು ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿಯುತ್ತೇನೆ.

Sri G. CHANDRAKANTH.—Is there any proposal before the Government to introduce the Zilla Parished, at what stage it is, and if so, when and where? That is No. 1.

Secondly, Sri V. N. Patil has said that 850 bags of wheat has been spoilt in the Bidar Consumer Society, Bidar. May I know whome the Government has held resposible—whether it is the President or Secretary or anybody? If so, what action Government has taken?

Sri P. M. NADGOUDA.—I have to make enquiries about the stock. About Zilla Parishad, it is engaging the attention of the Government.

ಶ್ರೀ ಎಚ್. ಎನ್. ನಂಜೇಗೌಡ.—ಈಗ ತಾಲ್ಲೂಕು ಸೊಸೈಟಿಗೆ ಒಂದು ವರ್ಷದಿಂದಲೂ ಸೆಕ್ರೆಟರಿ ಇಲ್ಲ. ಆಗಬಾರದ ಅನ್ಯಾಯವಾಗಿದೆ. ಪ್ರಿಲಿಮಿನರಿ ಇನ್‌ಸ್ಟ್ರಕ್‌ಷನ್ಸ್ ಕೊಡುತ್ತೀರಾ?

ಶ್ರೀ ಪಿ. ಎಂ. ನಾಡಗೌಡ.—ಆಗಲೇ ಅದಕ್ಕೆ ಉತ್ತರ ಹೇಳಿದ್ದು ಆಗಿದೆ.

ಶ್ರೀ ಎಂ. ನಾಗಪ್ಪ.—ಗ್ರಾಮಾಂತರ ಪ್ರದೇಶಗಳಲ್ಲಿ ಅನೇಕ ಯೋಜನೆಗಳನ್ನು ಕೈಗೊಂಡಿದ್ದೀರಿ. ಆದರೂ ಗ್ರಾಮಾಂತರ ಜನಗಳಿಗೆ ವಾಹನ ಸೌಕರ್ಯಗಳು ಇಲ್ಲದೆ ನೀವು ಕೊಟ್ಟ ಹಣ ಲ್ಯಾಪ್ಸ್ ಆಗುತ್ತಿದೆ. ನೀವು ಕೊಟ್ಟಿರುವ ಜೀಪ್ಸ್ ಹೇಗಿವೆಯೆಂದರೆ, ಹಗ್ಗ ಹಾಕಿ ಎಳೆದುಕೊಂಡು ಹೋಗುವ ಹಾಗೆ ಇವೆ. ತಾಲ್ಲೂಕುಬೋರ್ಡ್‌ಗಳಿಗೆ ಅಧಿಕಾರ ಕೊಟ್ಟರೆ, ನಿಮ್ಮ ಜೀಪುಗಳನ್ನು ಅವರೇ ಕೊಂಡುಕೊಳ್ಳುತ್ತಾರೆ. ನೀವು ಕೊಟ್ಟಿರುವ ಜೀಪ್‌ಗಳನ್ನು ಬೇಕಾದರೆ ವಾಪಸ್ಸು ತೆಗೆದುಕೊಳ್ಳಿ.

(ಉತ್ತರವಿಲ್ಲ)

Sri DIGAMBAR RAO B. KALMANKAR.—May I know whether the Government will take action regarding the report submitted by the Executive Engineer, Rural Housing Scheme, Gulbarga?

Sri P. M. NADGOUDA.—I do not know what that report is.

ಶ್ರೀ ಬಿ. ದೊಡ್ಡಬೋರೇಗೌಡ.—ಪಾಂಡವಪುರ ಸಕ್ಕರೆ ಕಾರ್ಖಾನೆಯಲ್ಲಿ ಎನ್. ಆರ್. ಡಿ. ಫಂಡಿನಲ್ಲೂ ಬಡ್ಡಿ ಇಲ್ಲದೆ 10 ಲಕ್ಷ ರೂಪಾಯಿಗಳನ್ನು 9 ವರ್ಷಗಳಿಂದಲೂ ಇಟ್ಟುಕೊಂಡಿದ್ದಾರೆ. ರೈತರಿಗೆ ಬಾಂಡ್ ಸಹ ಕೊಟ್ಟಿಲ್ಲ. ಅದನ್ನು ಷೇರಾಗಿಯೂ ಪರಿವರ್ತನೆ ಮಾಡಲಿಲ್ಲ. ನಿಮ್ಮ ಸಹಕಾರ ಸಂಘದಲ್ಲಿ ಕೊಂಡುಕೊಳ್ಳತಕ್ಕ ಆಹಾರ ಪದಾರ್ಥಗಳಲ್ಲಿ 5-6 ಕೆ. ಜಿ. ಜಾಸ್ತಿಯಾಗಿ ತೆಗೆದುಕೊಳ್ಳುತ್ತಾರೆ. ಇದರ ಅಭಿಪ್ರಾಯವೇನು ?

8-30 P.M.

ಶ್ರೀ ಜಿ. ದುಗ್ಗಪ್ಪ (ಧರ್ಮಸಾಗರ).—ಇದೇ ಮಾನ್ಯ ಸಭೆಯಲ್ಲಿ ಸಮಾಜ ಇಲಾಖೆಯ ಬೇಡಿಕೆಗಳನ್ನು ಚರ್ಚೆಮಾಡುವ ಕಾಲದಲ್ಲಿ ಅನೇಕ ಮಾನ್ಯ ಸದಸ್ಯರು ಸಹಕಾರ ಸಂಘಗಳಲ್ಲಿ ಹರಿಜನರಿಗೆ ಚುನಾವಣೆಯಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಅದು ತಮಗೂ ಗೊತ್ತಿದೆ. ಪಕ್ಷ ಪ್ರತಿಪಕ್ಷಗಳು ಬಿಟ್ಟರೆ ಬೇರೆ ಯಾವೂ ಹಳ್ಳಿಗಳಲ್ಲಿ ಆಗಲಿ ಅಥವಾ ಜಿಲ್ಲೆಗಳಲ್ಲಿಯಾಗಲೀ ಬರುವುದಿಲ್ಲ. ಈ ದೃಷ್ಟಿಯಿಂದ ಅವರಿಗೆ ಬಹಳ ಅನ್ಯಾಯವಾಗಿದೆ. ಈ ಇಲಾಖೆಯಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಅವರಿಗೆ ಇದರ ಸಹಾಯ ಸೌಲಭ್ಯ ದೊರೆಯಬೇಕಾದರೆ ಅವರ ಪ್ರತಿನಿಧಿಗಳು ಈ ಸಂಸ್ಥೆಗಳಲ್ಲಿರಬೇಕು. ಅದರ ಬಗ್ಗೆ ಪರ್ಯಾಲೋಚಿಸಬೇಕೆಂದು ಅವರಿಗೆ ಅನುಕೂಲವಾಗಬೇಕೆಂಬ ದೃಷ್ಟಿಯಿಂದ ನೋಡಬೇಕೆಂದು ಅನೇಕ ಮಾನ್ಯ ಸದಸ್ಯರು ಇಲ್ಲಿ ಹೇಳಿದ್ದಾರೆ. ಅವರ ಬಗ್ಗೆ ಸರ್ಕಾರದವರು ಏನಾದರೂ ಕನ್‌ಸಿಡರ್ ಮಾಡಿದ್ದಾರೆಯೇ ? ಅದರ ಬಗ್ಗೆ ಮಾನ್ಯ ಮಂತ್ರಿಗಳ ಅಭಿಪ್ರಾಯವೇನು ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆಯನ್ನು ಇನ್ನೂ ವಿಚಾರ ಮಾಡಲಿಲ್ಲ. ಮಾನ್ಯ ಸದಸ್ಯರು ಅವರ ಬಗ್ಗೆ ಸೂಚನೆಗಳನ್ನು ಕೊಟ್ಟರೆ ವಿಚಾರ ಮಾಡುತ್ತೇನೆ. ಕೆಲವು ವಿಚಾರಗಳು ಈಗಾಗಲೇ ಸರ್ಕಾರದ ಪರಿಶೀಲನೆಯಲ್ಲಿದೆ. ಅವನ್ನು ಸಹಾನುಭೂತಿಯಿಂದ ವಿಚಾರಮಾಡುತ್ತೇನೆ.

ಶ್ರೀ ಎಂ. ನಾಗಪ್ಪ.—ಮಾನ್ಯ ಸಚಿವರು ಗ್ರಾಮಾಭಿವೃದ್ಧಿಯ ಬಗ್ಗೆ ಬಹಳ ಕಳಕಳಿಯಿಂದ ಮಾತನಾಡಿದ್ದಾರೆ. ಹಳ್ಳಿಯವರಿಗೆ ಅವರ ಪರ್‌ಕ್ಯಾಪಿಟ ಇನ್‌ಕಂ ನೋಡಿ ಹಣವನ್ನು ಡಿಸ್ಟ್ರಿಬ್ಯೂಟ್ ಮಾಡುತ್ತೇವೆಂದು ಹೇಳಿದರು. ಅದೇನೋ ಬಹಳ ಒಳ್ಳೆಯದೇ. ಆದರೆ ಇದು ಕೇವಲ ಮಾತಿನಲ್ಲೇ ಪರ್ಯವಸಾನವಾಗುವುದೋ ಅಥವಾ ಕಾರ್ಯದಲ್ಲಿ ಇದನ್ನು ಜಾರಿಗೆ ತರಲಾಗುತ್ತದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಈ ವಿಚಾರದಲ್ಲಿ ಈ ಮಾನ್ಯ ಸಭೆಯಲ್ಲಿ ಯಾರೊಬ್ಬರೂ ಮಾತನಾಡಲಿಲ್ಲ. ಹಾಗಿದ್ದರೂ ನಾನೇ ಆ ವಿಚಾರವನ್ನು ಸಭೆಗೆ ತಿಳಿಸಿದೆ. ಆಗಲೇ ನಾನು ಮಾತನಾಡಿದ್ದನ್ನು ಈಗಲೇ ನನ್ನ ಕೊರಳಿಗೆ ಹಾಕಿ ಗಂಟುಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಇದಕ್ಕೆ ನಾನೇನು ಹೇಳಲಿ ?

Mr. DEPUTY SPEAKER.—The question is :

"That the respective sums not exceeding the amounts mentioned including the sums already voted on account be granted to the Government to defray the charges which will come in course of payment during the financial year for the period ending 31st day of March 1969 in respect of Demand Nos. 21, 23 and 25".

The motion was adopted.

As directed by the Chair the motion for demands for grants adopted by the House are reproduced below :—

DEMAND No. 21.—RURAL DEVELOPMENT.

32. Rural Development

"That a sum not exceeding Rs. 69,00,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Rural Development'."

DEMAND No. 23.—CO-OPERATION.

34. Co-operation.

"That a sum not exceeding Rs. 2,10,83,000 including the sums already voted on account be granted to the Government to defray the charges which will come in course of payment during the financial year for the period ending 31st day of March 1969, in respect of 'Co-operation'."

DEMAND No. 25.—COMMUNITY DEVELOPMENT, ETC.

37. Community Development Projects, National Extension Service and Local Development Works.

"That a sum not exceeding Rs. 3,65,79,000 including the sums already voted on account be granted to the Government to defray the charges which will come in course of payment

(MR. DEPUTY SPEAKER)

during the financial year for the period ending 31st day of March 1969, in respect of Community Development Projects, National Extension Service and Local Development Works'."

The House will now adjourn and re-assemble at 8–30 A.M. tomorrow.

The House adjourned at Thirty-six Minutes past Eight of the Clock to meet again at Thirty Minutes past Eight of the Clock on Tuesday the 16th April 1968.